ಶ್ರೀ ಎನ್. ಲೋಕಯ್ಯನಾಯಕ್.—(ಅ)ಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ಅವರಿಗೆ ಮಾರ್ಚ್ ತಿಂಗಳ ಸಂಬಳವನ್ನು ಈ ತಿಂಗಳಿನಲ್ಲಿ ಈಗಾಗಲೇ ಕೊಟ್ಟಿದ್ದೀರಾ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ತಿಂಗಳ ಸಂಬಳ ಅವರಿಗೆ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರು ಹೇಳಿದ ಪ್ರಕಾರ ಅವರಿಗೆ ಸಂಬಳ ಕೊಡಬಾರದು ಎಂಬ ಆದೇಶ ಕೊಟ್ಟಿಲ್ಲ.

ಶ್ರೀ ಎನ್. ಲೋಕಯ್ಯನಾಯಕ್.—30-8-1968ರಂದು ಸರ್ಕಾರದ ಆದೇಶ ಕಳುಹಿಸಿ ಫೆಬ್ರುವರಿ ತಿಂಗಳ ಸಂಬಳವನ್ನು ಮಾರ್ಚ್‌ನಲ್ಲಿ ಕೊಡುವ ಹಾಗೆ ಮಂಜೂರಾತಿ ಕಳುಹಿಸಿದ್ದೀರಿ. ಮಾರ್ಚ್ ತಿಂಗಳಿಂದ ಮುಂದೆ ಪ್ರತಿ ತಿಂಗಳೂ ಸಂಬಳ ಕೊಡುವ ಹಾಗೆ ಆದೇಶ ಕೊಟ್ಟಿದ್ದೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಯಾವ ಒಂದು ವಿಷಯವನ್ನು ಹೇಳುತ್ತಾರೋ ಗೊತ್ತಿಲ್ಲ. ನಿರ್ದಿಷ್ಟವಾಗಿ ಇಂಥಾದ್ದು ಎಂದು ನನ್ನ ಗಮನಕ್ಕೆ ತಂದರೆ, ಅದನ್ನು ವಿಚಾರಮಾಡುತ್ತೇನೆ, ಟಿ. ಸಿ. ಎಚ್. ಶಿಕ್ಷಣವನ್ನು ಪಡೆಯುತ್ತಿರುವವರಿಗೆ ಸಂಬಳ ನಿಲ್ಲಿಸುವ ಆದೇಶ ಕೊಟ್ಟಿಲ್ಲ.

ಶ್ರೀ ಎನ್. ಲೋಕಯ್ಯನಾಯಕ್.—ನಿಮ್ಮ ಜಿ. ಓ. 61. ಎಂ. ಟಿ.ಐ. 68 ತಾ॥ 30-8-1968ರ ಪ್ರಕಾರ 2,34,000 ರೂಪಾಯಿಗಳು ಫೆಬ್ರುವರಿ ತಿಂಗಳ ಸಂಬಳಕ್ಕೆ ಬೇಕೆಂಬುದಾಗಿ ಡಿ. ಪಿ. ಐ. ಕೇಳಿದಾಗ, 1,98,000 ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಫೆಬ್ರುವರಿ ತಿಂಗಳವರೆಗೆ ಸಂಬಳವನ್ನು ಕೊಟ್ಟಹಾಗೆ ಮಾರ್ಚ್ ತಿಂಗಳಿನಿಂದಲೂ ಸಂಬಳ ಕೊಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರಿಗೆ ಸಂಬಳ ಕೊಡರಾಗುತ್ತದೆ. ರೆಗ್ಯುಲರಾಗಿ ಸ್ಯಾಲರಿ ಕೊಡರಾಗುತ್ತಿದೆ. ಯಾವುದೇ ತೊಂದರೆ ಇಲ್ಲ. ಅವರು ಹೇಳಿದ ಪ್ರಕಾರ ನಿರ್ದಿಷ್ಟವಾದ ಕಾರಣ ಇರಬಹುದು. ಟಿ. ಸಿ. ಎಚ್. ಟ್ರೈನಿಂಗ್‌ಗೆ ಕಳುಹಿಸುವ ಉದ್ದೇಶದಿಂದ ಸಂಬಳ ಕೊಡಬಾರದೆಂದು ಆದೇಶ ಕೊಟ್ಟಿಲ್ಲ.

ಶ್ರೀ ಎನ್. ಲೋಕಯ್ಯ ನಾಯಕ್.—ಈ ಆರ್ಡರ್‌ನಲ್ಲಿ 2,34,000 ರೂಪಾಯಿಗಳನ್ನು ಡಿ. ಪಿ. ಐ. ಅವರು ಕೇಳಿದ್ದಾರೆ 1,98,000 ರೂಪಾಯಿಗಳನ್ನು ಸರ್ಕಾರದಿಂದ ಮಂಜೂರು ಮಾಡಿದ್ದಾರೆ. ಇದರಿಂದ ಮುಂದೆ ಆ ಉಪಾಧ್ಯಾರುಗಳು ಸರಿಯಾಗಿ ಸಂಬಳ ಪಡೆದು ಯಾವ ಒಂದು ತಾಪತ್ರಯವೂ ಇಲ್ಲದ ಹಾಗೆ ಏರ್ಪಾಡು ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರಿಗೆ ತಾಪತ್ರಯ ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಮುಂದೆ ಒಂದು ವರ್ಷದ ಕೋರ್ಸು ಇತ್ತು. ಈಗ ಅದನ್ನು ಎರಡು ವರ್ಷಗಳಾಗಿ ಮಾಡಿದೆ. ಸರ್ಕಾರದಲ್ಲಿ ಅದರ ಬಗ್ಗೆ ಲೆಕ್ಕವಾಗುವ ಪ್ರಶ್ನೆ ಇರುವುದರಿಂದ ತಡೆಯಾಗಿರಬಹುದು. ಆ ಜಿ. ಓ. ವನ್ನು ನನ್ನ ಕಡೆಗೆ ಮಾನ್ಯ ಸದಸ್ಯರು ಕಳುಹಿಸಬೇಕು. ಆಗ ಎಲ್ಲವನ್ನೂ ಯೋಚನೆ ಮಾಡಬೇಕಾಗುತ್ತದೆ.

Mr. SPEAKER.—Short Notice Questions are over.

QUESTIONS FOR ANSWERS ON THE DAY

(but not taken up)

Sale of Lands in S. No. 74 of Karkuchi Village

437. Sri HANJI SHIVANNA (Tarikere).—

Will the Minister for Revenue be pleased to state :—

(*a*) whether it is a fact that the land holders who obtained forged Saguvali Chits in S. No. 74 of Karkuchi village, Lakkavalli Hobli, Tarikere Taluk are selling the said lands ;

(*b*) whether it is a fact that the same land has been sold to 2-3 persons ;

(*c*) the extent of land in S. No. 74 of Karkuchi village, out of this the extent of land granted and the extent of land remaining, the extent of land under unauthorised cultivation ;

(*d*) whether or not such lands are being exempted from payment of land revenue, water rate and levy and whether it is not enjoyed by a few ;

(*e*) whether it is a fact that a person who brought this to the notice of the concerned has been subjected to ill-treatment and was made to confess by Police threats ?

Sri H. V. KOUJALGI (Minister for Revenue).—

(*a*) A case is under investigation as there is a complaint.

(*b*) No.

(*c*) Total extent of land 577-23 acres. So far granted—92 acres. Remaining—485-23 acres. Under unauthorired cultivation—22 acres.

(*d*) No.

(*e*) No.

Amount Spent on Canal of Rangadhama Tank in Chickballapur

837. Sri A. MUNIYAPPA (Bagepalli).—

Will the Minister of State of Minor Irrigation be pleased to state :—

(*a*) when the canal of Rangadhama Tank, Chickballapur was sanctioned and the amount spent on the present canal ;

(*b*) the reason for not taking any action so far even though the then Public Works Minister and the present Chief Minister after consideration instructed the concerned officer to complete the remaining work by piece work ;

(SRI A. MUNIYAPPA)

(*c*) the policy of the Government to facilitate cultivation by the ryots of Chickballapur and Sidlaghatta Taluks who are dependent on this canal ?

Sri A. J. DODDAMETI (Minister of State for Minor Irrigation).—

(*a*) 7 years ; Rs. 2,00,747.

(*b*) Under re-consideration.

(*c*) Does not arise in view of reply to clause (*b*) above.

Notice *Re.* Steps to lessen quarrels among Harijan families in the State

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ಬೆಳಿಗ್ಗೆ ಹತ್ತೂವರೆ ಘಂಟೆಗೆ ಒಂದು ನೋಟೀಸ್ ಕೊಟ್ಟಿದ್ದೆ. ಅದರ ಬಗ್ಗೆ ಅನೇಕ ಸಾರಿ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಅಂಕೋಲ ತಾಲ್ಲೂಕ್ ನರ್ಜಾಪುರ ಹೋಬಳಿ ಚಿಕ್ಕನಂದ್ರ ಗ್ರಾಮದಲ್ಲಿ ಹರಿಜನರ ಗಂಡ ಹೆಂಡತಿಯರಲ್ಲಿ ಜಗಳವಾಗಿ ಗಂಡನಾದವನು ಹೆಂಡತಿಯನ್ನು 24 ಗಂಟೆಗಳ ಕಾಲ ಮರಕ್ಕೆ ಕಟ್ಟಿಹಾಕಿ ಹೊಡೆದಿದ್ದಾನೆ. ಅವನ ಹೆಸರು ಎರ್ರಪ್ಪನೆಂದು. ಇಂಥಾದ್ದು ರಾಜ್ಯದಲ್ಲಿ ಅನೇಕ ಕಡೆ ಗಳಲ್ಲಿ ನಡೆಯುತ್ತಾ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳಿದ್ದೇನೆ. ಆದ್ದರಿಂದ ತಾವು ಆ ನೋಟೀಸನ್ನು ಪರಿಶೀಲನೆ ಮಾಡಿದ್ದಿರೋ ಏನೋ ಗೊತ್ತಿಲ್ಲ. ಈ ರೀತಿ ಹರಿಜನರಿಗೆ ತೊಂದರೆ ಯಾಗುತ್ತಾ ಇದೆ. ಆದ್ದರಿಂದ ಇಂತಹ ನೋಟೀಸ್‌ಗಳಿಗೆ ತಾವು ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು.

ಅಧ್ಯಕ್ಷರು.—ಈ ದಿನ ಬೆಳಿಗ್ಗೆ ತಮ್ಮ ನೋಟೀಸ್ ಬಂದಿದೆ. ಅದನ್ನು ವಿಚಾರಮಾಡಿ ತಮಗೆ ಹೇಳುತ್ತೇನೆ.

ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮಿ, ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಶನಿವಾರ ತಮಗೆ ಕಳುಹಿಸಿದ್ದೆ. ಆ ವಿಷಯ ಬಹಳ ಗಂಭೀರವಾದದ್ದು. ರಾಯಚೂರು ಟೌನಿನ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಮಾರ್ಚಿ ತಿಂಗಳು 28ನೇ ತಾರೀಖಿನಿಂದ ಇಪ್ಪೊತ್ತಿನವರೆಗೂ ವ್ಯಾಪಾರ ಆಗುತ್ತಿಲ್ಲ.

Mr. SPEAKER.—I have followed the point. The hon. Member may raise it tomorrow so that the Minister in charge may be able to reply.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ನಾನು ಒಂದು ಪರ್ಸನಲ್ ಎಕ್ಸ್‌ಪ್ಲನೇಷನ್ ಮಾಡಬೇಕಾಗಿದೆ. ಅದು ಬಹಳ ದಿವಸಗಳಿಂದ ಉಳಿದಿದೆ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದ್ದಾಗ ಆ ಬಗ್ಗೆ ಮಾತನಾಡಿ ಎಂದು ತಾವು ಹೇಳಿದ್ದಿರಿ ; ನನಗೆ ಯಾವಾಗ ಮಾತನಾಡುವುದಕ್ಕೆ ಅವಕಾಶ ಸಿಕ್ಕುತ್ತದೆ ಎಂಬುದನ್ನು ತಾವು ಸ್ವಲ್ಪ ದಯವಿಟ್ಟು ಹೇಳಬೇಕು.

Mr. SPEAKER.—Hon. Member knows that he is suffering from asthma and he is not likely to attend the meeting for one or two days. If it is possible, it will be taken up during this session. If it is not possible, the hon. Member can pursue it in the next session.

Sri H. SIDDAVEERAPPA.—So that is kept alive till he comes to the House ?

Mr. SPEAKER.—Yes.

ಶ್ರೀ ಎಚ್. ಬಿ. ಪ್ರಾಣೇಶಯ್ಯ.—ಹಾಸನ ಪುರಸಭೆಯಲ್ಲಿ ನೀರಿನ ಅಭಾವ ಬಹಳ ಜಾಸ್ತಿಯಾಗಿದೆ. ಇದರಿಂದ ಅಲ್ಲಿಯ ಜನಗಳಿಗೆ ತುಂಬಾ ತೊಂದರೆಯಾಗಿದೆ. ಈ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ಅದು ಬಹಳ ಮುಖ್ಯವಾದದ್ದು. ಅದು ಎಲ್ಲಿಯವರೆಗೆ ಬಂದಿದೆ ?

Mr. SPEAKER.—I shall look into it.

Sri G. CHANDRAKANTH (Bidar).—Sir, about 20 days back, myself, Sri D. B. Kalmankar and Sri K. H. Ranganath gave notice of a privilege motion in regard to some statement made by Sri S. K. Patil. You were pleased to say that you had written to Sri S. K. Patil and you were awaiting his reply. I would like to know whether the reply has been received.

Mr. SPEAKER.—The reply has been received and I told this Hon. House that I would be allotting one day for an educative debate and I suppose that is still there.

Sri G. CHANDRAKANTH.—Shall I appeal to your goodself to take it up in this Session itself because it is a very important matter ?

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಕೋಲಾರದಲ್ಲಿ ನೀರಿನ ಅಭಾವ ಉಂಟಾಗಿರುವ ಬಗ್ಗೆ ನಾನು ಒಂದು ಕಾಲ್‌ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ. ಅಲ್ಲಿನ ಜನಗಳಿಗೆ ಕುಡಿಯುವ ನೀರು ಇಲ್ಲದೆ ತುಂಬಾ ತೊಂದರೆಯುಂಟಾಗಿದೆ.

Mr. SPEAKER.—I shall look into the matter.

Notice of adjournment motion *re* : Grant of Mining Lease in Tumkur District.

† Sri C. K. RAJAIAH SHETTY (Chicknaikanahalli).—The only major industry in Tumkur District is Mysore Cements. Now a situation has arisen because of the fact that the mining lease is given to a private man in respect of an area from which the Mysore Cements are drawing their requirements of sand. Unfortunately, it has come to a stage of stand-still. It is a very important factor. This is an industry with five crores capital and Government has also invested 10 lakhs of rupees and it is maintaining 1200 labourers. It is paying about 83 lakhs of rupees directly and indirectly as tax revenue. This has come up because of the reason that sand is classified as a major mineral by the Government of India.

Mr. SPEAKER.—There is no scope for a lengthy speech. The member must state it very briefly.

Sri C. K. RAJAIAH SHETTY.—I will be very brief, Sir. Just because it is classified as a major mineral, a private man has applied for a mining lease and he has taken. As the Hon. Minister is aware, the four important minerals that are required for the cement industry are, limestone, gypsome; sand and clay. Sand is one of the most important

(SRI C. K. RAJAIAH SHETTY)

factors without which the industry cannot run. It is the duty of the Government to consider before sanctioning any lease to anybody whether this is used for any industry, and also whether they have paid royalty. Since the last two years, they have paid by way of royalty more than a lakh of rupees for this sand. If the lease is sanctioned to somebody other than the cement industry, that major industry may come to a standstill. I therefore request the Government to reconsider the sanction of lease and the lease may be sanctioned to the Cement factory itself.

SRI A. P. APPANNA (Deputy Minister for Industries).—Sand required for industrial purpose is treated as a major mineral and a mining lease in accordance with the Mineral Concession Rules has to be obtained by making an application to the Department of Mines and Geology.

2 Permit for removal of sand required for building purposes is, however, issued by the Revenue Department by the Tahsildar.

3 The Mysore Cements Ltd., instead of making an application to the Department for obtaining a mining lease were removing large quantities of sand through permit issued by the Tahsildar.

4 An application was received for the issue of a mining lease by Sri Chiknarasaiah on 4th November 1968. It was referred to the Deputy Commissioner who intimated that at present sand is being permitted for removal on payment of royalty at *50 paise per 100 Cft.* Since according to the Mineral Concession Rules royalty prescribed was at the rate of Re. 1 per metric tonne and as increased revenue would be forthcoming to the Government, he recommended the grant of a mining lease in favour of the applicant. Accordingly his case was recommended and the mining lease has since been sanctioned. The lease, however, has not yet been executed by the party.

5 The Mysore Cements Ltd., had not approached this Department regarding grant of lease for sand although it is clearly understood that sand required for Industrial purpose is considered us a major mineral and its exploitation is governed by the Mineral Concession Rules. The company applied for a mining lease of sand only on 18th March 1969 *i. e.* after a lease had been sanctioned to Sri Chickanarasaiah.

6 The area that Mysore Cements Ltd., have applied is over an extent of 156 acres 19 cents whereas the area sanctioned on mining lease to Sri Chickanarasaiah is 82 acres leaving a balance of 74 acres. The application is being processed for the grant of the available area of 74 acres to Mysore Cements.

7 While it is true that the requirement of the industry has to be safeguarded it is also obligatory on the part of the industry to make an application in the prescribed form and obtain a lease by paying the prescribed amount of royalty. In the case of grant of mining leases,

priority is a very important factor and any earlier applicant necessarily gains priority over a later applicant. The application of Mysore Cements was made five months later. It is in this circumstances a licence to Sri Chickanarasaiah was granted. However, an equal area is still available for grant to Mysore Cements Ltd. and a lease to them over this area is under consideration.

8 In a large number of cases, requirement of raw material of a factory are met by supplies from outside parties having mining leases. It is not always possible to reject all such applications in the expectation that the factory will apply for it at a later date.

It is necessary that the factory should make known its requirements in time to avoid such contingencies.

SRI C. K. RAJAIAH SHETTY.—Is it not a fact that the portion of the area that is sanctioned to the other man is just opposite to the road and no lorry can go in sand for a distance of more than two furlongs for the purpose of fetching the sand, because it is in a valley? There are gardens on either side. There is no road. Even sanctioning the mining lease for the remaining portion does not help anybody. The road is very necessary and the road-side area should be sanctioned to the cement factory because they take the sand easily from there.

SRI A. P. APPANNA:—Sir, the area that is available according to the Mysore Cement Limited, is the area which is beyond the area that has been sanctioned to Sri Chikkanarasaiah. Any how the right of way will be provided and the Mysore Cements have to make necessary arrangements to take the lorries along the areas of the previous applicant.

Calling Attention to matters of urgent Public Importance

(*1*) *re*: attaek on the Processionists in a village in Chitradurga District.

SRI G. CHANDRAKANTH.—I call the attention of the Chief Minister to the attack on processionists by one section of people on 20th March 1969 in Malebennur Village of Chitradurga District on the occasion of Rathamahotsava on Ugadi Day.

† SRI VEERENDRA PATIL.—Malebennur is a village situated about 14 miles from Harihar on Harihar–Honnali Road. There are about 600 houses in this village; out of these 350 houses belong to Muslims and the rest to other communities.

On 19th March 1969 at about 6 P.M. a message was received by the Deputy Superintendent of Police, Davanagere from Malabennur Police Station that there was a communal clash in Malebnnur at 4 P.M. The Deputy Superintendent of Police arranged for despatch of a District Armed Reserve Party and accompanied by Davanagere Town Circle

(SRI VEERENDRA PATIL)

Inspector arrived at Malebennur at 6-45 P.M. The local police staff were patrolling and it was noticed that they had brought the situation under control. Sri K. G. Basappa, who had received injuries gave a complaint. According to his statement as per custom, public were being summoned by beat of drums for taking the empty temple car from Malebennur Circle to Basaveswara temple situated in the outskirts of the town. On 19th March 1969 some of the persons belonging to the other section objected to the beating of drums in-front of the mosque and chased away the drummer boys. However, the empty temple car was taken by the complainant and others to the Basaveswara temple. At about 5 P.M., while these people were returning to their houses by the road in front of the Mosque, a number of people of the other section started beating them, pelted stones and threw crackers causing injuries to several persons. At about 9 P.M. on the same day one Sri H. B. Abdul Jabbar of Malebeunur went to the Police Station and gave a complaint against Sri Basappa and others, that, while returning from the temple, they started shouting in front of the mosque and threw stones on the people there causing injuries and damage to houses. Both the complaint and the counter-complaint were registered and in vestigation taken up. In all 10 Hindus and 6 Muslims, who sustained injuries, have been treated in the Primary Health Unit, Melebennur. Except Sri Basappa, the rest have been treated as out-patient. As regards Sri Bassappa, he has been sent for admission in Chigateri Hospital, Davanagere, as his right-hand fingers have received burn injuries due to the bursting of crackers thrown by some at the time of the occurance. The District Magistrate and the Superintendent of Police also visited the Village. It is further reported that, but for the timely intervention by the two Head Constables stationed at Malebennur, the situation might have assumed ugly proportions. The situation now is calm and peaceful and there is no tension. The shandy on 20th March 1969 also passed off as usual without any incident. Instructions have been issued to arrange for effective patrolling.

Sri G. CHANDRAKANTH.—May I know whether beating of drums in front of mosquet is prohibited as per any law existing in the land?

Sri VEERENDRA PATIL.—I do not think it is in any way objectionable.

Sri G. CHANDRAKANTH.—Is it a fact that the Government has issued instructions that nobody should object to the beating of drums in front of mosques and such a thing should not be the cause of communal rioting?

Mr. SPEAKER.—The Hon. Chief Minister has said that there is no such thing.

Sri H. SIDDAVEERAPPA.—May I know whether the Government have received a report to the effect that by the same evening the Pakistan Radio announced about this clash in that place and that country

made bombs were used and that information was given to the police that in a particular house bombs were available and they may be searched? On the very day information was provided but the police have not taken any action in the matter.

Sri VEERENDRA PATIL.—I do not have information about the broadcasting of the news from the Pakistan Radio. on the same day. But about furnishing information to the police on the same day that hand made bomb or grenade was used, I should like to state that I tried to get the information because the hon. member had told me earlier these things. I had asked the Inspector-General of Police to contact the Superintendent of Police and collect information. According to the latest information that we have received, the Superintendent of Police states that there was explosion due to the bursting of crackers. From the remnants of a portion of the crackers collected and seized from the scene of incident, there were nothing like splinters of hand grenade found at the scene of the incident.

Sri H. SIDDVEERAPPA.—I have also addressed a letter to the Chief Minister wherein I have stated that after the explosion people have collected some papers where those hand grenades which they call as "BELLULLI PATAKI" were exploded and they were in Urdu language. I did not like to raise it on the floor of the House but my hon. Friend has raised it. If necessary, he may kindly have it thoroughly examined. If necessary he can take the assistance of the Central C.I.D. This is a serious matter which cannot be allowed to lie down. In view of the fact it has occurred in so many places I implore the Chief Minister to get it thoroughly examined.

Sri G. CHANDRAKANTH.—It is the privilage of any hon. Member to bring it to the notice of the Government. I thought in the larger interest of peace and tranquillity such a thing should be brought on the floor of the House.

Sri H. SIDDAVEERAPPA.—Now that the hon. Member has chosen to bring it before the House I have no objection.

Sri VEERENDRA PATIL.—It is true that the hon. Member Sri Siddaveerappa has addressed a letter to me in this matter and he has furnished certain details. I have seen that letter only this morning and I have entrusted the enquiry to C.I.D. One Special Officer will go and collect information in possession of the local police and he will make a thorough enquiry and report to the Government. On the receipt of that report if there is anything I should report to the House, I shall make a report.

Sri G. CHANDRAKANTH.—In many of the communal riotings that have taken place in the last two or three years, they were as a result of beating of drums. Will the Government consider to see that specific orders are issued to the Superintendent of Police that no body shall object to the beating of drums in front of the mosques?

Sri V. N. PATIL.—Will it not infringe the right of minorities? Everybody will have faith.....

Mr. SPEAKER.—There is procedure to be followed. The Chief Minister will answer.

Sri V. N. PATIL.—Before the Chief Minister replies.....

Mr. SPEAKER.—Order, Order. The hon. Member will please resume his seat.

2-30 P.M.

Sri V. N. PATIL.—I rise to a point of order. The question that has been posed by my learned friend.....

Mr. SPEAKER.—I do not permit it. Under what rule is the member raising it?

Sri V. N. PATIL.—Without hearing me, can you shut me out?

Mr. SPEAKER.—I requst the member to obey the chair.

Sri V. N. PATIL.—Please hear my point of order. Without listening to me, how can you ask me to sit down?

Mr. SPEAKER.—I had permitted Sri Chandrakanth and he has asked for some clarification. I have now called upon the Hon. Chief Minister to reply. The hon. Member cannot raise a question in the meanwhile.

Sri V. N. PATIL.—It is strange, you are rejecting my point o order without giving a hearing to me at all.

Mr. SPEAKER.—If it is really a point of order, I shall permit him and not otherwise.

Sri V. N. PATIL.—It is only a point of order and nothing else.

Mr. SPEAKER.—If the member raises a vexatious point which does not amount to a point of order, he must be prepared to take the consequences.

Sri V. N. PATIL.—It is a threat. The Chair should not resort to giving such threats. We are not here to receive threats from the Chair. We are here to receive guidance and advice from the Chair. Please give us advice and correct us. Please do not hold out threats.

Now I will state what my point of order is: The Hon. Member who spoke just now wants the Government to resort to certain things. If the directions desired by him are issued, it will create ill-feeling and poisonous feelings.

Sri G. CHANDRAKANTH.—When I am submitting a point for the Hon. Chief Minister's clarification, can another Member raise a point of order under some pretext?

Mr. SPEAKER.—I shall find out whether what Sri Patil is trying to raise, is a point of order.

Sri V. N. PATIL.—Several times this House was of the opinion that such questions which create bitterness or ill-feelings between one section and another section of the people or between one community and another community, should not be raised on the floor of the House. A question has been asked that in order not to do away with beating of durms before mosques or other places, whether it is not desirable for the Chief Minister to issue certain instructions to the Police Officers, etc. If the Chief Minister takes any action, he will involve himself because thereby, he will be either supporting or not supporting one section or the other. Such questions ought not to have been permitted to be put by the Member.

Sri G. CHANDRAKANTH.—When the Chair has been placed to permit me, how can the Member object to it and raise a point of order under some pretext ? That is the point of order I raise.

Mr. SPEAKER.—I shall find out whether it is a point of order, and give my finding.

Sri V. N. PATIL.—If it is conceded that drum-beating in front of some places should not be objected to or should be permitted or continued or not continued, it will create bitterness and ill-feelings between one section and another section and result in disharmony and acrimony as it affects one's rights. So, the Chief Minister must not be compelled to answer such a question. Now it is for the Chair to take a decision.

Mr. SPEAKER.—I am sorry to remark that there is absolutely no point of order. The hon. Member has abused the provisions of Rule 311.

Sri V. N. PATIL.—Please do not attribute motives. There is an insinuation against me that I have abused the provisions relating to the raising of point of order. You can only say that there is no point of order. The word "abuse" used by you is an insinuation.

Mr. SPEAKER.—It is not an insinuation. It is a wrong use of the rule by the Member.

Sri V. N. PATIL.—You could only say, there is no point of order.

Mr. SPEAKER.—I do not require any advice from the member. He has already taken ten minutes.

Sri V. N. PATIL.—We are not students. We have to learn something more from you.

Mr. SPEAKER.—Hon. Chief Minister may reply now.

Sri VEERENDRA PATIL.—The hon. Member wants to know whether Government intends to issue instructions to the Police Officers to the effect that nobody should object to the beating of drums in front of the mosque and such other places. But I think there is no necessity for us to issue any instructions because law is very clear on this point.

Mr. SPEAKER.—No clarification please.

Sri G. CHANDRAKANTH.—A personal explanation on the point of order of Sri V. N. Patil.

Mr. SPEAKER.—I have given a ruling that there is no point of order.

Sri G. CHANDRAKANTH.—It is an impertinent point of order.

Mr. SPEAKER.—Sri Sayank may call attention of the Chief Minister to his notice.

ಶ್ರೀ ಎಸ್. ಗೋಪಾಲಗೌಡ.—ಮುನೀಂ ಎದುರು ತಮಟೆ ಇತ್ಯಾದಿ ಬಡಿದು ಗಲಾಟೆ ಮಾಡಬಾರದು ಎಂದು ಹೇಳುವುದಕ್ಕೆ ನಾವು ಏನೂ ನೂಚನೆಗಳನ್ನು ಕೊಡಬೇಕಾದ್ದಿಲ್ಲ ಎಂದು ಪಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇದನ್ನು ಯಾವಾಗ ಸರ್ಕಾರ ತೀರ್ಮಾನ ಮಾಡಿತು.

Mr. SPEAKER.—That is a different matter to be determined under law.

Sri S. GOPALA GOWDA.—The Hon. Chief Minister stated that the Government do not think of issuing any such instructions.

Mr. SPEAKER.—The law on the point is clear. I have gone to another point. I have called upon Sri Sayanak to call the attention of the Chief Minister. He will please respect the Chair and leave the matter at that.

(ii) *re* : Bus Accident on Madhugiri-Gowribidanur Road

Sri B. B. SAYANAK (Belgaum).—I call the attention of the Chief Minister to the bus accident near Hossur on Madhugiri-Gowribidnur Road on 22nd February 1969.

†Sri VEERENDRA PATIL.—It is reported that on 22nd March 1969 at 0715 Hrs., one Sri G. S. Abdul Gaffar, the Driver of Bus No. MYK. 4702, who is alleged to have driven the bus in a rash and negligent manner, dashed against a lorry bearing No. MYH. 3666 at Kotaladinne Cross on Madhugiri-Gowribidnur Road. This accident has resulted in the death of four passengers and injuries to 20 persons. In this connection, a case in Cr. No. 32/69 under sections 279, 337, 338 and 304(A) I.P.C. has been registered in Gowribidnur Police Station and investigation is taken up. The Investigating Officer has been instructed to present the chargesheet to the Court early.

SRI D. B. KALMANKAR (Aland).—I wish to know whether that bus belongs to the M.S.R.T.C. or whether it is a private bus? Against whom is the case charge-sheeted?

Sri VEERENDRA PATIL.—Against the driver of the bus. It is not possible for me to say now whether it is a M.S.R.T.C. bus or a private bus, as it is not mentioned in the records before me.

Sri B. B. SAYANAK.—That is a private bus.

Mysore Land Revenue (Second Amendment) BILL, 1969

Motion to consider.

SRI SRI H. V. KOUJALGI (Minister for Revenue).—Sir, I beg to move.

"That the Mysore Land Revenue (Second Amendment) Bill. 1969 be taken into consideration."

MR. SPEAKER.—Motion moved :

"That the Mysore Land Revenue (Second Amendment) Bill, 1969 be taken into consideration."

SRI H. V. KOUJALGI.—Sir, I would like, with the permission of the Hon. Speaker, to make a few preliminary observations which would facilitate the discussion and give a background to the various provisions made in this Bill.

The Bill has two main objectives : One is to meet the legal necessity occasioned by the recent decision of the Supreme Court according to which in every taxation statute there should be a provision for notice to each individual tax-payer of his liability and reasonable opportunities should be afforded to him to make representation in regard to the quantum of the levy. It is held that a machinery should be created for the consideration and decisions of these representations. It is also held that the statute must specify the definite authorities for fixing individual assessment. Provisions for these have been made in the bill.

Section 122A provides for notice to occupants and specifies the officers who determine the assessment on individual survey numbers or parts thereof. Section 122B provides a machinery for the consideration and decisions of the objections preferred.

The second objective is to make it possible for Government to direct revision settlement during the currency of the present settlement rates with a view to re-examining where necessary the standard rate fixed for some classes of land in some zones, and it is provided in Section 114A. The need to re-examine the existing settlement rates was pressed on the attention of the Government by a number of writ petitions filed before the Hon'ble High Court of Mysore which were dismissed on the assuarance given by the Government that a legislation would be initiated taking power to re-examine the rates in question. Broadly speaking, the grievances against the revision settlement rates fall into the following categories:

1 The standard rates for some classes of land in some of the zones are too high and the pattern adopted, for example, in regard to garden rates is not uniform. As an instance, it is mentioned that in a particular zone, only one garden rate based on the most profitable garden crop *i. e.* areca is made applicable to all types of gardens.

(SRI H. V. KOUJALGI)

2 In regard to standard rates of dry assessment in some tracts, it is represented that they are unduly oppressive to certain lands where the resultant assessment has gone up very markedly.

3 It is urged that in several lands where the garden trees have either perished or are existing in too small a number, garden asessment at revision rates have been applied.

4 Another type of grievance is that some rain fed lands have become subject to wet assessment under the second revision settlement and also to water rates to utilise water from a Government Irrigation source.

Some of these objections require revision settlement before relief can be given and it is due, and in some cases other relief can be given under the provisions now made. Under Section 122B individual cases of wrong classifications of tenure can also be dealt with without taking recourse to fresh revision settlement. The intention of the Government in introducing the amendments, apart from the legal necessity, is to give early relief where relief is due. Though section 114A refers to modifications in the present settlement rates, Government's intention is that as a result of the fresh settlement the burden on the cultivators is reduced wherever such reduction is possible and justified. It is also the intention of the Government to employ special staff and especially efficient staff and to see that this resettlement is finalised as early as possible. With these remarks, I request the hon. Members to take this bill into consideration.

Sri M. NAGAPPA.—Sir, I want to know whether this House can take two bills into consideration at a time. Already we are considering one bill. Under our rules, unless that bill is passed or voted down, can we take up another bill for consideration.

Mr. SPEAKER.—I shall give my ruling a little later.

Sri S. SIVAPPA.—Sir, I beg to move the following amendment:

"That the Mysore Land Revenue (Second Amendment) Bill, 1969 be circulated for eliciting public opinion within 6 months from this date."

Mr. SPEAKER.—Amendment moved :

"That the Mysore Land Revenue (Second Amendment) Bill, 1969 be circulated for eliciting public opinion within 6 months from this date."

Both the main motion and the amendment are before the House for discussion.

† ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಇವತ್ತು ಮಾನ್ಯ ಕಂದಾಯ ಸಚಿವರು ಈ ಭೂಕಂದಾಯದ ಎರಡನೆ ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ಮುಂದನೆ ಮಾಡಿದ್ದಾರೆ. ಈ ತಿದ್ದುಪಡಿ ಮಸೂದೆ ಆಚ್ಚಾದದ್ದು ಮಾರ್ಚಿ 31ನೇ ತಾರೀಖಿನ ದಿವಸ, ಇದನ್ನು ಇವತ್ತು ಸಭೆಯು

ಮುಂದೆ ಮಂಡನೆ ಮಾಡಿ, ಸಭೆಯಲ್ಲಿ ಚರ್ಚೆಗೆ ಇಟ್ಟಿದ್ದಾರೆ. ಮೈಸೂರು ದೇಶದಲ್ಲಿ ಲಕ್ಷಾಂತರ ಸಂಸಾರಗಳಿಗೆ ಅನ್ಯಯವಾಗತಕ್ಕ ಇಂತಹ ಒಂದು ಮಸೂದೆಯನ್ನು ಇಷ್ಟೊಂದು ಆತುರ ಆತುರ ವಾಗಿ ಸಭೆಯ ಮುಂದೆ ತಂದು ಚರ್ಚೆ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಒಂದು ಒಂದೂವರೆ ಕೋಟಿ ಜನಕ್ಕೆ ಇದರ ವಿಷಯದಲ್ಲಿ ಏನು ಅಭಿಪ್ರಾಯವಿದೆ, ಈ ಮಸೂದೆಯಿಂದ ಆಗತಕ್ಕ ಹಿತ ಅಹಿತ ಎರಡನ್ನೂ ಕೂಡ ಜನರ ಅಭಿಪ್ರಾಯವನ್ನು ಸಂಗ್ರಹಣೆ ಮಾಡುವುದರ ಮುಖಾಂತರ ಈ ಸಭೆಗೆ ಚರ್ಚೆಯನ್ನು ಮಾಡಲು ಅವಕಾಶವನ್ನು ಕೊಡುವುದಾದರೆ ಒಳ್ಳೆಯದು. ಅದುದರಿಂದ ಇದನ್ನು ಶಾಸನ ಸಭೆಯಲ್ಲಿ ಚರ್ಚೆ ಮಾಡುವುದಕ್ಕಿಂತ ಮುಂಚಿತವಾಗಿ ಜನರ ಅಭಿಪ್ರಾಯ ಸಂಗ್ರಹಣೆ ಮಾಡುವುದರಿಂದ ಈ ಸಭೆಗೆ ಅನುಕೂಲವಾಗುತ್ತದೆ ಮತ್ತು ಈ ಮಸೂದೆಯನ್ನು ಯಾರಿಗಾಗಿ ಮಾಡುತ್ತೇವೆಯೋ ಅಂತಹ ಜನಗಳಿಗೆ ಅವರು ತಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಒಂದು ಒಳ್ಳೆಯ ಅವಕಾಶವನ್ನು ಕೊಟ್ಟಂತಾಗುತ್ತದೆ. ಇವತ್ತು ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯ ಸಂಗ್ರಹಣೆ ಎನ್ನುವುದು ಒಂದು ಮೂಲಭೂತವಾದ ಹಕ್ಕು. ಅದರಲೂ ಕೂಡ ಕೋಟ್ಯಾನುಕೋಟಿ ಜನಗಳಿಗೆ ಅನ್ಯಯವಾಗತಕ್ಕ ಇಂತಹ ಮಸೂದೆಗಳನ್ನು ಯಾವುದೇ ಸರ್ಕಾರವಾಗಲಿ ಅದನ್ನು ತರ ತಕ್ಕ ಕಾಲದಲ್ಲಿ ಆವಷ್ಟು ಮಟ್ಟಿಗೆ ಜನಗಳಿಗೆ ಅಭಿಪ್ರಾಯ ಸಂಗ್ರಹಣೆ ಮಾಡತಕ್ಕ ಅವಕಾಶವನ್ನು ಕೊಡುವುದು ಪ್ರಜಾಪ್ರಭುತ್ವದಲ್ಲಿ ಒಂದು ಮೂಲಭೂತವಾದ ಹಕ್ಕು. ಇವತ್ತು ಸರ್ಕಾರದ ನಿಲುಮೆ ಕೂಡ ಈ ವಿಷಯದಲ್ಲಿ ಜನಗಳಿಗೆ ಸ್ಪಷ್ಟವಾಗಿಲ್ಲ. ಮೊದಲಿನಿಂದಲೂ ಕೂಡ ಸರ್ಕಾರ ದೇಶದ ಜನಗಳಿಗೆ ಈ ವಿಷಯದಲ್ಲಿ ಅರ್ಥವಾಗತಕ್ಕ ರೀತಿಯಲ್ಲಿ ನಡೆದು ಕೊಂಡಿಲ್ಲ. 1965ರಲ್ಲಿ ದೇಶದಲ್ಲಿ ಒಂದು ಸರ್ವೇಸೆಂಟರ್‌ಮೆಂಟ್ ಎಂಬುದಾಗಿ ನಡೆಸಿ ಅದನ್ನು ಪೂರ್ಣವಾಗಿ ಪರಿಷ್ಕಾರ ಮಾಡುವುದಕ್ಕೆ ಮೊದಲೇ ಅವಸರ ಅವಸರದಲ್ಲಿ ಒಂದು ಕಾನೂನ್ನು ಮಾಡಿದರು. ಆ ದಿವಸ ಹಾಗೆ ಅತುರಾತುರವಾಗಿ ಮಾಡಿದ ಕಾನೂನಿನಲ್ಲಿ ರೈತರಿಗೆ ಬಹಳ ಮಟ್ಟಿಗೆ ಅನಾನುಕೂಲಗಳಿರುವುದ ರಿಂದ ಅದಕ್ಕೆ ಈಗ ಈ ತಿದ್ದುಪಡಿಯನ್ನು ತಂದಿದೆ ಎಂದು ಹೇಳುತ್ತಿದ್ದಾರೆ. ಇವರು ಹೀಗೆ ಇಲ್ಲಿ ಕೊಟ್ಟಿರತಕ್ಕ ಈ ಒಂದು ಹೇಳಿಕೆಯೇನಿದೆ ಇದೇ ಸಾಕ್ಷಿ, ಸರ್ಕಾರದವರು ಹಿಂದೆ ಇದನ್ನು ಬಹಳ ಆತುರದಲ್ಲಿ ಮಾಡಿದ್ದಾರೆಂಬುದಕ್ಕೆ ಸಾಕ್ಷಿಯಾಗಿದೆ. ಆದರೆ ಸರ್ಕಾರದವರು ಒಂದೊಂದು ವರ್ಷ ದಲ್ಲಿ ಒಂದೊಂದು ಹೇಳಿಕೆಯನ್ನು ಹೊರಡಿಸುತ್ತಾ ಬಂದಿದ್ದಾರೆ. 1965ರಲ್ಲಿ ಸರ್ವೆಸೆಟ್ಲ್‌ಮೆಂಟನ್ನು ಮಾಡಿಸಿದರು. ಅನಂತರ 1966ರಲ್ಲಿ ಜುನಾವಣೆಗೆ ಮುನ್ನ ಕಂದಾಯವನ್ನು ವಜಾ ಮಾಡುತ್ತೇವೆಂದು ದೇಶದಲ್ಲಿ ಸಾರಿದರು. ಜನರಿಂದ ಓಟನ್ನು ಪಡೆದ ನಂತರ ಹಾಲಿ ಕೊಡುತ್ತಿ ರುವ ಕಂದಾಯವನ್ನು ಸರ್ಕಾರದವರು ಒಂದು ಹೊಸ ಆಜ್ಞೆಯನ್ನು ಹೊರಡಿಸುವತನಕ ಹಳೆಯ ಕಂದಾಯವನ್ನೇ ಜನರು ಕೊಡಬೇಕೆಂದು ಒಂದು ಆಜ್ಞೆ ಹೊರಡಿಸಿದರು. ಈ ದಿವಸ ಕೂಡ ನಮಗೆ ಈ ಕಂದಾಯದ ವಿಚಾರದಲ್ಲಿ ಸರ್ಕಾರದವರ ಒಂದು ನಿರ್ದಿಷ್ಟವಾದ ಮತ್ತು ಖಚಿತವಾದ ನಿಲುವೇನು, ಈ ಸರ್ಕಾರದ ದೋರಣೆಯೇನು ಎಂಬುದು ಗೊತ್ತಿಲ್ಲ. ದೇಶದಲ್ಲಿರತಕ್ಕ ಜನತೆಗೂ ಕೂಡ ಈ ವಿಚಾರದಲ್ಲಿ ಏನೇನೂ ಗೊತ್ತಿಲ್ಲ. ದೇಶದಲ್ಲಿ ಆ ಒಂದು ಸರ್ವೆ ಅಂಡ್ ಸೆಟಲ್‌ಮೆಂಟ್ ಏನಿದೆ ಅದೂ ಕೂಡ ಸರಿಯಾಗಿ ಆಗಿಲ್ಲ. ಕಾರಣ ಅದು ನಡೆಯುತ್ತಿದ್ದಕಾಲದಲ್ಲಿ ಕಂದಾಯವನ್ನೇ ವಜಾಮಾಡುತ್ತೇವೆಂದು ಒಂದು ಕೂಗನ್ನೆಬ್ಬಿಸಿದರು. ಹೀಗಾಗಿ ರಾಜ್ಯದಲ್ಲಿ ಸರ್ವೆ ಅಂಡ್ ಸೆಟಲಮೆಂಟ್ ಕಾರ್ಯ ಸರಿ ಯಾಗಿ ನಡೆದಿಲ್ಲ. ಈ ಭೂಕಂದಾಯದ ಬಗ್ಗೆ ಸರ್ಕಾರದವರ ನಿಲುವೇನು ಎಂಬುದು ಅವರಿಗಾದರೂ ಗೊತ್ತಿದೆಯೋ ಇಲ್ಲವೋ ಅದನ್ನೂ ಕೂಡ ಹೇಳುವುದಕ್ಕೆ ಸಾಧ್ಯವಿಲ್ಲ. ಹಾಗಿದ್ದರೂ ಸರ್ಕಾರದರು ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ದೇಶದಲ್ಲಿರತಕ್ಕ ತಿಳುವಳಿಕೆ ಇಲ್ಲದ ಜನಕ್ಕೆ ಕಂದಾಯ ವನ್ನು ವಜಾ ಮಾಡುತ್ತೇವೆ ಎಂದು ಹೇಳಿ ಅವರಿಂದ ಓಟನ್ನು ಪಡೆದು ಈಗ ಮತ್ತೆ ಅವರ ಮೇಲೆ ಹೊರರಾರದಷ್ಟು ಕಂದಾಯ ಜಾಸ್ತಿ ಮಾಡಿ ತಿದ್ದುಪಡಿಯ ಮೇಲೆ ತಿದ್ದುಪಡಿಗಳನ್ನು ತರುತ್ತಿದ್ದಾರೆ ಅಂತೂ ಸರ್ಕಾರದವರ ನೀತಿ ದಿನದಿನಕ್ಕೂ ಬವರಾಣೆಯಾಗುತ್ತಾ ಹೋಗುತ್ತಿದೆ. ರಾಜ್ಯದಲ್ಲಿ ಯಾವ ಯಾವ ಸರ್ವೆ ನಂಬರಿನಲ್ಲಿ ಎಷ್ಟೆಷ್ಟು ಎಕರೆ ಜಮೀನಿದೆ, ಅದರ ಆಕಾರ ಎಷ್ಟಿದೆ ಎಂಬ ಲೆಕ್ಕ ಪತ್ರಗಳು ಸರ್ಕಾರದಲ್ಲಿದ್ದಹಾಗೆ ಕಾಣುತ್ತಿಲ್ಲ. ಲೆಕ್ಕಗಳಿರಬಹುದು. ನಾನು ಹೇಳುತ್ತಿರುವುದು ಕರಾರುವಾಕ್ ಲೆಕ್ಕಗಳಲ್ಲ ಎಂದು. ಈ ಲೆಕ್ಕಗಳನ್ನು ಮೊದಲಿಂದಲೂ ನೋಡಿಕೊಳ್ಳುತ್ತಿದ್ದ ಗ್ರಾಮಾಧಿ ಕಾರಿಗಳನ್ನು ಈ ಸರ್ಕಾರದವರು ವಜಾ ಮಾಡಿದರು ಹಾಗೂ ದೇಶದಲ್ಲಿ ಒಂದು ದೊಡ್ಡ ಗೊಂದಲ ವನ್ನೇ ಎಬ್ಬಿಸಿದ್ದಾರೆ. ಸರ್ಕಾರದಲ್ಲಿ ಈ ದಿವಸ ಖಚಿತವಾಗಿ ಖುಷ್ಕಿ ಭೂಮಿ ಎಷ್ಟಿದೆ, ತರೀ ಭೂಮಿ ಎಷ್ಟಿದೆ ಮತ್ತು ಭಾಗಾಯಿತು ಎಷ್ಟಿದೆ ಎನ್ನತಕ್ಕ ದಾಖಲೆಗಳಿಲ್ಲ. ಯಾವ ಯಾವ ತರಗತಿಯ ಭೂಮಿ ಎಷ್ಟೆಷ್ಟಿದೆ ಎನ್ನತಕ್ಕ ದಾಖಲೆಗಳಿಲ್ಲ. ಈ ವಿಚಾರಗಳನ್ನು ಈ ದಿವಸ ಆ ಶ್ಯಾನು ಬೋಗ ಹೇಳಿದ್ದು ವಿಲೇಜ್ ಅಕೌಂಟೆಂಟ್ ಬರೆದಿದ್ದು ಇವೇ ಮುಖ್ಯದಾಖಲೆಗಳು ಇಂಥ ಒಂದು ದೊಡ್ಡ ಗೊಂದಲಮಯವಾಗಿದ್ದರೂ ಸರ್ಕಾರದವರು ಒಂದು ಕಾಂಪ್ರಹೆನ್ಸಿವ್ ಬಿಲ್ಲನ್ನು ತಾರದೆ ಈ ಒಂದೆರಡು ತಿದ್ದುಪಡಿಗಳನ್ನು ತಂದಿರತಕ್ಕದ್ದನ್ನು ನೋಡಿದರೆ

(ಶ್ರೀ ಎಸ್. ಶಿವಪ್ಪ)

ನಮಗೆ ಬಹಳ ಆಶ್ಚರ್ಯವಾಗುತ್ತದೆ. ಹಿಂದೆ ಇದೇ ಶಾಸನ ಸಭೆಗೆ ಸರ್ಕಾರದವರು ಒಂದು ಅಮೂಲಾಗ್ರವಾದ ತಿದ್ದುಪಡಿಯ ಮಸೂದೆಯನ್ನು ತರುವುದಾಗಿ ಭರವಸೆಯನ್ನು ಕೊಟ್ಟಿದ್ದರು. ಅದನ್ನು ಮರೆತು ಈ ದಿವಸ ಸರ್ಕಾರಕ್ಕೆ ಈ ವಿಚಾರದಲ್ಲಿ ಮತ್ತಷ್ಟು ಅಧಿಕಾರವನ್ನು ಪಡೆಯುವ ಒಂದು ಮೂಲ ಉದ್ದೇಶದಿಂದ ಈಗ ಈ ಒಂದೆರಡು ತಿದ್ದುಪಡಿಗಳನ್ನು ತಂದಿದ್ದಾರೆ. ಇವರು ಹೇಳಿದ ಮಾತಿನಲ್ಲಿ ಕಂದಾಯ ಜಾಸ್ತಿಯಾಗಿದೆ ಎಂದು ಹೈ ಕೋರ್ಟಿಗೆ ಕೆಲವರು ಹೋಗಿದ್ದಾರೆ. ಕಂದಾಯ ಜಾಸ್ತಿ ಎಂದು ಯಾರು ಹೇಳುತ್ತಾರೋ ಅವರಿಗೆ ಕಡಿಮೆಮಾಡುವುದಕ್ಕಾಗುವುದಿಲ್ಲ, ಅದಕ್ಕೋಸ್ಕರ ಈ ಮಸೂದೆಯನ್ನು ತರುತ್ತೇವೆಂದು ಹೇಳುತ್ತಾರೆ. ಮೊನ್ನೆತಾನೇ ಒಂದು ಅಮೂಲಾಗ್ರವಾದ ತಿದ್ದುಪಡಿಯನ್ನು ತಂದು ಆ ತಿದ್ದುಪಡಿ ಪಾಸ್ ಮಾಡುವವರೆಗೂ ಕಂದಾಯ ವಸೂಲಿಯನ್ನು ಬಹಳ ಒತ್ತಾಯದಿಂದ ಮಾಡುವುದಿಲ್ಲವೆಂದು ಭರವಸೆ ಕೊಟ್ಟರು. ಆ ಭರವಸೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು, ಮತ್ತು ಪುನಃ ಕಂದಾಯ ವಸೂಲುಮಾಡಬೇಕೆಂಬ ಎನ್ನುವ ಉದ್ದೇಶದಿಂದ, ಇವತ್ತು ಒಂದು ಬಿಲ್ಲನ್ನು ತಂದು ಅದನ್ನು ಪಾಸ್ ಮಾಡಬೇಕೆಂದಿದ್ದಾರೆ, ರೈತರಿಗೆ ನಿಜವಾಗಿ ಈ ಕಂದಾಯ ಹೊರೆಯನ್ನು ತಪ್ಪಿಸುವ ಅಭೀಷ್ಟ, ವಿಶ್ವಾಸ, ಇಚ್ಛೆ ಈ ಸರ್ಕಾರಕ್ಕೆ ಇಲ್ಲವೆಂದು ನನಗೆ ಕಾಣುತ್ತದೆ, ಇವರ ಮನಸ್ಸಿನಲ್ಲಿರುವ ಈ ಒಂದು ಉದ್ದೇಶ ಸಾಧನೆ ಮಾಡುವುದರಿಂದ ಈ ದೇಶದ ರೈತರಿಗೆ ಎಳ್ಳಷ್ಟೂ ಪ್ರಯೋಜವಾಗುವುದಿಲ್ಲ. ಇವತ್ತು ನಿಜವಾಗಿ ರೈತರಿಗೆ ಕಂದಾಯ ಹೊರೆ ಜಾಸ್ತಿ. ಅದನ್ನು ಪುನರ್ವಿಮರ್ಶೆ ಮಾಡಬೇಕು. ಕಂದಾಯವನ್ನು ಯಾವ ರೀತಿ ತಿದ್ದುಪಡಿಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆಂಬ ಇಚ್ಛೆ ಈ ಸರ್ಕಾರಕ್ಕೆ ಇದ್ದಿದ್ದರೆ, ನಿಜವಾಗಿ ಒಂದು ಅಮೂಲಾಗ್ರವಾದ ತಿದ್ದುಪಡಿ ಮಸೂದೆಯನ್ನು ಈ ಶಾಸನಸಭೆಯ ಮುಂದೆ ತಂದು, ಆ ಮಸೂದೆ ರೈತರಿಗೆ ಅರ್ಥವಾಗುವ ಭಾಷೆಯಲ್ಲಿ ರೈತರ ನಂಕಷ್ಟಗಳೇನೆಂದು ತಿಳಿದು, ಅವರ ಅಭಿಪ್ರಾಯವೇನೆಂಬುದನ್ನು ಅದರಲ್ಲಿ ಕ್ರೋಡೀಕರಿಸುತ್ತಿದ್ದರು. ಆದರೆ ಇವರು ಯಾರಿಗೋಸ್ಕರ ಈ ಕಾನೂನು ಮಾಡಿದ್ದಾರೋ ಗೊತ್ತಿಲ್ಲ. ನಮ್ಮ ಎದುರಿಗೆ ಕೂತಿರುವವರೇ 1966ನೇ ಇಸವಿಯಲ್ಲಿ ದೇಶದಲ್ಲಿ ಒಂದು ಶೋಷಣೆ ಹೊರಡಿಸಿದರು. ಅವರಿಗೆ ಮೋಸಮಾಡಿ ವಚನಭ್ರಷ್ಟರಾಗಿ ಇಲ್ಲಿ ಕುಳಿತಿರತಕ್ಕ ಕಾಂಗ್ರೆಸ್ ಶಾಸನಕರಿಂದ ಅದನ್ನು ಕಾರ್ಯಗತಮಾಡಲು ಸಾಧ್ಯವಿಲ್ಲ. ಇವರು ಹೇಳುವುದು ಒಂದು, ಕಾರ್ಯಗತಮಾಡುವುದು ಒಂದು. ಅವರ ಮಾತಿಗೆ ತಪ್ಪಿ ಮೋಸಗಾರರಾಗಿದ್ದಾರೆ. ವಚನಭ್ರಷ್ಟರಾಗಿದ್ದಾರೆ. ಇಂತಹವರು ಈಗ ಇಂತಹ ಒಂದು ಮಸೂದೆಗೆ ತಿದ್ದುಪಡಿಯನ್ನು ಮಾಡುವುದರಿಂದ ರೈತರಿಗೆ ಹೇಗೆ ಅನುಕೂಲವಾಗುತ್ತದೆ? ಇಂಥಾ ಮಸೂದೆಯನ್ನು ಈ ಸಭೆಯಲ್ಲಿ ಅತುರಾತುರವಾಗಿ ತರಬಾರದು. ಯಾವ ಯಜಮಾನ ನಮ್ಮನ್ನೂ ಮತ್ತು ನಿಮ್ಮನ್ನೂ ಬಿಲ್ಲಿಗೆ ಅರಿಸಿ ಕಳುಹಿಸಿದ್ದಾನೋ ಅವನ ಅಭಿಪ್ರಾಯದಂತೆ ಇದರ ಬಗ್ಗೆ ಹೋಗಬೇಕು. ಅವನ ಮಾತಿಗೆ ವಿರುದ್ಧವಾಗಿ ನ್ಯಾಯಕ್ಕೆ ವಿರುದ್ಧವಾಗಿ ಕಾನೂನನ್ನು ಮಾಡಲು ಈ ಕಾಂಗ್ರೆಸ್ ಸರ್ಕಾರಕ್ಕೆ ಅಧಿಕಾರವಿಲ್ಲ. ಆದ್ದರಿಂದ ರೈತರ ಅಭಿಪ್ರಾಯ ಸಂಗ್ರಹಣೆಗೋಸ್ಕರವಾಗಿ ಈ ಮಸೂದೆಯನ್ನು ಸರ್ಕ್ಯುಲೇಟ್ ಮಾಡಿ ಅವರ ಅಭಿಪ್ರಾಯವನ್ನು ಕೊನೆಯಪಕ್ಷ ಆರು ತಿಂಗಳೊಳಗೆ ಸಂಗ್ರಹಮಾಡಿ ಇದು ಪುನಃ ಈ ಸಭೆಯ ಮುಂದೆ ಬಂದು ದೀರ್ಘವಾಗಿ ಚರ್ಚೆಯಾಗಬೇಕು. ಆ ರೀತಿ ಮಾಡದೇ ಏಕಾಏಕಿ ಈ ತಿದ್ದುಪಡಿ ಮಸೂದೆಯನ್ನು ತಂದು ಅದನ್ನು ಪಾಸ್ ಮಾಡುತ್ತೇವೆಂದು ಹೇಳಿದರೆ ಇದರಿಂದ ಏನೂ ರೈತರಿಗೆ ಪ್ರಯೋಜನವಾಗುವುದಿಲ್ಲ. ಸಾರ್ವಜನಿಕರ ಅಭಿಪ್ರಾಯ ವನ್ನೂ ಸಹ ಸಂಗ್ರಹಣೆಮಾಡುವುದಕೋಸ್ಕರವಾಗಿ ಕೊನೆಯ ಪಕ್ಷ 6 ತಿಂಗಳುಗಳ ಕಾಲಪರಿಮಿತಿ ಯನ್ನು ಕೊಟ್ಟು ಹಾಗೆಯೇ ಅಷ್ಟರೊಳಗೆ ನಮ್ಮ ರೈತಬಾಂಧವರು ತಂತಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ತಕ್ಕ ಅವಕಾಶಮಾಡಿಕೊಡಬೇಕೆಂದು ಹೇಳಿ ನಾನು ಈ ತಿದ್ದುಪಡಿಯನ್ನು ಈ ಸಭೆಯ ಮುಂದೆ ಇಡುತ್ತೇನೆ.

Mr. SPEAKER.—Now Sri S. Gopala Gowda will speak as per the list sent to me by the Opposition Chief Whip. Both the Bill and the amendment are before the House for consideration.

Sri H. SIDDAVEERAPPA.—How can that be Sir ? In view of the vital importance of the point raised by the Leader of the Opposition, namely, that before the Bill is taken up for consideration in this House it should be circulated for eliciting public opinion, the amendment has to be considered first. Sri Sivappa has adduced cogent reasons as to

why this Bill should be sent for circulation for eliciting public opinion. It is one of the accepted methods and our Rules also provide for sending any Bill for eliciting public opinion. If at all there is any Bill which ought to go for eliciting public opinion, in my humble opinion, there cannot be any other Bill except this.

The hon. Mover of this Bill mentioned that this was already a justiciable matter before the Supreme Court, where the Supreme Court, in exercise of the fundamental rights of the individual, have said that everybody has a right to be heard before he is taxed. Apart from other things, when such is the position, I am only interested in saying that if this Government means rule of law, if this Government means business according to law and if this Government intends that any law that they pass should be in the interests of the State and not with a view to extricate themselves from an impossible position in which they have been now placed they should consider the suggestion put forward by the Hon. Leader of the Opposition. If you look into the records this is what the Hon. Minister has said on 17th September 1968: 'I will bring in a comprehensive Bill in order to see that all these doubts are set at naught'. As my friend, the Hon. Leader of the Opposition has cogently put it, even lawyers—jurists will find it very difficult to go through some of these provisions. I personally feel that this is a very vital matter in which the entire State, the rural population, nearly 80 per cent of the people are vitally interested. As a matter of fact, we do not know how much each individual has to pay and under what provisions he has to pay. Commencing from the year 1964, there are already several methods of taxations like land revenue, water cess, betterment levy and what not. Unfortunately, we did not refer to all those things on the previous occasions. Let every grower or cultivator know how much he has to pay. At least under the regime of Sri Koujalgi, let every cultivator know how much he has to pay in Mysore State for dry land, for wet land, for rain-fed wet land and where there is assured water supply by any means—either it may be water levy or betterment levy. Various things have been said and people have been scared by the Tahsildar and local officials more than anybody else—even today people have been scared. They sometimes feel that they will have to sell away their lands and they also feel that agricultural economy may be cripped. The time given is very short. Within 3 to 4 days, if you want to bring this Bill and rush through, it is not going to serve any purpose. Therefore, I request the Hon. Minister to please consider the very simple and at the same time sober suggestion of the Hon. the Leader of the Opposition. We have not come to a stage where we say that we shall not pay land revenue. In fact, it is the Government, who have raised the issue in this State. If anybody is responsible for creating the trouble, it is the Government, just to get some votes in 1967 elections. Therefore, I feel that this is a fit case, where the Bill, will have to be sent for eliciting public opinion. I hope the Hon. Minister, who I know, is a sane person and reasonable gentleman, will agree to this proposition.

†ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾಪಟ್ಟಣ).—ಸ್ವಾಮಿ, ಈ ಮೈಸೂರು ರ್ಯಾಂಡ್ ರೆವಿನ್ಯೂಗೆ ಸಂಬಂಧಿಸಿದ (ಎರಡನೇ ತಿದ್ದುಪಡಿಯ) ವಿಧೇಯಕ, 1969, ಏನಿದೆ ಇದರ ವಿಷಯದಲ್ಲಿ ಪ್ರಜಾಭಿಪ್ರಾಯವನ್ನು ಸಂಗ್ರಹಿಸಬೇಕು ಎನ್ನತಕ್ಕಂಥ ಅಂಶಗಳನ್ನು ಶ್ರೀಮಾನ್ ಶಿವಪ್ಪನವರು ಮತ್ತು ನನ್ನ ಮಿತ್ರರಾವಂಥ ಸಿದ್ಧವೀರಪ್ಪನವರು ಬಹಳ ಕೂಲಂಕಷವಾಗಿ ವಿಚಾರ ಮಾಡಿ ಈ ಸಭೆಯಮುಂದಿಟ್ಟಿದ್ದಾರೆ. ನಾನಾದರೂ ಅವರು ಹೇಳಿದ್ದರ ಜೊತೆಗೆ ಒಂದೆರಡು ಅಂಶಗಳನ್ನು ಬಹಳ ಒತ್ತಾಯಪೂರ್ವಕವಾಗಿ ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತೇನೆ.

ಈ ಭೂಕಂದಾಯದ ಪ್ರಶ್ನೆ ದೇಶದಲ್ಲಿ ಸುಮಾರು 73—75 ಪರ್ಸೆಂಟ್ ಜನಗಳಿಗೆ ಸಂಬಂಧಪಟ್ಟ ವಿಚಾರ. ಭೂಮಿಗೂ, ಸರ್ಕಾರಕ್ಕೂ ರೈತನಿಗೆ ಬಹುಕಾಲದಿಂದಲೂ ಇರತಕ್ಕಂಥ ಒಂದು ಸಂಬಂಧದ ನಿರೂಪಣೆಯಾಗಿ ಇದು ನಡೆದುಕೊಂಡು ಬಂದಿದೆ. ಈ ಬಗ್ಗೆ ಅನೇಕ ಕಾನೂನುಗಳು ಆಗಿಹೋಗಿವೆ. ಈ ಹೊತ ಪರಿಸ್ಥಿತಿಯಲ್ಲಿ ಪ್ರಜಾಸತ್ತೆ ಸ್ಥಾಪನೆಯಾದಮೇಲೆ ಭೂಮಿಗೂ, ಭೂಮಿಯನ್ನು ಉಳತಕ್ಕವನಿಗೂ, ಮತ್ತು ಸರ್ಕಾರಕ್ಕೂ ಏನೇನು ಸಂಬಂಧ ಇದೆ ಎಂಬುದನ್ನು ನಿರೂಪಣೆ ಮಾಡತಕ್ಕ ಮಹತ್‌ಕಾರ್ಯ ಈಗ ನಡೆಯಬೇಕಾಗಿದೆ. ಸಾಮಾನ್ಯವಾಗಿ ಎಲ್ಲಾ ವಿಷಯಗಳಲ್ಲೂ ಸಹ ಪ್ರಜೆಗಳು ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಪರಿಣತರಾಗಿ ಬಹಳ ಶಕ್ತಿಯುತವಾಗಿ ಸ್ಫೂರ್ತಿಯಿಂದ ತಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳತಕ್ಕ ಚೈತನ್ಯವನ್ನು ಪಡೆದಿದ್ದಾರೆ. ಯಾವುದಾದರೂ ಒಂದು ಕ್ಷೇತ್ರದಲ್ಲಿ ತಮ್ಮ ನಮಸ್ಯೆಯನ್ನು ಇನ್ನೂ ಪೂರ್ಣವಾಗಿ ತಿಳಿದುಕೊಳ್ಳದೇ ಇರತಕ್ಕ ಕ್ಷೇತ್ರ ಎಂದರೆ ವ್ಯವಸಾಯ ಕ್ಷೇತ್ರ ಅಂದರೆ ಭೂಮಿಯನ್ನೇ ನಂಬಿಕೊಂಡಿರುವವರ ಕ್ಷೇತ್ರ ಮತ್ತು ತನಗೋಸ್ಕರ ಮಾಡತಕ್ಕ ಕಾನೂನುಗಳ ಪರಿಣಾಮವೇನು ? ತನಗೆ ಒಳ್ಳೆಯದಾಗುತ್ತದೋ, ಕೆಟ್ಟದಾಗುತ್ತದೋ, ಎನ್ನುವ ವಿಷಯವನ್ನು ರೈತ ಪರಿಶೀಲನೆ ಮಾಡಬೇಕಾದರೆ, ಬೇರೆ ಯಾರಾದರೂ ಪರಿಶೀಲನೆ ಮಾಡಿ ಹೇಳಬೇಕೇ ಏನಹ ತಾನೇ ತಾನಾಗಿ ಪರಿಶೀಲನೆ ಮಾಡುವ ಸ್ಥಿತಿಯಲ್ಲಿಲ್ಲ. ಬಹು ಭಾಗದಲ್ಲಿರತಕ್ಕ ರೈತರಲ್ಲಿ ಮೇಲ್ಕಟ್ಟದಲ್ಲಿರುವ ಶೇಕಡಾ 4–5ರಷ್ಟು ಜನ ಸ್ವಲ್ಪ ವಿಚಾರಪರರು ಆಗಬಹುದೇ ಏನಹ ಬಹುತೇಕ ಜನರು ವಿಚಾರಪರರು ಆಗಲು ಶಕ್ತರಲ್ಲ. ಅವರಮೇಲೆ ಶಾಸನ ಹೇರಿಸುವಾಗ ಶಾಸನದ ತಿರುಳು ಏನಿದೆ, ಅದರ ಪರಿಣಾಮ ಜನತೆಯಮೇಲೆ ಏನಾಗುತ್ತದೆ ಎನ್ನತಕ್ಕದ್ದರ ಬಗ್ಗೆ ಅಭಿಪ್ರಾಯ ಇಲ್ಲದೆ ಇಲ್ಲಿ ಕೂತು ಶಾಸನಗಳನ್ನು ಮಾಡುವ ಅರ್ಥ ಗಂಡು ಹೆಣ್ಣು ಇಲ್ಲದೆ ಮದುವೆ ಮಾಡಿದಂತಾಗಿದೆ. ಮೊನ್ನೆ ತಾನೆ ಹೊಸ ವಿಷಯವನ್ನು ಮಾನ್ಯ ಮಂತ್ರಿಯವರ ಬಾಯಿಂದ ಹೊರಡಿಸಿದೆ. ರೈತನು ಏನು ಭೂಮಿಯನ್ನು ಪಡೆದಿದ್ದಾನೋ, ಅದಕ್ಕೂ ಅವನಿಗೂ ಇರತಕ್ಕ ಸಂಬಂಧವೇನು, ಸರ್ಕಾರಕ್ಕೂ ರೈತನಿಗೂ ಇರತಕ್ಕ ಸಂಬಂಧವೇನು ? ಅದನ್ನು ಮೊದಲು ನಿರೂಪಣೆ ಮಾಡಿ, ಆಮೇಲೆ ಕಂದಾಯ ಹಾಕಬೇಕಾಗಿದೆ. ಟೆನೇಂಟ್ಸ್ ಮತ್ತು ರ್ಯಾಂಡ್ ಲಾರ್ಡ್ಸ್ ರಿಲೇಷನ್‌ಷಿಪ್ ಇರಬೇಕೇ ಎಂಬುದನ್ನು ಇತ್ಯರ್ಥಮಾಡಿ ಎಂದು ಹೇಳಿದ್ದೇನೆ. ದೇಶದಲ್ಲಿ ಮೂಲಭೂತವಾದ ನಿರೂಪಣೆಗಳನ್ನು ಮಾಡಬೇಕಾಗಿದೆ. ಒಂದು ಕಡೆ ಭೂಮಿಯನ್ನು ರೈತನಿಗೆ ಅಪ್‌ಸೆಟ್ ಪ್ರೈಸಿನಲ್ಲಿ ಕೊಟ್ಟಿದ್ದೀರಿ. ಇನ್ನೊಂದು ಕಡೆ 30—40—99 ವರ್ಷಗಳ ಲೀಸಿನಲ್ಲಿ ಭೂಮಿಯನ್ನು ಕೊಡುತ್ತಿದ್ದೀರಿ. ನೀವು ನಮಗೆ ಕೊಟ್ಟಿರತಕ್ಕ ಜಮೀನು ಏನಿದೆ, ಅದು ಜೆಂಪರರಿ ಲೀಸ್ಸೇ, ಪರ್ಮನೆಂಟ್ ಲೀಸ್ಸೇ ? ಇಲ್ಲವೇ ನಿಮ್ಮ ಹಕ್ಕಿಗೆ ಒಳಪಟ್ಟಂತೆ ಕೊಟ್ಟಿದ್ದೀರೋ ? ನಮಗೆ ನಿಮಗೆ ಇರತಕ್ಕಂತಹ ಸಂಬಂಧ ಏನು ? ಏನುವ ಮೂಲಭೂತವಾದ ತೀರ್ಮಾನ ಮೊದಲು ಆಗಬೇಕು. ಅದು ಆದಮೇಲೆ ಮುಂದೆ ತೆರಿಗೆ, ಕಂದಾಯವನ್ನು ಹಾಕತಕ್ಕ ಹಕ್ಕು ಇರಬೇಕೇ, ಇಲ್ಲವೇ ಭೂಮಿಗೋಸ್ಕರ ನಾವು ಗೇಣಿ ಸರ್ಕಾರಕ್ಕೆ ಕೊಡಬೇಕೇ, ಇವೆರಡೂ ಇತ್ಯರ್ಥವಾದರೆ, ಮುಂದೆ ಗೇಣಿ ಇದ್ದರೆ, ಆ ಗೇಣಿಯನ್ನು ಹೆಚ್ಚು ಮಾಡಬೇಕಾದರೆ, ಏನು ಮಾಡಬೇಕೆಂಬುದನ್ನು ತೀರ್ಮಾನ ಮಾಡಬೇಕಾಗುತ್ತದೆ. ಗೇಣಿಯನ್ನು ಸ್ವೇಚ್ಛೆಯಾದ ರೀತಿಯಲ್ಲಿ ಹೆಚ್ಚಿಸಿಕೊಳ್ಳುವುದಕ್ಕಾಗುವುದಿಲ್ಲ. ಗೇಣಿಯನ್ನು ಹೆಚ್ಚಿಸುವುದರ ಮುನ್ನ ಭೂಮಾಲಕರಾಗಿರತಕ್ಕ ಸರ್ಕಾರ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡಬೇಕಾಗಿ ಬರುತ್ತದೆ. ಯಾವ ಪ್ರಮಾಣದಲ್ಲಿ ನೀವು ಆ ಕರ್ತವ್ಯವನ್ನು ನಿರ್ವಹಣೆ ಮಾಡಿ ಭೂಮಿಯ ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕೆ ನೀವು ಏನು ಕಂಟ್ರಿಬ್ಯೂಶನ್ ಕೊಟ್ಟಿದ್ದೀರಿ ಎನ್ನುವುದರಮೇಲೆ ಭೂಮಿಯಮೇಲೆ ತೆರಿಗೆ ಹೆಚ್ಚು ಮಾಡುವುದು ಅಥವಾ ಕಡಿಮೆ ಮಾಡುವುದು ನಿಲ್ಲುತ್ತದೆ.

ಈಗ ಸರ್ಕಾರದವರು ಒಂದು ವಿಷಯವನ್ನು ಒಪ್ಪಿಕೊಂಡಿದ್ದಾರೆ.

Mr. SPEAKER.—There is a motion for circulation. The Hon'ble Member may be brief in his obeservation.

Sri H. M. CHANNABASAPPA.—Sir, I am making out a case as to why this Bill should go for circulation. It is not a small matter for myself and the Hon. Minister concerned to sit and decide. The people must have a say in the matter. Without consulting the people and without knowing what exactly is the result of it on the masses, it cannot be decided. Therefore, Sir, I am making out a case to show how important it is.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ 10 ನಿಮಿಷಗಳನ್ನು ಮಾತ್ರ ಕೊಡುತ್ತೇನೆ. ಅಷ್ಟರಲ್ಲಿ ಮುಗಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಕೆಲವು ಭಾಗದ ಜನರಿಗೆ ಸಂಬಂಧಪಟ್ಟಿದ್ದಾದರೆ ಕೆಲವು ನಿಮಿಷಗಳಲ್ಲಿ ಮುಗಿಸಬಹುದಾಗಿತ್ತು. ಆದರೆ ಇದು ಕೋಟಿಗಟ್ಟಲೆ ಜನರಿಗೆ ಸಂಬಂಧಪಟ್ಟ ಪ್ರಶ್ನೆಯಾದ್ದರಿಂದ ಕೆಲವೇ ನಿಮಿಷಗಳಲ್ಲಿ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ರೈತರು ಮೂಕ ಪ್ರಾಣಿಗಳೆಂದು ಸರ್ಕಾರದವರು ತಿಳಿದುಕೊಂಡು ಅವರುಮೇಲೆ ಮತ್ತೊಂದು ಶಾಸನ ಮಾಡುವುದರ ಮೂಲಕ ಮತ್ತಷ್ಟು ತೊಂದರೆ ಕೊಡುವುದಕ್ಕೆ ಹೊರಟಿದ್ದಾರೆ. ಕೆಲವು ಶಾಸನ ಮಾಡುವಾಗ ಜನರ ಅಭಿಪ್ರಾಯ ತಿಳಿಯದೆ ಮಾಡುವುದು ಸರಿಯಲ್ಲ. ನಾವು ಕಂದಾಯ ಕೊಡುತ್ತೇವೆ, ಆದ್ದರಿಂದ ನಾವು ಭೂಮಿಗೆ ಹಕ್ಕುದಾರರಾಗಿದ್ದೇವೆ ಎಂದು ಯಾರು ತಿಳಿದುಕೊಂಡಿದ್ದಾರೋ ಅವರ ಮೇಲೆ ಮತ್ತೊಂದು ಹೊಸ ಶಾಸನ ಮಾಡುವುದರ ಮೂಲಕ ಮತ್ತೆ ಕೆಲವು ನಿರ್ಬಂಧಗಳನ್ನು ಹಾಕುವುದಕ್ಕೆ ಹೊರಟಿದ್ದೀರಿ.

ಇನ್ನುಮೇಲೆ ಭೂಮಿಯನ್ನು ಒಬ್ಬರಿಗೆ ಕೊಡುವಾಗ ನೀವು ಕೂಡತಕ್ಕ ಗೇಣಿಯ ಪೊಸಿಷನ್ ಬದಲಾವಣೆಯಾಗುತ್ತಾ ಹೋಗುತ್ತದೆ. ಇನ್ನು ಮುಂದೆ ಜಮೀನನ್ನು ನೀವು ಯಾರಿಗೇ ಆಗಲೀ ಪಬ್ಲಿಕ್ ಆಕ್ಷನ್ ಮೂಲಕ ಮಾರಾಟ ಮಾಡತಕ್ಕ ಪದ್ಧತಿಯನ್ನು ನಿಲ್ಲಿಸಬೇಕಾಗುತ್ತದೆ. ಗೇಣಿ ಸಂಬಂಧವಾಗಿ ಈಗಿರತಕ್ಕ ನಮ್ಮ ನಿಮ್ಮ ಸಂಬಂಧವನ್ನು ನಿರ್ಧಾರ ಮಾಡುವಾಗ, ಸಾವಿರಾರು ಜನ ಹಾಗೂ ಲಕ್ಷಾಂತರ ಜನರು ಯಾವ ಯಾವ ತರಹದ ಜಮೀನುಗಳನ್ನು ಪಡೆದಿದ್ದಾರೆ ಅದನ್ನು ಸರಿಯಾಗಿ ನೋಡಿಕೊಂಡು ನಿರ್ಧಾರ ಮಾಡಬೇಕು. ಎಲ್ಲರಿಗೂ ಒಂದೇ ಸಮನಾದ ಭೂಮಿ ಇರುವುದಿಲ್ಲ. ತರೀ ಜಮೀನು ಇರುತ್ತದೆ, ಖುಷ್ಕಿ ಜಮೀನು ಇರುತ್ತದೆ, ಬಾಗಯತು ಜಮೀನು ಇರುತ್ತದೆ ಮತ್ತು ಇತರ ವಿಧವಾದ ಕೊರಕಲು ಜಮೀನುಗಳು ಇರುತ್ತವೆ. ಇಂತಿಂತಹ ಭಾಗಗಳಲ್ಲಿ ಇಂತಿಂತಹ ಪರಿಸ್ಥಿತಿಗಳಿವೆ ಎನ್ನುವುದನ್ನು ನೋಡಬೇಕಾಗುತ್ತದೆ. ಇನ್ನು ಪಟ್ಟಣವಾಸಿಗಳಿಗೆ ಜಮೀನುಗಳು ಹತ್ತಿರದಲ್ಲಿವೆಯೇ ದೂರದಲ್ಲಿವೆಯೇ ಮತ್ತು ಇದರಲ್ಲಿ ಉತ್ಪಾದನೆ ಏನು ಬರುತ್ತಿದೆ ಇವೆಲ್ಲವನ್ನೂ ನೋಡಿಕೊಳ್ಳುವುದರ ಜೊತೆಗೆ ಸರಕಾರದವರು ರೈತಾಪಿ ಜನಗಳು ಇಲ್ಲಿಯವರೆಗೂ ಏನೇನು ಇನ್‌ವೆಸ್ಟ್ ಮಾಡಿದ್ದಾರೆ, ಸರಕಾರ ಏನು ಇನ್‌ವೆಸ್ಟ್ ಮಾಡಿದೆ, ರೈತರಲ್ಲದೆ ಇತರ ಜನರು ಇದರಲ್ಲಿ ಏನೇನು ಇನ್‌ವೆಸ್ಟ್ ಮಾಡಿದ್ದಾರೆ ಮತ್ತು ಇರುವ ಭೂಮಿಯ ಮೇಲೆ ಇದುವರೆಗೂ ಎಷ್ಟು ಇನ್‌ವೆಸ್ಟ್ ಮಾಡಿದ್ದಾರೆ ಇದನ್ನೆಲ್ಲಾ ಸರಕಾರ ಗಣನೆಗೆ ತೆಗೆದುಕೊಂಡು ಸರಕಾರ ಗೇಣಿ ನಿರ್ಧಾರ ಮಾಡಬೇಕಾಗುತ್ತದೆ. ನುಲಭವಾಗಿ ಮಾಲೀಕರಿಗೂ ಗೇಣಿದಾರರಿಗೂ ಇರುವ ಪದ್ಧತಿಯನ್ನು ಬದಲಾವಣೆ ಮಾಡುತ್ತೇವೆ ಎಂದು ಇಲ್ಲಿ ಒಂದು ಅಮೆಂಡುಮೆಂಟು ತೆಗೆದುಕೊಂಡು ಚರ್ಚೆ ಮಾಡುತ್ತೇವೆ ಎಂದು ಹೇಳುವ ಈ ಕಾನೂನಿನಲ್ಲಿ ಅರ್ಥವಿಲ್ಲ. ಮತ್ತೆ ಪುನಃ ಇದು ಭೂಮಿಯ ಗೇಣಿ ಅಲ್ಲ ಕಂದಾಯ ಎಂದು ಹೇಳಿದ್ದೀರಿ. ಆದರೆ ಮುಂದೆ ಇದನ್ನು ಬದಲಾವಣೆ ಮಾಡಬಹುದು. ಜನತೆಗೆ ನಾನಾಗಲೇ ಹೇಳಿದಂತೆ ಈಗಿನ ಸರಕಾರದಲ್ಲಿ ನಂಬಿಕೆ ಇಲ್ಲ. ಆಡಳಿತದ ಅಧಿಕಾರದಲ್ಲಿರುವವರಿಗೆ ಕಿವಿ ಇದ್ದರೂ ಕೇಳಿಸುವುದಿಲ್ಲ. ಕಣ್ಣಿದ್ದರೂ ಕಾಣಿಸುವುದಿಲ್ಲ. ಮತ್ತು ಇವುಗಳನ್ನೆಲ್ಲಾ ಪರಿಶೀಲನೆ ಮಾಡಬೇಕು ಎನ್ನುವುದಕ್ಕೆ ಸರಕಾರದಲ್ಲಿ ಹೃದಯವೂ ಇಲ್ಲ. ತಲೆ ಇದೆಯೋ ಇಲ್ಲವೋ ಅವರೇ ಹೇಳಬೇಕು. (ನಗು). ತಲೆ ಇದ್ದರೂ ಹೇಳುವುದಿಲ್ಲ. ಈಗ ಎಲೆಕ್ಷನ್ನಿಗೆ ಹೋದರೆ ಆಗ ಜನರೇ ಹೇಳುತ್ತಾರೆ. ಆದುದರಿಂದ ಇದು ನುಲಭವಾಗಿ ಅರ್ಥ ಮಾಡುವ ವಿಚಾರವಲ್ಲ. ಇದು ಮೊದಲನೇ ಆಸ್‌ಪೆಕ್ಟ್.

ಇನ್ನು ಎರಡನೆಯದು, ನನಗೆ ಗೊತ್ತಿರುವಂತೆ ಮುಂದಿನ ಅಧಿವೇಶನದಲ್ಲಿ ನಾಳೆ ಇದು ಗೇಣಿಯಲ್ಲ, ಕಂದಾಯ ಎಂದು ಹೇಳಿ ಒಂದು ವಾದ ಮಾಡಲಿಕ್ಕೆ ಹೋಗಿಬಿಟ್ಟರೆ ಇವರು ಒಂದು ದೊಡ್ಡ ಸಮುದ್ರದಲ್ಲೇ ಮುಳುಗಿ ಹೋಗುತ್ತಾರೆ. ನಾನು ಕೂಡ ಅವರು ಹಾಗೆ ಹೇಳಲಿ ಎಂದೇ ಕಾಯುತ್ತಿದ್ದೇನೆ. ತೆರಿಗೆ ಹಾಕುವಾಗ ಕ್ಯಾನನ್ ಆಫ್ ಟ್ಯಾಕ್ಸೇಷನ್ ಅನುಸರಿಸಿ ನೀವು ತೆರಿಗೆ ಹಾಕಬೇಕಾಗುತ್ತದೆ. ಈಗ ಸರ್‌ಚಾರ್ಜ್ ಎಂದು ಏನು ವಸೂಲು ಮಾಡಿದ್ದೀರೊ ಅದನ್ನು ರೈತರಿಗೆ

(ಶ್ರೀ ಎಚ್. ಎಂ. ಚನ್ನಬಸಪ್ಪ)

ವಾಪಸು ಕೊಡಬೇಕಾಗುತ್ತದೆ. ಗೇಣಿಯಮೇಲೆ ತೆರಿಗೆ ಹಾಕಬೇಕು ಎಂದು ಎಲ್ಲಿಯೂ ಇಲ್ಲ. ಈಗಾಗಲೇ ಕಂದಾಯದಮೇಲೆ ಸರ್‌ಚಾರ್ಜು ಎಂದು ಸುಮಾರು ನಾಲ್ಕೈದು ಕೋಟಿಗಳಷ್ಟು ಸರ್‌ಚಾರ್ಜ್ ವಸೂಲು ಮಾಡಿದ್ದಾರೆ. ಇದು ಒಂದು ವರ್ಷದ್ದಲ್ಲ. ಹೀಗೆ ಮೂರು ನಾಲ್ಕು ವರ್ಷಗಳಿಂದಲೂ ಸರ್ ಚಾರ್ಜು ಎಂದು ವಸೂಲು ಮಾಡಿರುವುದನ್ನು ರೈತಾಪಿ ಜನರಿಗೆ ವಾಪಸು ಕೊಡಬೇಕಾಗುತ್ತದೆ. ಮುಂದೆ ಅವನಿಗೆ ಕೊಡಬೇಕಾದ ಗೇಣಿಯನ್ನೂ ನಿರ್ಧಾರ ಮಾಡುತ್ತೀವೆ ಎನ್ನುವುದು ಅಷ್ಟು ಸುಲಭವಾದ ಮಾತಲ್ಲ—ಈಗಾಗಲೇ ರೈತಾಪಿ ಜನರ ಹಾಗೂ ಇತರ ಜನರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ದೇವರಾಜ ಅರಸ್ ರವರು ಇದೇ ತಿಂಗಳು 10ನೇ ತಾರೀಖು ಒಂದು ಮೀಟಿಂಗು ಕರೆದಿದ್ದಾರೆ. ಇದರಲ್ಲಿ ರೈತಾಪಿ ಜನರು ಹಾಗೂ ಇನ್ನಿತರ ದೊಡ್ಡ ಜನರೂ ತಮ್ಮ ಅಭಿಪ್ರಾಯಗಳನ್ನು ಕೊಡುತ್ತಾರೆ. ಅವರ ವಿಚಾರಗಳನ್ನು ತಿಳಿದುಕೊಂಡಮೇಲೆ ನೀವು ಹಾಗೂ ನಾನು ಇಲ್ಲಿ ನಿಂತು ವಾದ ಮಾಡಬೇಕಾಗಿ ಬರುತ್ತದೆ. ತೆರಿಗೆಗಳನ್ನು ಹೆಚ್ಚು ಮಾಡಲಿಕ್ಕೆ ಏನೇನು ಆಧಾರಗಳು ಬೇಕು ಎನ್ನುವುದನ್ನು ನಾವು ಆಗ ಯೋಚನೆ ಮಾಡಬೇಕಾಗಿ ಬರುತ್ತದೆ.

ಈಗ ತೆರಿಗೆ ಹಾಕಬೇಕಾದರೆ ಮೂಲಭೂತವಾದ ತತ್ವಗಳು ಏನು ಇವೆಯೋ ಆ ತತ್ವಗಳ ಆಧಾರದ ಮೇರೆ ತೆರಿಗೆ ಹಾಕಬೇಕೇ ವಿನಾ ಅನೀತಿ ತೆರಿಗೆಯನ್ನು ಹಾಕಬಾರದು. ಅನೀತಿ ತೆರಿಗೆ ಹಾಕಿದರೆ ಆ ತೆರಿಗೆಯನ್ನು ಕೊಡಕೂಡದು ಎಂದು ದೇಶದಲ್ಲಿ ನಾವು ಹೇಳುತ್ತೇವೆ. ಸರ್ಕಾರಿ ನೌಕರರೇ ಆಗಲಿ, ವ್ಯಾಪಾರೋದ್ಯಮಿಗಳೇ ಆಗಲಿ, ಕೈಗಾರಿಕೋದ್ಯಮಿಗಳೇ ಆಗಲಿ 3 ಸಾವಿರ ರೂಪಾಯಿ ಮೇಲೆ ಉತ್ಪನ್ನ ಬರುವವರೆಲ್ಲರೂ ದೇಶದ ಖಜಾನೆಗೆ ತೆರಿಗೆ ಕೊಡುತ್ತಾರೆ. ಆದರೆ ಒಂದು ಎಕರೆ ಇರತಕ್ಕ ರೈತಾಪಿ ಜನರು ಮಾತ್ರ ಒಂದು ವರ್ಷಕ್ಕೆ ಇಷ್ಟು ಕಂದಾಯ ಕೊಡಬೇಕು ಎಂದು ವಸೂಲ್ಮಾಡುತ್ತಾರೆ. ಇದರಲ್ಲಿ ಯಾವ ಧರ್ಮ ಇದೆ, ಯಾವ ನೀತಿ ಇದೆ ? ಅವರವರ ಅನುಕೂಲತೆಗಳನ್ನು ನೋಡಿಕೊಂಡು ತೆರಿಗೆ ಹಾಕುತ್ತೀರಾ ? ಇದಕ್ಕೆ ಒಂದು ನೀತಿ ಬೇಡವೇ ? ರೈತಾಪಿ ಜನರು ಮೂಕಪ್ರಾಣಿಗಳೆಂದು ಅನ್ಯಾಯ ಮಾಡಿದರೆ ಅವರು ಏನಾದರೂ ಸಂಘಟಿತರಾಗಿ ಎದ್ದು ನಿಂತಕೂಡಲೇ ನೀವು ಎಲ್ಲಿಗೆ ಹೋಗುತ್ತೀರೋ ? ಆದಕಾರಣ ಈ ಮೂಲಭೂತ ವಿಚಾರದಲ್ಲಿ ನೀವು ಮಾಡಿರುವ ಶಾಸನ ಸಾಧುವಲ್ಲ. ಶ್ರೀಮಾನ್ ನಂಜೇಗೌಡರು ಒಂದು ಅಮೆಂಡ್‌ಮೆಂಟ್ ತಂದಕಾಲದಲ್ಲಿ, ನಿಮ್ಮ ಅಮೆಂಡ್‌ಮೆಂಟ್ ಹಿಂದಕ್ಕೆ ತೆಗೆದುಕೊಳ್ಳಿರಿ, ನಾನು ಒಂದು ಕಾಂಪ್ರೆ ಹೆನ್ಸೀವ್ ಆಗಿ ಅಮೆಂಡ್‌ಮೆಂಟ್ ತರುತ್ತೇನೆ ಎಂದು ಹೇಳಿದಿರಿ. ಶ್ರೀಮಾನ್ ನಂಜೇಗೌಡರು ತಂದಿದ್ದ ಅಮೆಂಡ್‌ಮೆಂಟ್ ಏನಾಯಿತು ! ಅವರು ಈ ಮಾನ್ಯ ಸಭೆಯ ಸದಸ್ಯರಲ್ಲವೇ ! ಅವರು ಈ ಶಾಸನನಭೆಯಲ್ಲಿ ಅಮೆಂಡ್‌ಮೆಂಟ್ ತರುವುದಕ್ಕೆ ಹಕ್ಕಿಲ್ಲವೇ ! ಈ ವಿಷಯವನ್ನೆಲ್ಲಾ ಪರಿಶೀಲನೆ ಮಾಡಬೇಕು. ರೈತಾಪಿ ಜನಗಳನ್ನೂ ಪರಿಗಣನೆಗೆ ತೆಗೆದುಕೊಂಡು, ಅವರ ಕ್ಷೇಮ, ಅವರ ಪರಿಸ್ಥಿತಿ ಆಧಾರದಮೇಲೆ ಒಂದು ಕಾಂಪ್ರಹೆನ್ಸೀವ್ ಅಮೆಂಡ್‌ಮೆಂಟನ್ನು ತರುತ್ತೀರೆಂದು ನಿರೀಕ್ಷಣೆ ಮಾಡಿದ್ದರೆ ಶ್ರೀಮಾನ್ ನಂಜೇಗೌಡರು ಹಿಂದೆ ಏನು ಒಂದು ಅಮೆಂಡ್‌ಮೆಂಟನ್ನು ತಂದಿದ್ದರೋ ಅದನ್ನೇ ಬೇರೆ ಪದಗಳನ್ನು ಉಪಯೋಗಿಸಿಕೊಂಡು ತೆಗೆದುಕೊಂಡು ಬಂದಿದ್ದೀರಿ. ಶ್ರೀಮಾನ್ ನಂಜೇಗೌಡರಿಗೆ ಎಲ್ಲಿ ಕ್ರೆಡಿಟ್ ಹೋಗುತ್ತದೋ ಎಂದು ಬೇರೆ ರೂಪದಲ್ಲಿ ಅದೇ ಅಮೆಂಡ್‌ಮೆಂಟನ್ನು ತಂದಿದ್ದೀರಿ. ಈ ರೀತಿ ಮಾಡುವುದು ಶುದ್ಧ ಅನ್ಯಾಯ. ಆದುದರಿಂದ ಈ ಅಮೆಂಡ್‌ಮೆಂಟನ್ನು ಕನ್ಸಿಡರ್ ಮಾಡುವುದಕ್ಕೆ ಸಿದ್ಧವಾಗಿಲ್ಲ ಎಂದು ಹೇಳುತ್ತೇನೆ. ಆದುದರಿಂದ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ ರೈತಾಪಿ ಜನರು ಸಂಘಟಿತರಾಗುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಅದು ಆಗುತ್ತದೆ. ನೀವು ರೈತಾಪಿ ಜನರ ಅಭಿಪ್ರಾಯ ಪಡೆಯದೆ, ಅವರ ಆಗುಹೋಗುಗಳನ್ನು ತಿಳಿಯದೆ, ಶಾಸನ ಮಾಡಿದರೆ, ಅದರಿಂದ ದೇಶಕ್ಕೆ ಅನ್ಯಾಯವಾಗುತ್ತದೆ. ಅದನ್ನು ತಿಳಿದು ಕೊಂಡು ಮಾಡಬೇಕು. ರೆವಿನ್ಯೂ ಮಿನಿಸ್ಟರ್ ಹೇಳಿದರು, ಜನಗಳು ಕಂದಾಯ ಕೊಟ್ಟು ಬಿಡುತ್ತಾರೆ. ನೀವು ಏತಕ್ಕೆ ಅಡ್ಡಿ ಮಾಡುತ್ತೀರಿ ಎಂದು. ಇದಕ್ಕಿಂತ ಮೋಸಗಾರಿಕೆ ಮಾಡುವುದು ಬೇರೆ ಯಾವುದೂ ಇಲ್ಲ. ಇದನ್ನು ಯಾವ ರೈತಾಪಿ ಪ್ರತಿನಿಧಿಗಳು ಹೇಳಿದರು ಎಂದು ನಾನು ಕೇಳುತ್ತೇನೆ ?

ಈವೊತ್ತು ಮೂಕರಾಗಿರತಕ್ಕ ಕೋಟಿಗಟ್ಟಲೆ ಜನರನ್ನ ಇಂಗ್ಲೀಷರು ನೂರು ವರ್ಷ ಮೋಸ ಮಾಡಿದರು, ನಾವು 20 ವರ್ಷ ಮೋಸ ಮಾಡಿದ್ದೇವೆ. ಆದರೆ ಇನ್ನು ಮುಂದೆ ಮೋಸ ಮಾಡುವುದಕ್ಕಾಗುವುದಿಲ್ಲ. ಒಬ್ಬ ಮನುಷ್ಯನನ್ನು ಒಂದು ಸಲ ಮೋಸ ಮಾಡಬಹುದು, ಹತ್ತಾರು ಜನರನ್ನು ಒಂದು ಸಲ ಮೋಸ ಮಾಡಬಹುದು, ಕೋಟಿಗಟ್ಟಲೆ ಜನರನ್ನು ಸದಾಕಾಲ ಮೋಸ ಗೊಳಿಸುವುದು ಸಾಧ್ಯವಿಲ್ಲ. ಏನೋ ತಾವು ದೈವಾಧೀನದಿಂದ ಈ ಇರಾಖೆಯ ಮಂತ್ರಿಗಳಾಗಿದ್ದೀರಿ.

ಇಂಥ ಕಾರ್ಯ ಸಾಧನೆಯಾಗಬೇಕಾದರೆ ದೈವಾಂಶ ಸಂಭೂತರಿಂದಲೇ ಆಗಬೇಕು. ಆ ಕೀರ್ತಿ ಯಾರಿಗೆ ನಲ್ಲುತ್ತದೆ ಅವರು ಚಿರಾಯುಗಳು. ಕೋಟಿಗಟ್ಟಲೆ ಜನರ ಪರಿಸ್ಥಿತಿಯನ್ನು ಸುಧಾರಣೆ ಮಾಡತಕ್ಕ ಯೋಗ ನಿಮ್ಮ ಮನೆಮುಂದೆ ಹೋಗತಕ್ಕ ಕಾಲ ಬಂದಿರುವಾಗ ನೀವು ಕೈಕಟ್ಟಿ ಕುಳಿತು ಕೊಳ್ಳುವುದು ಯೋಗ್ಯವಲ್ಲ. According to Shakespeare, when the fortune passes through everybody's door, those who are vigilant will catch it." ಹಾಗೆ ಈಗ ಈ ಚರಿತ್ರೆಯನ್ನು ಮಾರ್ಪಾಡು ಮಾಡಿ ಕೀರ್ತಿವಂತರಾಗತಕ್ಕ ಗಾಳಿ ನಿಮ್ಮ ಮನೆ ಮುಂದೆ ಹೋಗುತ್ತಿದೆ. ನನ್ನ ಮನೆಯ ಮುಂದೆ ಬರಲಿಲ್ಲ. ಆ ಯೋಗ ಈಪೊತ್ತಿನ ದಿವಸ ನಿಮಗೆ ಬಂದಿದೆ. ಅದನ್ನು ಹಿಡಿದುಕೊಂಡರೆ ಮೇಲೆ ಹೋಗುತ್ತೀರಿ, ಇಲ್ಲದೆ ಇದ್ದರೆ ಅಧಃ ಪತನಕ್ಕೆ ಹೋಗಬಹುದು. ಅದು ನಿಮಗೆ ಬಿಟ್ಟದ್ದು. ನಾನು ಅರಿಕೆ ಮಾಡಿಕೊಳ್ಳತಕ್ಕುದು ಈ ಪರಿಸ್ಥಿತಿ ಜನಸಾಮಾನ್ಯರ ಮುಂದೆ ಹೋಗಲು, ಇದಕ್ಕೆ ಸಂಬಂಧಪಟ್ಟ ಜನರೆಲ್ಲರೂ ಸಂಘಟಿತರಾಗಿ ವಿಚಾರ ಮಾಡಿ ಅವರ ಅಭಿಪ್ರಾಯಗಳನ್ನು ತಿಳಿಸಲಿ. ಆ ಮೇಲೆ ನಾವು ನೀವು ಕುಳಿತು ಅವರ ಹಿತದೃಷ್ಟಿಯಿಂದ ಅವರ ಅಭಿಪ್ರಾಯಗಳನ್ನು ಗಣನೆಗೆ ತೆಗೆದು ಕೊಂಡು ಆ ಮೇಲೆ ಶಾಸನ ಮಾಡತಕ್ಕುದು ದೇಶಕ್ಕೆ ಯೋಗ್ಯವೇ ವಿನಾ ಆತುರಾತುರವಾಗಿ ಒಂದು ಕಾನೂನು ಮಾಡುವುದು, ನಾಳೆ ಅದನ್ನು ಬದಲಾವಣೆ ಮಾಡುವುದು, ಈ ತರಹ ಮಾಡುವುದು ನಲ್ಲದು. ಅದು ನಮಗೂ, ನಿಮಗೂ ಯೋಗ್ಯವಾಗುವುದಿಲ್ಲ. ಈ ಮಸೂದೆಯನ್ನು ಪ್ರಜೆಗಳ ಅಭಿಪ್ರಾಯಕ್ಕೋಸ್ಕರವಾಗಿ ಪ್ರಕಟಣೆ ಮಾಡಿ ಕೆಲವು ಕಾಲ ಕೊಟ್ಟು, ಅವರೂ, ಅವರ ಪ್ರತಿನಿಧಿಗಳೂ, ಅವರ ಸಂಘಸಂಸ್ಥೆಗಳೂ ಅಭಿಪ್ರಾಯಗಳನ್ನು ಕೊಟ್ಟ ಮೇಲೆ ನಾವೂ ನೀವೂ ಕುಳಿತುಕೊಂಡು ಆಲೋಚನೆ ಮಾಡೋಣ ಎಂದು ಹೇಳಿ ನಾನು ಬಹಳ ವಿನಯದಿಂದ ಮಾನ್ಯ ಮಂತ್ರಿಯವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸ್ವಾಮಿ, ಮಾನ್ಯ ಮಂತ್ರಿಗಳು ತಂದಿರತಕ್ಕ ಮಸೂದೆ ಸಮಗ್ರವಾದುದಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. 17-8-69 ರಂದು ಮಾನ್ಯ ಮಂತ್ರಿಗಳು ಸಮಗ್ರವಾದ ಒಂದು ಮಸೂದೆಯನ್ನು ತಂದು ಮೈಸೂರು ಲ್ಯಾಂಡ್ ರೆವಿನ್ಯೂ ಕಾನೂನಿನಲ್ಲಿರುವ ಲೋಪದೋಷಗಳನ್ನು ಸರಿ ಮಾಡಿ ರೈತರಿಗೆ ಅನುಕೂಲವನ್ನು ಮಾಡಿಕೊಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇದೆ ಎಂದು ಹೇಳಿದರು ತಂದಿರುವ ಮಸೂದೆ. It has become a bundle of confusion if not contradiction. ಈಗ ಇರುವ ಹೊಸ ಕಂದಾಯ ಕಾನೂನಿನಲ್ಲಿ ಜನಗಳಿಗೆ ಏನೇನು ಅಭಾನಗಳು ಕಾಣುತ್ತಿದ್ದವೋ ಅದಕ್ಕಿಂತ ಹೆಚ್ಚು ಅಭಾನಗಳು ಈಗ ತಂದಿರುವ ಮಸೂದೆಯಿಂದ ಆಗುತ್ತವೆ ಎಂದು ಕಾಣುತ್ತದೆ. ಒಂದು ಉದಾಹರಣೆಯನ್ನು ತೆಗೆದು ಕೊಂಡು ಹೇಳುವುದಾದರೆ 15ನೇ ಜೋನ್‌ನಲ್ಲಿ ತರೀ ಕಂದಾಯವನ್ನು ಹೆಚ್ಚು ಮಾಡಿದೆ; ಕಣಿವಾಲಡೇಟೆಡ್ ಕಂದಾಯವನ್ನು ಕೊಡಬೇಕೆಂದು ಮಾಡಿದ್ದುದನ್ನು ವಾಟರ್ ರೇಟ್ ಮತ್ತು ಖುಷ್ಕಿ ಕಂದಾಯ ಎಂದು ಬೇರೆ ರೀತಿಯಾಗಿ ಮಾಡಿವ್ವಾರೆ. ಇದು ಬಹು ಮಂದಿ ರೈತರಿಗೆ ಗೊತ್ತಾಗಿಲ್ಲ. ಜನಗಳು ತಿಳಿದುಕೊಂಡಿರುವುದೇನೆಂದರೆ ಕಂದಾಯವನ್ನು ವಾಸ್ತವ ಜಾಸ್ತಿಮಾಡಿದ್ದಾರೆ ಎಂದು. ಯಾರು ಕಂದಾಯವನ್ನು ಕೊಡುತ್ತಾರೆ ಅಂಥ ಜನಗಳಿಗೆ ಈ ರೀತಿಯಾಗಿ ಕಂದಾಯವನ್ನು ಹೆಚ್ಚುಮಾಡಿ, ವಾಟರ್ ರೇಟನ್ನೂ ಹೆಚ್ಚುಮಾಡಿದ್ದೇವೆ ಎನ್ನುವುದನ್ನು ಅವರ ಗಮನಕ್ಕೆ ತಂದು ಅವರ ಅಭಿಪ್ರಾಯವನ್ನು ಸಂಗ್ರಹಣ್ ಮಾಡದೆ ಇದ್ದರೆ ಸರ್ಕಾರ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಪ್ರಕಟಣೆ ಮಾಡಿ, ಜನಾಭಿಪ್ರಾಯವನ್ನು ಸಂಗ್ರಹ ಮಾಡುವುದಕ್ಕೆ ಕಾಲ ವೆಚ್ಚವಾದರೂ ಚಿಂತೆ ಇಲ್ಲ, ಆರು ತಿಂಗಳು ಆಥವಾ ಒಂದು ವರ್ಷ ನಿಧಾನವಾದರೂ ಚಿಂತೆ ಇಲ್ಲ. ಆದರೆ ಜನಾಭಿಪ್ರಾಯವನ್ನು ಪಡೆದು, ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಸರಕಾರದ ಭರವಸೆಯಂತೆ ಒಂದು ಸಮಗ್ರವಾದ ಕಾನೂನನ್ನು ತರಲಿ ಎಂದು ಹೇಳುತ್ತೇನೆ.

Mr. SPEAKER.—Will the Hon. Minister accept the suggestion ?

Sri H. V. KOUJALGI.—In the meanwhile I want to know whether this amendment is only to be taken up ?

Mr. SPEAKER.—Yes. I will put first the amendment to the vote of the House.

3-30 P.M.

Sri K. H. SRINIVAS (Sagar).—On a point of order, Sir, the Amendment is to be considered in reference to the main Bill.

Mr. SPEAKER.—Please see Rule 74. It is not an ordinary amendment. It is under Rule 73 (1).

Sri K. H. SRINIVAS.—Under rule 73 (1) it is not provided that if any member moves an amendment, it should be immediately put to vote and it should be considered prior to the consideration of the Bill.

Mr. SPEAKER.—Both the practice are in vogue in India. Since the rule is very specific, there can be one motion at a time before the House. In view of that, I propose to put the amendment first and then the consideration motion will be taken up.

†ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಇರುವ ವಿಧೇಯಕವನ್ನು ಸಾರ್ವಜನಿಕ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಸರ್ಕ್ಯುಲೇಟ್ ಮಾಡಬೇಕು ಎಂದು ತಿಳಿಸಿರುವುದನ್ನು ನಾನು ಒಪ್ಪುವುದಿಲ್ಲ. ಇದಕ್ಕೆ ಅನೇಕ ಕಾರಣಗಳುಂಟು. ಮೊದಲನೆಯದಾಗಿ ಈ ತಿದ್ದುಪಡಿ ವಿಧೇಯಕವನ್ನು ಏಪ್ರಿಲ್ ಮೊದಲನೆಯ ವಾರದಲ್ಲಿ ತರಬೇಕೆಂದು ತಿಳಿಸಿದ್ದ ಪ್ರಕಾರ ತರಲಾಗಿದೆ. ಅಷ್ಟೇ ಅಲ್ಲ. ಇದನ್ನು ಪಾಸ್ ಮಾಡಿಸುವುದಾಗಿ ಮಾನ್ಯ ಸಭೆಗೆ ಆಶ್ವಾಸನೆ ಕೊಟ್ಟಿದೆ. ಆ ಪ್ರಕಾರ ಇದನ್ನು ತಂದಿದೆ. ಇದರ ಹಿನ್ನಲೆ ಹೇಳುತ್ತೇನೆ. ಯಾವ ಕಾಲಕ್ಕೆ ನಂಜೇಗೌಡರು ಈ ವಿಷಯಕ್ಕೆ ಸಂಬಂಧಿಸಿದ ಒಂದು ವಿಧೇಯಕವನ್ನು ತಂದರೋ ಆ ಕಾಲಕ್ಕೆ ಸರಕಾರ ಒಂದು ವಿಚಾರವನ್ನು ಹೇಳಿತ್ತು, ಆ ವಿಷಯ ಮುಂದೆ ಹೇಳುತ್ತೇನೆ. ಇದು ವ್ಯಾಪಕವಾದುದಲ್ಲ, ವ್ಯಾಪಕವಾಗುವ ರೀತಿಯಲ್ಲಿ ವಿಧೇಯಕವನ್ನು ತರುತ್ತೇವೆ, ಆದುದರಿಂದ ಮಾನ್ಯ ಸದಸ್ಯರು ತಮ್ಮ ವಿಧೇಯಕವನ್ನು ವಾಪಸು ತೆಗೆದುಕೊಳ್ಳಬೇಕು ಎಂದು ಹೇಳಿದಮೇರೆ ಮಾನ್ಯ ಸದಸ್ಯರು ತಮ್ಮ ಬಿಲ್ಲನ್ನು ವಾಪಸು ತೆಗೆದುಕೊಂಡರು. ಅನಂತರ ಜನವರಿ ತಿಂಗಳಲ್ಲಿ ಒಂದು ಅಧಿವೇಶನ ನಡೆಯಿತು. ಅದರಲ್ಲೂ ಸಹ ಸವಾಲು ಹಾಕಿದರು, ಏಕೆ ತಿದ್ದುಪಡಿ ವಿಧೇಯಕ ತರಲು ನಿಧಾನವಾಗಿದೆ ಎಂದು. ಮತ್ತೆ ರಾಜ್ಯಪಾಲರ ಭಾಷಣದಮೇಲೆ ಚರ್ಚೆಯಾಗ ವಾಗ ಸಹ ಅನೇಕ ಸದಸ್ಯರು ಈ ವಿಚಾರದಲ್ಲಿ ಪ್ರಶ್ನೆವಾಡಿದರು. ಆಗ ಅಂಥ ಬಿಲ್ಲನ್ನು ತರುತ್ತೇವೆ, ಸರಕಾರಕ್ಕೆ ಆಸಕ್ತಿಯಿದೆ ಎಂದು ನಾನು ಹೇಳಿದೆ. ಆ ದೃಷ್ಟಿಯಿಂದ ನಾವು ಈ ತಿದ್ದುಪಡಿ ವಿಧೇಯಕವನ್ನು ತಂದಿರುವುದಾಗಿದೆ. ಆದರೆ ಕೇವಲ ಅವಸರವಾಡಿ ಜನರಿಗೆ ಮೋಸವಾಡಬೇಕು. ಅವಸರದಲ್ಲಿ ಪಾಸ್ ಮಾಡಿಸಬೇಕು ಎಂಬ ಉದ್ದೇಶದಿಂದ ಇದನ್ನು ತಂದಿಲ್ಲ. ಈ ಮಾನ್ಯ ಸಭೆಯ ಮುಂದೆ ತೀವ್ರವಾಗಿ ತರಬೇಕು ಮತ್ತು ಪರಿಶೀಲನೆಯಾಗಬೇಕು ಎಂಬ ಇಚ್ಛೆ ಇರುವುದರಿಂದ ಇದನ್ನು ತಂದಿರುವುದಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಇದು ಕಾಂಪ್ರಿಹೆನ್ಸಿವ್ ಬಿಲ್ಲೇ ?

ಶ್ರೀ ಎಚ್. ವಿ. ಕೌಜಲಗಿ.—ವಿಚಾರವಾಡಬಹುದು. 1965 ರಲ್ಲಿ ರೀಸೆಟ್ಲ್‌ಮೆಂಟ್ ಆಯಿತು. ಅವಾದನಂತರ ಕಂದಾಯ ವಸೂಲಿಯಾಗುವಾಗ ಕೆಲವರಿಗೆ ಅದರಿಂದ ತೊಂದರೆಯಾಗಿದೆ, ಕೆಲವರಿಗೆ ಕಂದಾಯ ಹೆಚ್ಚಾಗಿದೆ, ಕ್ಲಾಸಿಫಿಕೇಷನ್ ಬರಾಬರಿ ಇಲ್ಲ ಎಂದು ರಿಟ್ ಪೆಟಿಷನ್ ಹೋಯಿತು. ಅದನ್ನು ಕುರಿತು ನಂಜೇಗೌಡರು ಬಿಲ್ಲನ್ನು ತಂದರು. ಆದರೆ ಮುಂದೆ ಇದ್ದುದು ರೀಸೆಟ್ಲ್‌ಮೆಂಟ್ ಆಫ್ ರವೆನ್ಯೂ. ಇಡೀ ರೆವೆನ್ಯೂ ಕೋಡ್ ಅಮೆಂಡ್ ಮಾಡಬೇಕಾದ ಅವಶ್ಯಕತೆ ಇದೆ ಎಂದು ನಾನು ತಿಳಿದುಕೊಂಡಿಲ್ಲ, ಹಾಗೆ ಹೇಳಲಿಲ್ಲ. ಸಂಬಂಧಪಟ್ಟ ಸೆಕ್ರೆಟರಿಯವರನ್ನು ಮತ್ತು ತಜ್ಞರನ್ನು ವಿಚಾರಿಸಿ ಈಗಿರುವ ತಿದ್ದುಪಡಿ ವಿಧೇಯಕವನ್ನು ತರಲಾಗಿದೆ. ಅವರ ಅಭಿಪ್ರಾಯದ ಪ್ರಕಾರ ಇದು ಕಾಂಪ್ರಿಹೆನ್ಸಿವ್ ಬಿಲ್ ಎಂಬ ಅಭಿಪ್ರಾಯವಿದೆ ಮತ್ತು ನನಗೆ ತಿಳಿದ ಮಟ್ಟಿಗೆ ಈ ವಿಷಯಕ್ಕೆ ಸಂಬಂಧಿಸಿರುವ ಕಾಂಪ್ರಿಹೆನ್ಸಿವ್ ಬಿಲ್ ಇದು. ಈ ಬಿಲ್ಲಿಂದ ಕಂದಾಯ ಕೊಡುವವರಿಗೇನು ಅನ್ಯಾಯವಾಗಿದೆ ಎಂದು ಹೇಳುತ್ತಾರೆ, ಏನು ಜಾಸ್ತಿಯಾಗಿದೆಯೆನ್ನುತ್ತಾರೆ ಅದನ್ನು ದುರಸ್ತಿಮಾಡುವುದಕ್ಕೆ ಸಾಕಾದಷ್ಟು ಅನುಕೂಲವಿದೆ ಎಂಬುದು ನನ್ನ ಮತ್ತು ತಜ್ಞರ ಅಭಿಪ್ರಾಯವಾಗಿದೆ. ಆದುದರಿಂದ ಇದು ಕಾಂಪ್ರಿಹೆನ್ಸಿವ್ ಬಿಲ್ ಎಂದು ನಾನು ಹೇಳುತ್ತೇನೆ.

ಇನ್ನು ಮೂರನೆಯದು ಮಾನ್ಯ ಸದಸ್ಯರ ಅಭಿಪ್ರಾಯ ಹೀಗಿದೆ : ಇದು ಜನರಿಗೆ ಸಂಬಂಧಿಸಿದ ವಿಷಯ, ಭೂಕಂದಾಯ ಕೊಡುವವರು ಮತ್ತು ಭೂಮಿ ಸಾಗುವಳಿ ಮಾಡುವವರಿಗೆ ಸಂಬಂಧಿಸಿದ ವಿಷಯ. ಅವರ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ತಯಾರಿರಬೇಕು, ತೆಗೆದುಕೊಂಡು ಮತ್ತೆ ಪರಿಶೀಲನೆಬೇಕು ಎಂಬುದು. ಮತ್ತು ಇದು ಬಹಳ ಮುಖ್ಯವಾದುದು ಎಂಬ ಅಭಿಪ್ರಾಯವಿದೆ. 1965ರಲ್ಲಿ ಒಂದು ಬಿಲ್ ಆಯಿತು, ರೀಸೆಟ್ಲ್‌ಮೆಂಟ್ ಆಯಿತು, ಅದು ಆದಕೂಡಲೆ ಸಾರ್ವಜನಿಕರಲ್ಲಿ

ಯಾರದಾದರೂ ತಕರಾರಿದೆಯೇ ಎಂದು ಕಾನೂನು ಪ್ರಕಾರ 3 ತಿಂಗಳ ನೋಟೀಸ್ ಕೊಟ್ಟು ಸಾರ್ವಜನಿಕರ ಅಬ್‌ಜೆಕ್‌ಷನ್ ಕೇಳಲಾಯ್ತು. ಕೆಲವು ಬಂದಿರಬಹುದು ಅಥವ ಇಲ್ಲ. ಅವರಿಗೆ ಕಾರಣಕಾಶ ಕೊಟ್ಟನಂತರ ಮುಂದೆ ಅದನ್ನು ಈ ಸಭೆಯಮುಂದೆ ಇಡಲಾಯ್ತು. ಅದರ ಚರ್ಚೆಯಾಯಿತು, ಆ ಕಾಲಕ್ಕೆ ಅದರ ಬಗ್ಗೆ ಯಾವ ತಕರಾರೂ, ಬರಲಲ್ಲ, ಬಂದಿದ್ದರೆ ಅದನ್ನು ವಿಚಾರಮಾಡಿ ಮುಂದೇನ ಮಾಡಬಹುದಾಗಿತ್ತೆಂಬುದನ್ನು ಯೋಚನೆಮಾಡಬಹುದಾಗಿತ್ತು. ಅದಕ್ಕೆ ಮಾನ್ಯ ಸಭೆಯ ಮನ್ನಣೆ ಸಿಕ್ಕಿತು. ಅದರಂತೆ ಮುಂದೆ ಅದು ಮೇಲ್ಮನೆಗೆ ಹೋಯಿತು. ಅಲ್ಲಿ ಪರಿಶೀಲನೆಯಾಗಿ ಅಲ್ಲಿ ಕೂಡ ಅದಕ್ಕೆ ಮನ್ನಣೆ ಸಿಕ್ಕಿತು. 1965ರಿಂದ 1967-68ರವರೆಗೆ ಯಾವುದೇ ತಕರಾರು ಬರಲಿಲ್ಲ.

ಶ್ರೀ ಎಸ್. ಶಿವಪ್ಪ.—ದೇಶದಲ್ಲೆಲ್ಲಾ ತಕರಾರು ಮಾಡಿದ್ದಾರೆ, ಜುನಾವಣೆಗೆ ಮುಂಚೆ ಕಂದಾಯ ವಜಾಮಾಡುವುದಾಗಿ ಹೇಳಿ ನಂತರ ಹಾಗೆ ಮಾಡಲಲ್ಲ.

ಶ್ರೀ ಎಚ್. ವಿ. ಕೌಜಲಗಿ.—ರೀಸೆಟ್‌ಲ್‌ಮೆಂಟ್ ತಪ್ಪಾಗಿದೆ ಎಂದು ಯಾರೂ ಹೇಳಲಲ್ಲ.

ಶ್ರೀ ಎಸ್. ಶಿವಪ್ಪ.—ಸೆಟ್‌ಲ್‌ಮೆಂಟ್ ಆಗಿರುವುದೇ ಎಷ್ಟೋ ಜನರಿಗೆ ಗೊತ್ತಿಲ್ಲ.

Sri H. SIDDAVEERAPPA.—On a point of order. The Hon'ble Minister is fillibustering to get some members on the Treasury Bench to get inside.

Mr. SPEAKER.—I do not know that.

Sri H. SIDDAVEERAPPA.—The Hon'ble Minister has made it clear that he does not agree with us. Therefore, please put it to vote.

Mr. SPEAKER.—Three Hon'ble Members, the Leader of the Opposition, Sri Siddaveerappa and Sri Channabasappa have spoken nearly for an hour and half. If the hon'ble Minister wants to take time to reply, he can do so.

Sri H. M. CHANNABASAPPA.—I move for closure.

Mr. SPEAKER.—I cannot stifle the debate that way. Let the Hon. Minister complete his speech.

Sri H. SIDDAVEERAPPA.—According to rules whenever there is a move for closure, the question will have to be put at once.

Mr. SPEAKER.—It is for the Chair to decide whether the debate is complete or not. Nobody from the Treasury Benches has spoken. Yet I must give time to them also.

ಶ್ರೀ ಎಚ್. ವಿ. ಕೌಜಲಗಿ.—ನಾನು ಮುಂಚೆಯೇ ಹೇಳಿದಂತೆ ಯಾವ ಕಾಲಕ್ಕೆ ಸರ್ಕಾರದವರು ಕಲೆಕ್ಷನ್ ಶುರು ಮಾಡಿದರೋ ಅಂದು ಡಿವ್ಯಾಂಡ್ ನೋಟೀಸ್ ಕೊಟ್ಟು ಕೆಲಸ ಪ್ರಾರಂಭ ಮಾಡಿದರು. ಆ ಕಾಲಕ್ಕೆ ಕೆಲವು ಕಡೆ ಹೆಚ್ಚಾಗಿದೆ ಅಥವಾ ತಮ್ಮ ಭೂಮಿ ಡ್ರೈಲ್ಯಾಂಡ್ ಇದ್ದದ್ದು ತೋಟದ ಭೂಮಿಯಾಗಿದೆ, ತೋಟ ಇದ್ದದ್ದು ಡ್ರೈ ಲ್ಯಾಂಡ್ ಆಗಿದೆ ಎಂದು ಹೇಳಿ ತಕ್ರಾರು ಮಾಡಲಕ್ಕೆ ಹತ್ತಿದರು. ಮಾನ್ಯ ನಂಜೇಗೌಡರು ಆ ಉದ್ದೇಶದಿಂದ ಬಿರ್ ತರಬೇಕಾಯಿತು. ತಾವು ಹೇಳಿರುವ ಪ್ರಕಾರ ಸಾರ್ವಜನಿಕ ಅಬ್ಜೆಕ್ಷನ್ ಈಗಾಗಲೇ ಕರೆದದ್ದು ಆಗಿದೆ. ಮೂಲ ಕಾನೂನು ಬಗ್ಗೆ ರೀ ಸೆಟ್ಲಮೆಂಟ್ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಏನಿದೆ ಅದನ್ನು ತೆಗೆದುಕೊಂಡದ್ದೂ ಆಗಿದೆ.

(Interruptions)

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ನಾವು ಏನಾದರೂ ಇಂತಹ ನಂದರ್ಭದಲ್ಲಿ ಅಂದರೆ ತಾವು ಬಹಳ ಬೇಜಾರು ಪಟ್ಟುಕೊಳ್ಳುತ್ತೀರಿ. ಇವತ್ತು ಕಾಂಗ್ರೆಸ್ ಬೆಂಚ್ ಖಾಲಿ ಇದೆ ಅಂತ ಹೇಳಿ ಅವರೂ ಏನಾದರೂ ಹೇಳಿಕೊಂಡು ಹೋಗಲಿ, ತಾವು ಬಹಳ ಸಹಾನುಭೂತಿಯಿಂದ ಕುಳಿತ್ತಿದ್ದೀರಿ. ನಾವೇನಾದರೂ ಆ ರೀತಿ ಹೇಳಿದ್ದರೆ ಬೆಲ್ಲು ಹೊಡೆದೂ ಹೊಡೆದೂ ಕುಟ್ಟುತ್ತಾ ಇದ್ದಿರಿ. ಇನ್ನೂ ಸ್ವಲ್ಪ ಏನಾದರೂ ನಾವು ಜೋರಾಗಿ ಹೇಳಿದರೆ aspersions towards the

(ಶ್ರೀ ಅಜೀಜ್ ಸೇಟ್)

Chair cannot be tolerated; resume your seat; get out ಎಂದು ಹೀಗೆಲ್ಲಾ ಹೇಳುತ್ತೀರಿ. ಇದು ಯಾವ ಧರ್ಮ ಸ್ವಾಮಿ? ಯಾವ ತತ್ವದ ಆಧಾರದಮೇಲೆ ತಾವು ಈ ಒಂದು ನೀತಿಯನ್ನು ಅನುಸರಿಸುತ್ತಾ ಇದ್ದೀರಿ ಎಂಬುದನ್ನು ತಾವು ದಯವಿಟ್ಟು ಹೇಳಬೇಕು? ಇಷ್ಟೇ ಅನ್ಯಾಯ ಸಾಕು! ಸ್ವಾಮಿ.

Mr. SPEAKER.—I do not quite understand what the hon'ble Member is saying. Four hon. Members have spoken on this side, and the hon'ble Minister is replying to the points raised by them. I am just telling the Member that he must complete his speech.

Sri AZEEZ SAIT.—Have you ever shown patience towards the opposition?

Sri A.R. PANCHAGAVI (Arbhavi).—On a point of order. The hon'ble Member Sri Azeez Sait is saying so may things against the Chair, casting reflections on the decisions of the Chair. I request that the Chair should take action if the hon'ble Member does not withdraw them.

Mr. SPEAKER.—I shall examine. I was not able to hear him.

Sri M. RAMAPPA (Hosadurga).—I would like to submit that the Chair has to act on certain occasions. We are all aware that time limit was not fixed for the Minister to give his reply. If any time limit was fixed either for the hon'ble Members or the Minister to finish reply within a particular time and if the Chair had not put the matter for the vote then they could have cast reflections on the Chair. But, no time was fixed and it is unfair on the part of Sri Azeez Sait to cast reflection and to create an impression in the minds of the public or hon'ble Members that the Speaker with a view to give time for the Ruling Party, was allowing the Minister to reply for a long time. When no time limit was fixed, the Speaker could not give direction to the Minister to finish his reply. In view of this position, no reflection can be cast on the hon'ble Speaker. If what the hon'ble Member Sri Azeez Sait has submitted amounts to casting reflection, proper action should be taken against him.

Mr. SPEAKER.—I was not able to hear Sri Azeez Sait's speech. I shall examine the record and if it is found that he has said anything which casts reflection on the Chair, I shall consider that position.

Now, I would like to make one point very clear. We have got to give the hon'ble Minister a reasonable time to reply. He has to reply for 1½ hours' debate and naturally he wants sufficient time to give reply. Unless and until the hon'ble Minister finishes his reply, he should not be interfered with. By such interference, Members would be unnecessarily taking away his time.

ಶ್ರೀ ಎಚ್. ವಿ. ಕೌಜಲಗಿ.—ನಾನು ಇನ್ನು ಹೇಳತಕ್ಕ ಮಾತುಗಳು ಎರಡು ಮಾತ್ರ ಇವೆ. ನಮ್ಮ ಮಾನ್ಯ ಶಿವಪ್ಪನವರು ಪ್ರತಿಯೊಬ್ಬ ರೈತನೂ ಎಷ್ಟು ಕಂದಾಯ ಕೊಡಬೇಕು? ಎಂಬುದನ್ನು ತಿಳಿಸಬೇಕೆಂದು ಕೇಳಿದ್ದರೆ, ಮಾನ್ಯ ಸಿದ್ದವೀರಪ್ಪನವರು ವಾಟರ್ ಟ್ಯಾಕ್ಸನ್ನು ರೈತ ಇನ್ನು ಮೇರೆ ಎಷ್ಟು ಕೊಡಬೇಕು, ಭೂಮಿ ನಮ್ಮಲ್ಲಿ ಒಟ್ಟು ಎಷ್ಟಿದೆ ಎಂದು ಕೇಳಿದ್ದಾರೆ. ಆದರೆ ಇದೇ ಸ್ವಭಾವದ ಕೆಲವು ವಿಚಾರಗಳು ಸುಪ್ರೀಂ ಕೋರ್ಟಿನ ಮುಂದೆ ಹೋದಕಾರಣ ಅದರ ಬಗ್ಗೆ ಒಂದು

ವಿವರವನ್ನು ಖಾಯಿದೆಯಲ್ಲಿ ಸೇರಿಸತಕ್ಕ ಉದ್ದೇಶದಿಂದ ಭೂಮಿ ಒಬ್ಬನಿಗೆ ಹೆಚ್ಚಾಗಿರಲ, ಅಥವಾ ಒಬ್ಬನಿಗೆ ಕಡಮೆಯಾಗೇ ಇರಲಿ ಅದನ್ನು ಮುಂದಕ್ಕೆ ನಿರ್ಧರಮಾಡಿ ಒಂದು ಕಂದಾಯವನ್ನು ನಿಗದಿ ಮಾಡತಕ್ಕ ಉದ್ದೇಶದಿಂದ ಇನ್ನು ಮುಂದೆ ಪ್ರತಿಯೊಬ್ಬನಿಗೂ ಒಂದೊಂದು ನೋಟೀಸನ್ನು ಕೊಡಲಾಗುತ್ತಿದೆ. ಅಷ್ಟೇ ಅಲ್ಲದೆ ಆ ಭೂಮಿ ಯಾವ ತರಗತಿ ಭೂಮಿಯಾಗಿರುತ್ತದೆಂಬುದನ್ನು ನೋಡಿ ಅದಕ್ಕೆ ಕಂದಾಯವನ್ನು ನಿಗದಿ ಮಾಡಲಾಗುತ್ತದೆ. ಹಿಂದೆ ಇಂಥ ಒಂದು ಕಲಂ ಇರಲಿಲ್ಲ. ಈಗ ಇದನ್ನು ಸೇರಿಸುವುದರಿಂದ ಎರ್ನಾ ರೈತರಿಗೂ ಬಹಳ ಅನುಕೂಲವಾಗುತ್ತದೆ. ಆದರೆ ಇದೆಲ್ಲಾ ಪ್ರೊಸೀಜರ್ ವ್ಯಾಲ್ಯೂದಿಂದ ಬಹಳ ಮುಖ್ಯ. ಇದರಲ್ಲೂ ರೈತರಿಗೆ ಹಾಗೆ ತೊಂದರೆ ಆದರೆ ಅವರಿಗೆ ಅಪೀಲ್ ಹೋಗುವುದಕ್ಕೆ ಒಂದು ಅವಕಾಶ ಕೂಡ ಕಲ್ಪಿಸಿರುತ್ತೆ. ಮತ್ತೆ-ಇದು ಇದೇ ಸಭೆಯ ಮುಂದೆ ಬಂದು ತಮ್ಮೆಲ್ಲರ ಅನುಮತಿ ಪಡೆಯುವುದಿದೆ. ಆದರೆ ಇಲ್ಲಿರತಕ್ಕ ಮಾನ್ಯ ಸದಸ್ಯರುಗಳಲ್ಲಿ ಬಹಳ ಮಂದಿ ರೈತರ ತರ್ಫನಿಂದ ಆರಿಸಿ ಬಂದಿರತಕ್ಕವರೇ ಜಾಸ್ತಿ. ವರ್ತಕರಿಂದ ಬೇರೆ ಜನರಿಂದ ಆರಿಸಿ ಬಂದಿರತಕ್ಕವರು ಬಹಳ ಕಡಮೆ.

Sri S. SIVAPPA.—The Government have no right to go back on the Congress manifesto.

ಶ್ರೀ ಎಚ್. ವಿ. ಕೌಜಲಗಿ.—ನಣ್ಣ ಹಿಡುವಳಿದಾರರಿಂದ ಕಂದಾಯವನ್ನು ಏಕೆ ಕರೆಕ್ಟ್ ಮಾಡುತ್ತೀರಿ ಎಂಬುದಾಗಿ ಶ್ರೀಮಾನ್ ಚನ್ನಬಸಪ್ಪನವರು ಹೇಳಿದರು.....

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಅದನ್ನು ಯಾವಾಗ ಹಾಗೆ ಹೇಳಿದೆ? ನಾನು ಹೇಳಿದೆ ಇದ್ದುದನ್ನು ತಾವು ಏಕೆ ಹೇಳುತ್ತಿದ್ದೀರಿ?

ಶ್ರೀ ಎಚ್. ವಿ. ಕೌಜಲಗಿ.—ತಮ್ಮ ಒಂದು ನಿಲುವಿನ ಪ್ರಕಾರ ಯಾರಿಗೂ ಕಂದಾಯವನ್ನೇ ಹಾಕಬಾರದೆಂಬುದು ನಿಮ್ಮ ಅಭಿಮತ.....

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹಾಗೂ ಹೇಳಲಿಲ್ಲ. ನಾನು ಹೇಳಿದ್ದು ಮೊದಲು ಕಂದಾಯ ಅಂದರೆ ಅದರ ಸ್ವರೂಪ ಏನೆಂಬುದನ್ನು ಮೊದಲು ತೀರ್ಮಾನ ಮಾಡಿ. ಆನಂತರ ನಾವೇನು ಗೇಣೀದಾರರೇ ಅಥವಾ ನಾವೀಗ ಕೊಡುತ್ತಿರುವುದು ಒಂದು ಟ್ಯಾಕ್ಸೇ ಏನೆಂಬುದನ್ನು ತೀರ್ಮಾನ ಮಾಡಿ ಎಂದು ಇಷ್ಟು ಹೇಳಿದೆ.

Sri K. PUTTASWAMY.—I want to tell the hon. Member that Resettlement was ordered prior to 1962. Then Hon. Sri Channabasappa happened to be a member of the then Cabinet which ordered Resettlement.

Sri H. M. CHANNABASAPPA.—That is no answer. A Daniel has come to judgement!

The Hon. Minister was not here at the time I spoke. He does not know what I spoke. Still he has come as a Daniel to give judgement over what I spoke!

ಶ್ರೀ ಎಚ್. ವಿ. ಕೌಜಲಗಿ.—ಈಗತಾನೆ ಆ ಮಾನ್ಯ ಸದಸ್ಯರೇನು ಒಂದು 'ಕಾನ್‌ಸ್ಟಿಟ್ಯೂಷನರ್' ಪಾಯಿಂಟನ್ನು ಎತ್ತಿದ್ದಾರೆ.....

Sri H. SIDDAVEERAPPA.—You stand by the position you have taken. You have agreed that it is not a tax but rent.

ಶ್ರೀ ಎಚ್. ವಿ. ಕೌಜಲಗಿ.—ಕೋರ್ಟಿನವರು ಈ ಕಂದಾಯವನ್ನು ತೆಗೆದುಹಾಕಿ ಎಂದು ಎಲ್ಲಿಯೂ ತೀರ್ಮಾನ ಕೊಟ್ಟಿಲ್ಲ. ಅದನ್ನು ತೆಗೆದರೆ ರೈತರಿಗೂ ತೊಂದರೆ ಮತ್ತು ಸರ್ಕಾರಕ್ಕೂ ತೊಂದರೆ. ಆದ್ದರಿಂದ ನಾನು ಅವರ ಪ್ರಾರ್ಥನೆಯನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಇಷ್ಟು ರಫ್ ಷಾಡಾಗಿ ಇದನ್ನು ಮುಗಿಸುವುದಕ್ಕೆ ಅವಕಾಶ ಕೊಡುವುದಿಲ್ಲ. ಇದನ್ನು ಇಷ್ಟು ಅತುರದಲ್ಲಿ ಪಾಸ್ ಮಾಡಬಾರದು.

ಮೊನ್ನೆಯ ದಿವಸ ಕೂಡ ನಾನು ಇದರ ಬಗ್ಗೆ ಮಾತನಾಡತಕ್ಕ ಕಾಲದಲ್ಲಿ ತಾವು ಇದರ ಬಗ್ಗೆ ಸ್ಪೆಸಿಫಿಕ್ಕಾಗಿ ಹೇಳಿದ್ದೀರಿ. ಬಾಕಿಯವರಾದರೇನೋ ಅವರಿಗೆ ಸುಳ್ಳು ಹೇಳುವುದಕ್ಕಾಗುತ್ತದೆ, ಆದರೆ ಅದು ತಮ್ಮಂಥವರಿಗೆ ಸಲ್ಲತಕ್ಕದ್ದಲ್ಲ. ನಾನು ಇದೇ ವಿಚಾರದಲ್ಲಿ ತಮಗೆ ಪ್ರಶ್ನೆ ಹಾಕಿದಾಗ ಈ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಭೂಮಿಯಾರದು ಎಂದು ಕೇಳಿದ್ದಕ್ಕೆ ತಾವು ಸರ್ಕಾರದ್ದು ಎಂದು ಹೇಳಿದ್ದೀರಿ, ಅಂದಾಗ ಇದರ ಬಗ್ಗೆ ನಮಗೂ ಸರ್ಕಾರಕ್ಕೂ ಏನು ಸಂಬಂಧ ? ಭೂಮಿಯನ್ನು ಉಳತಕ್ಕವರಾದ ನಾವು ಗೇಣೀದಾರರಾಗುತ್ತೇವೆ. ಅಂದಾಗ ಇದರ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಅದು ಹಾಗೆ ಹೀಗೆ ಎಂದು ಏನನ್ನೋ ಹೇಳತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇಂಥ ಶಾಸನಗಳನ್ನು ಮಾಡತಕ್ಕ ಕಾಲದಲ್ಲಿ ಕಾಂಪ್ಲಿಕೇಷನ್ ಬಂದರೆ ಲೀಗರ್ ಪಂಡಿತರನ್ನ ಲಾ ಇಲಾಖೆಯವರನ್ನು ಕೇಳಿ ಸರಿಮಾಡಿಕೊಳ್ಳಬೇಕು. ಅದು ಸರ್ಕಾರದವರ ಕರ್ತವ್ಯ. ನಾವು ಸರ್ಕಾರಕ್ಕೆ ಕೊಡುತ್ತಿರುವುದು ರ್ಯಾಂಡ್ ರೆವಿನ್ಯೂನೋ ಅಥವಾ ರ್ಯಾಂಡ್ ರೆಂಟೋ ಎಂಬುದನ್ನು ನಿರ್ಧರಮಾಡಿ. ಅಥವಾ ರೈತರು ಕೊಡುತ್ತಿರುವುದು ರ್ಯಾಂಡ್ ಟ್ಯಾಕ್ಸೇ ! ಈ ಮಾನ್ಯ ಸಭೆಗೂ ಮತ್ತು ದೇಶಕ್ಕೂ ಇದರ ಬಗ್ಗೆ ಒಂದು ಹೇಳಿಕೆಯನ್ನು ನೀವು ಮಾಡದೆ ಮುಂದೆ ಹೋಗುವುದಕ್ಕಾಗುವುದಿಲ್ಲ.

4-00 P.M.

Sri H. V. KOUJALGI.—Sir, as I have already said, we are concerned with land revenue only. There is only one revenue called land revenue and it is defined under the Mysore Land Revenue Act, Whether it is a tax or levy, it is a complicated question on which even legal pundits differ. So, I do not want to enter into that controversy. I only wish to confine myself to land revenue.

ಶ್ರೀ ಎಚ್. ಸಿದ್ಧವೀರಪ್ಪ.—1888ನೇ ಕೋಡ್ ಇಲ್ಲಿದೆ. 1966ನೇ ಕೋಡ್ ಸಹ ಇಲ್ಲಿದೆ. ಈ ಎರಡು ಕೋಡ್‌ಗಳಲ್ಲಿ ಯಾವ ಕ್ಲಾಜಿನಲ್ಲಿ, ಯಾವ ಕಲಂನಲ್ಲಿ ರ್ಯಾಂಡ್ ರೆವಿನ್ಯೂ ಎಂಬುದು ಡಿಫೈನ್ ಆಗಿದೆಯೆಂಬುದನ್ನು ತೋರಿಸಿ ಇದನ್ನು ಮುಂದುವರಿಸಬೇಕು. ಸುಮ್ಮನೆ ಸುಳ್ಳು ಹೇಳಿ ಹಾವಾಡಿಗರ ಆಟ ಆಡಿಕೊಂಡು ಹೋಗುವುದು ಸರಿಯಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಹಾವಾಡಿಗರ ಆಟವನ್ನು ಆಡಿಕೊಂಡು ಯಾರೂ ಹೋಗುತ್ತಾ ಇಲ್ಲ. I want to know whether it is parliamentary.

Sri H. SIDDAVEERAPPA.—Sir, I raise to a point of order and it is this. There is no terminology as land revenue under the Land Revenue Code or Land Revenue Act; it is nowhere defined.

Mr. SPEAKER.—What has it to do with the circulation motion ?

Sri H. SIDDAVEERAPPA.—Let the man who is asked to pay this pay it by any means, but let him know what he is called upon to pay.

Sri D. M. SIDDAIAH (Beligere).—Sir, I rise on a point of order. The question before us is the amendment moved by the Hon. the Leader of the Opposition Sri Sivappa. This was sufficiently discussed and the Hon. Minister for Revenue has replied. When the hon. Member Sri Srinivas raised a point of order, you were pleased to say that first of all the amendment must be put to vote. Therefore, before going into the definition of land revenue and all that, the amendment of Sri Sivappa must be first put to vote. After that, when the amending Bill is being discussed, the Hon. Members are entitled to make any reference. We are anxious to hear them because some of them have specialised in it and we have great respect for their learning and scholarship. Therefore, I am appealing to you, Sir, to put the amendment of Sri Sivappa to vote without going into the details.

ಶ್ರೀ ಎಸ್. ಗೋಪಾಲಗೌಡ.—ನಾನು ಅವರ ಪಾಯಿಂಟ್ ಆಫ್ ಆರ್ಡರ್ ಮೇಲೆ ನಿರ್ಣಯ ಕೊಡುವುದಕ್ಕೆ ಮುಂಚೆ ಒಂದು ಮಾತನ್ನು ತಮಗೆ ತಿಳಿಸಬೇಕಾಗಿದೆ. ಈ ಮುನ್ನೂದೆ ಮತ್ತು

ಈ ಮನೂದೆಯನ್ನು ಸರ್ಕಾರ್ಯಲೇಕ್ಷನಿಗೆ ಹಾಕಬೇಕೆಂದು ಹೇಳುವ ಮಾನ್ಯ ಶ್ರೀ ಶಿವಪ್ಪನವರ ತಿದ್ದುಪಡಿಯನ್ನು ಒಟ್ಟಿಗೆ ಈ ಸಭೆಯು ಮುಂದಿಟ್ಟಿದ್ದಾರೆ. ಎರಡೂ ಒಟ್ಟಿಗೆ ಚರ್ಚೆಯಾಗಬೇಕು. ಅಂತಿಮವಾಗಿ ಓಟಿಗೆ ಹಾಕುತ್ತೇವೆಂದು ಹೇಳಿದ್ದೀರಿ. ಈಗ ಇದ್ದಕ್ಕಿದ್ದಹಾಗೆ ತಾವು ಆ ಅಭಿಪ್ರಾಯವನ್ನು ಬದಲಾವಣೆಮಾಡಿದ್ದೀರಿ. ಕಾರಣ ಏನೂ ಎಂತ ಹೇಳಲಿಲ್ಲ. ಈ ಮನೂದೆ ಸರ್ಕಾರ್ಯಲೇಕ್ಷನಿಗೆ ಏಕೆ ಹೋಗಬೇಕೆಂದು ಮಾತನಾಡುವುದಕ್ಕೆ ಬಹಳ ಕಾರಣಗಳು ಇವೆ. ನಮ್ಮ ನಿಮ್ಮ ಮನೂದೆಯಲ್ಲ. ಇದು ಇಲ್ಲಿ ಕೂತಿರುವವರ ಪ್ರಶ್ನೆಯಲ್ಲ. ನಮ್ಮ ನಿಮ್ಮ ಗೃಹಕೃತ್ಯ ವಿಷಯವಲ್ಲ. ತಾವು ಪೊದಲು ಈ ಮನೂದೆಯನ್ನೂ ಮತ್ತು ಸರ್ಕಾರ್ಯಲೇಕ್ಷನಿಗೆ ಹೋಗಬೇಕೆಂಬ ತಿದ್ದುಪಡಿಯನ್ನು ಒಟ್ಟಿಗೆ ಚರ್ಚೆಮಾಡುತ್ತೇವೆಂದು ಹೇಳಿದಿರಿ. ನಂತರ ಬದಲಾವಣೆಮಾಡಿ ಈಗ ಓಟಿಗೆ ಹಾಕುವ ಅವಸರದಲ್ಲಿ ಏಕೆ ಇದ್ದೀರಿ ? ಇದನ್ನು ಹೇಳಬೇಕು.

Mr. SPEAKER.—There appears to be some misunderstanding. When such amendments are there, the practice in India is that the original motion together with the amendments are considered, debated and then the amendment is first put to vote. The Hon. Leader of the Opposition and the hon. Members Sriyuths Siddaveerappa and Chennabasappa also spoke. The hon. Member Sri Srinivas raised a point of order saying that the amendment must be put to vote first and I upheld his point of order. In this connection, if the hon. Member is interested he may look into sub-rule (2) of rule 73. There, the sense appears to be that the amendment should be put to vote first and then the consideration motion.

Sri H. M. CHANNABASAPPA.—Sir, I rise to a point of privilege.

Mr. SPEAKER.—I request the hon. Member to give it in writing.

ಶ್ರೀ ಎಸ್. ಶಿವಪ್ಪ.—ಸಭಾಧ್ಯಕ್ಷರೇ, ತಾವು ಈ ಮನೂದೆಯ ಬಗ್ಗೆ ರೈತರ ಕಡೆಯಿಂದ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಬೇಕು. ನೇರವಾಗಿ ಇದು ಅವರಿಗೆ ಸಂಬಂಧಪಟ್ಟ ವಿಚಾರ. ಇದರ ಬಗ್ಗೆ ಜನತಾ ಅಭಿಪ್ರಾಯವನ್ನು ಸಂಗ್ರಹಣೆ ಮಾಡುವ ವಿಚಾರವನ್ನು ಸರ್ಕಾರವರು ಮಾಡಬೇಕೆಂದು ಹೇಳಿದ್ದೇವೆ. ಇವತ್ತು ಪೊಂಡತನದಿಂದ, ಹಠವಾರಿತನದಿಂದ ರೈತ ವಿರೋಧಿ ನೀತಿಯನ್ನು ಸರ್ಕಾರ ಅನುಸರಿಸಿಕೊಂಡು ಹೋಗುತ್ತಿದ್ದಾರೆ. ನಾವು ಏನು ಬೇಕಾದರೂ ಮಾಡುತ್ತೇವೆ, ಇವತ್ತು ಕಂದಾಯದ ನೀತಿಯನ್ನು ಸರಿಯಾಗಿ ಏಮರ್ಶೆಮಾಡತಕ್ಕ ರೀತಿನೀತಿ ಈ ಸರ್ಕಾರಕ್ಕೆ ಇಲ್ಲವೆಂದು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಈ ಸರ್ಕಾರಕ್ಕೆ ಕಣ್ಣಿಲ್ಲ, ಮೂಗು ಇಲ್ಲ. ಸರ್ಕಾರದ ಇಂತಹ ಉದ್ಧಟತನದ ರೀತಿ ಹಾಗೂ ವಿರೋಧ ನೀತಿಯನ್ನು ನಾವು ಬಹಿಷ್ಕರಿಸಿ ಕೆಲವು ನಿಮಿಷಗಳ ಕಾಲ ಈ ಸಭಾತ್ಯಾಗ ಮಾಡುತ್ತೇವೆ.

[Then the members of the opposition withdrew]

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈಗತಾನೇ ಒಂದು ಮಹತ್ವಪೂರ್ಣವಾದಂಥ ಸೂಚನೆಯನ್ನು ವಿರೋಧಪಕ್ಷದ ನಾಯಕರಿಂದ ಮಂಡಿತವಾಗಿದ್ದಂಥ ಸೂಚನೆಯನ್ನು, ತಾವು ಪೋಟಿಗೆ ಹಾಕುವ ಸಂದರ್ಭದಲ್ಲಿ ನಾವು ಪ್ರತಿಭಟನೆ ಮಾಡಿ ಈ ಸಭೆಯಿಂದ ಹೊರಗಡೆ ಹೋಗುವಂಥಾ ಒಂದು ಸಂದರ್ಭ ಬಂತು. ಇದರ ಹಿನ್ನಲೆಯಲ್ಲಿ ಇರತಕ್ಕ ಮನೋಭಾವನೆಯನ್ನು ನಾವು ಅರಿತುಕೊಳ್ಳಲಾರದಷ್ಟು ಮೂಢರೇನೂ ಅಲ್ಲ. ಸರ್ಕಾರ ಒಂದು ತೀರ್ಮಾನ ಮಾಡಿದಂತೆ ಕಾಣುತ್ತದೆ, ಏನೇ ಆಗಲೀ ಅದರಲ್ಲಿ ನ್ಯಾಯ ಇರಲಿ, ಇಲ್ಲದೇ ಇರಲಿ, ನಿಮ್ಮಲ್ಲಿರತಕ್ಕಂಥ ಸಂಖ್ಯಾಬಲದ ಆಧಾರದ ಮೇಲೆ ಈ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕು ಎನ್ನುವ ತೀರ್ಮಾನಕ್ಕೆ ಈ ಸರ್ಕಾರ ಬಂದಿದೆ ಎಂದು ನಮಗೆ ಚೆನ್ನಾಗಿ ಗೊತ್ತಾಗುತ್ತದೆ.

ಮಾನ್ಯ ರಾಜಸ್ವ ಮಂತ್ರಿಗಳು ಈ ಮಾನ್ಯ ಸಭೆಯ ಪರ್ಯಾಲೋಚನೆಗಾಗಿ ಮಂಡಿಸಿರುವ ಮೈಸೂರು ರಾಜ್ಯದ ಭೂಕಂದಾಯಕ್ಕೆ ಸಂಬಂಧಿಸಿದ (ಎರಡನೆಯ ತಿದ್ದುಪಡಿಯ) ವಿಧೇಯಕ, 1969 ಏನಿದೆ ಇದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಪತಕ್ಕೆ ಇದನ್ನು ವಿರೋಧಿಸುತ್ತೇನೆ ಎನ್ನುವುದನ್ನು ನಾನು ತಮ್ಮ ಅನುಮತಿ ಪಡೆದು ಈ ಸಭೆಯ ಮುಂದೆ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಇದು ಒಂದು ಸಣ್ಣ ಟೀಕೆ. ಈ ತಿದ್ದುಪಡಿ ಕಳೆದ ತಿಂಗಳು ಎಂದರೆ ಮಾರ್ಚ್ 31 ನೇ

(ಶ್ರೀ ಎಸ್. ಗೋಪಾಲಗೌಡ)

ತಾರೀಖಿನಲ್ಲಿ ಎಕ್ಸ್‌ಟ್ರಾರ್ಡಿನರಿ ಎನ್ನುವ ಹೆಸರಿನಲ್ಲಿ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗಿದೆ. ಇನ್ನೊಂದು ಮಾತು ಹೇಳಬೇಕು ಎಂದರೆ ಆ ತಿದ್ದುಪಡಿ ಕನ್ನಡದಲ್ಲಿ ಬಹುಶಃ ಪ್ರಕಟವಾಗಿಲ್ಲ. ಆದು ರೆಜಿಸ್ಟ್ರೇಚರಿಗೆ ಸಂಬಂಧಪಟ್ಟದ್ದೋ ಅಥವಾ ಸರ್ಕಾರಕ್ಕೆ ಸಂಬಂಧಪಟ್ಟದ್ದೋ ಗೊತ್ತಿಲ್ಲ. ಬಹುಶಃ ಇನ್ನೂ ಕೋರ್ಟ್ ವ್ಯವಹಾರಕ್ಕೆ ಮತ್ತು ನಮ್ಮ ವ್ಯವಹಾರಕ್ಕೆ ಅಧಿಕೃತ ಮಸೂದೆ ಎಂದರೆ ಅದು ಇಂಗ್ಲೀಷ್ ಭಾಷೆಯಲ್ಲಿ ಇದ್ದರೆ ಅಧಿಕೃತ ಮಸೂದೆ ಎನ್ನುವಂಥಾ ಪದ್ಧತಿ ಇದ್ದಂತೆ ಕಾಣುತ್ತದೆ. ಅದು ಒಂದು ನಣ್ಣ ರೋಷ. ಇಂಗ್ಲೀಷ್ ಬಾರದ ಸದಸ್ಯರು ಈ ಮಸೂದೆ ಏನು ಎನ್ನುವುದನ್ನು ತಿಳಿದುಕೊಳ್ಳಬಾರದು ಎನ್ನುವ ಉದ್ದೇಶ ಇರಬಹುದು ಎಂದು ಕಾಣುತ್ತದೆ. ಮಾನ್ಯ ರಾಜಸ್ವಮಂತ್ರಿಗಳು ಈ ಮಸೂದೆಯನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಹೋಗಬೇಕು ಎನ್ನುವ ಸೂಚನೆಯನ್ನು ಏರೋಧಿಸಿ ಕೆಲವು ಮಾತುಗಳನ್ನು ಆಡಿದರು. ಅದನ್ನು ಅವರೇ ತಮ್ಮ ಸ್ವಂತ ಅಭಿಪ್ರಾಯದಿಂದ ಹೇಳಿದರೋ ಅಥವಾ ಬೇರೆ ಯಾರದ್ದಾದರೂ ಒತ್ತಾಯಕ್ಕಾಗಿ ಆ ಮಾತು ಗಳನ್ನು ಆಡಿದ್ದಾರೋ ಗೊತ್ತಾಗಲಿಲ್ಲ. ಅವರು ಅದರ ಪರಿಣಾಮವನ್ನು ಅರ್ಥ ಮಾಡಿಕೊಂಡಿ ದ್ದಾರೋ ಏನೋ ಅದು ನನಗೆ ತಿಳಿಯದು. ಅವರು ಹೇಳಿದಂತಹ ಮಾತುಗಳು ರೆಕಾರ್ಡಿನಲ್ಲಿ ಇವೆ. ಅವರು ಹೇಳಿದಂತಹ ಮಾತುಗಳು ಎಷ್ಟರಮಟ್ಟಿಗೆ ಸಮಂಜಸವಾಗಿವೆ, ವಿಚಾರಪೂರಿತ ವಾಗಿವೆ, ಎನ್ನುವುದನ್ನು ಈ ದೇಶದಲ್ಲಿರತಕ್ಕ ಎಲ್ಲರೂ ತಿಳಿದುಕೊಳ್ಳಬಹುದು. ಈ ಸಭೆಯಲ್ಲಿರುವ ವರು ತಿಳಿದುಕೊಳ್ಳಬಹುದು, ಈ ಸಭೆಯಿಂದ ಹೊರಗಡೆ ಇರುವವರು ತಿಳಿದುಕೊಳ್ಳಬಹುದು. ಅವರು ಕೊಟ್ಟಿರುವ ವ್ಯಾಖ್ಯಾನವನ್ನು ನಾನು ಒಪ್ಪುವುದಕ್ಕೆ ತಯಾರು ಇಲ್ಲ. ಬಹಳ ಜನ ಇದೇ ರೀತಿಯ ಅಭಿಪ್ರಾಯವನ್ನು ಹೊಂದಿರುವವರು ಇದ್ದಾರೆಂದು ಕಾಣುತ್ತದೆ.

ಒಂದನೆಯದಾಗಿ ನಮ್ಮ ಕಡೆಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಇದೇ ತರಹ ಒಂದು ಮಸೂದೆಯನ್ನು ಖಾನಗೀ ಮಸೂದೆಯ ಹೆಸರಿನಲ್ಲಿ ಈ ಸಭೆಯಲ್ಲಿ ತಂದಾಗ ಅದು ಸಮಗ್ರ ವಾಗಿಲ್ಲ, ಏನೇನೋ ಕೆಲವು ಮಾರ್ಪಾಡುಗಳು ಆಗಬೇಕಾಗಿದೆ, ಕೆಲವು ತಿದ್ದುಪಡಿಗಳು ಆಗಬೇಕಾ ಗಿದೆ ಎಂದು ಮಾನ್ಯ ರಾಜಸ್ವ ಮಂತ್ರಿಗಳು ಹೇಳಿದಾಗ ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇ ಗೌಡರು ತಮ್ಮ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಂಡರು. ನಾವು ಎಂದರೆ ಸರ್ಕಾರದವರು ಬಹಳ ಕೂಲಂಕಷವಾಗಿ ವಿಚಾರ ಮಾಡಿ ಒಂದು ಸಮಗ್ರವಾದ ಮಸೂದೆಯನ್ನು ಈ ಸಭೆಯುಮುಂದೆ ಆದಷ್ಟು ಬೇಗ ತರುತ್ತೇವೆ, ಈಗ ಇರತಕ್ಕ ರಿವಿಜನ್ ಆಫ್ ಸೆಟ್ಲ್‌ಮೆಂಟ್‌ನಲ್ಲಿ ಆಗಿರಬಹುದಾದಂತಹ ಅನ್ಯಾಯಗಳನ್ನು ತಿದ್ದಿಕೊಳ್ಳುವುದಕ್ಕೆ ಒಂದು ಮಸೂದೆಯನ್ನು ತರುತ್ತೇವೆ ಎಂದು ಆಶ್ವಾಸನೆ ಯನ್ನು ಮಾನ್ಯ ರಾಜಸ್ವ ಮಂತ್ರಿಗಳು 1968 ನೇ ಇಸವಿ ಸೆಪ್ಟಂಬರ್ ತಿಂಗಳು 17 ನೇ ತಾರೀಖು ಈ ಮಾನ್ಯ ಸಭೆಯಲ್ಲಿ ಕೊಟ್ಟಿದ್ದಾರೆ. ಅವರು ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೆ ಎಂಬುದನ್ನು ನಾನು ಈಗ ಇಲ್ಲಿ ಹೇಳುತ್ತೇನೆ. ಅದು ಈ ರೀತಿ ಇದೆ :

> "ಮಾನ್ಯ ಸಭೆಗೆ ಗೊತ್ತಿದ್ದಂತೆ ಈ ಪ್ರಾಂತ್ಯದಲ್ಲಿ ರೀ ಸೆಟ್ಲ್‌ಮೆಂಟ್, ರೀ ಸರ್ವೆ ಮಾಡುವುದು ಅಗತ್ಯ ಇತ್ತು. 30 ಅಥವಾ 50 ವರ್ಷದ ಅವಧಿ ಮುಗಿದುಹೋಗಿತ್ತು. ಆ ಪ್ರಕಾರ ಹೊಸ ಮೈಸೂರು ಕಾಯಿದೆ ಬಂದನಂತರ ಕಳೆದ ಎರಡು ವರ್ಷಗಳ ಹಿಂದೆ ಇದರ ಕೆಲಸವನ್ನು ತೆಗೆದುಕೊಂಡು ಹೋದವರ್ಷ ಇದನ್ನು ಪೂರ್ಣ ಮಾಡಿದರು. ಈಗಿದ್ದ ಕಾಯಿದೆ ಪ್ರಕಾರ ರೀ ಸೆಟ್ಲ್‌ಮೆಂಟ್ ಅಥವಾ ರೀ ಸರ್ವೆ ಏನಾಯಿತು ಅದಕ್ಕೆ ಈ ಮಹಾ ಸಭೆಯ ಮನ್ನಣೆ ಪಡೆಯಬೇಕಾಗಿತ್ತು. ಆ ಪ್ರಕಾರ ಈ ಸಭೆಯು ಮುಂದೆ ಬಂದಾಗ ಅದು ಮನ್ನಣೆ ಪಡೆಯಿತು. ಹೀಗಾದ ನಂತರ ಈ ವರ್ಷದ ಆರಂಭಕ್ಕೆ ಯಾವ ಕಾಲಕ್ಕೆ ಈ ಹೊಸ ರೀ ಸೆಟ್ಲ್‌ಮೆಂಟ್ ಆದ ರೇಟ್ಸ್ ಪ್ರಕಾರ ವಸೂಲು ಮಾಡ ಬೇಕು ಅಂತ ಅಂದಾಗ ಜನರಿಗೆ ಕಷ್ಟವಾಯಿತು, ಕೆಲಕೆಲವು ಕಡೆ ನೂರು ಪರ್ಸೆಂಟ್, ಕೆಲವು ಕಡೆ 200 ಪರ್ಸೆಂಟ್ ಕೆಲವು ಕಡೆ ಡಬ್ಬಲ್ ಹೆಚ್ಚಾಯಿತು; ಕೆಲವು ಕಡೆ ಕಡಿಮೆಯೂ ಆಗಿದೆ; ಅದಕ್ಕೆ ಅನೇಕ ತಕರಾರುಗಳು ಸರ್ಕಾರದ ಮುಂದೆ ಬಂದಿವೆ, ಅಷ್ಟೇ ಅಲ್ಲ ಕೆಲವರು ಹೈಕೋರ್ಟಿಗೂ ಕೂಡ ಹೋಗಿ ರಿಟ್ ಹಾಕಿದ್ದಾರೆ, ಮತ್ತು ಕೆಲವೊಂದು ಕಡೆ ಹೈಕೋರ್ಟಿನಿಂದ ಸ್ಟೇಯೂ ಆಗಿದೆ. ಈ ದೇಶದಲ್ಲಿ ಈಗಿದ್ದ ಕಾಯಿದೆ ಪ್ರಕಾರ ಏನೂ ಮಾಡಲಿಕ್ಕೆ ಬರುವುದಿಲ್ಲ. ಸಾಮಾನ್ಯವಾಗಿ ನೋಡಿದರೆ ಇದು ಅನ್‌ಸ್ಯೆಂಟಿಫಿಕ್ ಆಗಿದೆಯೇ ಹೇಗೆ, ವ್ಯವಹಾರ ದೃಷ್ಟಿಯಿಂದ ನೋಡಿದರೆ ಅನ್ಯಾಯ ಅಥವಾ ತಪ್ಪು ಆಗುತ್ತದೆಯೇ ಹೇಗೆ, ಎಂಬ ದೃಷ್ಟಿಯಿಂದ ನೋಡಿದಾಗ ಕೆಲವು ಕಡೆ 200–300 ಪಟ್ಟು ಆಗಿದೆ; ಇದನ್ನು ಸರಿಪಡಿಸುವುದು ಯೋಗ್ಯವೆಂದು ಹೇಳಿ ಸರ್ಕಾರದ ವರಿಗೆ ಗೊತ್ತಾಗಿ ಅಥವಾ ಮನವರಿಕೆಯಾಗಿ ಮಾನ್ಯ ಮುಖ್ಯ ಮಂತ್ರಿಯವರು ಎರಡನೇ

ತಾರೀಕು ಈ ಮನೆ ಕೊಡುವುದಕ್ಕಿಂತ ಮೂರು ನಾಲ್ಕು ದಿವಸದ ಮುಂಚೆ ಪ್ರೆಸ್ ಕಾನ್‌ಫರೆನ್ಸ್ ಕರೆದು ಈ ವಿಷಯದಲ್ಲಿ ಸರ್ಕಾರದವರು ಪುನರ್ ವಿಚಾರ ಮಾಡುತ್ತೇವೆ ಈಗಿದ್ದ ಕಾಯಿದೆ ಪ್ರಕಾರ ಮಾಡಲಿಕ್ಕೆ ಬರುವುದಿಲ್ಲ."

"ಇನ್ನು ಮುಂದುವರಿದು, ಶಿವಪ್ಪನವರು ಹೀಗೆ ಹೇಳಿದರು :

ಶ್ರೀ ಎಸ್. ಶಿವಪ್ಪ.—ಈಗ ತಾವು ಮಂಡಿಸಿರುವ ಮನೂದೆಯ ಕಲಂಗಳಿಗೆಲ್ಲಾ ತಾವು ಅಮೆಂಡ್‌ಮೆಂಟ್ ಸೂಚನೆ ಮಾಡಿದರೆ ಆಗಲಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಎಚ್. ವಿ. ಕಳಿಜಲಗಿ.—ತತ್ವವನ್ನು ಒಪ್ಪಿಕೊಂಡಿದ್ದೇವೆ, ಆದ್ದರಿಂದ ಆ ಪ್ರಶ್ನೆಯೇ ಇಲ್ಲ. ಇದು ಒಂದು ಕಲಂ, ತಿದ್ದುಪಡಿ ಮಾಡುವುದರಿಂದ ಆಗುವುದಿಲ್ಲ, 3-4 ಕಲಂಗಳನ್ನು ದುರುಸ್ತು ಮಾಡಬೇಕಾಗುತ್ತದೆ....."

ಈ ರೀತಿ ಒಂದು ಭಾಷಣವನ್ನು ಮಾಡಿದರು.

[Mr. Chairman (SRI G. RAME GOWDA) in the Chair.]

ಮೊನ್ನೆ ಈ ವಿಷಯದಲ್ಲಿ ಪ್ರಶ್ನೆ ಬಂದಾಗ ರಾಜಸ್ವ ಮಂತ್ರಿಯವರು 17ನೇ ಸೆಪ್ಟಂಬರ್ ಭಾಷಣವನ್ನು ವಾಖ್ಯಾನ ಮಾಡುವುದಕ್ಕೆ ಆರಂಭ ಮಾಡಿದರು. ಇದರಿಂದ ಘರ್ಷಣೆ ಉದ್ಭವ ವಾಯಿತು. 1964ರ ಹಿಂದೆ ಇದ್ದಂತಹ ಕಂದಾಯವನ್ನು ಕೊಡಿರಿ, ನಾವು ಸಮಗ್ರ ಮನೂದೆಯನ್ನು ತಂದು ಕಾಯಿದೆಯನ್ನು ದುರುಸ್ತು ಮಾಡುತ್ತೇವೆಂದು ಹೇಳಿದರು. ಈಗ ಹಾಗೆ ಮಾಡುತ್ತಾ ಇಲ್ಲ. ಇಲ್ಲಿ ವಸೂಲು ಮಾಡುವುದಕ್ಕೆ, ಬಾಕಿ ಪಟ್ಟಿ ತೆಗೆದುಕೊಂಡು ಹೊರಟಿದ್ದಾರೆ. ತಾಲ್ಲೂಕು ಬೋರ್ಡ್ ಚುನಾವಣೆಗಳು ಆಯಿತು ಎಂದು ಅಲ್ಲಿ ವಸೂಲು ಮಾಡುವುದಕ್ಕೆ ಬಾಕಿ ಪಟ್ಟಿ ತೆಗೆದುಕೊಂಡು ಹೊರಟಿದ್ದಾರೆ. ಚುನಾವಣೆ ಮುಂಚೆ ಆಶ್ವಾಸನೆ ಕೊಟ್ಟಿದ್ದರು—ದುರುಸ್ತು ಮಾಡುತ್ತೇವೆ, ತಪ್ಪಾಗಿದೆ ಎಂದು ಬಹಿರಂಗವಾದ ಸಭೆಯಲ್ಲೂ ಈ ಸಭೆಯಲ್ಲೂ ಹೇಳಿದ್ದಾರೆ. ಈ ರೀತಿಯ ಆರೋಪ ರಾಜಸ್ವ ಮಂತ್ರಿಗಳ ಮೇಲೆ ಬಂತು. ಚರ್ಚೆಯಲ್ಲಿ ತಾವು ಕೊಟ್ಟ ಮಾತಿನಿಂದ ದೂರ ಸರಿಯುವ, ಅಥವಾ ಕೊಟ್ಟ ಮಾತನ್ನು ನಡೆಸಲಾರದೆ ಹೇಡಿತನದಲ್ಲಿ ಸಿಕ್ಕಿ ಹಾಕಿಕೊಂಡು ಅದರಿಂದ ದೂರ ಸರಿಯುವ ಪ್ರಯತ್ನ ಮಾಡುತ್ತಿದ್ದೀರಿ ಎಂದು ಹೇಳಿದಾಗ ಈ ಮಾನ್ಯ ಸಭೆಯಲ್ಲಿ ಧರಣಿ ಮುಷ್ಕರ ಕೂರುವಂತಹ ಪರಿಸ್ಥಿತಿಗೆ ಹೋಯಿತು. ಆಶ್ವಾಸನೆ ಕೊಡುವ ತನಕ ನಾವು ಇಲ್ಲಿಂದ ಹೋಗುವುದಿಲ್ಲವೆಂದು ತಿಳಿಸಿದ ಮೇಲೆ, ಧರಣಿ ಮುಷ್ಕರ ನಡೆಯಿತು, ಇತ್ಯಾದಿ ಇತ್ಯಾದಿ. ಧರಣಿ ಮುಷ್ಕರದಲ್ಲಿ ಕುಳಿತವರಿಗೆ ಸರ್ಕಾರದವರು ಏನೇನು ಉಪಕಾರ ಮಾಡಿದರು, ಈ ಮಹಾ ಸಭಾಧ್ಯಕ್ಷರು ಏನೇನು ಸವಲತ್ತನ್ನು ಕೊಟ್ಟರು, ಕೊಡಲಿಲ್ಲ, ಕೊಡುವುದಕ್ಕೆ ಹಿಂದೆ ಮುಂದೆ ನೋಡಿದರು, ಇತ್ಯಾದಿ, ಇತ್ಯಾದಿ ಹೇಳಿ ತಮ್ಮ ಕಾಲವನ್ನು ಹರಣ ಮಾಡುವುದಕ್ಕೆ ಇಷ್ಟವಿಲ್ಲ. ಅದು ಒಂದು ಕಹಿ ಪ್ರಸಂಗ ನಿಮಗೆ ಎಂದು ಇಟ್ಟುಕೊಳ್ಳೋಣ. ಮುಂದಕ್ಕೆ ಮಾನ್ಯ ಕಂದಾಯ ಮಂತ್ರಿಯವರು 17 ನೇ ಸೆಪ್ಟಂಬರ್‌ಗೆ ಹೇಳಿದ್ದಾರೆ ಏನೆಂದರೆ, "ಹೊಸ ತಿದ್ದುಪಡಿ ಆಗುವವರೆಗೂ ಸರ್ಕಾರದವರು ಹಳೇ ದರದ ಪ್ರಕಾರ ಕಂದಾಯ ವಸೂಲ್ಮಾಡಬೇಕು, ಹೆಚ್ಚಿನ ಅಕರಣೆ ಪ್ರಕಾರ ವಸೂಲ್ಮಾಡಬಾರದು ಎಂದು ಹೇಳಿದ್ದಾರೆ. ಇದನ್ನು ನಾವು ಆಪ್ರತ್ಯಕ್ಷವಾಗಿ ಒಪ್ಪಿಕೊಂಡಿದ್ದೇವೆ. ಹಳೇ ದರದ ಪ್ರಕಾರ ಕೊಡಬೇಕೆಂದರೆ, ಈಗ ಇದ್ದ ಕಾಯಿದೆ ದುರುಸ್ತಿ ಆಗುವವರೆಗೂ ಆ ರೀತಿ ಸರ್ಕಾರದಿಂದ ಹೇಳಲಿಕ್ಕೆ ಬರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ಹಳೇದರದ ಪ್ರಕಾರ ಕೊಡಿರಿ, ಅದನ್ನು ಪಾರ್ಟ್ ಪೇಮೆಂಟ್ ಎಂದು ತೆಗೆದುಕೊಳ್ಳುತ್ತೇವೆ. ಹೆಚ್ಚು ಹಣ ಕೊಡಬೇಕಾದವರಿಗೆ ಕಂತುಗಳ ಮೂಲಕ ಕೊಡುವುದಕ್ಕೆ ಅವಕಾಶ ಕೊಡಬಹುದು. ಈಗಿನ ಕಾಯಿದೆಯು ತಿದ್ದುಪಡಿ ಆದನಂತರ ಹೆಚ್ಚಾಗಿ ಕೊಟ್ಟಿರುವುದನ್ನು ರೆಮಿಷನ್ ಮಾಡಬೇಕಾಗುತ್ತದೆಯೋ, ಏನು ಮಾಡಬೇಕಾಗುತ್ತದೆಯೋ, ಅದನ್ನು ವಿಚಾರ ಮಾಡಬೇಕಾಗುತ್ತದೆ. ಇತ್ಯಾದಿ ಇತ್ಯಾದಿ ಹೇಳಿದ್ದಾರೆ. ಈ ಮಾತಿನಲ್ಲಿ ನಮ್ಮ ಕೈಯಲ್ಲಿ ಸರ್ಕಾರ ಸಿಕ್ಕಿ ಬಿದ್ದಿದೆ. ಹಳೆಯ ದರದ ಪ್ರಕಾರ ವಸೂಲು ಮಾಡುತ್ತೇವೆ ಎಂದು ಸರ್ಕಾರದ ಹೊಣೆ ಹೊತ್ತಿರುವ ತಮ್ಮಂತಹ ಒಬ ಮಂತ್ರಿ ಹೇಳಿದ ಮಾತನ್ನು ಕಾರ್ಯತಃ ಎಷ್ಟುಮಟ್ಟಿಗೆ ಆಡಳಿತ ಯಂತ್ರ ನಿರ್ವಹಿಸಿದೆ ? ಅಥವಾ ಕಿವಿಯಲ್ಲಿ ಏನಾದರೂ ತಾವು ಮಾತನಾಡಿಕೊಂಡಿದ್ದರೆ, ಆಡಳಿತದ ಜವಾಬ್ದಾರಿ ಹೊತ್ತಿರ ತಕ್ಕವರು ಹೀಗೆ ಮಾಡುವುದಕ್ಕಾಗುವುದಿಲ್ಲ ತಮ್ಮ ಭಾಷಣ ಆದಮೇಲೆ ಏನು ಹೇಳಿದಿರೋ? ಆ ತರಹ ಕೂಗು ಗರಾಚೆ ಈ ವಿಧಾನಸಭೆಯಲ್ಲಿ ಆಯಿತು. ಅದಕ್ಕೆ ನಾನು ಒಂದು ಸಮಾಧಾನ ಹೇಳಿದ್ದೇನೆ. ಅದನ್ನುನೀವು ಜಾರಿ ಮಾಡುವುದಕ್ಕೆ ಅದು ಕಾನೂನೇ ಅಲ್ಲ. ಅದು ಭಾಷಣ. ಮುಖ್ಯ ಮಂತ್ರಿಯವರದ್ದು ಭಾಷಣ, ನನ್ನದೂ ಭಾಷಣ, ಅದೆರಲ್ಲಾ ಕಾಯಿದೆಯೇ! ಅದನ್ನು ನೀವು

(ಶ್ರೀ ಎಸ್. ಗೋಪಾಲ ಗೌಡ)

ಜಾರಿ ಮಾಡುವುದಕ್ಕೆ ಅದು ಕಾನೂನೇ ? ಆದ್ದರಿಂದ 1965ರಿಂದ ಏನೇನು ಬಾಕಿ ನಿಂತಿದೆಯೋ, ಅದಕ್ಕೆ ಡಿಮ್ಯಾಂಡ್ ಹಾಕಬೇಕು, ಪೂರ್ತಿ ಕೊಡಲೇಬೇಕು ಎಂದು ಮೇಲಿಂದಮೇಲೆ ಒತ್ತಾಯ ಮಾಡುತ್ತಾ ಇರಬೇಕು, ಹರಾಜು, ಜಫ್ತಿ ಇತ್ಯಾದಿ ಇತ್ಯಾದಿ ಮಾಡಬೇಕು, ಮರ್ಯಾದಸ್ಥರಿಗೆ ಮರ್ಯಾದೆ ಮತ್ತು ಕೊಡದೆ ಇದ್ದವರಿಗೆ ಕೊಡಲು ಹೆಟ್ಟು ಇತ್ಯಾದಿ ಇತ್ಯಾದಿ ಎಲ್ಲಾ ಮಾಡಿಕೊಂಡು ಬಂದು, ರಾಜ್ಯದಲ್ಲಿ ಏನು ಸಣ್ಣ ಮತ್ತು ದೊಡ್ಡ ಹಿಡುವಳಿದಾರರು ಇದ್ದರೋ, ಅವರೆಲ್ಲರನ್ನೂ ಒಂದೇ ಸಮನಾಗಿ ಕಾಡುತ್ತಾ ಬಂದಿದ್ದಾರೆ. ತಾಲ್ಲೂಕು ಬೋರ್ಡ್ ಇಲೆಕ್ಷನ್ ಆಗುವಾಗ ನಮ್ಮನೆ ಇದ್ದಿರಿ. ಚುನಾವಣೆ ಮುಗಿದನಂತರ ಕಂದಾಯ ವಸೂಲು ಮಾಡಲು ಮನೆಗೆ ನುಗ್ಗುವುದು ಶುರು ಮಾಡಿದಿರಿ. ಲೆವಿ ವಸೂಲಾತಿ ಬಗ್ಗೆ ಕಂದಾಯ ವಸೂಲಾತಿ ಬಗ್ಗೆ ಇಂಥ ಇಂಥ ಕ್ರಮಗಳಿಗೆ ಇಂಥಿಂಥ ಸಮಯದಲ್ಲಿ ಭೇಟಿ ಕೊಡುತ್ತೇವೆಂದು ತಾಹಸೀರ್ದಾರವರು ಕಾರ್ಯಕ್ರಮವನ್ನು ಅಚ್ಚು ಹಾಕಿಸಿ ಕಳಿಸಿದ್ದಾರೆ.

4-30 P.M.

ಜೊತೆಗೆ ಪೋಲೀಸರ ಸಹಾಯ ಪಡೆದು ಲೆವಿ ಮತ್ತು ಕಂದಾಯ ವಸೂಲಿ ಮಾಡುತ್ತಿದ್ದಾರೆ. ಅದೂ ಸಾಧ್ಯವಾಗದ ಕಡೆ ಕೋರ್ಟ್‌ಗೆ ಹೋಗಿ ಕೇಸ್‌ಗಳನ್ನು ಹಾಕುವುದರ ಮೂಲಕ ವಸೂಲಿ ಮಾಡುತ್ತಿದ್ದಾರೆ. ವೋಟು ತೆಗೆದುಕೊಳ್ಳುವಾಗ ರೈತರು ನಿಮಗೆ ದೊಡ್ಡಪ್ಪ ಆಗಿರುತ್ತಾರೆ, ಅವರಿಂದ ನೀವು ವೋಟು ಪಡೆದಮೇಲೆ ನಿಮಗೆ ಅವರು ಏಾದರಕ್ಕೆ ಸಮಾನ ಎಂದು ತಿಳಿಯುತ್ತೀರಿ. ಆಗ ನೀವು ಮೇಲೆ ಅವರು ಕೆಳಗೆ ಆಗುತ್ತಾರೆ. ಹೊಳೆ ದಾಟಿದಮೇಲೆ ನೀವು ಅಂಬಿಗನ ಮಿಂಡ ರಾಗುತ್ತೀರಿ. ಅಂಬಿಗನನ್ನು ಗೋಗರೆದು ನಮ್ಮುದ್ರ ದಾಟಿದಮೇಲೆ ಅವನಿಗೆ ಏನು ಮರ್ಯಾದೆ ಕೊಡಬೇಕೆಂಬುದನ್ನು ನೀವು ಮರೆಯುತ್ತೀರಿ. ತಾವು ಮಾಡಿದ್ದು ಬರೀ ಭಾಷಣ ಎಂದು ವಾಖ್ಯಾನ ಮಾಡುವುದಕ್ಕೆ ಹೊರಟಾಗ ನಾವು ಧರಣಿ ಮುಷ್ಕರ ಹೂಡಬೇಕಾಯಿತು. ಸರ್ಕಾರದವರು ಮರ್ಯಾದೆಯಿಂದ ಈಗಿನ ಕಾಯಿದೆಯನ್ನು ದುರಸ್ತಿ ಮಾಡುವವರೆಗೂ 1964ರ ಹಿಂದಿನ ಕಂದಾಯ ವನ್ನೇ ತೆಗೆದುಕೊಳ್ಳುತ್ತೇವೆಂದು ಹೇಳುವುದಾದರೆ ನಾವು ಮುಷ್ಕರದಿಂದ ಎದ್ದೇಳುತ್ತೇವೆಂದು ಹೇಳಿದೆವು. ನಂತರ ತೆರೆಮರೆಯಲ್ಲಿ ನಾನಾ ಮಹನೀಯರುಗಳನ್ನು ಒಳಗೊಂಡಂತೆ ಸಂಧಾನ ನಡೆಯಿತು. ಆ ಮಹನೀಯರುಗಳ ಹೆಸರುಗಳನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಈ ಬಗ್ಗೆ ಸಮಗ್ರ ಮಸೂದೆ ಬರುವವರೆಗೆ ಬಲಾತ್ಕಾರದಿಂದ ಕಂದಾಯವನ್ನು ವಸೂಲಿ ಮಾಡುವುದಿಲ್ಲ ವೆಂದು ಸರ್ಕಾರದವರು ಹೇಳಿದಮೇಲೆ ನಮಗೆ ಸಮಾಧಾನವಾಯಿತು. ಈ ಒಂದು ಸರ್ಕಾರದ ಆಶ್ವಾಸನೆಯಿಂದ ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ರೈತರು ರೀ—ಸೆಟ್ಲ್‌ಮೆಂಟ್ ಆಗುವುದಕ್ಕೆ ಮುಂಚಿನ ಕಂದಾಯ ಕೊಡಬಹುದು, ಸ್ವಲ್ಪಮಟ್ಟಿಗೆ ಅವರಿಗೆ ಸಮಾಧಾನವಾಗಬಹುದು, ಸ್ವಲ್ಪ ಕಾಲ ಅವರು ನೆಮ್ಮದಿಯಿಂದ ಬದುಕಬಹುದು ಎಂಬ ಆಶೆಯನ್ನು ನಾವು ತಳೆದೆವು. ನಂತರ ಒಬ್ಬರು ಸದಸ್ಯರು ಹೇಳಿದರು, ಖುಷ್ಕಿ ಜಮೀನಿಗೆ ಹೊಸ ರೀ—ಸೆಟ್ಲ್‌ಮೆಂಟ್ ಪ್ರಕಾರ ಕೆಲವು ಕಡೆ ಕಂದಾಯ ಜಾಸ್ತಿಯಾಗಿದೆ ಎಂದು. ಇಂತಹ ಸಂದರ್ಭಗಳಲ್ಲಿ ಮೊದಲಿನ ಕಂದಾಯವನ್ನೇ ತೆಗೆದುಕೊಳ್ಳುವಂತೆ ಭರವಸೆ ಕೊಡಬೇಕೆಂದು ಕೇಳಿದಾಗ ಸರ್ಕಾರದವರು ಒಪ್ಪಿ ಕೊಂಡರು. ನಂತರ ಮುಷ್ಕರ ಮುಕ್ತಾಯ ಮಾಡಿ, ನೆಲ ಬಿಟ್ಟು ಆಸನದಲ್ಲಿ ಕುಳಿತುಕೊಂಡು ಮುಂದಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದೆವು. ಈ ಸಮಯದಲ್ಲಿ ವಿರೋಧಪಕ್ಷದ ಕೆಲವು ಸದಸ್ಯರುಗಳು ಕೆಲವರ ಪಿತೂರಿಗೆ ಒಳಗಾಗಿ ಮುಷ್ಕರದಲ್ಲಿ ಭಾಗವಹಿಸದೆ ಆಸನದಲ್ಲಿಯೇ ಕುಳಿತಿದ್ದರು. ಆ ರೀತಿ ಏತಕ್ಕೆ ಮಾಡಿದರೋ ನನಗೆ ಗೊತ್ತಿಲ್ಲ. ಈ ಕಾರಣದಿಂದ ಸರ್ಕಾರದವರು ಏನನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಪ್ರದರ್ಶನ ಮಾಡುವವರ ಸಂಖ್ಯೆಯಮೇಲೆ ಎಲ್ಲ ವನ್ನೂ ನಿರ್ಧಾರ ಮಾಡುತ್ತೇವೆಂದು ತಾವು ತಿಳಿದುಕೊಂಡಿದ್ದರೆ ಈ ದೇಶದ 52 ಕೋಟಿ ಜನರೂ ಸಹ ಮುಷ್ಕರ ಮಾಡುವುದಕ್ಕೆ ಆಗುವುದಿಲ್ಲ. ಇದು ಗುಣದ ಪ್ರಶ್ನೆಯಾಗಿದೆ. ಸಂವಿಧೀಯ ವ್ಯವಹಾರಗಳ ಮಂತ್ರಿಗಳು ಆ ದಿವಸ ಒಂದು ನಿರ್ಣಯವನ್ನು ಸಭೆಯಮುಂದೆ ಇಟ್ಟರು. ಅವರು ಈಗ ಇಲ್ಲಿ ಇಲ್ಲ. ಆ ನಿರ್ಣಯದಮೇಲೆ ಮಾತುಕತೆಗಳು ಆದಮೇಲೆ ಆ ನಿರ್ಣಯವನ್ನು ಒಪ್ಪಿ ಕೊಂಡೆವು. ಇದು ಹಿನ್ನೆಲೆ. ಈ ಕಡೆಯವರು ಹೆಚ್ಚಿನ ಸಂಖ್ಯೆಯಲ್ಲಿ ಪರಿವರ್ತನೆಯಾಗುವ ತನಕ ಅಥವಾ ಆ ಕಡೆಯವರು ಅಲ್ಪಸಂಖ್ಯಾತರಾಗುವ ತನಕ ಈ ವಿಷಯದಲ್ಲಿ ನಾನು ಹೆಚ್ಚಿನ ವಾದ ಮಾಡುವುದು ಕಲ್ಲಿನಮೇಲೆ ಮಳೆ ಸುರಿದಂತಾಗುತ್ತದೆ. ಆದರೂ ಕೂಡ ನಮ್ಮ ಕರ್ತವ್ಯವನ್ನು ನಾವು ಮಾಡಬೇಕಾಗಿದೆ. ಇದು ಎಷ್ಟರಮಟ್ಟಿನ ಆಚಾರ ವಿಚಾರವೇ ಆಗಿರಲಿ, ಇದರಲ್ಲಿ ವ್ಯತ್ಯಾಸ ಇದೆ ಎಂಬುದನ್ನು ಜನತೆಗೆ ಎತ್ತಿ ತೋರಿಸಬೇಕಾಗಿದೆ. ಈ ಬಗ್ಗೆ ಹಿಂದಿನ ತಿದ್ದುಪಡಿಯನ್ನು

ತಾವು ತಿರಸ್ಕರಿಸಿದ್ದೀರಿ. ಜನಾಭಿಪ್ರಾಯಕ್ಕೆ ಹೋಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಇದು ಒಂದು ದೊಡ್ಡ ಉದಾಹರಣೆಯಾಗಿದೆ. ಈ ಬಗ್ಗೆ ಜನರ ಅಭಿಪ್ರಾಯ ತಿಳಿದುಕೊಳ್ಳಲು ನಾವು ಅವರಲ್ಲಿಗೆ ಹೋಗುತ್ತೇವೆ. ಏಕೆಂದರೆ ಅವರು ನಮಗೆ ವೋಟು ಕೊಟ್ಟು ಕಳಿಸಿದ್ದಾರೆ. ಎರಡೂವರೆ ಕೋಟಿ ಜನರ ಅಭಿಪ್ರಾಯ ತಿಳಿದುಕೊಳ್ಳುವುದು ಅವಶ್ಯಕ ಇದೆ. ರಾಜನ್ಯ ಮಂತ್ರಿಗಳು ಹೇಳಿದ ಮಾತಾಗಲೀ, ರಾಜ್ಯಸರ್ಕಾರದವರು ಮಾಡಿರತಕ್ಕಂಥ ತಿದ್ದುಪಡಿಯಾಗಲೀ, ಅದು ಸಮರ್ಪಕವಾಗಿದೆಯೇ, ಸಮಂಜಸವಾಗಿದೆಯೇ, ಸಕಾಲಿಕವಾಗಿದೆಯೇ, ಅದರಿಂದ ತಾವುಗಳೆಲ್ಲಾ ತೃಪ್ತಿ ಆಗಿದ್ದೀರಾ, ತಮಗೆ ಇದರಿಂದ ಏನಾದರೂ ರಿಯಾಯಿತಿ ದೊರತಿದೆಯೇ, ಈಗಿನ ನಿಮ್ಮ ತೊಂದರೆಗಳು ನಿವಾರಣೆಯಾಗಿದೆಯೇ, ಸರ್ಕಾರದವರು ಹೊಸದಾಗಿ ತಂದಿರುವ ತಿದ್ದುಪಡಿಯ ಪ್ರಕಾರ ತಮಗೆ ಎಲ್ಲಾ ರೀತಿಯ ಸಮಾಧಾನಗಳು ಆಗಿವೆಯೇ ಅಥವಾ ಇಲ್ಲವೇ ಎಂಬುದನ್ನು ಕೇಳುವುದಕ್ಕಾಗಿ ನಾವು ಜನರ ಹತ್ತಿರ ಹೋಗುತ್ತೇವೆ. ಇದು ನಮ್ಮ ಕರ್ತವ್ಯವಾಗಿದೆ. ನಾವು ಹೋಗಲೇಬೇಕಾಗಿದೆ. ಅವರಿಂದ ಏನು ಉತ್ತರ ಬರುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ತಾವೇ ಏನಾದರೂ ಅಧಿಕೃತವಾಗಿ ಜನರಿಂದ ಅಭಿಪ್ರಾಯಗಳನ್ನು ಈ ಮಸೂದೆಯ ಬಗ್ಗೆ ಸಂಗ್ರಹಣೆ ಮಾಡುವುದಕ್ಕೆ ಒಪ್ಪಿ ಕಳಿಸಿದ್ದರೆ ಎಷ್ಟು ವಿಷಯಗಳನ್ನು ಸಂಗ್ರಹ ಮಾಡುತ್ತಿದ್ದಿರೋ ಅದಕ್ಕಿಂತ ಹೆಚ್ಚು ವಿಷಯಗಳನ್ನು ನಾವು ಸಂಗ್ರಹಮಾಡುತ್ತೇವೆ. ನಾವೂ ಕೂಡ ಜನರಿಗೆ ಲಿಖಿತ ಮೂಲಕವಾಗಿ ಕೆಲವು ಭರವಸೆಗಳನ್ನು ಕೊಟ್ಟಿದ್ದೇವೆ. ಆ ಭರವಸೆಗಳನ್ನು ಎಷ್ಟು ಸಮಯದಲ್ಲಿ ಪೂರೈಸಿ ಕೊಡಬಹುದು ಎಂಬ ಬಗ್ಗೆ ನಾವು ಕಾತುರತೆಯಿಂದ ಇದ್ದೇವೆ. ಪ್ರಶ್ನೆದಲ್ಲರತಕ್ಕ ಎಲ್ಲಾ ಸಮಸ್ಯೆಗಳು ಕೂಡ ತಮ್ಮ ಮೇಲೆಯೇ ಇದೆ ಎಂದು ನಾವು ತಿಳಿದುಕೊಂಡಿಲ್ಲ. ರಾಜನ್ಯ ಮಂತ್ರಿಗಳು ನಮ್ಮ ಕಡೆಯವರು ಈ ತಿದ್ದುಪಡಿಯ ಮೇಲೆ ತಂದ ಸೂಚನೆಯನ್ನು ತಿರಸ್ಕರಿಸುತ್ತಾ ಬಹಳ ಪಾಣ್ಡಿತ್ಯದಿಂದ ವಿವರಣೆಯನ್ನು ಕೊಟ್ಟರು. ಮತ್ತು ಅಷ್ಟೇ ಹೊಣೆಗೇಡಿತನದಿಂದ ಅವರ ವಿವರಣೆ ಇತ್ತು ಎಂದು ಹೇಳುತ್ತೇನೆ.

ಅವರು ಹೇಳಿದರು. ರಾಜ್ಯ ಸರಕಾರದವರು ಹಿಂದೆ ಈ ಮಾನ್ಯ ಸಭೆಗೆ ಕೊಟ್ಟ ವಚನವನ್ನು ಪಾಲಿಸುವ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ ಮತ್ತು ಒಂದು ತಿದ್ದುಪಡಿಯನ್ನು ಅಂಗೀಕಾರ ಮಾಡಿಬಿಟ್ಟರೆ, ಅವರು ಮಾಡಿರುವ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಅವಕಾಶ ದೊರೆಯುತ್ತದೆ ಎನ್ನುವ ಒಂದು ಅರ್ಥದಲ್ಲಿ ಹೇಳಿದ್ದಾರೆ. ಇದನ್ನು ನಾನೂ ಒಪ್ಪುತ್ತೇನೆ. ಒಂದು ಸಮಗ್ರವಾದ ಆಕ್ಟು ನಮ್ಮ ದೇಶದಲ್ಲಿ ಇದೆ. ಮೈಸೂರು ಲ್ಯಾಂಡ್ ರೆವೆನ್ಯೂ ಆಕ್ಟ್ 1964, ಆಕ್ಟ್ಸ್ ಆಫ್ 1965, ಮತ್ತು ಎರಡನೆಯದು ಆಕ್ಟ್ 2 ಆಫ್ 1966 ಮತ್ತು ಇದರಲ್ಲಿರುವ ರೂಲ್ಸ್‌ಗಳು. ಇವು ಎಷ್ಟು ಪುಟ ಇದೆ ಎಂದರೆ ಸುಮಾರು 271 ಪುಟಗಳಿವೆ. 1888ನೇ ಲ್ಯಾಂಡ್ ರೆವೆನ್ಯೂ ಕೋಡಿಗೆ ತಿದ್ದುಪಡಿ ಮಾಡಿ ಈ ಲ್ಯಾಂಡು ರೆವೆನ್ಯೂ ಆಕ್ಟ್‌ನ್ನು ಜನತೆಗೆ ಕೊಟ್ಟಿದ್ದಾರೆ. ಇದನ್ನು ತಿದ್ದುಪಡಿ ಮಾಡುವುದಕ್ಕಾಗಿ ತಂದಿರತಕ್ಕ ಮಸೂದೆಯಲ್ಲಿ ಇರುವುದು ಬೆಂಟು ಪುಟಗಳು ಮಾತ್ರ. ನಾಲ್ಕು ಪುಟಗಳಲ್ಲಿ ಇರತಕ್ಕದ್ದು ಇದಕ್ಕೆ ಸಂಬಂಧಪಟ್ಟ ಹಳೆಯ ಕಾನೂನುಗಳು. ಇನ್ನುಳಿದ ನಾಲ್ಕು ಪುಟಗಳಲ್ಲಿ ಇಲ್ಲಿ ತಂದಿರುವ ತಿದ್ದುಪಡಿಗೆ ಸಂಬಂಧಪಟ್ಟದ್ದಾಗಿದೆ. ಇದರಲ್ಲಿರುವ ಅನ್‌ಕ್ಚರ್‌ನಲ್ಲಿ ಲ್ಯಾಂಡು ರೆವೆನ್ಯೂ ಆಕ್ಟ್‌ಗೆ ಸಂಬಂಧಪಟ್ಟದ್ದು ಇದೆ. ಇನ್ನುಳಿದದ್ದಲ್ಲಿ ಸ್ವಲ್ಪ ಕಾಯಿದೆಗೆ ಸಂಬಂಧಪಟ್ಟಂತೆ ಇದೆ. ಇದನ್ನು ಸಮಗ್ರವಾದ ತಿದ್ದುಪಡಿ ಮಸೂದೆ ಎಂದು ಮಾನ್ಯ ಸಚಿವರು ಈ ಮಸೂದೆಯನ್ನು ಮಂಡಿಸುವಾಗ ಈ ಸಭೆಯಲ್ಲಿ ಹೇಳಿಬಿಟ್ಟರು. ಅವರು ಮಸೂದೆ ಎಂದು ಹೇಳಿದ ಶಬ್ದ ನನಗೆ ಮಸೀದಿ ಎಂದು ಕೇಳಿಸಿತು. ಶಬ್ದದ ವಿಚಾರ ಹೇಗೇ ಇರಲಿ. ಇತರ ಭಾಷೆಯ ಬಗ್ಗೆ ನಾನು ಇಲ್ಲಿ ಹೇಳುವುದಿಲ್ಲ. ಇದು ಇರಲಿ. ಹಿಂದೆ ಇಷ್ಟರನ್ನು ನಿಜವಾಗಿಯೂ ಒಳ್ಳೆಯ ಅನುಭವವುಳ್ಳ ವಕೀಲರು ಎಂದು ಹೇಳಿದ್ದೇನೆ. ಸುಮಾರು ಮೂವತ್ತು ವರ್ಷಗಳಿಂದಲೂ ವಕೀಲ ವೃತ್ತಿ ಮಾಡಿದವರು ಎಂದು ಕೇಳಿ ನನಗೂ ಸಂತೋಷವಾಗಿದೆ. ಅವರು ಒಳ್ಳೆಯ ವಕಾಲತ್ತು ಮಾಡಿ ಎಷ್ಟೋ ಸಲ ನ್ಯಾಯಾಲಯಗಳಲ್ಲಿ ಜಡ್ಜ್‌ಮೆಂಟು ಕೊಡುವಾಗ ಇದರಲ್ಲಿ ತಪ್ಪು ನೆಪ್ಪುಗಳು ಹೇಗಿರುತ್ತವೆ ಎನ್ನುವುದನ್ನು ಚೆನ್ನಾಗಿ ತಿಳಿದುಕೊಂಡಿರಬಹುದು. ಸುಮಾರು ಇಪ್ಪತ್ತು ವರ್ಷಗಳಿಂದಲೂ ಮಸೂದೆಗಳ ಬಗ್ಗೆ ದೇಶದಲ್ಲಿರುವ ವಿವಿಧ ನ್ಯಾಯಾಧೀಶರುಗಳು ಏನು ಅಭಿಪ್ರಾಯ ಪಟ್ಟಿರುತ್ತಾರೆ, ಜಡ್ಜ್‌ಮೆಂಟು ಏನೇ ಆಗಲೀ, ತೀರ್ಪು ಏನೇ ಬರಲಿ ಇದರ ಬಗ್ಗೆ ಮಾತನಾಡುವಾಗ ನ್ಯಾಯಾಲಯಗಳಲ್ಲಿ ಇವರಿಗೂ ನ್ಯಾಯಾಧೀಶರುಗಳಿಗೂ ಯಾವ ರೀತಿ ಚಕಮಕಿಗಳು ಆಗಿರುತ್ತವೆ ಎನ್ನುವುದು ಗೊತ್ತಿದೆ. ಇದರಿಂದ ಇದು ಅವರ ಅನುಭವಕ್ಕೂ ಬಂದಿರಬಹುದು. ಈ ಸಭೆಯಲ್ಲಿ ಇಂತಹ ಒಂದು ಮಸೂದೆಯನ್ನು ಮಂಡಿಸಿ ಇದನ್ನು ಪಾಸು ಮಾಡುವಾಗ ಹಿಂದು ಮುಂದು ನೋಡದೆ ಯಾವ ಯೋಚನೆಯನ್ನೂ ಮಾಡದೆಯೆನೇ, ಎನ್ನುವ ಒಂದು ಕೂಗಿನಿಂದ ಗರಾಚಿಯಲ್ಲಿ ಮಸೂದೆಯನ್ನು ಮಂಜೂರು ಮಾಡಿ

(ಶ್ರೀ ಎಸ್. ಗೋಪಾಲ ಗೌಡ)

ಇದನ್ನು ಜಾರಿಗೆ ಕೊಡಬೇಕು ಎಂದು ಮಾಡುತ್ತಾರೆ. ಆದರೆ, ಮಸೂದೆ ಪಾಸಾಗಿ ಸಂಬಂಧಪಟ್ಟ ಪ್ರಕಟಣೆಗಳು ಜನತೆಗೆ ಕನ್ನಡದಲ್ಲಿಂತೂ ಸಿಗುವುದೇ ಇಲ್ಲ; ವರ್ಷಗಳಾದರೂ ಸಿಗುವುದಿಲ್ಲ. ಇದಕ್ಕೆ ತಕ್ಕ ರೂಲ್ಸ್ ಫ್ರೇಂ ಮಾಡಬೇಕಾದರೆ ಘನ ಸರಕಾರದ ಆಡಳಿತ ನಡೆಯುವ ನಡಿಗೆ ನೋಡಿದರೆ, ಅದು ಒಂದು, ಎರಡು, ಮೂರು, ನಾಲ್ಕು ಅಥವಾ ಐದು ವರ್ಷಗಳು ಆದರೂ ಆಗ ಬಹುದು. ಇದಕ್ಕೆ ಸಂಬಂಧಪಟ್ಟ ರೂಲ್ಸುಗಳು ಜನರಿಗೆ ಸಿಗುವುದೇ ಇಲ್ಲ. ಈಗಾಗಲೇ ನಮಗೇ ತಿಳಿದಿರುವಂತೆ ಇದಕ್ಕೇ ಸಂಬಂಧಪಟ್ಟ ಲ್ಯಾಂಡು ಗ್ರ್ಯಾಂಟು ರೂಲ್ಸುಗಳು ಇನ್ನೂ ಆಗಲಲ್ಲ. ಆದರೆ ಈ ಆಕ್ಟನ್ನು ಹೇಗೆ ಜಾರಿಗೆ ಕೊಡಬೇಕು ಎನ್ನುವುದು ಈ ಆಕ್ಟಿನಲ್ಲಿದೆ.

Sri K. PUTTASWAMY.—The Land Grant Rules are there. There will be special sets of rules. Whenever the new Act is repealed, the old Act will be continued.

ಶ್ರೀ ಎಸ್ ಗೋಪಾಲಗೌಡ.—ಆದುದರಿಂದ ನಾನು ಇಲ್ಲಿ ಬಹಳ ವ್ಯಥೆಯಿಂದ ಹೇಳುತ್ತಿದ್ದೇನೆ. ಇದು ಹೇಗಿದೆ ಎಂದರೆ ಕುಸ್ತಿಯಲ್ಲಿ ಕೆಳಗೆ ಬಿದ್ದಾರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತೆ ನೀವು ಹೊರಗಡೆ ತೋರಿಸಬೇಕಾಗಿದೆ. ಇದಕ್ಕಾಗಿ ಅವಸರವಸರವಾಗಿ ದಿನಗಟ್ಟಲೆ ಕುಳಿತು ಕೊಂಡು ಇರುವ ಈ ಸಭೆಯ ಕೊನೆಯ ದಿನದಲ್ಲಿ ಪಾಯಿಂಟ್ ಆಫ್ ಆರ್ಡರು ಬಂದರೂ ಲೆಕ್ಕಿಸದೆ, ನಿಮ್ಮ ಭುಜತಟ್ಟಿಕೊಂಡು ಇದನ್ನು ಪಾಸುಮಾಡಿಸಿಕೊಳ್ಳಬೇಕು ಎಂದು ಇದ್ದೀರಿ. ನಿನ್ನೆ ನಡೆದಂತಹ ಕ್ರೀಡೆಯಲ್ಲೂ ಕೂಡ ನೀವೇ ಟಗ್ ಆಫ್ ವಾರ್ ನಲ್ಲಿ ಗೆದ್ದಿದ್ದೀರಿ. ಇದು ನಮಗೆ ಹಾಗೂ ನಿಮಗೆ ಗೊತ್ತಿದೆ. ಆದರೆ ಈ ಟಗ್ ಆಫ್ ವಾರ್ ಸ್ವಲ್ಪ ಕಠಿಣವಾದುದು. ಇದರಲ್ಲಿ ಸ್ವಲ್ಪ ಎಟವಾದಬೇಕಾದರೆ ಇದಕ್ಕೆ ನೀತಿ, ನ್ಯಾಯ ಹಾಗೂ ನಿಯಮಗಳೂ ಇರುತ್ತವೆ. ಆದುದರಿಂದ ಇದಕ್ಕೆ ಸ್ವಲ್ಪ ಹೆಚ್ಚಿನ ನಿಬಂಧನೆಗಳು, ನಿಯಮಗಳು ಇಲ್ಲ ಬೇಕಾಗುತ್ತವೆ. ಮಾನ್ಯ ಸಂಸದೀಯ ಸಚಿವರೂ ಇಲ್ಲಿದ್ದಾರೆ. ಅವರು ಜಾಣ್ಮೆಯಿಂದ ಈ ತಿದ್ದುಪಡಿ ಮಸೂದೆ ತಂದು ಶಹಬಾಸಗಿರಿ ಪಡೆಯಬೇಕೆಂದು ಇದ್ದಾರೆ. ಅವರು ಏನು ವಿವರಗಳನ್ನು ಹಿಂದೆ ಇಲ್ಲಿ ಕೊಟ್ಟರು ಎಂದರೆ, 1964ರ ಮುಂಚೆ ಏನು ಕಂದಾಯ ಇತ್ತೋ ಅದನ್ನು ಕೊಡಿ, ಕೊಡದೇ ಇದ್ದರೆ ಇಲ್ಲ ನಮಗ್ರು ಮಸೂದೆಯನ್ನು ತರುವ ತನಕ ಬಲಾತ್ಕಾರ ಪ್ರಯೋಗ ಮಾಡಿ ಕಂದಾಯವನ್ನು ವಸೂಲು ಮಾಡುವುದಿಲ್ಲವೆಂದು ಆಶ್ವಾಸನೆ ಕೊಟ್ಟರು. ಇದು ಒಂದು ಜಾಣ್ಮೆಯಿಂದ ಹೇಳಿದುದು. ಇಂದು ರಾಜಸ್ವ ಮಂತ್ರಿಗಳಾದ ಶ್ರೀ ಮಾನ್ ಕೌಜಲಗಿಯವರ ಕೊರಳಿಗೆ ಏನು ಉರುಳು ಬಿತ್ತು, ಅದನ್ನು ಸ್ವಲ್ಪ ಗಟ್ಟಿ ಮಾಡುವುದಕ್ಕೆ ಹೋದಂತಾಯಿತು. ಸುಮಾರು ನಾಲ್ಕೂವರೆ ಕೋಟಿ ಆದಾಯ ಸರಕಾರಕ್ಕೆ ಬರುವುದು ಹೋಯಿತು. ಇದುಇನ್ನೂ ಆರು ಕೋಟಿವರೆಗೆ ಬರಬಹುದು ನಾವು ಮಾಡಿದ ಮುಷ್ಕರದ ನಂತರ. ಇದು ಸರಕಾರದ ಧೋರಣೆ, ಇದಕ್ಕೆ ಬಹುಶಃ ನಮ್ಮ ಅರ್ಥ ಮಂತ್ರಿಗಳು ಕೂಡ ಕಂದಾಯ ಮಂತ್ರಿಗಳನ್ನು ಹಿಂಡಿ ಹೇಳಿರಬಹುದು. ಏಪೊತ್ತು, ಆಯವ್ಯಯ ಪಟ್ಟಿಯನ್ನು ಎಂದು ಹೇಳಿ ಪಾಸು ಮಾಡಿಸಿಕೊಂಡ ಮೇಲೆ ಈ ರೀತಿ ಹೇಳಿರಬಹುದು.

ನಾನು ಊಹಿಸಿಕೊಂಡು ಇದನ್ನು ಹೇಳಿದ್ದು. ನಾನು ಅವರನ್ನು ಕೇಳಿ ಹೇಳಿದ್ದು ಅಲ್ಲ. ನೀವು ಗುರುತರವಾದ ಜವಾಬ್ದಾರಿಯನ್ನು ಹೊತ್ತು ಸರ್ಕಾರವನ್ನು ನಡೆಸತಕ್ಕ ಜನರಾಗಿರುವುದರಿಂದ ನಿಮಗೆ ವಿಶೇಷ ಸವಲತ್ತುಗಳು ಇವೆ, ಬೇಕಾದ ಸೌಲಭ್ಯಗಳು ಇವೆ. ನಿಮಗೆ ಯಾವ ಶಬ್ದಕ್ಕೆ ಏನು ಅರ್ಥ ಕೊಡುತ್ತದೆ ಎನ್ನುವುದಕ್ಕೆ ವ್ಯಾಖ್ಯಾನಕಾರರು ಇದ್ದಾರೆ, ಭಾಷಣ ಕಾರರು ಇದ್ದಾರೆ, ಈ ಸೆಕ್ರಿಟೇರಿಯೇಟ್‌ನ 59 ಇರಾಜೆಗಳು ಏನು ಇವೆ ಆ ಸಿಬ್ಬಂದಿ ವರ್ಗಗಳೆಲ್ಲಾ ನಿಮ್ಮ ಕೈಯಲ್ಲಿ ಇವೆ. ಇನ್‌ಫರ್ಮೇಷನ್ ಟೂರಿಸ್ಟ್ ಇರಾಜೆಗಳು ನಿಮ್ಮ ಕೈಯಲ್ಲಿ ಇವೆ. ನಿಮ್ಮ ಸಿಬ್ಬಂದಿಗೆ, ನಿಮಗೆ ಬುದ್ಧಿ ಹೇಳುವವರಿಗೆ, ತಪ್ಪನ್ನು ತಿದ್ದಿ ಹೇಳುತ್ತಾ, ಇರುವವರಿಗೆ, ಸರ್ಕಾರಕ್ಕೆ ಬೆಂಬಲ ಕೊಡುವವರಿಗೆ, ಸಾರ್ವಜನಿಕರ ಬೊಕ್ಕಸದಿಂದ ಸಹಸ್ರಗಟ್ಟಲೆ ಹಣವನ್ನು ಈ ಸರ್ಕಾರಿ ನೌಕರರಿಗೆ ಕೊಡುತ್ತಾ ಇದ್ದೀರಿ. ಜೊತೆಗೆ ಲೀಗಲ್ ಅಡ್ವೈಸರ್ ಇದ್ದಾರೆ ಅವರು ಯಾರು ಎಂದರೆ ಅಡ್ವೋಕೇಟ್ ಜನರಲ್‌ರವರು. ಅವರು ನಿಮ್ಮ ಕೈಯಲ್ಲಿದ್ದಾರೆ. ಯಾವಾಗಲೂ ಅವರನ್ನು ಕೇಳಬಹುದು. ಅದಕ್ಕೆ ನಾನು ತಮ್ಮನ್ನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. 1964ರ ನಂತರದಲ್ಲಿ ಏನು ಹೊಸೆಯನ್ನು ಹೊರಿಸಿದ್ದೀರೋ ಅದನ್ನೇ ಪುನಃ ವಸೂಲ್ಮಾಡುವುದಕ್ಕೆ ಈ ಒಂದು ತಿದ್ದುಪಡಿ ಮಸೂದೆಯಿಂದ ಅಧಿಕಾರವನ್ನು ಪಡೆದು ಕೊಳ್ಳುತ್ತಿದ್ದೀರಿ. ಈ ಮಸೂದೆ ಅವರಿಗೆ ರಿಲೀಫ್ ಕೊಡುವುದಕ್ಕಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ನೀವು ಸಾಕಷ್ಟು ಸಮಗ್ರವಾದ ತಿದ್ದುಪಡಿ ತಂದಿಲ್ಲ. ಇದರಲ್ಲಿ Amendment of

Section 10, Amendment of Section 18, Insertion of new section 114A, Insertion of new section 122 A and 122 B. ಅಷ್ಟೆ. ಇದರಲ್ಲಿ ಮೊದಲನೆಯದು ಬಹಳ ಪ್ರಾಮುಖ್ಯವಾದುದು. ಅದು ಒಂದು ಹಣಕಾಸಿನ ಮಸೂದೆಯೂ ಹೌದು. ನದ್ಯಕ್ಕೆ ಎಷ್ಟು ಖರ್ಚಾಗುತ್ತದೆ ಎಂದರೆ, The expenditure on the staff for resettlement will depend on the number of zones taken up for revision settlement. It is anticipated that the cost on this account may not exceed Rs. 8 lakhs. ಇದು 8 ಲಕ್ಷಕ್ಕಿಂತ ಹೆಚ್ಚಾಗುವುದಿಲ್ಲ ಎಂದು ಹೇಳುತ್ತೀರಿ. ಈಗ ಇರುವ ಸಿಬ್ಬಂದಿ ಸೂಪರಿಂಟೆಂಡೆಂಟ್ ಫಾರ್ ಸೆಟಲ್‌ಮೆಂಟ್, ಸೂಪರಿಂಟೆಂಡೆಂಟ್ ಆಫ್ ಲ್ಯಾಂಡ್ ರಿಕಾರ್ಡ್ಸ್ ಆಗಲಿ ಅವರು ಮೊದಲೂ ಇದ್ದರು, ಈಗಲೂ ಇದ್ದಾರೆ, ಅವರನ್ನು ಯಾವಾಗಲೂ ಇದ್ದಾರೆಂದು ಭಾವಿಸಿಕೊಳ್ಳಿ. ಇವೆಲ್ಲಾ ಮಾಡಬೇಕಾದರೆ ಹಿಂದೆ ಸ್ಟಾಫ್ ಮೂಲಕ ಮಾಡಿಸುತ್ತಿದ್ದರು. ಶೇಕ್‌ದಾರರು ಹೋಗಿ ರೀ-ಸೆಟರ್‌ಮೆಂಟ್ ಮಾಡಿ ಬರುತ್ತಿದ್ದರು. ಈಗ ಇವರು ಈ ರೀತಿ ಮಾಡಬೇಕು ಎಂದು ಬಿಲ್‌ನಲ್ಲಿ ಹಾಕಿದ್ದಾರೆ. 3.Amendment of Section 18 In sub-section (1) of section 18 of the principal Act, after the words and quotations "Superintendent of Land Records", the words and quotations, "Superintendent for Settlement", "Assistant Superintendent for Settlement", shall be and shall be deemed always to have been inserted. ಇದು ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಮೊದಲಿನಿಂದಲೂ ಇದೆ ಎಂದು ತಿಳಿದುಕೊಳ್ಳತಕ್ಕದ್ದು ಎಂದು ಹೇಳಿದ್ದಾರೆ. ಇನ್ನು 122 B ನಲ್ಲಿ ಡಿಟರ್‌ಮಿನೇಷನ್ ಆಫ್ ಅಸೆಸ್‌ಮೆಂಟ್ ಆಫ್ ಲ್ಯಾಂಡ್ಸ್ ವಿಚಾರ ಹೇಳಿದ್ದಾರೆ. ಹಿಂದೆ ಸರ್ವೆ ಅಂಡ್ ಸೆಟಲ್‌ಮೆಂಟ್‌ನಲ್ಲಿ ಸಪ್ಲೈ ಮಾಡಿದ ಪುಸ್ತಕಗಳನ್ನು ಹೊತ್ತುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲದೆ ಗಾಡಿಯಲ್ಲಿ ಪುಸ್ತಕವನ್ನು ತೆಗೆದುಕೊಂಡು ಹೋಗುತ್ತಿದ್ದರು. ಇನ್ನು ಅದು ಹಾಗೆಯೇ ಇದೆ. ಅದನ್ನು ಯಾರು ಓದಿದ್ದಾರೆ?

ಇನ್ನು ಧಾರವಾಡ, ಶಿವಮೊಗ್ಗಾದಲ್ಲಿ 2-2 ಜೋನ್, ಬೆಂಗಳೂರಿನಲ್ಲಿ 2 ಜೋನ್ ವಿಠಲದಾಸ ಶೆಟ್ಟರು ಇರುವ ಕಡೆ 2 ಜೋನ್; ಹೀಗೆ ಗುಲ್ಬರ್ಗ, ಬಿದರೆ ಕಡೆಗಳಲ್ಲಿ 1-1 ಜೋನ್ ಈ ರೀತಿಮಾಡುತ್ತೀರಿ. ಹಿಂದೆ ಮಿರಾಸಿಯವರು ಬರೆದಿರುವ ಪುಸ್ತಕವನ್ನು ಓದಿರಬಹುದು. ನಾನೂ ಕೂಡ ಒಂದು ಪ್ಯಾರಾವನ್ನು ಓದಿದ್ದೇನೆ. ರೆಸೆಟರ್‌ಮೆಂಟ್ ಮಾಡಬೇಕಾದರೆ ಮಣ್ಣಿನ ಗುಣ, ಕ್ಲೈಮೆಟ್ ಗುಣ ವಾರ್ಕೆಟಿಂಗ್ ಫೆಸಿಲಿಟಿ, ಕ್ರಾಪ್ ಉತ್ಪತ್ತಿ ಇವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮಾಡಬೇಕು. ಈಗ ನಮ್ಮ ರಾಜಸ್ವ ಮಂತ್ರಿಗಳು ಏನು ಮಾಡಿದ್ದಾರೆ ಎಂದರೆ ಅದು 122 ಬಿ ಯಲ್ಲಿ ಇದೆ. ಅದು ಈ ರೀತಿ ಇದೆ:—

122. B. Determination of assessment of lands.—(i) Deputy Commissioner,—

"(i) may *suo motu* at any time... "

"ಮೇ ಸುವೋ ಮೋಜೋ" ಎಂದರೆ, ಆತನು ಸ್ವಪ್ರೇರಣೆಯಿಂದಲೇ ಮಾಡಬಹುದು. ಮೇ ಸುವೋ ಮೋಜೊ ಎನ್ನುವ ಶಬ್ದ ಇಂಗ್ಲೀಷ್ ಹುಟ್ಟುವುದಕ್ಕಿಂತ ಮುಂಚೆ ಹುಟ್ಟಿದ ಶಬ್ದ, ಇಂಗ್ಲಿಷ್ ಇನ್ನೂ ಅಧಿಕೃತ ಭಾಷೆಯಾಗದೆ ಇದ್ದಾಗ ಬ್ರಿಟನ್ ಆಗುವುದಕ್ಕಿಂತ ಮುಂಚಿತವಾಗಿ ಇದ್ದಂಥ ಶಬ್ದ.

(ii) shall, on the application of any person aggrieved by the land revenue assessed within a period of thirty days from the date of serivice of the notice under section 126 A.

ಇದು ಆತನು 30 ದಿನದೊಳಗೆ ಅಪ್ಲಿಕೇಷನ್ ಹಾಕಿದಾಗಲು ಬಂದು ಅಸೆಸ್ ಮಾಡಬಹುದು. ಮುಂದುವರಿದು:

"if, he is satisfied after such enquiry as he deems fit that the assessment of land revenue on any land or the land as the case may, is contrary to law or is otherwise incorrect, as regards the extent of land, the class of such land, the standard rate applicable and the land revenue payable, shall pass such orders, as he deems just."

ಎಂದು ಇದೆ.

(ಶ್ರೀ ಎಸ್. ಗೋಪಾಲಗೌಡ)

5-00 P M.

ಇನ್ನೂ ಮುಗಿಯಲಿಲ್ಲ. ಇಷ್ಟೇ ಆಗಿದ್ದರೆ ನನಗೂ ಸಂತೋಷವಾಗುತ್ತಿತ್ತು.

"Provided that no order prejudicial to the occupant shall be made under this sub-section unless the applicant or any other person interested has given a reasonable opportunity of being heard"

ಇದನ್ನೇ ಹೇಳುವುದು, ರಾಜಸ್ವ ಮಂತ್ರಿಗಳು ಎಷ್ಟು ಚರ್ಚೆ ಮಾಡಿದ್ದೇವೆಂದು. ಎಂಥ ಅಧಿಕಾರವನ್ನು ತೆಗೆದುಕೊಳ್ಳುತ್ತೀದ್ದೀರಿ ! ಗಲ್ಲಿಗೆ ಹಾಕುವ ಮುಂದೆ ಕೇಳುತ್ತಾರಂತೆ, ನಿನಗೆ ಏನಾದರೂ ಬೇಕೋ ಎಂದು. ಅಂಥ ಒಂದು ಅವಕಾಶವನ್ನು ಇದರಲ್ಲಿ ಕೂಡ ಮಾಡಲಾಗಿದೆ. ಬಹಳ ದೊಡ್ಡ ಅಧಿಕಾರ ಕೊಟ್ಟು ತೆಗೆದುಕೊಂಡಿದ್ದಾರೆ. ಅಧಿಕಾರವನ್ನು ರೈತರಿಗೆ ಕೊಟ್ಟಿದ್ದೀರಿ, ನೀವು ತೆಗೆದುಕೊಂಡಿದ್ದೀರಿ. ಔದಾರ್ಯವಾದ ಭಾಷೆಯನ್ನು ತಾವು ಉಪಯೋಗಿಸಿ ಅಪೀಲ್ ಹೋಗಬಹುದು ಎಂದು ತಾವು ಹೇಳಿದ್ದೀರಿ.

"...may within sixty days from the date of such order, appeal to the Divisional Commissioner, and the decision of the Divisional Commissioner thereon shall be final."

ಆಲ್ಲಿಗೆ ಫೈನಲ್. ಫೈನಲ್ ಆರ್ಡರಾದ ಮೇಲೆ ಅವ ಫೈನಲ್. ಅವ ಕೌಜಲಗಿ ಅವರು ವಕೀಲರಾದಾಗ ಅವರ ಹತ್ತಿರ ಬರಬೇಕು. ಮಂತ್ರಿಗಳ ಹತ್ತಿರವೂ ಬರಬಹುದು. ಅಷ್ಟು ಹೊತ್ತಿಗೆ ಫೈನಲ್ ಆರ್ಡರ ಡಿವಿಜನಲ್ ಕಮಿಷನರ್ ಮಾಡಿರುತ್ತಾರೆ. ಡಿವಿಜನಲ್ ಕಮಿಷನರ ಹುದ್ದೆಯನ್ನು ರದ್ದುಪಡಿಸಬೇಕೆಂದು ತುಕೋಳ್ ಅಯೋಗದವರೂ ಹೇಳಿದ್ದಾರೆ. ಆರೇಳು ಜನ ಸೂಪರ್ ಅನ್ಯುಯೇಷನ್ ಆಗದವರು ಇದ್ದಾರೆ. ಸರ್ಕಾರದವರಿಗೆ ಅವರನ್ನು ಏನು ಮಾಡುವುದೂ ಎಂದು ಗೊತ್ತಾಗುವುದಿಲ್ಲ. ಆದ್ದರಿಂದ ಅವರನ್ನು ಇಟ್ಟುಕೊಳ್ಳಲೇ ಬೇಕಾಗುತ್ತದೆಯಂತೆ. ಅವರೇ ನ್ಯಾಯಾಧೀಶರಾಗಿ ಇದನ್ನು ಫೈನಲ್ ಮಾಡುತ್ತಾರೆ. ಇಂಥ ಸ್ಪೇಟ್‌ಮೆಂಟ್ ಹೇಳಿದ ಮೇಲೆ, ಸ್ವಾಮಿ, ತಮ್ಮ ಉದ್ದೇಶ ನಮಗೆ ತಿಳಿಯುತು. ಅದರ ಬಗೆ, ನನಗೆ ಸಂಶಯವಿಲ್ಲ. ತಾವು ತೀರ್ಮಾನ ಮಾಡಿದ್ದೀರಿ, ಜನಾಭಿಪ್ರಾಯ ಪಡೆಯುವ ಅವಶ್ಯಕತೆ ಇಲ್ಲ, ವಿರೋಧಪಕ್ಷದವರು ಹೇಳುವುದನ್ನೆಲ್ಲ ಕೇಳುವುದಕ್ಕಾಗುವುದಿಲ್ಲ, ವಿರೋಧ ಪಕ್ಷದವರನ್ನು ಸಮಾಧಾನ ಪಡಿಸುವುದಕ್ಕೆ ನಾವು ಇಲ್ಲಿ ಕುಳಿತುಕೊಂಡಿಲ್ಲ ಎಂದು ಹೇಳಿಕೆ ಕೂಡ ಕೊಟ್ಟಿದ್ದೀರಿ. ವಿರೋಧ ಪಕ್ಷದವರಿಗೆ ವಿರೋಧ ಮಾಡುವುದೇ ಕೆಲಸ, ಎಲ್ಲದಕ್ಕೂ ವಿರೋಧ ಮಾಡುತ್ತಾರೆಂದೂ ಹೇಳಿದ್ದೀರಿ. ಒಂದು ವಿಷಯವನ್ನು ತಾವು ಯಾರಾದರೂ ಮರೆತಿದ್ದೀರೋ ಏನೋ. 1972ಕ್ಕೆ ಮತ್ತೊಂದು ಜನರಾವಣೆ ಇದೆ ನಿನ್ನೆಯದಿನ ಶಾಸಕರೆಲ್ಲರೂ ಸೇರಿ ವಿವಿಧ ವಿನೋದಾವಳಿ ಇದನ್ನೆಲ್ಲ ನೋಡಿದ ಮೇಲೆ ನಾವು ಮತ್ತೆ ರಣಕಣಕ್ಕೆ ಬಂದಿದ್ದೇವೆ; ಇಲ್ಲಯೂ ವಿವಿಧ ವಿನೋದಾವಳಿ ಮಾಡಬೇಕೆ. ಇದು ಮುಗಿದ ಮೇಲೂ ಮತ್ತೆ ಜನತೆಯ ಹತ್ತಿರ ಹೋಗಬೇಕಾಗುತ್ತದೆ. ಕಂದಾಯ ಕೊಡುವವರು ಅವರು. ಅಧ್ಯಕ್ಷರಿಗೆ ಹೇಳುತ್ತೇನೆ, ನಿಮಗೂ ಸಂಬಂಧಪಟ್ಟ ಪ್ರಶ್ನೆ ಇದು. ನಾನು ಕಂದಾಯ ಕೊಡುವುದು ಯಾವುದು ಇಲ್ಲ. ಈ ಕಂದಾಯ ಮನೂದೆಯಲ್ಲಿ ಏಕೆ ಇಷ್ಟು ಅವಸರ ಮಾಡುತ್ತೀರಿ ಎಂದು ನಾನು ಕೇಳಿದ್ದೇನೆ. ಇದು ಹಣಕಾಸಿನ ಮನೂದೆ ಕೂಡ ಹೌದು. ನೀವು ಈ ಮನೂದೆ ಇಷ್ಟು ಹೇಚಿಗೆ ಸಿಕ್ಕಹಾಕಿಕೊಳ್ಳುತ್ತದೆ ಎಂದು ಬಹುಶಃ.....

† Sri H. SIDDAVEERAPPA.—I rise to a point of Order. Having gone through the financial statement that has been given in this Bill I find it is stated as :—

" The expenditure on the staff for resettlement will depend the number of zones taken up for revision settlement. It is anticipated that the cost on this account may not exceed Rs. 8 lakhs ".

"As regards writing notices, printing of forms, etc., the expenditure is estimated to be about Rs. 1 lakh".

It will be seen that under Art. 199 of the Constitution of India the Money Bill is :—

"For the purposes of this Chapter, a Bill shall be deemed to be a money Bill if it contains only provisions dealing with all or any of the following matters, namely.—

(a) the imposition, abolition, remission, alteration or regulation of any tax;"

If this Bill is to be brought here the assent of the Governor is absolutely necessary because it is a money Bill. No assent of the Governor is received because it is not mentioned here that the assent is received. Presumably because it is brought here on a rush basis it is not there. This is published on 29th March and it has been brought here today. Therefore there is constitutional inhibition for the introduction or consideration of this Bill. This is a money Bill because it involves financial matters and it has not received the assent of the Governor. Therefore, it will have to be sent back for re-introducing after receiving the assent of the Governor.

Mr. CHAIRMAN.—The recommendation of the Governor is already received. So, there is no point.

Sri H. SIDDAVEERAPPA.—It will have to be enclosed. We do not know whether it is received. Moreover we cannot be taken by surprise like this. According to the Constitution the assent of the Governor is *sine qua non* or condition precedent before a financial Bill is taken into consideration. How are we to know that the Governor has assented ? They have not mentioned it here.

Mr. CHAIRMAN.—The assent is given on 31-3-1969.

Sri H. M. CHANNABASAPPA.—It may be that the Governor has given assent. But before introduction of the Bill, this House has to be informed in writing that consent of the Governor is obtained. It must be before the Bill is introduced. At the time of introduction that permission which the Governor has to give, is lacking and therefore that is not in order. It may be that they might have obtained the assent of the Governor later. We are not aware of it. At the time, the Bill was introduced in this House and at the time this House was seized of the Bill, this Bill was not in order and any further continuance of discussion of such a Bill is not in order. It is possible the Government may bring a Bill tomorrow with the permission of the Governor. But now as things stand, the Bill that is before us, is not in order and any further continuance of disscussion on such a bill would not be in order. Therefore the Chair will apply its mind before giving a decision.

Sri K. PUTTASWAMY. –Sir, it is rather surprising that such an objection is raised by Members who are very experienced in Legislative matters. Rule 67 is very clear on the point. It says :

> " If the Bill is a Bill which under the Constitution cannot be introduced without the previous sanction or recommendation of the Governor, the member shall annex to the notice such sanction or recommendation conveyed through a Minister, and the notice shall not be valid until the requirements is complied with."

There seems to be a misapprehension that the recommendation of the Governor or the previous sanction of the Governor should be annexed to the Bill. Far from it. Further it goes on to say that even where a notice is given, the notice would not be valid " until this requirement is complied with." I cannot make a motion for introduction until this requirement is complied with. In all fairness, I would like to submit that such objections are taken at the time of introduction.

There is what is called a belated point of order. If the point of order is belated, it is summarily ruled out. My hon. friend tried to sharpen his weapon and then come in. If only I am given some time. I will quote umpteen authorities to show that points of orders should always be raised at the earliest opportunity and in this case the earliest point of time was on 31-3-1969.

Sri H. SIDDAVEERAPPA.—The rule is very clear. It says that a point of order can be raised at any time.

Sri K. PUTTASWAMY.—Any way, even granting that the point of order raised is in order, I beg to submit that there is no force in the point of order because Rule 67 does not require the recommendation of the Governor to be annexed to the Bill. It only requires that such a recommendation or sanction should be given along with the notice.

† Sri K. H. PATIL.—If my hon. friend concurs that the sanction or recommendation of the Governor should be annexed to the notice served on us, it means that the Bill cannot be introduced until that notice with the sanction or recommendation of the Governor is served on all the Members. We were taken by surprise when the Speaker made an announcement about the Bill's introduction because in the notices sent to us such sanction or recommendation had not been annexed. Such sanction or recommendation of the Governor should have been straight away conveyed to us. In view of the fact that it is not annexed to the notices and since there is that lacuna and illegality, my friend Sri K. Puttaswamy should kindly concede that the House after spending so much time over it, the validity of the Bill should not be questioned in the High Court. It is better that he corrects the irregularity in procedure and takes another opportunity to bring in the Bill. Let him follow the prescribed procedure. We have to learn a lot from the Minister for Parliamentary Affairs. Let him first set right the illegality pointed out

by us. Let him advise the Revenue Minister to withdraw this Bill, which has been ably pointed out by Sri Siddaveerappa to have been illegally introduced, and seek some more time to move the Bill again.

Sri H. SIDDAVEERAPPA.—One word more, Sir. As mentioned by the Hon. Minister for Parliamentary Affairs, I once again refer to the same Rule 67 and along with it, in continuation, Rule 68 also. What is clearly stated, cannot be interfered with. By inference, nothing is done in the Legislature. What the Rule prescribed and what the Constitution provides should be complied with. I must sympathise with the Hon. Minister. He introduced the Bill in a hurry ; he also wants it to be passed in a hurry. But it is our duty to point out where the mote lies in his eye. If necessary, he should get the eye operated and have the speck removed. If he still persists to have the disease and wants to become blind, I cannot help it.

I have already shown how the Bill cannot be introduced without the previous sanction or recommendation of the Governor. This is a Money Bill under Art. 199 and it cannot be introduced without the previous sanction or recommendation of the Governor. So, " the member shall annex to the notice such sanction or recommendation..... " and the notice shall not be valid until this requirement is complied with. When he gave this notice, he should have very clearly stated that the Bill has received the previous recommendation of the Governor. After some time, it is not a revocation that is needed. What is needed is, the strict letter of the law should be complied with. We have always to work strictly within four corners of the Rules and the Constitution.

Mr. CHAIRMAN.—Kindly read the rules. Is it previous sanction or recommendation of the Governor ?

Sri H. SIDDAVEERAPPA.—It is stated in the rule : " sanction or recommendation." Wherever recommendation is necessary, recommendation ; wherever sanction is necessary sanction. The rule say : " the member shall annex to the notice such sanction or recommendation conveyed through a Minister, and the notice shall not be valid until this requirement is compiled with." Here the Minister gives notice. He has not conveyed the fact of having received the recommendation of the Governor, as required under the rule. Hence the notice is not valid. Therefore, the introduction itself is inhibited *ab initio*.

Secondly, Rule 68 says :

" A Bill involving expenditure shall be accompanied by a finanancial memorandum which shall invite particular attention to the clauses involving expenditure and shall also give an estimate of the recurring and non-recurring expenditure involved in case the Bill is passed into law. "

(SRI H. SIDDAVEERAPPA)

I want the word " shall " in the clause to be marked. I want the plain reading of the words in the Clause. What is called the " Financial Memorandum " is given at the end of the Bill. It simply mention :

> " The expenditure on the staff for resettlement will depend on the number of zones taken up for revision settlement. "

It is not only resettlement that is involved in the Bill. They will have to issue a notice that such and such a land has been assessed as dry, wet, etc. There are so many acres of land. Throughout the State, millions of notices have to be given. What is the expendiiture involved ? With regard to the survey settlement, not only they have to give Financial Memorandum for the non-recurring expenditure but also for the recurring expenditure : that they have not given. The Government have simply mentioned some imaginative figures. Who worked them out ? Is there any tabulation ? On what basis have they worked out the cost on the staff, etc.? The Minister has stated that the expenditure on the staff for resettlement is anticipated to cost about Rs. 8 lakhs. Is it anybody's guess ? Is it like going to the Moon ? This is such a shabby Bill. I have not seen in my experience, a shabbier Bill than this. Is it not possible for them to understand what we say ? I do not want our friends on the other side to commit hundreds of mistakes like Jarasandha. In spite of our telling them, " Look here, do not commit this mistake," they want to commit mistakes.

[MR. SPEAKER in the Chair]

I am glad the Hon. Speaker has come. Sir, if you permit me, by way of recapitulation I would like to mention all that I mentioned heretofore in your absence. I have raised a point of order, namely, that this Bill cannot be taken into consideration for the reason that it infringes the Constitutional provisions under Articles 199 and 207. The definition of Money Bill has been given in article 199. In our opinion this is a Money Bill because it involves outgoing from the Consolidated Fund of Mysore of a certain amount 'X'. It also means imposition, abolition, remission, alteration or regulation of any tax. Surely this is a measure which will come within the purview of article 199 (1) (*a*). There cannot be any dispute about it. In article 207 it is very clearly stated :

> "A Bill or amendment making provision for any of the matters specified in sub-clauses (*a*) to (f) of clause (1) of article 199 shall not be introduced or moved except on the recommendation of the Governor.....'

Let us see what the Hon'ble Revenue Minister has done. He introduced this Bill on 31st if I remember correctly. In the Financial Memorandum he wants a lump sum of Rs. 8 lakhs for some resettlement work and in regard to writing notices, printing of forms, etc., the

expenditure is estimated to be about Rs. 1 lakhs. Who has said that where is the estimate, how many forms and notices do you want, what, does it cost, how you are arrived at that figure–all that is mere guess work what they call gas. So far as rule 67 is concerned it says that that without the previous sanction of the Governor it cannot be introduced. Now they say that the Governor has given the sanction. The Chairman mentioned about it but we do not know ; we cannot be taken by surprise. Nothing is mentioned in the bill ; we do not know when and how it was received. I am not in any way casting any aspersion on the Governor ; far from it. My quarrel is with the Government. How is it that you have not mentioned it in the bill ? Is that not an inherent lacuna which should keep anybody guessing that this is not according to rules ? The most important rule is rule 68 and it says :

> "A Bill involving expenditure shall be accompanied by a financial memorandum which shall invite particular attention to the clauses involving expenditure and shall also give an estimate of the recurring and non-recurring expenditure involved in case the Bill is passed into law."

I would like to know from the Revenue Minister whether there is no recurring expenditure involved in this, whether there is no non-recurring expenditure involved in this. If there is recurring expenditure, how it that you have not calculated and you have not mentioned it ? This is an inherent defect. After all, I know my friend Sri Koujalgi and his mind is with me but his decision is somewhere because as lawyers we can agree. I know that even Sri Puttaswamy in his heart of hearts agrees with me as a lawyer. Therefore, I say that the heavens won't fall on us. Let them bring a pucca bill curing all these defects.

Sir, you are the custodian of the rights and privileges not only of this but also of the entire State, but also of the teeming millions in the State who are going to be affected By this Bill. I therefore humbly request you to ponder over it, consider my humble submission and rule out that this Bill cannot be continued at this stage as it is and they may, if they so want, bring another one tomorrow.

Sri H. M. CHANNABASAPPA.—Sir, in addition to what has been stated by my friend Sri Siddaveerappa, I wish to draw the attention of the Speaker to sub-rule (2) of rule 68 which says that clauses or provisions in Bills involving expenditure from public funds shall be printed in thick type or in italics. But I find that all the clauses including the short title have been printed in italics. So, it is not possible to find out which of the clauses are printed in italics and which are not. That is also one of the essential features, which has to be stuck to by the Government in introducing a Bill. That has not been done. Therefore, it is a serious lacuna.

Sri D. M. SIDDAIAH.—Please look at the proviso.

Sri H. M. CHANNABASAPPA .—Even that has not been complied with. The Speaker has been very very particular that the rules of procedure are sacred and must be complied with strictly. Now, here is a test case and I hope the Hon'ble Speaker will see that the rule is not violated.

Sri H. N. NANJE GOWDA.—Sir, I partially support the point of order raised by the Hon'ble Member Sri Siddaveerappa. I disagree that the Governor's recommendation is necessary before the introduction of the Bill. Apart from these rules, there are precedents and conventiond under which at the time of introduce of a Bill it need not be accompanies by the Governor's recommendation ; but it should be there before the motion for consideration is made on the floor of the House. The recommendation of the Governor has not been brought to the notice of the House today and so it is a lapse. Therefore, this Bill cannot be considered and they are bound to withdraw the bill.

5-30 P. M.

Sri K. H. PATIL.—A Financial Memorandum is also to be submitted to the Governor. That has not been done. Without knowing the financial commitment, it is not possible to consider this and the Governor also cannot recommend the Bill to this House, for consideration.

ಇದರಿಂದ ಸರ್ಕಾರಕ್ಕೆ 8 ಲಕ್ಷ ಉತ್ಪತ್ತಿ ಬರುತ್ತದೆಯೇ , 4 ಲಕ್ಷ ಉತ್ಪತ್ತಿ ಬರುತ್ತದೆಯೇ, ಮತ್ತು ಇದರ ಬಗ್ಗೆ 8 ಲಕ್ಷ ಖರ್ಚಾಗುತ್ತದೋ, 9 ಲಕ್ಷ ಖರ್ಚಾಗುತ್ತದೋ ಅದನ್ನೆರ್ನಾ ರಾಜ ಪ್ರಮುಖರಿಗೆ ಸರ್ಕಾರದವರು ಮಾಹಿತಿ ಕೊಟ್ಟಿಲ್ಲ. ಆ ಮೆಟೀರಿಯಲ್ಸ್‌ನ್ನೆರ್ನಾ ಇವರು ಕೊಟ್ಟಿದ್ದರೆ The Government has failed in its duty to submit the financial memorandum and so now it is the duty cast upon the Speaker to see that such a Bill is not allowed to be placed before the Legislature for consideration.

ಶ್ರೀ ಎಚ್. ಎನ್. ನಂಜೇಗೌಡ.—ಮನೂದೆಯನ್ನು ಮಂಡಿಸುವ ಕಾಲಕ್ಕೇನೂ ರಾಜ ಪ್ರಮುಖರ ಒಪ್ಪಿಗೆ ಬೇಕಾಗಿಲ್ಲ. ಕಾರಣ ಆ ಮನೂದೆಯನ್ನು ಕನ'ಸಿಡರೇಷನ್ ಸ್ಟೇಜಿಗೆ ತರತಕ್ಕ ವೇಳೆಗೆ ಅವರಿಂದ ಪರ್ಮಿಷನ್ ಪಡೆಯಬಹುದು ಎಂದು ಅವರು ಆ ಮನೂದೆಯನ್ನು ಹಾಗೆ ಸಭೆಯಲ್ಲಿ ಇಂಟ್ರಡ್ಯೂಸ್ ಮಾಡಬಹುದು. ಆದರೆ ಮನೂದೆಯನ್ನು ಕನ್‌ಸಿಡರ್ ಮಾಡತಕ್ಕ ವೇಳೆಯಲ್ಲಿ ಪರ್ಮಿಷನ್ ಪಡೆಯದೆ ಬಿಲ್ಲನ್ನು ನಾವು ಚರ್ಚೆ ಮಾಡುವಂತಿಲ್ಲ. ಅವರಿಂದ ಪರ್ಮಿಷನ್ ಪಡೆಯಲೇ ಬೇಕು.

†ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ನಾನು ಅತಿರಥ ಮಹಾರಥರೊಡನೆ ಹೋರಾಡಬೇಕಾಗಿ ಬಂದಿದೆ. ಅನೇಕ ಮಾನ್ಯ ಸದಸ್ಯರು ಅನೇಕ ರೋಪದೋಷಗಳನ್ನು ಎತ್ತಿದ್ದಾರೆ. ನಾನು ಆಗಲೇ ಅರಿಕೆ ಮಾಡಿಕೊಂಡ ಹಾಗೆ ಈ ಸಭೆಯ ಗಮನಕ್ಕೆ ಮಾನ್ಯ ಸಭಾಧ್ಯಕ್ಷರೇ 31-3-1969ನೇ ತಾರೀಖು ಈ ಮನೂದೆಯ ಬಗ್ಗೆ ಗವರ್ನರ್ ಅವರ ಶಿಫಾರ್ಸು ಕೂಡ ಅಧ್ಯಕ್ಷರ ಕಡೆಗೆ ಬಂದಿದೆ ಎಂಬುದಾಗಿ ಹೇಳಿದ್ದಾರೆ. ಆದರೆ ಆ ನೋಟೀಸಿನ ಜೊತೆಯಲ್ಲೇ ಗವರ್ನರ್ ಅವರ ಶಿಫಾರ್ಸನ್ನೂ ಕೂಡ ಏಕೆ ಅಂಟಿಸಿ ಕಳುಹಿಸಲಿಲ್ಲಾ ಎಂಬ ಒಂದು ಆಪಾದನೆ ಮಾಡುತ್ತಿದ್ದಾರೆ, ಬಹುಶಃ ಇದು ಅಧ್ಯಕ್ಷರ ಆಫೀಸಿನ ಬಗ್ಗೆ ಒಂದು ಆಕ್ಷೇಪಣೆ ಆಗಬಹುದೇನೊ.

ಅದರ ಜೊತೆಗೆ ಶ್ರೀಮಾನ್ ಸಿದ್ದವೀರಪ್ಪನವರು ಇನ್ನೂ ಒಂದು ಸಣ್ಣ ಕಂಡಿಯನ್ನು ಕಂಡು ಹಿಡಿದಿರುವುದಾಗಿ ಹೇಳಿದ್ದಾರೆ. ನೋಟೀಸಿನ ಜೊತೆಗೆ ಗವರ್ನರ್ ಅವರ ಶಿಫಾರ್ಸನ್ನು ಇಟ್ಟು ಕಳುಹಿಸಬೇಕಾಗಿತ್ತು ಎಂಬುದಾಗಿ ರೂರ್ 16 ನ್ನು ಎತ್ತಿ ಹಿಡಿದಿದ್ದಾರೆ. ಆದರೆ ಯಾರು ಯಾರಿಗೆ

ನೋಟೀಸನ್ನು ಕಳುಹಿಸುತ್ತಾರೆಂಬ ವಿಷಯದಲ್ಲಿ ಮಾನ್ಯ ಸದಸ್ಯರಿಗೆ ಸ್ವಲ್ಪ ಜಿಜ್ಞಾಸೆ ಮೂಡಿದಂತೆ ಕಾಣುತ್ತಿದೆ. ಸರ್ಕಾರದವರು ಸದಸ್ಯರಿಗೆ ನೋಟೀಸನ್ನು ಕೊಡುವುದಿಲ್ಲ. ಅಧ್ಯಕ್ಷರ ಕಾರ್ಯದರ್ಶಿಯವರು ಸದಸ್ಯರಿಗೆ ಆ ನೋಟೀಸನ್ನು ಕಳುಹಿಸತಕ್ಕವರು. ಅವರು ಆ ಶಿಫಾರ್ಸನ್ನೂ ಜೊತೆಗಿಟ್ಟು ಅಧ್ಯಕ್ಷರ ತೃಪ್ತಿಗಾಗಿ ಅದನ್ನು ಸದಸ್ಯರಿಗೆ ಕಳುಹಿಸಬೇಕು. ಆಂದಾಗ ಮಾನ್ಯ ಅಧ್ಯಕ್ಷರ ಆಫೀಸಿನಲ್ಲಿ ರತಕ್ಕವರು ಆ ಕಾರ್ಯವನ್ನು ಮಾಡಲಿಲ್ಲ ಏಕೆ ಎಂದು ಮಾನ್ಯ ಸದಸ್ಯರು ಒಂದು ಆಕ್ಷೇಪಣೆಯನ್ನು ಎತ್ತಬಹುದು. ಆದರೆ ಅದನ್ನು ಮಾಡಬೇಕಾದುದು ಅಧ್ಯಕ್ಷರ ತೃಪ್ತಿಗಾಗಿ, ಹಾಗೆ ಆ ನೋಟೀಸನ್ನು ಕೊಡತಕ್ಕದು ತಾವು ಅನುಸರಿಸಬೇಕಾದ ಎಲ್ಲ ವಿಧಾಯಕಗಳನ್ನೂ ಅನುಸರಿಸಿರಾಗಿದೆ ಎಂಬುದನ್ನು ಅಧ್ಯಕ್ಷರು ಮನಂಗಡ ನಂತರ ಅವರು ಆ ನೋಟೀಸನ್ನು ಕೊಡಬಹುದೆಂದು ಸೂಚನೆ ಮಾಡುತ್ತಾರೆ. ಅದರಂತೆ ಅವರ ಕಛೇರಿಯಿಂದ ನೋಟೀಸನ್ನು ಕೊಡಲಾಗುತ್ತದೆ. ಹಾಗೂ ಒಂದುವೇಳೆ ಯಾರಾದರೂ ಮಾನ್ಯ ಸದಸ್ಯರಿಗೆ ಯಾರಿಗಾದರೂ ಈ ಶಿಫಾರ್ಸಿನ ಬಗ್ಗೆ ಅನುಮಾನವಿದ್ದಿದ್ದರೆ ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ಇಟ್ಟಾಗ ಅಂದರೆ ತಾರೀಖು 31-3-1969 ರಲ್ಲಿ ಮಾನ್ಯ ಸದಸ್ಯರು ಈ ಆಕ್ಷೇಪಣೆಯನ್ನು ಆಗಲೇ ಎತ್ತಬೇಕಾಗಿತ್ತು. ಆದರೆ ಆ ದಿವಸ ಯಾರೂ ಇದನ್ನು ಎತ್ತಲಿಲ್ಲ. ಆದ್ದರಿಂದ ಈಗ ಮಾನ್ಯ ಸದಸ್ಯರು ಎತ್ತಿರತಕ್ಕ ಕ್ರಿಯಾಲೋಪಗಳಲ್ಲಿ ಎನೂ ಸತ್ವವಿಲ್ಲ. ಈ ತಿದ್ದುಪಡಿಯ ಬಗ್ಗೆ ಎಲ್ಲಾ ಕಾನೂನುಗಳನ್ನೂ ರಾಜ್ಯಾಂಗವನ್ನೂ ಇನ್ನಿತರೇ ವಿಧಿನಿಯಮಾವಳಿಗಳನ್ನೆಲ್ಲಾ ಪರಿಶೀಲಿಸಿ ಇದನ್ನು ತರಲಾಗಿದೆ. ಇದು ಸಕ್ರಮವಾಗಿದೆ ಇನ್ನು ಶ್ರೀಮಾನ್ ಚನ್ನಬಸಪ್ಪನವರು ಇದನ್ನು ಒತ್ತಕ್ಷರದಲ್ಲಿ ಮುದ್ರಿಸಬೇಕಾಗಿತ್ತೆಂದು ಹೇಳುತ್ತಿದ್ದಾರೆ. ಹಾಗೆ ರೂಲಿನಲ್ಲಿ ಹೇಳಿದೆ ಎಂದು ಒಂದು ವಾದವನ್ನು ಸಹ ಮಂಡಿಸಿದ್ದಾರೆ. ಇದನ್ನಾಗಲೇ ಅಧ್ಯಕ್ಷರು ಮಾನ್ಯಸಭೆಯ ಗಮನಕ್ಕೆ ತಂದಿದ್ದಾರೆ. ಮುಖ್ಯವಾಗಿ ಈ ಮಸೂದೆಯಲ್ಲಿರತಕ್ಕ ತಿದ್ದುಪಡಿಗಳು ಎರಡು ಮಾತ್ರ. ಅದರಲ್ಲಿ ಒಂದು ಮಾತ್ರ ಹಣಕಾಸಿಗೆ ಸಂಬಂಧಪಟ್ಟಿದ್ದು. ಈಗ ಮಾನ್ಯ ಸದಸ್ಯರುಗಳು ಎತ್ತಿರುವ ಆಕ್ಷೇಪಣೆ ಸಾಧುವಾದದ್ದು ಎಂದು ಇಟ್ಟುಕೊಂಡರೂ ಅದಕ್ಕೆ ಆಗಲೇ ಅಧ್ಯಕ್ಷರು ಸಮಾಧಾನ ಹೇಳಿದ್ದಾರೆ. ಒಂದಕ್ಕೆ 8 ಲಕ್ಷ ರೂಪಾಯಿ ಇನ್ನೊಂದಕ್ಕೆ 16 ಲಕ್ಷ ರೂಪಾಯಿಗಳು. ಆದರೆ ಮಾನ್ಯ ಸದಸ್ಯರು ಇದರ ಬಗ್ಗೆ ವರ್ಷಂಪ್ರತಿ ಖರ್ಚಿಲ್ಲವೋ ಎಂದು ಕೇಳಿದರೆ ನಾನು ಇಲ್ಲ ಎಂದು ಹೇಳುತ್ತೇನೆ. ಹಿಂದೆ ಸರ್ಕಾರದವರು ರೀಸೆಟಲ್‌ಮೆಂಟಿನ ಬಗ್ಗೆ ಆರ್ಡರನ್ನು ಹೊರಡಿಸಿದಾಗ ಇದರ ಪೆಚ್ಯವನ್ನು 8 ಲಕ್ಷ ರೂಪಾಯಿಗಳೆಂದು ಅಂಕಿ ಅಂಶಗಳನ್ನು ಒದಗಿಸಿದ್ದಾಗಿದೆ. ಅದರೆ ಅದರ ಬಗ್ಗೆ ಅಷ್ಟು ಕರಾರುವಾಕ್ಕಾಗಿ ಹೇಳುವುದಕ್ಕೆ ಆಗದಿದ್ದರೂ ಅಷ್ಟು ಖರ್ಚಾಗುತ್ತದೆಂಬುವುದನ್ನು ತಿಳಿಸಲಾಗಿದೆ. ಆ ದಿವಸ ಸರ್ಕಾರದವರು ಅಂದರೆ ಮಾನ್ಯ ರೆವಿನ್ಯೂ ಮಂತ್ರಿಗಳು ಈ ನರ್ವೆ ಅಂಡ್ ಸೆಟರ್‌ಮೆಂಟ್ ಕೆಲಸವನ್ನು ಯಾವ ಜೋನಿನಲ್ಲಿ ಮಾಡಬೇಕು ಯಾವ ಜೋನಿನಲ್ಲಿ ಬೇಕಾಗಿಲ್ಲ ಎಂಬುವುದನ್ನೂ ಕೂಡ ತಿಳಿಸಿದ್ದಾರೆ. ಅದ್ದರಿಂದ ಆ 122ನೆಯ ಸೆಕ್ಷನ್ (ಎ) ನಲ್ಲೋ ಅಥವಾ (ಬಿ) ನಲ್ಲೋ ಒಂದು ನೋಟೀಸನ್ನು ಕೊಡಬೇಕು ಎಂದು ಹೇಳಿದೆ. ಅದೇ ಸೆಕ್ಷನ್ 122 (ಬಿ) ಪ್ರಕಾರ ನಾವು ಇದರ ಬಗ್ಗೆ ಎಷ್ಟು ದುಡ್ಡನ್ನು ಕೊಡಬೇಕು. ನಮ್ಮಲ್ಲಿ ಇದಕ್ಕೆ ಸಾಕಷ್ಟು ಸಿಬ್ಬಂದಿಯಿಲ್ಲವೇ ? ಹೊಸ ಸಿಬ್ಬಂದಿಯನ್ನೇನಾದರೂ ನೇಮಕ ಮಾಡಿಕೊಳ್ಳಬೇಕಾಗುತ್ತದೆಯೇ ಎಂಬುವುದನ್ನು ಆಲೋಚನೆ ಮಾಡಿದಾಗ ನಾವು ಅಷ್ಟು ಹೆಚ್ಚಿನ ಹೊಸ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕಾದ್ದಿಲ್ಲ ಎಂದು ಕಂಡು ಬಂದಿದೆ. ಈಗಾಗಲೇ ನಮಗೆ ಹಳ್ಳಿಯಿಂದ ಹಿಡಿದು ಅಠಾರಾ ಕಛೇರಿಯತನಕ ಇದಕ್ಕೆ ಸಾಕಷ್ಟು ಸಿಬ್ಬಂದಿ ಇದೆ. ಆದರೆ ಇದಕ್ಕೆ ಇನ್ನೆಷ್ಟು ಹೊಸದಾಗಿ ಸಿಬ್ಬಂದಿ ಬೇಕು ಎನ್ನುವುದರ ಬಗ್ಗೆ 9 ಲಕ್ಷ ಬೇಕೆಂದು ಹೇಳಿದ್ದಾರೆ. ಆದ್ದರಿಂದ ಇದರಲ್ಲಿ ಯಾವ ದೋಷವೂ ಇಲ್ಲ. ಅವರು ಎತ್ತಿರತಕ್ಕ ಕ್ರಿಯಾಲೋಪಗಳಲ್ಲಿ ತಿರುಳಿಲ್ಲ. ಅವು ಕ್ರಿಯಲೋಪದ ಮಟ್ಟಕ್ಕೆ ಬರಲಾರವು.

Mr. SPEAKER.—I have got one doubt. Mr. Siddaveerappa will kindly clarify. There are two provisions in this Bill. One is provision regarding clause 4 adding section 114A and the other is provision regarding clause 5 adding sections 122A and 122B. Does the hon. Member consider sections 122A and 122B as coming under article 199 (1) (a) ?

Sri K. H. RANGANATH.—This point was raised by Sri Channabasappa.

Sri K. H. PATIL.—This has already been considered.

Mr. SPEAKER.—I have called upon Mr. Siddaveerappa to clarify because he has raised the point of order. I would like to know from him whether sections 122A and 122B which provide for notice and appeal can be deemed to be coming within article 199 (1) (a). It provides only for notice. Can it be taken to be financial expenditure within the meaning of Article 199 (1) (a) ?

Sri H. SIDDAVEERAPPA.—Sir, my friend, Sri K. H. Ranganath has studied it much better than me. Therefore, I request you to please permit him to answer.

Sri K. H. RANGANATH.—The Bill does not indicate as to which clause involves the financial commitment. You are well aware that the Divisional Commissioner will be the appellate authority under 122. That is the fresh power that is given under the Land Revenue Act. Therefore, it involves financial expenditure.

Mr. SPEAKER.—But, not on the part of the Government ! I want the hon. member to enlighten me whether section 122 (a) (a) or (b) come within the mischief of Article 199 (1) (a), (b), (c) or (d), because, as I can see, they only provide for notice.

Sri K. H. RANGANATH.—Sir, as I have understood, it involves some expenditure on the part of the Government, because the appellate authority is the Divisional Commissioner. Under the Land Revenue Act of 1964, he was not the appellate authority.

Sri BOLA RAGHURAM SHETTY (Karkal).—Under the Bombay Act, an individual pattedar can have the right of appeal. But, here no such right is given.

Sri M. NAGAPPA.—Sir, I am of the opinion that Section 122 (a) covers financial expenditure definitely. If you read Clause 3, wherein Section 18 is being amended, two new posts have been created, (1) Superintendent for Settlement, and (2) Assistant Superintendent for Settlement. According to the original Act, there were no such posts.

These two new officers are exercising powers under Sections 122A and 122B. The salary of these officers is to be drawn from the Contingency Fund, which affects on the funds of the Government definitely. In this connection, Section 122A (2) may also be looked into, which says :

> "After service of a notice under sub-section (1), the land revenue as specified in such notice shall, subject to any modification made..."

If we read the financial memorandum, the Government itself has accepted that as regards writing notices; printing of forms, etc., the expenditure is estimated to be about Rs. 1 lakh. Here also, they admit

that notices are to be served for which so much amount is to be expended. Therefore, this clause will definitely come under financial matter.

Sri H. N. NANJE GOWDA.—Sir, Article 199 (1) (a) deals with imposition, abolition, remission, alteration of regulation of any tax, Therefore, it is a financial Bill.

Sri K. PUTTASWAMY.—Sir, you were very correct in trying to ascertain whether Sections 122A and 122B come under the mischief of Article 199 (1) (a). For your query, I would like to submit that neither Section 122A nor 122B are hit by Article 199 (1) (a). That is my humb le opinion. But, Article 199 (1) (e) says:

> " the declaring of any expenditure to be expenditure charged on the Consolidated Fund or the State, or the increasing of the amount of any such expenditure "

Section 122A definitely comes under Article 199 (1) (e), but not under 199 (1) (a). We were all the while referring to Article 199. Neither hon. Member Sri Siddaveerappa nor any of us made any reference to the sub-clauses.

Sri H. SIDDAVEERAPPA.—I made a specific reference to Article 199 (1) (a) only.

Sri K. PUTTASWAMY.—Sir, I stand corrected.

Mr. SPEAKER.— Section 122A provides for a notice. Hon. member Sri Nagappa says that these officers are new.

Sri K. PUTTASWAMY.—I shall come to that point. I submit that no expenditure is going to be incurred by the State under Section 122B. Therefore, whether it is a money Bill or any expenditure has been provided, would not arise as far as Section 122B is concerned. Section 122A requires notice to be given to every holder, and for giving notice certain expenditure is going to be incurred and that has been estimated at Rs. 1 lakh. I submit, therefore, that Section 122A amounts to a clause in a money Bill and all the provisions of Article 199 and also the relevant rules under the Rules of Procedure will have to be observed before introducing this Bill.

Then Sir, another point has been raised by the hon. Member Sri Nagappa. He said that under clause 3 of the Bill we are creating two new posts. Sir, the clause reads as follows:

> " In sub-section (1) of section 18 of the principal Act, after the words and quotations 'Superintendent of Land Records', the words and quotations 'Superintendent for Settlement', 'Assistant Superintendent for Settlement' shall be and shall be deemed always to have been inserted."

(SRI K. PUTTASWAMY)

Sir, hon. Member Sri Nagappa seems to feel that these are two new posts and if they were new posts, costs relating to these posts should have been taken into consideration. I submit Sir, that these posts exist in our Department since a long time and as a matter of abundant precaution we have included them. Even without inclusion of these two posts or officers, nothing would have gone wrong. Only as a matter of abundant precaution we have tried to amend section 18 by inserting Superintendent for Settlement and the Assistant Superintendent for Settlement which already exist. These are posts which have been sanctioned since a long time and these officers are continuing to exist from a long time.

† ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ಈ ಮಸೂದೆಯು ಹಣ ವೆಚ್ಚವಾಗುವ ಮಸೂದೆಯಲ್ಲ. ರೀಸರ್ವೆ ಸೆಟ್ಲ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಇದ್ದಂತಹ ಆಫೀಸರುಗಳು ಏನಿದ್ದಾರೆ ಅವರ ಬಗ್ಗೆ ಈಗ ಹೊಸದಾಗಿ ಹಣವನ್ನು ಖರ್ಚು ಮಾಡುವ ಅವಶ್ಯಕತೆ ಇಲ್ಲವೆಂದು ಹೇಳಿದರು. ಈ ಮಸೂದೆಯ 122 (ಎ) ಮತ್ತು 122 (ಬಿ)ನಲ್ಲಿ ಅಪೀರ್ ಮಾಡುವುದಕ್ಕೆ ಪ್ರೊವಿಜನ್ ಮಾಡಿರುವುದರಿಂದ ಲಕ್ಷಾಂತರ ಅರ್ಜಿಗಳು ಅಗ್ರೀವ್ಡ್ ಪಾರ್ಟಿಯಿಂದ ಬರುತ್ತವೆ. ಆ ಅಪ್ಲಿಕೇಷನ್ ಪರಿಶೀಲನೆ ಮಾಡಿ ಅವರಿಗೆ ನೋಟೀಸ್ ಕೊಡಬೇಕಾಗುತ್ತದೆ. ಆ ಬಗ್ಗೆ ಹಿಯರಿಂಗ್ ಮಾಡಬೇಕಾಗುತ್ತದೆ. ಜಡ್ಜ್‌ಮೆಂಟ್ ಕೊಡಬೇಕಾಗುತ್ತದೆ. ಇದಕ್ಕೆ ಅಡೀಷನರ್ ಕ್ಲಾರ್ಕ್ಸ್ ಬೇಕಾಗುತ್ತದೆ. ಇದನ್ನೆಲ್ಲಾ ಈ ಮಸೂದೆಯಲ್ಲಿ ವಿಚಾರ ಮಾಡಿಲ್ಲ. ಇದು ಲೋಪದೋಷಗಳಿಂದ ಕೂಡಿದೆ. ಇದರಿಂದ ಇನ್ ಎಫಿಷಿಯಂಟ್ ಅಡ್ಮಿನಿಸ್ಟ್ರೇಷನ್ ಉಂಟಾಗುತ್ತದೆ. ಈ ಮಸೂದೆಯ 122(ಬಿ) ಪ್ರಕಾರ ಸಾಕಷ್ಟು ಎಕ್ಸ್‌ಪೆಂಡಿಚರ್ ಇದೆ. ಇದರಿಂದ ಅಡೀಷನರ್ ಎಕ್ಸ್‌ಪೆಂಡಿಚರ್ ಆಗುತ್ತದೆ. ಇದರಲ್ಲಿ ಕೆಲವಾರು ಲೋಪದೋಷಗಳು ಇವೆ. ಸ್ಪೆಸಿಫಿಕ್ ಆಗಿ 122 (ಎ) ಮತ್ತು 122(ಬಿ)ಯನ್ನು ವಿಚಾರ ಮಾಡಿದಹಾಗೆ ಕಾಣುವುದಿಲ್ಲ. ಅದನ್ನು ಪುನಃ ಕನ್‌ಸಿಡರ್ ಮಾಡಬೇಕು. ಈ ಮಸೂದೆಯಿಂದ ಆದಾಯ ಎಷ್ಟು ಬರುತ್ತದೆ, ಖರ್ಚು ಎಷ್ಟು ಬರುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಕೊಟ್ಟಿಲ್ಲ. ಒಟ್ಟಿನಲ್ಲಿ ಇದರ ಬಗ್ಗೆ ಬರತಕ್ಕಂಥ ಎಕ್ಸ್‌ಪೆಂಡಿಚರ್ ನರಿಯಾಗಿ ಕೊಟ್ಟಿಲ್ಲ. ಇಂಥಾ ಒಂದು ಮಸೂದೆಯನ್ನು, ಇಂಥಾ ಕತ್ತಲೆಯಲ್ಲಿ ಈ ಸಭೆಯಲ್ಲಿಟ್ಟು ಈ ಸಭೆಯ ಒಪ್ಪಿಗೆಯನ್ನು ತೆಗೆದುಕೊಳ್ಳುವುದು ಅಷ್ಟು ಸೂಕ್ತವಾಗಿ ಕಾಣುವುದಿಲ್ಲ. ಇದರಲ್ಲಿ ಅಫಿಷಿಯಲ್ ಲೀಗರ್ ಡಿಫೆಕ್ಟ್ಸ್ ಇರುವುದರಿಂದ ಈ ಬಿಲ್ಲನ್ನು ಜಾರಿಗೆ ತರುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ.

Sri H. SIDDAVEERAPPA.—Sir, now the Hon. Minister said there are already two posts in existence. If my information is correct—subject to correction—the Hon. Minister will kindly consult and tell us—these two posts were created at the time of re-survey settlement. They were temporary posts. As soon as the re-survey settlement was over, we have to do away with these posts. Therefore, let the Hon. Minister kindly ascertain whether these are not two new posts. I am only making a humble submission to the Chair, that any decision you give now to-day is bound to be looked into not only by us but also by future generation. We have heard of the decisions given by persons like Sri Vittalbhai Patel and others. I repeat saying that nothing is lost if they try to regularise all these things and try to bring another Bill und they may do it even by suspending some of the rules, if they are so anxious. I appeal to the Hon. Chair to apply its mind and give a considered ruling or decision on this.

Mr. SPEAKER.—Whether or any of the provisions of the Bill including sections 122A and 122B come within the meaning of article

199 (1) (a) is a question which I myself raised. With respect to that it is not necessary to give my ruling. It is also not necessary to decide whether these provisions relate to money matters within the meaning of article 199 (1) (a). Now the question is what exactly is the meaning of article 287 read with rule 67. Hon. Members may please note that Rule 67 reads thus :

> "67. If the Bill is a Bill which under the Constitution cannot be introduced without the previous sanction or recommendation of the Governor, the member shall annex to the notice such sanction or recommendation conveyed through a Minister, and the notice shall not be valid until this requirement is complied with."

The requirement of this rule is while giving notice to the Secretary, they have got to annex such recommendation or sanction to the notice. If the notice is accompanied with a recommendation when the notice is being given to the Secretary it is sufficient compliance. That is for the sat isfaction of the Speaker. If the information is required by any of the hon. Members it may also be communicated by the Speaker to the hon. Members. It is the duty of the Speaker as the custodian of this House, to see whether the rules and provisions of the constitution are complied with. Therefore, it is not necessary for the Speaker to say, at every time, that the necessary notice is accompanied by recommendation or sanction of the Governor and such annexation need not be brought to the notice of the hon. Members, every time, as a matter of course. If the hon. Members had taken objection earlier, it could have been brought to their notice when the Bill was introduced on 31st March 1969. They had sent to our office along with the Bill, an order passed by the Governor which was dated 31st March 1969, on the very day.

The order reads thus :

> "In pursuance of Clauses (1) and (3) of Article 207 of the Constitution, I, G. S. Pathak, Governor of Mysore, do hereby recommend that the Mysore Land Revenue (Amendment) 1969 be introduced and considered by the Mysore Assembly. It is dated 31st March 1969."

I therefore believe it is complete.

6-00 P.M.

SRI H. SIDDAVEERAPPA.—The order paper was sent to us on 30th stating that this Bill will be brought on 31st March. We received it on 30th evening. According to this the Governor gave his assent on the 31st. So far as this is concerned, I would like you to kindly get it examined. I remember this Land Revenue Bill was published on 30th.

Mr. SPEAKER.—I got it confirmed. I definitely remember on 31st an additional agenda was given and this was not included in the list of business issued on 30th.

Sri AZEEZ SAIT.—I rise to a point of order. Hon. Members are just moving about when the Speaker was standing.

Mr. SPEAKER.—I am quite glad that he is so particular about the observance of the rules. I did not see what was happening on the other side. So, there is nothing wrong as I said in the beginning, since His Excellency the Governor has given his recommendation under clauses (1) and (3) of article 207 of the Constitution.

Sri M. NAGAPPA.—Before the matter is concluded, the Hon. Speaker has brought to the notice of this House that His Excellency the Governor has given permission to introduce his Bill on the floor of this House on 31st March 1969. So far as the question of introduction of a Bill is concerned if you read Rule 71 and Rule 64, they are very clear what is meant by introduction. First of all let us read Rule 64. The Rule 64 says:

Rule 64:

> "The Speaker may, on request being made to him, the order the publication of any Bill (together with the statement of objects and Reasons, the memorandum regarding delegation of legislative power and the financial memorandum accompanying it) in the Gazette, although no motion has been made for leave to introduce the Bill. In that case, it shall not be necessary to move for leave to introduce the Bill, and, if the Bill is afterwards introduced, it shall not be necessary to publish it again."

Therefore, once the Bill is published, Rule 71 would not come in operation. Sooner the Bill is published under Rule 64, it means that it has been introduced in the House. The Hon. Speaker deemed to be the custodian of the House. He is supposed to know all the formalities are complied with or not. The permission was given on 31st March 1969. By that time, the Bill was published as per rule 64. It was to be taken as introduced no sooner it has been published in the official gazette. This is a formal introduction that was made on 31st March 1969. But the introduction has been made as per Rule 64. It is very clear in that case that it is not necessary to move for leave for introduction of the Bill. Therefore, His Excellency the Governor would have permitted to introduce the Bill before the Speaker ordered to publish it in the official Gazette. He should have given permission prior to the publication in the Gazette.

Mr. SPEAKER.—The hon. Member Sri Nagappa says Rule 67 read with Rule 64 requires that even on the date of publication in the gazette, the Governor should have given his sanction or recommendation.

But Rule 64 deals with publication. Rule 67 is quite independent of Rule 64 and it specifically provides for the sanction and recommendation of the Governor at the time of introduction and not earlier than that. Rule 64 does not require any such recommendation, or previous sanction as provided for in Rule 67. I cannot therefore accept the arguments of the Hon'ble member. As I said since the Governor has given his recommendation both under clauses 1 and 3 of Art. 207, it is not necessary to decide whether all the clauses come within the meaning of Art. 199 (1). The point is very clear and there is nothing which is irregular.

With respect to financial memorandum the Hon. Minister has stated that the exact figure is not possible to be given because no new staff is being appointed. I have, therefore no reason to accept the view that new offices are being created. What offices have to be created depends upon the volume of work. Under these circumstances I hold that the provisions of Rule 68 are complied with.

With respect to the printing of the clauses involving expenditure, Rule 68 (2) says that such provisions shall be printed in thick type or in italics : But there is also a proviso which says :

> " Provided that where a clause in a Bill involing expenditure is not printed in thick type or in italics, the Speaker may permit the member incharge of the Bill to bring such clauses to the notice of the Assembly. "

It was quite open to the hon. Members to take this objection on 31st March 69. But, they have not done so. I can say they have connived at it. They cannot therefore, take that objection now. I can only request the Hon'ble Minister in charge of the Bill to act in terms of he proviso which I just now read and bring such clauses to the notice of the Assembly.

Sri K. PUTTASWAMY.—Thay have been already brought to the notice of the hon. Members.

Mr. SPEAKER.—Since the matter was not objected to earlier, I cannot uphold the point of order raised.

Sri H. SIDDAVEERAPPA.—The Chair was pleased to say we have CONNIVED. The word 'CONNIVE' has a different connotation altogether. He could say that we were not alert and we did not raise the objection in time. But we have never connived at the misdeeds of the Government.

Mr. SPEAKER.—I am soory the word CONNIVED is not correct. I can say, the hon. Members have ACQUIESCED.

Sri K. H. PATIL.—What is recurring and what is the non-recurring expenditure ? If that is given, it would help us to make observations. It is our right to know that and if that is also denied, what else have we got here ?

Mr. SPEAKER.—The Hon, Minister will answer that point.

Sri K. PUTTASWAMY.—I have stated categorically, there is no recurring expenditure. There is only a non-recurring expenditure of 9 lakhs.

Sri K. H. PATIL.—Sir, may I make a submission here that I can raise a matter of privilege against the Hon'ble Minister. In the Statement of objects and Reasons, it has been mentioned that there will be some recurring expenditure. The Hon Minister is now saying here that there will be no recurring expenditure.

† ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ನನ್ನ ಭಾಷಣವ ಮಧ್ಯೆ ಒಂದು ಉಪಯುಕ್ತವಾದಂಥ ವಿಷಯದ ಬಗ್ಗೆ ಚರ್ಚೆಯಾಗಿದೆ. ಈ ಚರ್ಚೆಗೆ ಯಾವ ತಂಹದ ಉಪಪಮನದ ಹೇಳಿಕೆಯನ್ನು ಸರ್ಕಾರದವರು ತಮ್ಮ ಮೂಲಕ ಕೊಡುತ್ತಾರೆ ಎಂಬುದು ನನಗೆ ಗೊತ್ತಿತ್ತು. ಈಗ ನನ್ನ ಮಾತನ್ನು ಮುಂದುವರಿಸುತ್ತೇನೆ. ಈಗ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದರು, 8 ಮತ್ತು 1 ಒಟ್ಟು 9 ಕೋಟಿ ರೂಪಾಯಿಗಳು ನಾನ್ ರೆಕರಿಂಗ್ ಎಕ್ಸ್‌ಪೆಂಡೀಚರ್ ಬರುತ್ತದೆ ಎಂದು ಅದು ತಪ್ಪು. ಅದನ್ನು ನಾನು ಪ್ರಭಟಿಸುತ್ತೇನೆ. ಇದು ಒಂದು ತೊಡಕಿನ ತಿದ್ದುಪಡಿಯಾಗಿದೆ. ಆದ್ದರಿಂದ ನಾನು ಮಾತನಾಡುವುದು ಬಹಳ ಇದೆ. ಈಗ ಈ ತಿದ್ದುಪಡಿಯಲ್ಲಿ ಹೇಳಿರುವಂತಹ ಕೆಲಸಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಮುಗಿಸುವುದಕ್ಕೆ ಕಾಲಾವಧಿಯನ್ನು ಇಟ್ಟಿಲ್ಲ. ಅಲ್ಲದೆ ಈ ಕೆಲವನ್ನು ಸಂಬಂಧಪಟ್ಟ ಅಧಿಕಾರಿಗಳು ಜಾಗ್ರತೆ ಮುಗಿಸುವುದು ಬಹಳ ಕಷ್ಟವಾಗುತ್ತದೆ. ಈಗ ಸರ್ಕಾರದವರು ಈ ಬಗ್ಗೆ ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ನಂಬುವುದಕ್ಕೆ ಆಗದಿರುವಂತಹ ಅಂಕಿಅಂಶಗಳು ಇವೆ. ಇದೇ ವಿಷಯದ ಬಗ್ಗೆ ನನ್ನ ಹತ್ತಿರವೂ ಕೂಡ ಕೆಲವು ಅಂಕಿಅಂಶಗಳು ಇವೆ. ಅದನ್ನೆಲ್ಲಾ ಹೇಳಿ ಕಾಲವನ್ನು ಕಳೆಯುವುದಕ್ಕೆ ಇಷ್ಟಪಡುವುದಿಲ್ಲ. ಆದರೂ ಕೆಲವನ್ನು ಸುಮಾರಾಗಿ ಹೇಳುತ್ತೇನೆ. ಅದರಲ್ಲಿ ತಪ್ಪು ಇದ್ದರೆ ತಿದ್ದಿಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಹಾಲು ಉಳುಮೆಯಲ್ಲಿರತಕ್ಕ ಭೂಮಿ ಎಷ್ಟು, ಈ ಭೂಮಿಯಲ್ಲಿ ಎಷ್ಟು ಭಾಗಕ್ಕೆ ನೀರಾವರಿಯನ್ನು ಒದಗಿಸಿದ್ದಾರೆ, ಒಟ್ಟು ಭೂಮಿಯಲ್ಲಿ ಖುಷ್ಕಿ, ತರಿ, ಬಾಗಾಯಿತು, ಮತ್ತು ಪ್ಲಾನ್‌ಚೇಷನ್ ಎಷ್ಟು ಎಷ್ಟು ಇದೆ, ಈ ಭೂಮಿಗಳಿಂದ ಪಡೆದುಕೊಂಡಿರುವ ನೀರಿನ ತೆರಿಗೆ ಅಭಿವೃದ್ಧಿ ತೆರಿಗೆ, ಭೂಕಂದಾಯ, ಹೊಸದಾಗಿ ವಸೂಲು ಮಾಡುತ್ತಿರುವ ಮೈನ್‌ಚೆನೆನ್ಸ್ ತೆರಿಗೆ ಎಷ್ಟು ಎಷ್ಟು ಬರುತ್ತಿದೆ ಎಂಬುದನ್ನು ನಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ, ಹಣಕಾಸಿನ ಮೇಲೆ ನಮಗೆ ಅಧಿಕಾರ ಇದೆ ಎಂಬುದನ್ನು ಒಪ್ಪುವುದಾದರೆ, ಈ ಬಗ್ಗೆ ಒಂದು ಗುರುತರವಾದ ಹೇಳಿಕೆ ಕೊಡಬೇಕು. ಸ್ಯಾಟಿಸ್‌ಟಿಕಲ್ ಹಾಟ್‌ಲೈನ್ ಆಫ್ ಪೈನೂರು ಎಂಬ ಪುಸ್ತಕದಲ್ಲಿ ಬೇಕಾದ ಅಂಕಿಅಂಶಗಳನ್ನು ಬಿಟ್ಟು ಹೇಜೆಯಲ್ಲ ಸಿಕ್ಕುವ, ಹಿಂದೂಸ್ಥಾನದ ಗೆಜಿಟ್‌ನಲ್ಲಿ ಸಿಕ್ಕುವ ಅಂಕಿಅಂಶಗಳನ್ನು ಮಾತ್ರ ಕೊಟ್ಟಿದ್ದಾರೆ. ನಾನು ಪ್ರತಿವರ್ಷ ಓದುತ್ತಿದ್ದೇನೆ. ಅದೇ ವಿಷಯಗಳೇ ಇವೆ. ವರ್ಷ ವರ್ಷ ಹೊಸ ಹೊಸ ಬಣ್ಣದಲ್ಲಿ ಪ್ರಿಂಟ್ ಮಾಡುತ್ತಿರುವುದು ಒಂದೇ ಬದಲಾವಣೆಯಾಗಿದೆ. ನಾನು ಈ ರೀತಿ ಅಪಾದನೆ ಮಾಡುತ್ತಿದ್ದೇನೆಂದು ಸ್ಯಾಟಿಸ್ಟಿಕಲ್ ಇಲಾಖೆಯವರು ತಪ್ಪು ತಿಳಿದುಕೊಳ್ಳಬಾರದು. ಮುಖ್ಯವಾದ ಅಂಕಿಅಂಶಗಳನ್ನು ಬಿಟ್ಟು ಹೇಜೆಯಲ್ಲಿ ಸಿಕ್ಕುವ ಅಂಕಿಅಂಶಗಳನ್ನು ಕೊಡುತ್ತಿರುವುದು ಸರಿಯಲ್ಲ. ರಾಜಸ್ವ ಮಂತ್ರಿಗಳು ಹೇಳುವ ಹಾಗೆ ಇದು ಅಷ್ಟು ಸಣ್ಣ ವಿಷಯವಲ್ಲ, ನಾನು ಬಹಳ ವಿಷಯವನ್ನು ಇಲ್ಲಿ ಹೇಳಬೇಕಾದುದು ಇದೆ. ತಮ್ಮ ಅಭಿಪ್ರಾಯವನ್ನೂ ನಾನು ತಿಳಿದುಕೊಂಡಿದ್ದೇನೆ. ಈ ತಿದ್ದುಪಡಿ ಮೇಲೆ ಮಾತನಾಡುವಾಗ ಅನೇಕ ಅನಾವಶ್ಯಕವಾದ ವಾದಗಳನ್ನು ಬಿಟ್ಟು ಇದರ ವ್ಯಾಪ್ತಿ ಎಷ್ಟು ಎನ್ನುವುದನ್ನು ಅರ್ಥಮಾಡಿಕೊಂಡು ನಾವು ಇಲ್ಲಿ ಮಾತನಾಡಬೇಕು. ಮೊನ್ನೆ ರಾಜ್ಯ ಸರಕಾರದವರು 1960—61 ರಿಂದ 1964—65ರವರೆಗೆ ರಿವಿಷನ್ ಕೊಡಬೇಕೆಂದು ಹೇಳಿರುವ ವಿಚಾರವನ್ನಾಗಲೀ ರೀಸೆಟಲ್‌ಮೆಂಟು ನರ್ವೆ ಮಾಡಿ 1966 ರಲ್ಲಿ ಹೊಸ ಕಂದಾಯ ತೆರಿಗೆಯನ್ನು ಹೇಗೆ ಹೇರಬೇಕು ಎಂದು ಮಾಡಿರುವ ಎಲ್ಲ ವಿಷಯಗಳನ್ನಾಗಲೀ ಇಲ್ಲಿ ಕೂಲಂಕುಷವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ಬ್ರಿಟೀಷರು ಬಂದ ಕಾಲದಲ್ಲಿ ಆಗ ನರ್ವೇ ಬಂದಾಗ 1857ರಲ್ಲಿ ಹೆಚ್ಚು ಹೆಚ್ಚು ಪ್ರದೇಶಗಳನ್ನು ಆಗಿದ್ದ ರೆವಿನೆಂಟರು ತಮ್ಮ ಅಧೀನಕ್ಕೆ ತೆಗೆದುಕೊಳ್ಳುವುದಕ್ಕಾಗಿ ಇಂತಹ ತೆರಿಗೆ ಆರಂಭವಾಯಿತು. ಅನಂತರವಲ್ಲಿ ನನ್ನ ರಾಜ್ಯದಲ್ಲೂ ಇದೇ ಆರಂಭವಾಯಿತು. ಹೀಗೆ ಬೊಕ್ಕನಕ್ಕೆ ಹಣ ತುಂಬಿಕೊಳ್ಳುವ ಪೂರ್ವದ

ಇತಿಹಾಸ ಇದರಲ್ಲಿತ್ತು. ನಮ್ಮ ಸ್ನೇಹಿತರು ಕೆಲವರು ಹೇಳಿದ ಹಾಗೆ ಇದರಲ್ಲಿರುವ ಶಬ್ದ ಎಂದರೆ ಲ್ಯಾಂಡು ರೆವಿನ್ಯೂ ಎನ್ನುವುದನ್ನೂ ಎಲ್ಲಿಯೂ ಸರಿಯಾಗಿ ಡಿಫೈನು ಮಾಡಿಲ್ಲ. ಇದರ ಬಗ್ಗೆ ಸ್ಪಷ್ಟವಾಗಿ ಉಲ್ಲೇಖ ಮಾಡುವ ಸ್ಥಿತಿಯೂ ಇಲ್ಲ. ಇದನ್ನು ಅವರೂ ತಿಳಿದುಕೊಂಡಿದ್ದಾರೆ. ಹಿಂದೆ ಬೂಧಿ ಬಸವಣ್ಣನವರು ಹೂಡಿದ ಒಂದು ಚಳುವಳಿ ತರೀಕೆರೆಯಲ್ಲಿ ಆಯಿತು. ಚಳುವಳಿ ಆರಂಭ ಮಾಡುವಾಗ ಭೂಮಿ ತಾಯಿ ಬೆಳೆಯುತ್ತಾಳೆ, ಬಸವಣ್ಣ ಉಳುತ್ತಾನೆ, ತೆರಿಗೆ ರಾಜ ದಂಡವಾಗಿ ಕೊಡುತ್ತಾನೆ. ದೇನೇಂದ್ರ ಮಳೆ ಕರೆಯುತ್ತಾನೆ. ಎಂದರೆ ನಮ್ಮ ದೇಶದ ಜನರ ಮೇಲೆ ವಿಧಿಸುವ ಕಂದಾಯ ಏನಿತ್ತು ಎಂದರೆ, ಅದು ರಾಜಾದಾಯ ಎಂತಲೇ ಹೇಳುತ್ತಿದ್ದರು. ರಾಜರಿಗೆ ಆಗ ಇದ್ದ ಪಾಳೆಯಗಾರರು ಸಮರ್ಪಿಸುತ್ತಿದ್ದ ಕಪ್ಪಕಾಣಿಕೆಗಳು ಎಂದು ಇತ್ತು. ಆಗ ಇದನ್ನು ರಾಜಾದಾಯ ಎಂದು ಹೇಳುತ್ತಿದ್ದರು. ಈ ರಾಜಾದಾಯವನ್ನು ಭಾಗಾದಾಯ ಎಂತಲೂ ಹೇಳುತ್ತಿದ್ದರು. ಅನಂತರ ಇದನ್ನು ಕಂದಾಯ ಎಂದು ಕರೆಯುತ್ತಿದ್ದರು, ಭೂ ಕಂದಾಯ ಎಂದೂ ಕರೆದಿದ್ದರು, ತೆರಿಗೆ ಎಂದು ಕರೆಯುತ್ತಿದ್ದರು ಇನ್ನೂ ಏನೇನೋ ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ರೀತಿ ಕರೆಯುತ್ತಾರೆ. ಹಳೆಯ ಮೈಸೂರಿನಲ್ಲಿ ಒಂದು ರೀತಿಯಾಗಿ ಕರೆಯುತ್ತಾರೆ. ಧಾರವಾಡದಲ್ಲಿ ಒಂದು ರೀತಿ ಕರೆಯುತ್ತಾರೆ, ಹೈದರಾಬಾದಿನಲ್ಲಿ ಒಂದು ರೀತಿ ಕರೆಯುತ್ತಾರೆ, ಅಂತೂ ಈ ಶಬ್ದದ ಒಟ್ಟು ಅರ್ಥ ಏನೆಂದರೆ ಆಳುವವರು ರೈತರಿಂದ ಪಡೆಯತಕ್ಕ ಪೊಗದಿ ಎಂದು. ಪೊದಲು ಇದನ್ನು ಕೈಂಡ್‌ನಲ್ಲಿ ಎಂದರೆ ಕಾಳು ಮೂಲಕ ಪಡೆಯುತ್ತಿದ್ದರು. ಎಂದರೆ ಬೆಳೆ ಬೆಳೆಯುವವರಲ್ಲಿ ಅರನೇ ಒಂದು ಪಾಲು ನಷ್ಟು ಭಾಗ ಕೊಡಬೇಕು ಎಂದು ಇತ್ತು. ಆಮೇಲೆ ನಾಲ್ಕನೇ ಒಂದು ಭಾಗ ಎಂದಾಯಿತು. ಇದು ಶಿವಪ್ಪನಾಯಕನ ಕಾಲದಲ್ಲಿ ಬಂದಾಗ ನಾಲ್ಕನೇ ಒಂದು ಭಾಗವಾಯಿತು. ಪ್ರತಿಯೊಬ್ಬರನ್ನೂ ಹಿಡುವಳಿದಾರರು ಎಂದರು. ಅನಂತರ ಖುಳ ಎಂದರು. ಇದಕ್ಕಾಗಿ ಖುಳವಾರು ಪಟ್ಟಿ ಎಂದು ಆಗ ತಾಲ್ಲೂಕಾಫೀಸುಗಳಲ್ಲಿ ಮಾಡುತ್ತಿದ್ದರು. ಇದರ ಹೆಸರಿನ ಇತಿಹಾಸಕ್ಕೆ ಈಗ ಹೋಗುವುದಿಲ್ಲ. ಚಾಣಕ್ಯನ ಕಾಲದಲ್ಲಿ ಒಂದು ಹೆಸರು ಇತ್ತು. ಅಶೋಕನ ಕಾಲದಲ್ಲಿ ಒಂದು ಇತ್ತು. ತೋದರಮಲ್ಲನ ಕಾಲದಲ್ಲಿ ಒಂದು ರೀತಿ ಇತ್ತು. ಷೇರ್ ಷಾ ಕಾಲದಲ್ಲಿ ಏನಿತ್ತು ಅವನ್ನೆಲ್ಲಾ ಇಲ್ಲಿ ಹೇಳುವ ಗೋಜಿಗೆ ಹೋಗುವುದಿಲ್ಲ. ಹಾಗೆ ನಮ್ಮಲ್ಲಿ ಪೂರ್ಣಯ್ಯನವರ ಕಾಲದ್ದನ್ನು ಹೇಳುವುದಿಲ್ಲ, ಶಿವಪ್ಪನಾಯಕನ ಕಾಲದ್ದನ್ನೂ ಹೇಳುವುದಿಲ್ಲ. ಇವೆಲ್ಲಾ ಡಿಟೇಲ್ಸ್‌ಗಳ ಬಗ್ಗೆ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಏನು ಮಾಡತಕ್ಕದ್ದು ಎನ್ನುವುದನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಸ್ವಾಮಿ, ಈ ದಿವಸ ನಮ್ಮ ಸಂಯುಕ್ತ ಸೋಷಿಯಲಿಸ್ಟ್ ಪಕ್ಷದವರು ಮತ್ತು ಅವರ ಜೊತೆಯಲ್ಲಿ ಹಿಂದೆ ಕಿಸಾನ್ ಪಂಚಾಯತ್‌ರವರೂ ಸೇರಿದಂತೆ ಒಂದು ನಣ್ಣ ಮೆರವಣಿಗೆಯನ್ನು ವಿಧಾನ ಸೌಧದವರೆಗೆ ತಂದು ಒಂದು ಮನವಿಯನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಅರ್ಪಿಸಿದರು. ಅದರ ಎಲ್ಲ ವಿವರಗಳನ್ನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಅವರ ಬೇಡಿಕೆಯಲ್ಲಿರುವ ಮುಖ್ಯವಾದ ಮಾತನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಅದು ಹೀಗಿದೆ :

> "ಭೂ ಕಂದಾಯ ಎಲ್ಲ ವರ್ಗದ ಲಕ್ಷಾಂತರ, ಕೋಟ್ಯಾಂತರ ರೈತರನ್ನು ಭಾದಿಸುವ ತೆರಿಗೆ ಅಂತೆಯೇ ಕಾಂಗ್ರೆಸ್ ಪಾರ್ಟಿ ಭೂ ಕಂದಾಯ ರದ್ದು ಎಂಬ ಸೋಗಿನ ಕೂಗನ್ನು ಕಳೆದ ಚುನಾವಣಾ ಕಾಲದಲ್ಲಿ ಘೋಷಿಸಿತು. ಭಾರತದಲ್ಲಿ ಸುಮಾರು ಅರು ಕೋಟಿ ಕುಟುಂಬಗಳನ್ನು ಅಂದರೆ ಸುಮಾರು 15 ಕೋಟಿ ಮತದಾರರನ್ನು ಆಕರ್ಷಿಸುವ ಏಕಮೇವಾ ಚುನಾವಣಾ ಕೂಗು ಇದು. ಕಾಂಗ್ರೆಸ್ಸು ಈ ವಚನವನ್ನು ಕೊಟ್ಟು ಚುನಾವಣೆಯ ನಂತರ ವಚನ ಮುರಿಯಿತು. ವಚನ ಭ್ರಷ್ಟತೆ ಕಾಂಗ್ರೆಸ್ಸಿನ ಜಾಯಮಾನಕ್ಕೆ ಹೊಸದಲ್ಲವಾದರೂ, ಅದರ ಉದ್ದೇಶಪೂರ್ಣ ವಚನಭ್ರಷ್ಟತೆಯ ಒಂದು ಪ್ರತ್ಯಕ್ಷ ಉದಾಹರಣೆ ಇದು."

ಈ ಭೂ ಕಂದಾಯ ಎನ್ನುವುದು ಓಬರಾಯನ ಕಾಲದ್ದು. ಇದು ಟ್ಯೆಂ ಇಮ್ಮೆಮೋರಿಯಲ್ ಎನ್ನುತ್ತಾರಲ್ಲ, ಹಾಗೆ ಇದು ಬಹಳ ಹಿಂದಿನ ಕಾಲದಿಂದ ಬಂದ ಒಂದು ತೆರಿಗೆ. ಅದು ಇಂದೂ ಬರುತ್ತಿದೆ. ಖಚಿತವಾಗಿ ಯಾವ ಕಾಲದಲ್ಲಿ ಬಂತು ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ನರ್ವೇ ಸೆಟರ್‌ಮೆಂಟು ಆಫೀಸರು ಎಂದು ಹಾಕಿರುವುದು ತೋದರ ಮಲ್ಲನ ಕಾಲದಿಂದಲೂ ಹಾಕಿದುದು ಇಂದು ಭಾರತದಲ್ಲಿ ಬಂದಿದೆ. ಇದನ್ನು ಬ್ರೌಕ್ ಎಂಬುವ ಇತಿಹಾಸಕಾರನೂ ಹೇಳಿದ್ದಾನೆ. ಇದರ ಇತಿಹಾಸ ಏನೇ ಇರಲಿ. ಸೋಷಿಯಲಿಸ್ಟ್ ಪಾರ್ಟಿಯವರ ಅಭಿಪ್ರಾಯದಂತೆ

(ಶ್ರೀ ಎಸ್. ಗೋಪಾಲಗೌಡ)

ಇದನ್ನು ಪೂರ್ಣವಾಗಿ ರದ್ದು ಮಾಡಬೇಕು. ಇದರ ಬಗ್ಗೆ ಕೂಡ ನಮ್ಮ ಮನವಿಯಲ್ಲಿ ಹೇಳಿದ್ದೇವೆ. ಅದು ಹೀಗಿದೆ :

"ಹಿಂದೆ ಸಾಮಂತಷಾಹಿ ಸಮಾಜದಲ್ಲಿ ಒಂದಾನೊಂದು ಕಾಲದಲ್ಲಿ ಈ ತೆರಿಗೆಯೇ ರಾಜನ ಬೊಕ್ಕಸವನ್ನು ಬಹುಪಾಲು ತುಂಬುತ್ತಿತ್ತು."

ಬ್ರಿಟಿಷರು ಇದನ್ನು ಮುಂದುವರಿಸಿಕೊಂಡು ಬಂದರು. ಇದರಲ್ಲಿರುವ ಒಂದು ಮುಖ್ಯವಾದ ಅಭಿಪ್ರಾಯವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಮೈಸೂರಿಗೆ ಸಂಬಂಧಪಟ್ಟಂತೆ 1867-68ರಲ್ಲಿ ಒಟ್ಟು ಮೈಸೂರು ರಾಜ್ಯದ ಆದಾಯ 112 ಲಕ್ಷ ರೂಪಾಯಿ ಇತ್ತು. ಒಟ್ಟು ರಾಜ್ಯದ ಆದಾಯದ ಪೈಕಿ 81 ಲಕ್ಷ ರೂಪಾಯಿಗಳು ಭೂ ಕಂದಾಯದಿಂದ ಬಂದದ್ದು. ಆದರೆ ನೂರಾರು ವರ್ಷಗಳ ನಂತರ 1967-68 ರಲ್ಲಿ ಈ ರಾಜ್ಯದ ಒಟ್ಟು ಆದಾಯ ಸುಮಾರು 195 ಕೋಟಿ ರೂಪಾಯಿಗಳವರೆಗೆ ಇರುವ ಮೊತ್ತದಲ್ಲಿ ಕೇವಲ ಎಂಟು ಕೋಟಿ ರೂಪಾಯಿಗಳು ಮಾತ್ರ ಭೂ ಕಂದಾಯದ ಪಾಲು.

6-30 P.M.

ಅಂದರೆ ನೂರು ವರ್ಷದಲ್ಲಿ ಭೂಕಂದಾಯದ ರಾಜ್ಯಾದಾಯದಲ್ಲಿ ಶೇಕಡ 72 ರಿಂದ ಶೇಕಡ 4ಕ್ಕೆ ಇಳಿಯಿತು. ಮೊದಲು ಭೂಕಂದಾಯ ರಾಜ್ಯದ ಆದಾಯದಲ್ಲಿ ಬಹಳ ದೊಡ್ಡ ಆದಾಯವಾಗಿತ್ತು. ಈಗ 4 ಪರ್ಸೆಂಟಿಗೆ ಇಳಿಯಿತು. ಇಷ್ಟು ಆದಾಯ ಇಳಿದುದ್ದನ್ನು ತಾವು ವಿಚಾರ ಮಾಡಬೇಕು. ಅದು ಒಂದು ವಿಷಯ ಈ ಮನವಿಯನ್ನು ಸರ್ಕಾರದವರಿಗೆ ಅಂದರೆ ಮುಖ್ಯ ಮಂತ್ರಿಗಳಿಗೆ ಸಲ್ಲಿಸಿದ್ದೇವೆ. ರಾಮನಗರ ಮಾಗಡಿ ತಾಲ್ಲೂಕಿನ ರೈತಾಪಿ ಜನರು ಭೂಹೀನ ರೈತರು ಒಂದು ಮೆರವಣಿಗೆ ಬಂದು, ಹೆಂಗಸರೂ ಬಂದು ಇನ್ನೊಂದು ಮನವಿಯನ್ನು ಸಲ್ಲಿಸಿದ್ದಾರೆ.

ಎರಡನೆ ಉದಾಹರಣೆ ಹೇಳುವುದಾದರೆ ಮೈಸೂರು ರಾಜ್ಯದ ಮಲೆನಾಡು ಜಿಲ್ಲೆಯ ಅಡಿಕೆ ಬೆಳೆಗಾರರ ಸಂಘ, ಕೊಪ್ಪ ಅವರೂ ಬಂದು ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಿ? ನಿಮ್ಮ ಅಧೀನದಲ್ಲಿರತಕ್ಕಂಥ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವುದು ಇದರಲ್ಲಿ ಗೊತ್ತಾಗುತ್ತದೆ. ಮಲೆನಾಡಿನ ನೀರಿನ ತೆರಿಗೆ ಮತ್ತು ಮೆಂಟೆನೆನ್ಸ್ ಬಗ್ಗೆ ಪುನರ್ವಿಮರ್ಶೆ ಮಾಡಬೇಕೆಂದು ಕೊಪ್ಪ ತೀರ್ಥಹಳ್ಳಿ, ಶೃಂಗೇರಿಯಿಂದ ಎಲ್ಲಾ ಕಡೆಯಿಂದ ರಿಟ್ ಹೋಗಿದ್ದಾರೆ. ಈ ವಸೂಲಿ ಬಗ್ಗೆ ಒಂದು ನಿಮ್ಮ ವಿಚಿತ್ರವಾದ ಆರ್ಡರ್ ಇಲ್ಲಿ ಇದೆ. ಅದು ಈ ರೀತಿ ಇದೆ :

"Notice No. RD/SS /63 dated 16th December 1965 in respect of the Settlement Reports of 29 Zones.

In exercise of the powers conferred by Section 122 of the Mysore Land Revenue Act, 1964, the Government of Mysore hereby direct that land revenue according to the Settlement, as notified in the said Notifications, shall be levied from the 1st day of July 1965 in the said 29 Zones."

ಈ ಆರ್ಡರನ್ನು ತಾವು ಹೊರಡಿಸಿದ್ದೀರಿ. ಹೊರಗೆ ಮೆರವಣಿಗೆ ಹೋದಾಗ ಮತ್ತು ರೈತರು ಹಾರ ತುರಾಯಿಗಳನ್ನು ಸಮರ್ಪಣೆ ಮಾಡಿದಾಗ ಅವರ ಮನಸ್ಸನ್ನು ಸಂತೋಷಪಡಿಸುವುದಕ್ಕೊಸ್ಕರ ತಾವು ಬಹಳ ಉದ್ದುದ್ದವಾದ ಭಾಷಣವನ್ನು, ಭಾರಿ, ಭಾರಿ ಭಾಷಣವನ್ನು ಮಾಡುತ್ತೀರಿ. ಇದು ಏತಕ್ಕೆ? ಅದನ್ನು ಎಲ್ಲಾ ಪತ್ರಿಕೆಗಳಲ್ಲೂ ನಿಮ್ಮದೇ ಆಗಿರತಕ್ಕಂಥ ಪತ್ರಿಕೆಗಳಲ್ಲಿ ನಿಮ್ಮ ಮುಖ ಚಿತ್ರದ ಸಮೇತ ಓದುತ್ತೇವೆ. ಆದರೆ ಇಲ್ಲಿ ಯಾರಾದರೂ ಸಂಬಂಧಪಟ್ಟ ಅಧಿಕಾರಿ ಇದ್ದರೆ ಅಧ್ಯಕ್ಷರ ಅನುಮತಿ ಪ್ರಕಾರ ಕರೆಸಿ ಅವನು ಪ್ರಮಾಣ ಮಾಡಿ, ತಮ್ಮ ಭಾಷಣಗಳಿಗೆ ಆ ಅಧಿಕಾರಿ ಗೌರವ ಕೊಟ್ಟಿದ್ದಾನೆಯೇ ಅಥವಾ ನೋಟಿಫಿಕೇಷನ್ ಪ್ರಕಾರ ಗೌರವ ಕೊಟ್ಟಿದ್ದಾನೆಯೇ, ಎಂದು ಹೇಳಲು ಈಹೊತ್ತಿನ ನೋಟಿಫಿಕೇಷನ್ ಪ್ರಕಾರ ಹರಾಜು ಮಾಡಿದ ಮನೆಗಳಿವೆ; ವಸೂಲಿ ಮಾಡದ ಮನೆಗಳು ಇವೆ. ಈ ದಿವಸ ಇಲ್ಲಿ ಚರ್ಚೆ ಆಗತಕ್ಕಂಥ ದಿನವೂ ಕೂಡ ನಮ್ಮ 174 ತಾಲ್ಲೂಕುಗಳಲ್ಲಿ 100 ತಾಲ್ಲೂಕುಗಳು ಈ ತಾಸೀರ್ದಾರರು ಎಲ್ಲಾ ಸಿಬ್ಬಂದಿಗಳೊಡನೆ ಹೋಗಿ ಲೆವಿ ವಸೂಲಿ ಮತ್ತು

ಭೂ ಕಂದಾಯ ವಸೂಲ್ಮಾಡುವುದರಲ್ಲಿ ನಿರತರಾಗಿದ್ದಾರೆ. ಜಿಲ್ಲಾಧಿಕಾರಿಗಳ ಸಭೆಯಲ್ಲಿ ಸರ್ಕಾರದವರು ಏನು ಹೇಳಿದ್ದಾರೆ? ಸರ್ಕಾರದವರು ಜಿಲ್ಲಾಧಿಕಾರಿಗಳಿಗೆ ಟೆಲಿಫೋನ್ ಮುಖಾಂತರ ಏನು ಹೇಳಿದ್ದಾರೆ? ಆ ರಿಕಾರ್ಡನ್ನು ಸಭೆಯ ಮುಂದೆ ತಂದಿಡಿ. ಈ ಸಭೆಗೆ ಸ್ವಲ್ಪ ಗೌರವ ಕೊಡುವುದನ್ನು ಕಲಿಯಿರಿ. ಒಬ್ಬರು ಬಳ್ಳಾರಿಯ ಅಡ್ವೋಕೇಟರು ಈ ರೀತಿ ಬರೆದಿದ್ದಾರೆ:

"Water rates are levied from 1st July 1965 and collection of water rates for lands irrigated by tanks are notified in the Mysore Gazette dated 5th August 1967 but the collections are ordered with retrospective effect from 1st July 1965. (Mysore Irrigation (Levy of Water Rates Amendment) Rules 1967."

ಇದನ್ನು ಬರೆದಿರುವವರು ಒಬ್ಬರು ಅಡ್ವೋಕೇಟರು, ದಿನ ಕೋರ್ಟಿಗೆ ಹೋಗುವವರು, ಜವಾಬ್ದಾರಿ ಮನುಷ್ಯ, ಈ ರೀತಿ ಬರೆದಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ನೀವು ಇಷ್ಟು ಅಚಾರ ವ್ಯವಹಾರಗಳಲ್ಲಿ ಭೇದ ನಡೆಸುತ್ತಾ ಇದ್ದೀರಿ. ಈ ಮಾನ್ಯ ಸಭೆಗೆ ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದೀರಿ. ಇದು ಯಾವ ರೂಪದಲ್ಲಿ ಇದೆ ಎಂದು ಅಧ್ಯಕ್ಷರ ಅನುಮತಿ ಪಡೆದು ಓದುತ್ತೇನೆ. ಆ ಮಹನೀಯರು ಈ ರೀತಿ ಹೇಳುತ್ತಾರೆ:

"Tanks of Bellary District and those in Andhra are in existence since times immemorial."

ಅವನಿಗೆ ನೆನಪು ಇಲ್ಲದೆ ಇದ್ದ ಕಾಲದಲ್ಲಿ ಅಲ್ಲಿ ಕೆರೆಗಳು ಇವೆ. ಈ ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದ ಮೇರೆ 15-9-47ರಿಂದ ಕಟ್ಟಿರುವ ಈಚಿನ ಕೆರೆ ಅಲ್ಲ ಅದು ಸರ್ಕಾರ ಕಟ್ಟಿದ್ದು ಅಲ್ಲ. ಉದಾಹರಣೆಗೆ ಹೇಳುವುದಾದರೆ ಚನ್ನಗಿರಿ ತಾಲ್ಲೂಕಿನಲ್ಲಿರುವ ನೂಳೆಕೆರೆ ಸರ್ಕಾರದವರು ಕಟ್ಟಿಸಿದ್ದೀರಾ? ಅದರಲ್ಲಿ ಎಷ್ಟು ಅಚ್ಚುಕಟ್ಟು ಇದೆ? ಅದರ ಮೇಲೆ ನೀವು ವಾಟರ್‌ರೇಟ್ ಹಾಕುವುದಕ್ಕೆ ಹೊರಟಿಲ್ಲವೇ?

Sri K. PUTTASWAMY.—They are being maintained.

Sri S. GOPALA GOWDA.—The Government is not maintaining them. ಮುಂದುವರಿಯುತ್ತಾ ಆ ಅಡ್ವೋಕೇಟರು ಈ ರೀತಿ ಹೇಳಿದ್ದಾರೆ:

"There was no flat water rate as prescribed now. According to the fertility of the soil and availability of water, lands were classified under various categories and these lands were levied land revenue ranging from about Rs. 6 minimum and a maximum of Rs. 9 per acre, whether the crop is paddy or sugarcane. Now the proposed water rate per acre for paddy is Rs. 16 and for sugarcane Rs. 30. There is a surcharge of 40 per cent including cess, etc., which comes to about 27 per acre to the paddy crop and about Rs. 48 for sugarcane.

[Mr. DEPUTY SPEAKER in the Chair]

"These lands are fed by water from tanks and their capacity in some cases is less than 100 acres and in some cases more than hundred acres. Our personal experience reveals that no ryot grows more than 20 bags and the least yield is 4 or 5 bags. The average yield will be only 8 bags per acre. Likewise the minimum yield of jaggery where sugarcane is grown is 4 quintals and the maximum yield will be only about 20 quintals. The reason for the yield is not far to seek. ....These things are lost sight of and poor ryots are

(SRI S. GOPALA GOWDA)

levied water rates which are about 300 per cent and more for paddy crops and about 700 to 800 per cent in the case of sugarcane crop."

ಇದನ್ನು ಮಾನ್ಯ ಮಂತ್ರಿಗಳು ವಿರೋಧ್ಯೆ ಮಾಡಿ ಒಪ್ಪಬಹುದು. ಇದೆಲ್ಲ ನತ್ಯವಾದುದು ಎಂದು ನಾನು ಹೇಳುತ್ತಿಲ್ಲ. ಯಾರೂ ಸರ್ಕಾರದ ಗಮನಕ್ಕೆ ತಂದಿಲ್ಲ ಎಂದು ಹೇಳುತ್ತಾರೆ. ಸಹಸ್ರಾರು ಜನ ತಮ್ಮ ಗಮನಕ್ಕೆ ತಂದಿದ್ದಾರೆ. ತಾವು ಮೇರವಣಿಗೆ ಪ್ರವಾಸ ಹೋದಾಗಲೆಲ್ಲ ತಮ್ಮ ಗಮನಕ್ಕೆ ತಂದಿದ್ದಾರೆ. ಅದನ್ನು ಕನದ ಬುಟ್ಟಿಗೆ ಹಾಕಿ ಅದರ ಮೇಲೆ ಕುಳಿತಿದ್ದೀರಿ. ನಾನು ಹೇಳುವುದು ಕಟುವಾದರೆ ಕ್ಷಮಿಸಬೇಕು.

Sri H. V. KOUJALGI.—It is water rate and not land revenue.

Sri S. GOPALA GOWDA.—Land revenue includes water rate, betterment levy, maintenance cess, etc. And he also gives a warning :

"I am prepared to fight against the levy of these water rates which are inhuman and highly excessive till the last drop of my blood."

ಇದೆಲ್ಲ ಇದೆ. ಕಾಂಗ್ರೆಸ್ಸಿನವರೂ ಸೇರಿಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಕಂದಾಯ ಕೊಡುವವರು ಅಲ್ಲಯೂ ಇದ್ದಾರೆ. ನೀವು ಮಾಡುತ್ತಿರುವುದು ಮಹತ್ತರವಾದ ಅನ್ಯಾಯ. ಬಾಯಲ್ಲಿ ಹೇಳುವುದೊಂದು, ಮಾಡುವುದು ಬೇರೆ. ಬಹಳ ಔದಾರ್ಯವನ್ನು ತೋರಿಸಿದ್ದೇವೆ ಎಂದು ರಾಜನ್ಯ ಮಂತ್ರಿಗಳು ಹೇಳಿದರು. ಕೊಟ್ಟಷ್ಟು ತೆಗೆದುಕೊಳ್ಳುತ್ತೇವೆಂದು ಅವರು ಹೇಳುತ್ತಾರೆ. ಈ ಹೇಳಿಕೆಯ ಅನಹಾಯಕತೆಯನ್ನು ನೋಡಿ ನನಗೆ ವ್ಯಥೆಯಾಗುತ್ತದೆ. ಕೊಟ್ಟಷ್ಟು ತೆಗೆದು ಕೊಳ್ಳುವ ಸರ್ಕಾರ ನಿಮ್ಮ ಕಾಲದವರೆಗೆ ಇರಲಿಲ್ಲ. ಕೊಡಬೇಕು ಎಂದು ಅಷ್ಟನ್ನೂ ತೆಗೆದು ಕೊಳ್ಳುವ ಸರ್ಕಾರ ಮೊನ್ನೆಯವರೆಗೂ ಇತ್ತು. ಭಿಕ್ಷೆ ಬೇಡುವ ಸರ್ಕಾರ ಇದಾಗಿದೆ. ಆ ಭಿಕ್ಷೆ ನಿಮಗೆ ದೊರೆಯುವುದಿಲ್ಲ, ಅದನ್ನು ನೀವು ದುರುಪಯೋಗಪಡಿಸುತ್ತೀರಿ ಎನ್ನುವುದು ಜನತೆಗೆ ಮನವರಿಕೆಯಾಗಿದೆ. ಭಿಕ್ಷೆ ಕೂಡ ನಿಮಗೆ ದೊರೆಯುವುದಿಲ್ಲ. ಅದರಂತೆ ವಾಟರ್ ರೇಟ್ ಎಲ್ಲ ಕೊಟ್ಟಿದ್ದಾರೆ, ಅದನ್ನು ಸ್ವಲ್ಪ ಗಮನಿಸಬೇಕು. ನಾನು ಒಂದು ವಿಷಯವನ್ನು, ಅಂಜನಾಪುರ ನಾಲೆಯ ವಿಷಯಕ್ಕೆ ಬರುವುದಕ್ಕೆ ಮೊದಲು ಹೇಳುತ್ತೇನೆ. ಹಳೇ ಮೈಸೂರು ಎಂದು ತಾವೂ ಮತ್ತು ಮಾನ್ಯ ಕಂರಿ ಅವರೂ ಕರೆಯುತ್ತೀರಲ್ಲ, ಹಳ್ಳಿ ಮೈಸೂರು ಎಂದು ಒಂದು ಹಳ್ಳಿ ಇದೆ. ಮಾನ್ಯ ಎಸ್. ಚನ್ನಯ್ಯನವರಿಗೆ ಆ ವಿಚಾರ ಗೊತ್ತು. ಮೈಸೂರಿನ ಇತಿಹಾಸವನ್ನು ತಾವು ಓದಬೇಕಾದರೆ ರೈಸ್ ಗೆಜೆಟೀರ್, ಸಿ. ಹಯವದನರಾವ್ ಗೆಜೆಟೀರ್ ಓದಿಕೊಳ್ಳಿ. ಆಮೇಲೆ ಸರ್ವೆ ಸೆಟರ್‌ಮೆಂಟ್ ಯಾರು ಯಾರು ಮಾಡಿದ್ದಾರೆ, ಯಾವ ಯಾವ ಅಧಿಕಾರಿಗಳು ಮಾಡಿದ್ದಾರೆ ಅದನ್ನೆಲ್ಲಾ ಓದಿ. ಬ್ರೌನ್ ಏನು ಹೇಳಿದ್ದಾರೆ ಅದನ್ನೂ ತಾವು ಓದಿ ತಿಳಿದುಕೊಳ್ಳಿ. ಇದು ಬಹಳ ತಲೆ ಹೋಗುವ ವಿಷಯ. 30 ವರ್ಷ ಗ್ಯಾರಂಟಿ ಕೊಡುತ್ತೀರಿ. ಗ್ಯಾರಂಟಿ ಕೊಡುತ್ತೀರೋ ಕೈಕೊಡುತ್ತೀರೋ ! 30 ವರ್ಷ ಗ್ಯಾರಂಟಿ ಕೊಡುವವರು, ನೀವು 30 ವರ್ಷ ಇರುತ್ತೀರಾ ! ದಿನ ಬೆಳಿಗ್ಗೆ ಕಾನೂನು ತಿದ್ದುಪಡಿ ಮಾಡುವ ಜನ ನೀವು—ಈ ನಭೆ ತಿದ್ದುಪಡಿ ಮಾಡುತ್ತದೆ. ದಿನ ಬೆಳಿಗ್ಗೆ ಕಾನೂನು ತಿದ್ದುಪಡಿ ಮಾಡುವವರಿಗೆ ಗ್ಯಾರಂಟಿ ಎಲ್ಲಿ ? ಅದು ಎಲ್ಲ ಹೋಯಿತು ! ಈಗ ನಿಮಗೆ 30 ವರ್ಷವಾಗುವುದಕ್ಕೆ ಮುಂಚೆ ರೀ ಸರ್ವೆ ಮತ್ತು ಸೆಟರ್‌ಮೆಂಟ್ ಆಗಿರತಕ್ಕ ಭೂಕಂದಾಯವನ್ನು ತಿದ್ದುಪಡಿ ಮಾಡಬೇಕು ಎನ್ನುವ ಬುದ್ಧಿ ಹೇಗೆ ಬಂತು ! ಈ ಅಧಿಕಾರವನ್ನು ಏಕೆ ಪಡೆಯುತ್ತಿದ್ದೀರಿ ! ವೋಟಿಗಾಗಿಯೋ ಅಥವಾ ಕಾನೂನನ್ನು ಎತ್ತಿ ಹಿಡಿಯುವುದಕ್ಕೋ ಅಥವಾ ರಾಜ್ಯಾಂಗವನ್ನು ಪರಿಪಾಲನೆ ಮಾಡುವುದಕ್ಕೋ, ವಿರೋಧ ಪಕ್ಷದವರನ್ನು ಸಮಾಧಾನ ಪಡಿಸುವುದಕ್ಕೋ ಅಥವಾ ನಿಮ್ಮ ಆತ್ಮಸಾಕ್ಷಿಗೋ ಎನ್ನುವುದನ್ನು ತಾವು ಹೇಳಬೇಕು.

ಶಿವಮೊಗ್ಗ ಜೋನ್‌ನಲ್ಲಿ ಒಂದೆರಡು ವಿಷಯ ಮಾತ್ರ ನಾನು ಹೇಳುತ್ತಿದ್ದೇನೆ. ಬದನೂರಿನ ಗತವೈಭವವನ್ನು ನಾವು ಜ್ಞಾಪಕ ಮಾಡಿಕೊಳ್ಳಬೇಕಾಗುತ್ತದೆ. ಹಿಂದೆ ಬದನೂರು ಸಾಮ್ರಾಜ್ಯ, ಕೆಳದಿ ಸಾಮ್ರಾಜ್ಯ ಇತ್ತು. ಕೆಳದಿ ಸಾಮ್ರಾಜ್ಯದಿಂದ ವಿಜಯನಗರಕ್ಕೆ ಸಾಲ ಕೊಟ್ಟಿದ್ದರು ಎಂದು

ಇತಿಹಾಸ ಇದೆ. ಅದು ಇತಿಹಾಸಕ್ಕೆ ಸಂಬಂಧಪಟ್ಟ ವಿಷಯ. ಬೆದನೂರು ರಾಜ್ಯದ ವಿಚಾರ ಹೇಳುವುದಾದರೆ ಶಿವಪ್ಪ ನಾಯಕ ಎಂದು ಇದ್ದ. ಶಿವಪ್ಪ ನಾಯಕನ ಶಿಸ್ತು ಎಂದು ಈಗಲೂ ನಮ್ಮ ಕಡೆ ಜನ ವಯಸ್ಸಾದವರು ಹೇಳುತ್ತಾರೆ. ಶಿವಮೊಗ್ಗ ಜೋನ್‌ನಲ್ಲಿ 1961ರಲ್ಲಿ ಸರ್ವೆ ಮಾಡಿದರು. ಆ ಭಾಗದಲ್ಲಿ ಹಿಂದೆ ಮಾಡಿದ ಸರ್ವೆ ಸೆಟಲ್‌ಮೆಂಟ್ 1868 ರಿಂದ 1879ರ ವರೆಗೂ ನಡೆಯಿತು. ಎರಡನೇ ಸಲದ ರಿವಿಷನ್ 1905 ರಿಂದ 1913 ರ ವರೆಗೂ ಆಯಿತು. ಆಗ ಕವಲೆದುರ್ಗ, ನಗರ, ಸಾಗರ, ಸೊರಬ, ಷಿಕಾರಿಪುರ ತಾಲ್ಲೂಕುಗಳಿದ್ದುವು. ಕುಂಸಿ ಮತ್ತು ಆನಂದಾಪುರ ಸಬ್ ತಾಲ್ಲೂಕುಗಳು ಆಮೇಲೆ ಆದವು. ಅವು ಹಿಂದೆ ಇರಲಿಲ್ಲ. ಹಿಂದಿನ ಒಂದು ಇತಿಹಾಸವನ್ನು ತಮ್ಮ ಗಮನಕ್ಕೆ, ಸಭೆಯ ಗಮನಕ್ಕೆ, ದೇಶದ ಗಮನಕ್ಕೆ ತರುತ್ತೇನೆ. ಮಿರಾಸಿ ಎಂಬ ಐ.ಎ.ಎಸ್. ಆಫೀಸರು ರೈನ್‌ಫಾರ್, ಕ್ಲೈಮೇಟ್, ಮಾರ್ಕೆಟಿಂಗ್ ಫೆಸಿಲಿಟೀಸ್ ಇವುಗಳನ್ನೆಲ್ಲಾ ನೋಡಿ ಸರ್ವೆ ಸೆಟ್‌ಮೆಂಟ್ ಮಾಡಿ ಎಂದು ಹೇಳಿದರಂತೆ, ಎಲ್ಲಾ ಡೆಪ್ಯುಟಿ ಕಮಿಷನರುಗಳನ್ನೂ ಸೇರಿಸಿ, ಸರ್ವೆ ಸೆಟ್‌ಮೆಂಟ್ ಆಫೀಸರುಗಳಾಗಿ ನೇಮಕ ಮಾಡುವವರನ್ನು ಸೇರಿಸಿ ಹೀಗೆ ಬರೆಯಬೇಕು ಎಂದು ಹೇಳಿದರಂತೆ. ಗೈಡ್ ಮಾಡಿ ತಿಳಿಸಿರುವುದಕ್ಕೆ ಕೃತಜ್ಞರು ಎಂದು ಕೆಲವರು ಬರೆದು ಡೆಪ್ಯುಟಿ ಕಮಿಷನರುಗಳಿಗೆ ತಿಳಿಸಿದ್ದಾರೆ. ನನ್ನ ಹತ್ತಿರ ದಾಖಲೆ ಇದೆ, ಅದನ್ನು ತಂದು ಹೇಳುವುದಕ್ಕೆ ಬಹಳ ಕಾರಾವಕಾಶಬೇಕು, ನಾನು ನೂರು ಓದಿದ್ದೇನೆ. ಅದರಲ್ಲಿ ಒಂದೇ ಒಂದು ಬಹಳ ಕುತೂಹಲ ಕೆರಳಿಸುವ ವಿಷಯವನ್ನು ಹೇಳುತ್ತೇನೆ. ಶಿವಪ್ಪನಾಯಕರ ಕಾಲದ ಕೌಲೆದುರ್ಗದ ವಿಷಯ ಹೇಳುತ್ತೇನೆ. 1878ರಲ್ಲಿ ಕೌಲೆದುರ್ಗ ತಾಲ್ಲೂಕಿನಲ್ಲಿ 741 ಗ್ರಾಮಗಳಿದ್ದುವು. ಟಿಪ್ಪೂಸುಲ್ತಾನ್ ಮತ್ತು ಹೈದರಾಲಿ ಬಂದು ತಲೆ ಇಡುವವರೆಗೆ ನಗರ, ಕೌಲೆದುರ್ಗ ಮುಂತಾದುವನ್ನು ಪಡೆಯುವವರೆಗೆ ಮೈಸೂರಿನ ರಾಜರು ತಲೆ ಬಗ್ಗಿಸಿರಲಿಲ್ಲ, ಕಪ್ಪಕಾಣಿಕೆ ಕೊಟ್ಟಿರಲಿಲ್ಲ. 741 ಗ್ರಾಮಗಳಿದ್ದುದು 235ಕ್ಕೆ ಇಳಿಯಿತು. 1960–61ರ ಸೆನ್ಸಸ್ ಪ್ರಕಾರ 247 ಗ್ರಾಮಗಳಿವೆ. ಪ್ಲೇಗು, ಕಾಲರ, ಸಿಡುಬು ಬಂದಮೇಲೆ 247 ಗ್ರಾಮಗಳು ತೀರ್ಥಹಳ್ಳಿಯೆಂದು ಈಗ ಕರೆಯುವ ತಾಲ್ಲೂಕಿನಲ್ಲಿ ಉಳಿದಿವೆ, ಕೆಲವು ಕಾಡುಪಾಲಾಗಿವೆ, ಜನರು ಕಾಡುಪಾಲಾಗಿದ್ದಾರೆ. ನಗರದಲ್ಲಿ 418 ಗ್ರಾಮ ಇದ್ದುದು 180 ಆದುವು, ಈಗ ಹೊಸನಗರವೆಂದು ಕರೆಯಲ್ಪಟ್ಟು ಅದಕ್ಕೆ ಸೇರಿದಂತೆ 209 ಗ್ರಾಮಗಳಿವೆ. ಕೆಳದಿಯಲ್ಲ 479 ಗ್ರಾಮಗಳಿದ್ದುವು, ಸಾಗರದಲ್ಲಿ 247 ಗ್ರಾಮಗಳಿದ್ದುವು, ಈಗ 269 ಗ್ರಾಮಗಳಿವೆ. ಹಿಂದೆ ಬದರಿನಾರಾಯಣ ಐಯ್ಯಂಗಾರ್ ಅವರಿಗೆ ಸೇರಿದಂತೆ ಆನಂದಪುರ ಎಂಬುದಿತ್ತು, ಅದನ್ನು ಅನಂತಪುರ ಎಂದು ಕರೆಯುತ್ತಿದ್ದರು. ಅದನ್ನು ವಾಸ್ತವಿಕವಾಗಿ ಸಬ್–ತಾಲ್ಲೂಕು ಮಾಡಿದ್ದರು, ಈಗ ಷಿಕಾರಿಪುರ ತಾಲ್ಲೂಕಾಗಿದೆ. 390 ಗ್ರಾಮಗಳಿದ್ದುದು ಪೂರ್ಣವಾಗಿ ಹೋಗಿ ಅನಂತಪುರ, ಕುಂಸಿ ಸಬ್ ತಾಲ್ಲೂಕು ಆಗಿ ಹೋಯಿತು. ಈಗ ಷಿಕಾರಿಪುರ ತಾಲ್ಲೂಕಾಗಿದೆ. ಸೊರಬದಲ್ಲಿ ಮಾತ್ರ 68ರಿಂದ 71 ರವರೆಗೆ 307 ಗ್ರಾಮಗಳಿದ್ದುದು ಈಗ 306 ಆಗಿದೆ, ಒಂದು ಕಾಡುಪಾಲಾಗಿದೆ. ಸೊರಬ ಒಂದು ತಾಲ್ಲೂಕು ಮಾತ್ರ ಇದೆ. ಬನವಾಸಿ ಹತ್ತಿರ ಸ್ವಲ್ಪ ಇಟ್ಟುಕೊಂಡು ಉಳಿದುದು ಸೊರಬ ಆಗಿರಬೇಕು. ಸ್ವಲ್ಪಮಟ್ಟಿಗೆ ಒಂದು ಜೋನ್‌ನಲ್ಲಿ ಒಂದು ಭಾಗದ ವಿಷಯವನ್ನು ನಾನು ಗಮನಕ್ಕೆ ತಂದಿದ್ದೇನೆ. ಹೀಗೆ ಹೇಳುತ್ತಿದ್ದರೆ ಬಹಳವಾಗಿ ಹೇಳಬೇಕಾಗುವುದು. ವಿಚ್ಛಲದಾನ ಶೆಟ್ಟರ ಬಂಟವಾಳ ಒಂದು ಉದಾಹರಣೆ. ಉಪ್ಪಿನಂಗಡಿ ಈಗ ಬಂಟವಾಳ, ಪುತ್ತೂರು ಮುಂತಾದ 3 ತಾಲ್ಲೂಕು ಆಗಿದೆ. ಪುಣಜಿ ಗ್ರಾಮದಲ್ಲಿ ಸೇರಿದ 1110 ರಷ್ಟು ಕಂದಾಯ ಜಾಸ್ತಿ ಯಾಗಿದೆ. ಕಣ್ಣುಬಿಟ್ಟು ನೋಡಿದ್ದೀರಾ? ಈ ವಿಚಾರ ಈಗ ಹೇಳುವುದಿಲ್ಲ. ಸೂಕ್ಷ್ಮವಾಗಿ ನಾನು ಮಾನ್ಯ ರಾಜಸ್ವ ಮಂತ್ರಿಗಳನ್ನು ಸ್ವಲ್ಪ ಕೇಳಬೇಕಾಗಿದೆ. ಸರ್ವೆ ಸೆಟ್‌ಲ್ಮೆಂಟ್ ಮತ್ತು ಅಸೆಸ್‌ಮೆಂಟ್ ನುಭವಾದ ಕೆಲಸವಲ್ಲ, ಒಂದು ದೊಡ್ಡ ತಪ್ಪನ್ನು ಮಾಡಿದ್ದೀರಿ. ಎರಡನೆಯ ಮಹಾಯುದ್ಧದನಂತರ 1945ರ ನಂತರ ಪ್ರಪಂಚದಲ್ಲಿ ಒಂದೇ ಸಮನೆ ಎಲ್ಲಾ ವಸ್ತುಗಳ ದರ ಏರುತ್ತಾ ಹೋಗಿದೆ; ಕಳೆದ 10 ವರ್ಷಗಳಿಂದ ಬಹಳವಾಗಿ ಏರಿದೆ. ಅಡಿಕೆ ಮಣಕ್ಕೆ ನೂರು ರೂಪಾಯಿ ಆಯಿತು, ರಾಗಿ ಕೂಡ ಕ್ವಿಂಟಾಲಿಗೆ 100 ರೂಪಾಯಿಯಾಗಿದೆ. ರಾಗಿ ಗಿಡ ಹುಟ್ಟಿದ ಮೇಲೆ ಯಾವತ್ತೂ ಬೆಲೆ ಕ್ವಿಂಟಾಲಿಗೆ 100 ರೂಪಾಯಿಗೆ ಬಂದಿರಲಿಲ್ಲ ಎಂದು ಒಬ್ಬ ಮುದುಕ ಹೇಳುತ್ತಿದ್ದ; ಹಿಂದೆ 100 ರೂಪಾಯಿಗೆ 100 ಕ್ವಿಂಟಾಲ್ ಕೊಡುತ್ತಿದ್ದೆವು, ಈಗ ಕಾಂಗ್ರೆಸ್ ಕಾಲದಲ್ಲಿ ಒಂದು ಕ್ವಿಂಟಾಲಿಗೆ 100 ರೂಪಾಯಿ ಕೊಡಬೇಕು ಎಂದು ಮುದುಕ ಖುಷಿಯಿಂದಿರಬಹುದು. ಆ ಖುಷಿಯನ್ನು ಬಿಜಾಪುರದವರು ಊಹಿಸಬಹುದು; ಕ್ಷಾಮದ ಬಿಜಾಪುರದವರು ಎಷ್ಟು ಸಂತೋಷದಿಂದಿರಬಹುದು ಎಂದು ಊಹಿಸಬಹುದು. ರೂಪಾಯಿಗೆ 38 ಸೇರು ಅಕ್ಕಿ ಕೊಡುವ ಕಾಲ ಕಳೆದು ಈಗ ಇಲ್ಲಿಗೆ ಬಂದಿದ್ದೇವೆ! 138 ರೂಪಾಯಿ ಕೊಟ್ಟರೆ ವಿಚ್ಛಲದಾನ ಶೆಟ್ಟರ ಸ್ಟೋರಿನಲ್ಲಿ ಒಂದು ಕ್ವಿಂಟಾಲ್ ಕೆಟ್ಟ ಅಕ್ಕಿ ಸಿಕ್ಕುವುದಿಲ್ಲ. ಮಂಡ್ಯ ಗೌಡರಿನಲ್ಲಿ ಎಷ್ಟೋ ಸಾವಿರ ಕ್ವಿಂಟಾಲ್ ಹುಳಿತುಬಿದ್ದಿದೆ ಎಂದು ಶ್ರೀ ಬೋರೇಗೌಡರು ಹೇಳಲಿಲ್ಲವೇ? ಅದುದರಿಂದ

(SRI S. GOPALA GOWDA)

ಇದು ಬಹಳ ಗಹನವಾದ ವಿಷಯ, ರಾಜನ್ಯ ಮಂತ್ರಿಗಳೂ ಮತ್ತು ಸರಕಾರದವರೂ ಗಮನಿಸ ಬೇಕು. ಸರಕಾರ ಬರುತ್ತದೆ, ಹೋಗುತ್ತದೆ, ಪಾರ್ಟಾ್ನದಲ್ಲಿ ನೋಡಬಹುದು, ಒಂದು ದಿವಸ ಒಂದು ರೀತಿ ಇರುತ್ತದೆ, ಇನ್ನೊಂದು ದಿವಸ ಪುಗುಚಿ ಹಾಕಲ್ಪಡುತ್ತದೆ. ಈ ಸರ್ಕಾರಕ್ಕೆ ಈ ಮಾತು ಅನ್ವಯಿಸುವುದು. ಹಿಟ್ಲರ್ ಅಂಥವನೇ ಮಣ್ಣು ತಿಂದುಹೋದ, ಇನ್ನು ನಣ್ಣಪ್ಪುಟ್ಟ ಜನರ ಪಾಡೇನು! ಇದೆಲ್ಲವನ್ನೂ ಇತಿಹಾಸಕಾರನಿಗೂ ಕೂಡ ಬರೆಯುವುದಕ್ಕೆ ಸಮಯ ಇರುವುದಿಲ್ಲ, ಜಾಗ ಇರುವುದಿಲ್ಲ.

Mr. DEPUTY SPEAKER.—The Hon. Member may continue tomorrow. The House will now adjourn to meet tomorrow at 1-00 P.M.

The House adjourned at Seven of the Clock to meet again at One of the Clock on Tuesday, the 8th April 1969.

WD 12775—GPB—600—8-8-1969

(Departmental Library)
(ಇಲಾಖಾ ಗ್ರಂಥಾಲಯ)
Accession No. 4860
V-31 N 69
N 69-19-5
(3)

MYSORE LEGISLATIVE ASSEMBLY

Tuesday, 8th April 1969

The House met in the Assembly Chamber, Vidhana Soudha, Bangalore, at One of the Clock.

MR. DEPUTY SPEAKER (Sri D. MANJUNATH) in the Chair.

STARRED QUESTIONS

(to which oral answers were given)

Levy Demand fixed for Paddy in Sirsi and Siddapur Taluks

571. Sri M. H. JAYAPRAKASH NARAYAN (Sirsi).—

Will the Minister of State for Food and Civil Supplies be pleased to state :—

(*a*) the quantity of foodgrains fixed to be collected by way of levy by Tahasildars of Sirsi and Siddapur during the year 1968-69 ;

(*b*) the number of notices issued to the ryots of Sirsi and Siddapur taluks in respect of collecting foodgrains by way of levy ;

(*c*) whether such notices are also issued through Shanbhogues to ryots owning less than one acre of land ;

(*d*) the various concessions shown by the Government in respect of levy ;

(*e*) the decision taken by the Tahasildars after the ryots on whom notices were served, made their declarations in writing ?

Sri B. VITHALDAS SHETTY (Minister of State for Food and Civil Supplies).—

(*a*) The levy demand fixed for paddy in Sirsi and Siddapur taluks for the year 1968-69 is as follows :

Sirsi taluk	...	29,721 Quintals
Siddapur taluk	...	16,145 ,,

(SRI B. VITHALDAS SHETTY)

(*b*) The number of demand notices issued are :

Sirsi taluk ... 5,721
Siddapur taluk ... 4,664

(*c*) No.

(*d*) (i) Remission in the quantum of levy in respect of drought affected and flood affected areas related to 'Annewari' will be granted at the following scale :---

(a) Total remission : if the annewari is below 4 annas.

(b) 50 per cent remission : if the " Annewari " is between 4 annas and six annas.

(*c*) 25 per cent remission ; if the " Annewari " is between 6 annas and 8 annas.

(ii) Remission of 25 per cent of the normal levy as per scale in respect of all 'rain fed' paddy lands bearing a rate of land revenue assessment equal to 35 per cent or below of the maximum rate of land revenue assessment for "rain-fed lands", on which paddy is grown irrespective of the settlement zones in the district.

These concessions have been granted wherever necessary.

(*e*) In Sirsi taluk 1,064 applications have been disposed out of 1,936 applications received. In Siddapur taluk 465 applications have been disposed of, out of 1,078 applications received.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—1968-69ನೇ ಸಾಲಿನಲ್ಲಿ ಸಿರಸಿ ತಾಲ್ಲೂಕಿನಲ್ಲಿ 29,721 ಕ್ವಿಂಟಾರ್, ಸಿದ್ದಾಪುರ ತಾಲ್ಲೂಕಿನಲ್ಲಿ 16,145 ಕ್ವಿಂಟಾರ್ ಬತ್ತವನ್ನು ರೆವಿ ರೂಪದಲ್ಲಿ ವಸೂಲು ಮಾಡಬೇಕೆಂದು ಡಿಮ್ಯಾಂಡ್ ಮಾಡಿದ್ದೀರಿ. ಇದರಲ್ಲಿ ವಸೂಲಾಗಿರುವು ದೆಷ್ಟು ಮತ್ತು ಒತ್ತಾಯದಿಂದ ವಸೂಲಾಗಿರುವುದೆಷ್ಟು ?

†ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಸಿರಸಿ ತಾಲ್ಲೂಕಿನಲ್ಲಿ 11 ಸಾವಿರ ಕ್ವಿಂಟಾರ್ ವಸೂಲಾಗಿದೆ ಅಂದರೆ 37 ಪರ್ಸೆಂಟ್, ಮತ್ತು ಸಿದ್ದಾಪುರದಲ್ಲಿ 2,542 ಕ್ವಿಂಟಾರ್ ವಸೂಲಾಗಿದೆ ಅಂದರೆ 16 ಪರ್ಸೆಂಟು. ಒತ್ತಾಯ ಮಾಡಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸಿರಸಿ ತಾಲ್ಲೂಕಿನಲ್ಲಿ 5,721 ನೂಚನೆಗಳು ಮತ್ತು ಸಿದ್ದಾಪುರ ತಾಲ್ಲೂಕಿನಲ್ಲಿ 4,664 ನೂಚನೆಗಳು ಡಿಮ್ಯಾಂಡ್ ನೋಟೀಸ್ ರೂಪದಲ್ಲಿ ಅವರಿಗೆ ಕೊಟ್ಟಿರಿ. ಈ ನೂಚನೆಗಳ ಪ್ರಕಾರ ಎಷ್ಟು ಜನ ರೈತರು ತಮ್ಮ ಡಿಕ್ಲರೇಷನ್ ಕೊಟ್ಟರು, ಆ ಡಿಕ್ಲರೇಷನ್‌ಗಳಲ್ಲಿ ಎಷ್ಟು ಅವರಿಗೆ ಮಾಫಿಯನ್ನು ಮಾಡಿದಿರಿ ಮತ್ತು ಎಷ್ಟು ಅರ್ಜಿದಾರರಿಂದ ನೀವು ರೆವಿ ವಸೂಲು ಮಾಡಿದಿರಿ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಸಿರಸಿ ತಾಲ್ಲೂಕಿನಲ್ಲಿ ಕೆಲವು ಜನ ಡಿಕ್ಲರೇಷನ್ ಕೊಟ್ಟಿದ್ದಾರೆ, ಇಲ್ಲ ನಿಖರವಾದ ಸಮಾಚಾರ ಇಲ್ಲ, ನುಮಾರು ಈ ತಿಂಗಳು ಆಖೈರಿಗೆ ಕಂಪ್ಲೀಟಾಗಿ ಖುರಾಸೆ ಮಾಡುತ್ತೇವೆ. ಸಿದ್ದಾಪುರ ತಾಲ್ಲೂಕಿನಲ್ಲಿ ಪ್ಯಾಡಿ ಥ್ರ್ಯಾಷಿಂಗ್ ಬಹಳ ನಿಧಾನವಾಗಿ ಆದದ್ದರಿಂದ ಅದೂ ಕೂಡ ಈ ತಿಂಗಳ ಆಖೈರಿಗೆ ಖುರಾಸೆ ಮಾಡುತ್ತೇವೆ ಮತ್ತು ಎಷ್ಟು ಕೊಟ್ಟಿದ್ದಾರೆ ಅಂತ ಗೊತ್ತಿಲ್ಲ. ಸಿರಸಿ ತಾಲ್ಲೂಕಿನಲ್ಲಿ 1981 ಗ್ರೋಯರ್ಸ್ ಒಂದು ಎಕರೆಗಿಂತ ಕಡಿಮೆ ಇರುವವರು ಕೊಡಲಿಲ್ಲ, ಸಿದ್ದಾಪುರದಲ್ಲಿ 1,428 ಗ್ರೊಯರ್ಸ್ ಕೊಡಲಿಲ್ಲ. ಉಳಿದವರು ಒಂದು ಎಕರೆಗೆ ಮೇಲ್ಪಟ್ಟವರು ಕೊಟ್ಟಿದ್ದಾರೆ.

†Indicates that the remarks or speeches have not been revised by the member concerned.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಡಿಕ್ಲರೇಷನ್ ಕೊಟ್ಟಿದ್ದರೂ ಸಹ ಲೆವಿ ಕಾನೂನು ಪ್ರಕಾರ ಲೆವಿ ಕೊಡುವುದು ಮಾಫಿ ಮಾಡುವ ನೀತಿ ಇದ್ದರೂ ಸಹ ತಹಸೀಲ್ದಾರರು ಡಿವಿಜನರ್ ಕಮಿಷನರು ನನ್ನ ಂಬಳವನ್ನು ನಿಲ್ಲಿಸಿಬಿಡುತ್ತಾರೆ ಅಂತ ಹೇಳಿ ಒತ್ತಾಯದಿಂದ, ಮನೆಯಿಂದ ಬತ್ತವನ್ನು ಗಾಡಿಯಲ್ಲಿ ತೆಗೆದುಕೊಂಡು ಬಂದು ಮಿಲ್ ಮಾಡುವುದಕ್ಕೆ ತಂದಂತಹ ಬಡ ರೈತರ ಬತ್ತವನ್ನು ಸೀಸ್ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ವಿಠಲದಾಸಶೆಟ್ಟಿ.—ಈ ತನಕ ಅಂಥಾದ್ದು ಸರ್ಕಾರದ ಗಮನಕ್ಕೆ ಬರಲಿಲ್ಲ. ಸಿರಸಿ ತಾಲ್ಲೂಕಿನಲ್ಲಿ ಲೆವಿ ಕೇಸು ಇಷ್ಟರತನಕ ಯಾವ ಪೋಲೀಸ್ ಕಂಪ್ಲೇಂಟೂ ಮಾಡಿಲ್ಲ ಸಿದ್ದಾಪುರ ತಾಲ್ಲೂಕಿನಲ್ಲಿ 52 ಕೇಸುಗಳು ಪೋಲೀಸ್ ಎನ್‌ಕ್ವೈರಿಗೆ ಕೊಟ್ಟಿದೆ, ಬರಾತ್ಕಾರವಾಗಿ ಅಥವಾ ಅಕ್ರಮವಾಗಿ ಮಾಡಿದ್ದು ತಾವು ದಯವಿಟ್ಟು ತಿಳಿಸಿದರೆ ಅದರ ಅಗತ್ಯವಾದ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸಿದ್ದಾಪುರ ತಾಲ್ಲೂಕಿನ ಹೆಕ್ಕೂಲಿಯಾರಿಟಿ ಏನೆಂದರೆ ಬಂಡವಾಳಸ್ಥರು ಮತ್ತು ದೊಡ್ಡ ಜಮೀನ್ದಾರರಾಗಿರತಕ್ಕ ಹವ್ಯಕ್ಸ್ ಕಮ್ಯೂನಿಟಿ ಏನಿದೆ ಅವರು ಕಾಂಗ್ರೆಸ್‌ನವರಿಗೆ ಸಪೋರ್ಟ್ ಮಾಡಿದರು ಅಂತ ಅವರಮೇಲೆ ಒಂದು ಕೇಸನ್ನೂ ಹಾಕುತ್ತಿಲ್ಲ, ಬಡವರಾಗಿರತಕ್ಕ, ನಿರ್ಗತಿಕರು, ಕೂಲಿಗಾರರಾಗಿರತಕ್ಕ ತುಂಡು ಜಮೀನು ಇರತಕ್ಕ ನಾಮಧಾರಿ ಜಾತಿಗೆ ಸೇರಿದ ರೈತರಮೇಲೆ ವಿಶೇಷವಾಗಿ ಕೇಸುಗಳನ್ನು ಹಾಕಿ ಈ ರೀತಿ ತಾರತಮ್ಯ ಮಾಡರಾಗಿದೆ. ಇವರು ಕಾಂಗ್ರೆಸಿಗೆ ಓಟು ಕೊಟ್ಟಿಲ್ಲ, ಪಿ. ಎಸ್. ಪಿ.ಗೆ ಓಟು ಕೊಟ್ಟಿದ್ದಾರೆ ಅಂತ ಕೇಸು ಹಾಕುವುದು ಇದು ನಿಜವಾದ ವಿಷಯ. ಇದಕ್ಕೆ ಅವಕಾಶ ಕೊಡದೆ ತಕ್ಕ ಬಂದೋಬಸ್ತು ಮಾಡುತ್ತೀರಾ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಅಂತಹ ಪರಿಸ್ಥಿತಿ ಆದದ್ದು ಸರ್ಕಾರದ ಗಮನಕ್ಕೆ ಬರಲಿಲ್ಲ. ಒಂದು ಎಕರೆಗಿಂತ ಕಡಿಮೆ ಜಮೀನು ಯಾರಿಗೆ ಇದೆ ತಾವು ಹೇಳುವ ಪ್ರಕಾರ ಬಡವರು ಯಾರಿದ್ದಾರೆ ಅಂತಹವರನ್ನು ಕಂಪ್ಲೀಟಾಗಿ 1981ಜನ ಗ್ರೊಯರ್ಸ್‌ನ್ನು ಸಿರಸಿಯಲ್ಲಿ ಬಿಟ್ಟಿದ್ದೇವೆ, 1428 ಗ್ರೊಯರ್ಸ್‌ನ್ನು ಸಿದ್ದಾಪುರದಲ್ಲಿ ಬಿಟ್ಟಿದ್ದೇವೆ. ಉಳಿದವರಿಗೆ ಡಿಕ್ಲರೇಷನ್ ಮಾಡಿದ್ದು ಏನುಂಟೋ ಅದನ್ನು ಬಿಟ್ಟು ಉಳಿಕೆಯಾದುದನ್ನು ತೆಗೆದುಕೊಂಡಿದ್ದೇವೆ. ಏನಾದರೂ ತೊಂದರೆಯಾಗಿದ್ದರೆ ದಯವಿಟ್ಟು ತಿಳಿಸಿದರೆ ಅಗತ್ಯವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Repairs to Tank in Veeranayakanahalli in Gulur Hobli

69. Sri GANGA BOVI (Gulur).—

Will the Minister of State for Minor Irrigation be pleased to state :—

(*a*) the extent of atchkat coming under the tank belonging to Veeranayakanahalli village in Gulur Hobli, Tumkur Taluk ;

(*b*) when the said tank breached ;

(*c*) the reasons for not yet sanctioning the work of the said tank even though it has come to the notice of Government ;

(*d*) whether there is any idea of getting the said tank repaired and thus help the ryot-achkatdars under the said tank ?

Smt. BASAVARAJESWARI (Deputy Minister for Social Welfare) [On behalf of SRI A. J. DODDAMETI (Minister of State for Minor Irrigation)].—

(*a*) 93 acres 15 guntas.

(SMT. BASAVARAJESWARI)

(*b*) About 8 years.

(*c*) Since the tank bund, etc., are in a very bad condition, the said tank has to be fully restored and as such survey was conducted and estimate prepared. After consideration it was found that it is too costly and hence it could not be taken up.

(*d*) The matter will be considered.

ಶ್ರೀ ಗಂಗಾಬೋವಿ.—ಎಲ್ಲೆಲ್ಲಿ ಹತ್ತು ಎಕರೆ ಜಮೀನು ನೀರಾವರಿ ಆಗುತ್ತದೆಯೋ ಅಲ್ಲಿ ಒಂದು ಕೆರೆಯನ್ನು ಕಟ್ಟಬೇಕೆಂಬುದು ಸರ್ಕಾರದವರ ನೀತಿಯಾಗಿರುವಾಗ ಇಲ್ಲಿ 92 ಚಿಲ್ಲರೆ ಎಕರೆ ತರಿಯಾಗುವಂತಿದ್ದರೂ ಏಕೆ ಇನ್ನೂ ಕೆರೆಯನ್ನು ದುರಸ್ತಿ ಮಾಡಲಿಲ್ಲಾ ?

† ಶ್ರೀಮತಿ ಬನವರಾಜೇಶ್ವರಿ.—ಅದರ ಎಷ್ಟಿಮೇಟು ಈಗಾಗಲೇ ಆಗಿದೆ. ಅದು ಸರ್ಕಾರದವರ ಪರಿಶೀಲನೆಯಲ್ಲಿದೆ.

ಇನ್ನು ಮೊನ್ನೆ ಯಾರೋ ಲ್ಯಾಂಡ್ ಗ್ರಾಂಟ್ ರೂಲ್ಸ್ ತಂದಿರುವುದಾಗಿ ಹೇಳಿದರು. ಆದರೆ ಮಂತ್ರಿಗಳು ತಂದಿಲ್ಲವೆಂದು ಹೇಳಿದರು. ಇದನ್ನು ಸಭೆಗೆ ತಿಳಿಸಬೇಕು. ರೂಲ್ಸ್ ಮಾಡಿದ್ದರೆ ಯಾವ ತರಹ ಮಾಡಿದೆ ಎಂಬುದನ್ನು ಹೇಳಬೇಕು. ರೂಲ್ಸ್ ನೋಡಬಹುದು, ನಮ್ಮನ್ನು ದೂರುವುದೇಕೆ ಎಂದು ಬರೆದವರು ಹೇಳುತ್ತಾರೆ. ನಮಗೆ ಪೂರ್ತಿ ಸೊತ್ತಿಲ್ಲದಿರುವಾಗ ರೂಲ್ಸ್ ಓದಲು ಸಾಧ್ಯವೇ? ಲ್ಯಾಂಡ್ ರೆವೆನ್ಯೂ ಆಕ್ಟ್ ರೂಲ್ಸಿಗೆ ಎಷ್ಟೋ ತಿದ್ದುಪಡಿಯಾಗಿದೆ. ಎಷ್ಟೋ ಜನರು ದರಖಾಸ್ತು ಹಾಕಿ ಹಾಕಿ ಸಾಕಾದರು, ಎಷ್ಟು ಲಕ್ಷ ಜನರಿಗೆ ಜಮೀನು ಕೊಟ್ಟಿದ್ದಾರೋ ಏನೋ ಲೆಕ್ಕ ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಬಹಳ ಜನ ದರಖಾಸ್ತು ಹಾಕಿದವರು ಸತ್ತಿದ್ದಾರೆ, ಗ್ರಾಂಟ್ ಆದಮೇಲೆ ಸಾಗುವಳಿ ಚೀಟಿ ಸಿಗದೆ ನರಳುತ್ತಿರುವವರಿದ್ದಾರೆ. ಸಾಗುವಳಿ ಚೀಟಿ ಕೊಟ್ಟಮೇಲೆ ತಾವೇನು ಕೆಲಸಮಾಡಬೇಕೋ–ಹೋಧಿ, ರಿಕಾರ್ಡ್ ಆಫ್ ರೈಟ್ಸ್ ಮುಂತಾದ್ದು ಎಂ. ವಿ. ಕೃಷ್ಣಪ್ಪನವರು ಹೇಳುತ್ತಿದ್ದರು—ಅದನ್ನು ಮಾಡದಿದ್ದರೆ, ಭೂಮಿ ಕೊಟ್ಟು ಸಾಗುವಳಿ ಚೀಟಿ ಕೊಟ್ಟರೂ ಬಾಕಿ ಇರುವುದನ್ನು ಕೊಡದಿದ್ದರೆ ಕೇಳುವುದಕ್ಕೆ ಶಂಖ, ಜಾಗಟೆ ತರಬೇಕು. ನಿಮ್ಮಲ್ಲಿ ಖದೀಮ ಅಧಿಕಾರಿಗಳಿದ್ದಾರೆ. ಒಂದು ತಾಲ್ಲೂಕಿನಲ್ಲಿ ಅವರಿದ್ದರೆ ಅಲ್ಲಿರುವುದು ಅವರು ತಮ್ಮ ಸ್ವಂತ ಜಮೀನೆಂದು ಭಾವಿಸುವರು. ಕೇಳುವವರು ಎರಡು ಸಾವಿರ ರೂಪಾಯಿ ಕೊಡಬೇಕು, ಇನ್ನೂರು—ಮುನ್ನೂರು ರೂಪಾಯಿ ಕೊಡಬೇಕು, 20 ವರ್ಷದಿಂದ ಹೀಗೆ ನಡೆಯುತ್ತಿದೆ, ತಮಗೆ ಗೊತ್ತಿರಬಹುದು. ಗೊತ್ತಿಲ್ಲದಿದ್ದರೆ ಹೇಳುತ್ತೇನೆ. ಒಂದು ದರಖಾಸ್ತು ಅರ್ಜಿ ಮಂಜೂರಾಗಬೇಕಾದರೆ ಹೀಗೆ ಕೊಟ್ಟುಕೊಂಡುಬರಬೇಕು. 5 ಎಕರೆ ಪಡ ಜಮೀನಿದ್ದರೆ 50 ಜನರ ಹತ್ತಿರ ದರಖಾಸ್ತು ಅರ್ಜಿ ತೆಗೆದುಕೊಂಡು ಅವರಲ್ಲಿ ಪ್ರತಿಯೊಬ್ಬರಿಂದ 5 ರಿಂದ 100 ರೂಪಾಯಿಗಳವರೆಗೆ ತೆಗೆದುಕೊಂಡು 51ನೆ ಯವರಿಗೆ ಜಮೀನು ಮಂಜೂರು ಮಾಡಿರುವ ಖದೀಮರನ್ನು ನೋಡಿದ್ದೇನೆ. ಲೆಕ್ಕ ಬರೆಸಿಕೊಡುತ್ತೇವೆ ಪಹಣಿ ಬರೆಸಿಕೊಡುತ್ತೇವೆ, ಫಾರಂ ಪ್ರಿಂಟ್ ಆಗಿದೆ, ಬರೆಯುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಾರೆ. 20 ವರ್ಷಗಳಿಂದ ಇದನ್ನು ಕೇಳಿ ಕಿವಿ ಕಿವುಡಾಗಿದೆ. ಸತ್ಯಕ್ಕೆ ದೂರವಾದುದು ಎಂದು ಹೇಳಿದರೆ ಬಹಳ ದೂರವಾಗುತ್ತದೆ. ಆದುದರಿಂದ ಹಸಿ ಸುಳ್ಳು ಎಂದು ಹೇಳಬೇಕಾಗುತ್ತದೆ. ಲ್ಯಾಂಡ್ ಗ್ರಾಂಟ್ ರೂಲ್ಸ್ ಜಾರಿಗೆ ಕೊಟ್ಟಿದ್ದೀರಾ? ಸಿದ್ಧಮಾಡಿದ್ದೀರಾ! ಅದರ ಪ್ರಕಾರ ಜಮೀನು ಹಂಚಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಿದ್ದೀರಾ! ಆ ಪ್ರಕಾರ ಕೆಲಸಮಾಡುತ್ತಿದ್ದೀರಾ! ನಾಳೆ ಏನಾದರೂ ದೂರು ಬಂದರೆ ದರಖಾಸ್ತು ಹಾಕಿ ಇಷ್ಟು ದಿವಸವಾಗಿದೆ, ಹಣ ಕೊಟ್ಟು ಇಷ್ಟು ದಿವಸವಾಯಿತು ಎಂದು ಹೇಳಿದರೆ ಕ್ರಮ ತೆಗೆದುಕೊಂಡು ಜಾಗ ಕೊಡುತ್ತೀರಾ! ಈ ಪ್ರಶ್ನೆ ಕಂದಾಯಕ್ಕೆ ಸಂಬಂಧಪಟ್ಟ ಪ್ರಶ್ನೆ. ಇದಕ್ಕೆ ಉತ್ತರ ಕೊಡಬೇಕು. ಕಾರವಾರದವರು ಸತ್ಯಾಗ್ರಹ ಮಾಡುತ್ತಾರಂತೆ, ಬೇರೆಕಡೆ ಕೂಡ ಮಾಡಬಹುದು, ಭೂಮಿಯ ದಾಹ ಬಹಳವಾಗಿದೆ, ಒಂದು ಲಕ್ಷಕ್ಕೆ ಮೇಲ್ಪಟ್ಟು ಜನರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿದ್ದಾರೆ, ಪದವೀಧರರು ಲಾರಿ, ಬಸ್ಸುಗಳನ್ನು ನಡೆಸುವ ಪರಿಸ್ಥಿತಿ ಇದೆ, ಎಲ್ಲಾ ದೃಷ್ಟಿಯಿಂದ ನೋಡಿದರೆ ಕರಿಣ ಪರಿಸ್ಥಿತಿ ಇದೆ. ಬಹಳ ಜನರಿಗೆ ಭೂಮಿಯನ್ನು ನಲಂಬಿಸಿದರೆ ಜೀವಿಸಬಹುದು ಎಂಬ ಆಸೆ ಇದೆ. ಕೆಲವರು ಭೂಮಿಕಡೆ ತಿರುಗಿದ್ದಾರೆ ಈ ಸಂದರ್ಭದಲ್ಲಿ ದರಖಾಸ್ತುಗಳನ್ನು ಯಾವಾಗ ಏಲೇ ಮಾಡುವುದು, ಭೂಹೀನರಿಗೆ ಬೇಸಾಯದ ಕೂಲಿ ಮಾಡುವವರಿಗೆ, ಮುಖ್ಯವಾಗಿ ಹರಿಜನ–ಗಿರಿಜನರಿಗೆ ಜಮೀನು ಬೇಕೆಂದು ಬಹಳ ದಿವಸದಿಂದ ಕೇಳುತ್ತಿದ್ದಾರೆ. ಈಚೆಗೆ ರಾಮನಗರಕ್ಕೆ ಹೋಗಿದ್ದೆ, ಅಲ್ಲಿ ಕೂಲಿ ಮಾಡುವವರಿಗೆ ಹಿಂದಿನ ಅರಣ್ಯ ಶಾಖೆಯ ಮಂತ್ರಿಗಳಿಗೆ ಭೂಮಿ ಕೊಡಿಸಬೇಕೆಂದು ಬಹಳ ಸಲ ಹೇಳಿದರೂ ಕೊಟ್ಟಿಲ್ಲ. ಅರಣ್ಯ ಬೆಳೆ

ನುತ್ತೇವೆಂದು ಹೇಳುತ್ತಾರೆ ನಮ್ಮ. ಹೆಣದಮೇಲೆ ಬೆಳೆಸುತ್ತೀರಾ ? ಯಾವ ಜಮೀನು ಅರಣ್ಯ ಇರಾಖೆಯಲ್ಲಿರುವುದು ಸಾಗುವಳಿಗೆ ಯೋಗ್ಯವಾಗಿದೆ ಅದನ್ನು ಈಗಿಂದೀಗಲೇ ಅರಣ್ಯ ಇಲಾಖೆ ಬಿಡುಗಡೆ ಮಾಡಿ ಭೂಮಿಗಾಗಿ ಯಾವ ರೈತರು ಅನೇಕ ವರ್ಷಗಳಿಂದ ದರಖಾನ್ತು ಹಾಕಿ ಜಮೀನು ಮಂಜೂರಾಗದೆ ಇದೆ, ಅವರಿಗೆ ಜಮೀನು ಮಂಜೂರುಮಾಡಿ ಅದಕ್ಕೆ ಕಂದಾಯ ನಿಗದಿಮಾಡಬೇಕು, ಟಿ.ಟಿ. ಹಾಕಬಾರದು. ಬಹಳ ಭಾಗದ ಅರಣ್ಯದ ಭೂಮಿ ಸಾಗುವಳಿಗೆ ಲಾಯಕ್ಕಾಗಿದೆ, ಅದು ಎಲ್ಲಿದೆ ಯೆಂಬುದು ಗೊತ್ತಿದೆ, ತೋರಿಸುತ್ತೇನೆ. ಬಿದನೂರು ಸಾಮ್ರಾಜ್ಯವು ಹಾಳಾದಮೇಲೆ ಎಲ್ಲಾ ಗ್ರಾಮಗಳೂ ಅರಣ್ಯಕ್ಕೆ ಸೇರಿವೆ, ಮರ ಗಿಡ ಇಲ್ಲದಿರುವುದನ್ನು ಮೈನರ್ ಫಾರೆಸ್ಟ್ ಎಂದು ಹೇಳುತ್ತಾರೆ. ದರಖಾನ್ತು ಹಾಕಬಾರದೆಂದು ಹೇಳಿದ್ದೀರಾ ? ಉಳುಮೆ ಮಾಡಿರುವವರ ಮನೆಗೆ ಗಾರ್ಡ್‌ನುಗ್ಗಿ ಕೋಳಿ ಮುಂತಾದ್ದನ್ನೆಲ್ಲಾ ತೆಗೆದುಕೊಂಡು ಹೋಗುತ್ತಿದ್ದಾರೆ, ಅರಣ್ಯವಿರುವ ಕಡೆ ಹಿಗಾಗಿದೆ. ಅನೇಕ ವರ್ಷಗಳಿಂದ ಅರಣ್ಯದ ಮಧ್ಯದಲ್ಲಿ ಊರಿದೆ, ಅರಣ್ಯ ಸಂಪೂರ್ಣವಾಗಿ ನಾಶವಾಗಿದೆ ಅರಣ್ಯ ಮಂತ್ರಿಗಳಿಗೆ ತೋರಿಸುತ್ತೇನೆ, ಕಾಡುಕಿಚ್ಚು 3 ತಿಂಗಳ ಕಾಲ ಇರುವುದು ಅರಣ್ಯ ಬೆಳೆಸುವುದು ಕಾರ್ಯಗತವಾಗಿರಬಹುದು, ಅದು ಬೇರೆ. ಆದರೆ ಈ ದಿವನ ಭೂಮಿಗೆ ಯಾರು ಬೇಡಿಕೆ ಸಲ್ಲಿಸಿದ್ದಾರೆ. ಅವರಿಗೆ ಕೊಡಬೇಕು ಆರೂವರೆ ಎಕರೆಗಳಿಗಿಂತ ಕಡಿಮೆ ಹಿಡುವಳಿ ಇರುವವರಮೇಲೆ ಕಂದಾಯ ತೆಗೆಯಬೇಕು, ಕೊಡುವ ಶಕ್ತಿಯಿರುವವರ ಮೇಲೆ ನೇರವಾಗಿ ಆದಾಯ ತೆರಿಗೆ ವಿಧಿಸುವುದನ್ನು ಪರಿಶೀಲಿಸಬೇಕು. ಇದಕ್ಕೆ ವಿರೋಧ ಕೆಲವು ಕಡೆ ಇರಬಹುದು, ಕಾರಣ ಕರುಕುಳ ಲೆಕ್ಕ ಇಡಬೇಕು, ಕೊಟ್ಟ ಲೆಕ್ಕ ತಪ್ಪು ಎಂದು ಹೇಳುವುದು, ಒಪ್ಪದೆ ಇರುವುದು, ಮತ್ತು ಜಮೀನು ಮನೆ ಹರಾಜಿಗೆ ತರುವುದು. ಇದಕ್ಕೆ ಬಹಳ ಮಂದಿ ಹೆದರಿ ಕಂದಾಯ ಕೊಡುವುದು ಕೃಷಿ, ಸಂಪತ್ತಿನಮೇಲೆ ತೆರಿಗೆ ಕೊಡುವುದಕ್ಕೆ ಹಿಂದೇಟು ಹೊಡೆಯುವುದು ಕಂಡುಬರುತ್ತದೆ. ಕೃಷಿ ವರಮಾನ ತೆರಿಗೆ ಹಾಕುವುದನ್ನು ವಿರೋಧಿಸುತ್ತಿದ್ದಾರೆ ಎಂದು ಕೆಲವರು ಮುಖಂಡರು ಕಟುವಾಗಿ ಹೇಳಿದ ಮೇಲೆ ಈ ಸೂಚನೆಯನ್ನು ಕೈಬಿಡಲಾಯ್ತು ಎಂದು ಕೇಳಿದೆ.

ಇಪತ್ತು ರಾಜ್ಯದ ಬೊಕ್ಕಸಕ್ಕೆ ಬರತಕ್ಕ ಸುಮಾರು ಎರಡು ಕೋಟಿ ರೂಪಾಯಿ ಕೃಷಿ ವರಮಾನದಲ್ಲಿ ಹೆಚ್ಚು ಕಮ್ಮಿ ಒಂದು ಕೋಟಿ 50 ಲಕ್ಷ ರೂಪಾಯಿನಷ್ಟು ಪ್ಲಾಂಚೇಷನ್ ಅವರೇ ಕೊಡುತ್ತಾರೆ ಎಂದು ನನಗೆ ಅನಿಸುತ್ತದೆ. ಆದ್ದರಿಂದ ನೇರವಾಗಿ ಹೊರಬಲ್ಲವರ ಮೇಲೆ ತೆರಿಗೆಯನ್ನು ಹೊರಿಸಬೇಕೇ ಹೊರತು, ಹೊರಲಾರದಂಥವನ ಮೇಲೆ ನಾನಾ ರೂಪದಲ್ಲಿ ತೆರಿಗೆಯನ್ನು ತಂದು ಹೇರಿ ಅವನನ್ನು ಬೇಟೆಯಾಡುತ್ತೀರಿ, ಷಿಕಾರಿ ಮಾಡುತ್ತೀರಿ. ಅದಕ್ಕೇ ನಾವು ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತೇವೆ. ಇಂತಹ ಅಧಿಕಾರವನ್ನು ಈಗಿರತಕ್ಕ ಎಲ್ಲಾ ಅಧಿಕಾರಿಗಳಿಗೂ ಕೊಡುವುದಕ್ಕೆ ಸಾಧ್ಯವಿಲ್ಲ, ನಾನಂತೂ ಸಿದ್ಧನಾಗಿಲ್ಲ — ನಾನು ವೈಯಕ್ತಿಕವಾಗಿ ಹೇಳುವುದಾದರೆ. ಕೆಲವರು ಇರಬಹುದು—ಬಹಳ ನ್ಯಾಯ ದೃಷ್ಟಿ, ಅವರಿಗೆ ನ್ಯಾಯ ಮಾಡುವ ದೃಷ್ಟಿ, ಬಡವನ ಮೇಲೆ ಕರುಣೆ, ಬೊಕ್ಕಸದ ಮೇಲೆ ದೃಷ್ಟಿ—ಅಪಹರಿಸುದು ಅಲ್ಲ—ರಾಜ್ಯದ ಬೊಕ್ಕಸಕ್ಕೆ ಹಣ ಬರಬೇಕೆನ್ನುವ ದೃಷ್ಟಿ, ಸರ್ಕಾರ ಹೆನ್ನಾಗಿ ನಡೆಯಬೇಕೆನ್ನುವ ದೃಷ್ಟಿಯುಳ್ಳವರು ಅಧಿಕಾರ ಕೊಡುವುದಕ್ಕೆ ಸಿದ್ಧರಿರಬಹುದು, ಇಲ್ಲ ಅಂತ ಹೇಳುತ್ತಿಲ್ಲ. ಈ ವ್ಯವಸ್ಥೆ ಕೆಟ್ಟು ಹಾಳಾಗಿ, ಮೇಲಿಂದ ಕೆಳಗಿನ ತನಕ ದುರುಪಯೋಗವಾಗುತ್ತಾ ಇದೆ—ಒಬ್ಬ ವಿಲೇಜ್ ಅಕೌಂಟೆಂಟು ಅಧಿಕಾರ ದುರುಪಯೋಗ ಪಡಿಸಿಕೊಂಡದ್ದನ್ನು ಹೇಳುತ್ತೇನೆ. ನಮ್ಮ ಊರಿನಲ್ಲಿ ನಮ್ಮ ಜೊತೆಯಲ್ಲಿ ಜೈಲಿನಲ್ಲಿ ಇದ್ದವನನ್ನು 57ರಿಂದ ಓಟರುಗಳ ಲಿಸ್ಟ್‌ನಲ್ಲಿ ಸೇರಿಸಿದ್ದಾರೆ, ಇಂತಹ ನೂರಾರು ದುರುಪಯೋಗಗಳು ನಡೆದಿವೆ. ಮೇಲಿನವರ ವಿಷಯ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಅದು ಎಲ್ಲರಿಗೂ ಮೇಲೆಯೇ ಕಾಣುತ್ತದೆ. ಹೀಗಿರುವಾಗ ವ್ಯವಸ್ಥೆಯ ಬಗ್ಗೆ ನಮಗೆ ಕಳವಳ ಇದೆ, ಕುಸಿದು ಬೀಳುವ ಸ್ಥಿತಿಯನ್ನು ಮುಟ್ಟಿರತಕ್ಕ ಈ ವ್ಯವಸ್ಥೆಯನ್ನು ಹೇಗೆ ಹೊತ್ತು ಮುಂದೆ ಸಾಗುತ್ತೀರಿ, ನಿಮ್ಮ ಬೊಕ್ಕಸಕ್ಕೆ ಯಾರಿಂದ ಹಣವನ್ನು ತುಂಬಿಕೊಳ್ಳುತ್ತೀರಿ, ನಾನು ಇದುವರೆಗೂ ಹೇಳಿರತಕ್ಕ ಸಂಕಷ್ಟಗಳನ್ನು ಹೇಗೆ ಪರಿಹಾರ ಮಾಡುತ್ತೀರಿ ? ಇದನ್ನು ನಾನು ರಾಜಸ್ವ ಮಂತ್ರಿಗಳಿಗೆ ಪ್ರಶ್ನೆ ಹಾಕಬೇಕಾಗಿದೆ. ಇಷ್ಟು ಹೇಳಿ, ಇನ್ನು ಈ ಅರಣ್ಯ ಇಲಾಖೆಯವರ ವಿಷಯ ಸ್ವಲ್ಪ ಹೇಳಬೇಕಾಗಿದೆ. ಅರಣ್ಯ ಇಲಾಖೆಯವರ ಷಿಕಾರಿ ನಡೆಯುತ್ತಾ ಇದೆ. ಅಲ್ಲಿಂದ ಎಲೆ ತರುವುದು ಕಷ್ಟ, ಅಲ್ಲಿ ಹೋಗಿ ಜಮೀನಿನಲ್ಲಿ ಕಾಲು ಇಡುವುದು ಕಷ್ಟ, ಅಲ್ಲಿರತಕ್ಕ ಜಮೀನಿನಲ್ಲಿ ದನಗಳು ಮೇಯುವುದಕ್ಕೆ ಹೋಗುವುದೂ ಕೂಡ ಕಷ್ಟ. ಶ್ರೀಮಾನ್ ರಾಜಯ್ಯನವರಿಗೆ ತಮ್ಮ ಮೂಲಕ ಹೇಳುತ್ತೇನೆ. ಅವರು ಅರಣ್ಯ ಇರಾಖೆಯ ಹೊಸ ಕಾನೂನನ್ನು ಬರೆಯುವಾಗ ಯಾವ ಬ್ರಿಟಿಷರು ಮನೆಯಾಡಿನ ರೈತರಿಗೆ ಸೊಪ್ಪಿನ ಬೆಟ್ಟ, ಕುಂಕಿ ಇತ್ಯಾದಿ ಸಲಿಕತ್ತುಗಳನ್ನು ಕೊಟ್ಟಿದ್ದರೋ ಅದಕ್ಕೆ ಒಂದು ಆರ್ಡರ್ ಮಾಡಿದ್ದರೋ ಆ ಆರ್ಡರನ್ನು ನಾನು ಗೌರವಿಸುತ್ತೇನೆ ಅಂತ ಹೇಳಿ ಅಶ್ವಾಸನೆ ಕೊಟ್ಟದ್ದು ತಪ್ಪಾಗಿ ನೆನಪಿರಬಹುದು, ಸೆಕೆಂಡ್

(ಶ್ರೀ ಎಸ್. ಗೋಪಾಲಗೌಡ)

ಕಮಿಟಿಯಲ್ಲಿ ನನಗೆ ಮತ್ತು ಸುಬ್ಬಯ್ಯನಾಯಕ್‌ರವರಿಗೆ ಇವತ್ತು ಅದಕ್ಕೆ ತದ್ವಿರುದ್ಧವಾದ ಕ್ರಮ ಅರಣ್ಯ ಇರಾಖೆಯಿಂದ ನಡೆಯುತ್ತಾ ಇದೆ, ರೈತರನ್ನು ಷಿಕಾರಿ ಮಾಡುತ್ತಾ ಇದ್ದೀರಿ, ಕಾಡನ್ನು ಮನಸ್ಸಿಗೆ ಬಂದ ಹಾಗೆ ಕಡಿಯುತ್ತಾ ಇದ್ದೀರಿ, ಮನೆಬಾಗಿಲಿನ ಹತ್ತಿರ ಹಿಂದುಗಡೆ ಮುಂದುಗಡೆ ಬಂದು ಗೊಂದಲ ಹುಟ್ಟಿ ಕಾಡುತ್ತಾ ಇದ್ದೀರಿ. ತಾವು ಹೇಳಿದರಿ ಸೆಟ್ಲಮೆಂಟ್ ಆಫೀಸರನ್ನು ನೇಮಕ ಮಾಡುತ್ತೇವೆ, ಜನರನ್ನು ಕೇಳುತ್ತೇವೆ, ಬೆಳೆಗಾರರನ್ನು ಕೇಳಿದ ಮೇಲೆ ಕೃಷಿಗೆ ಯೋಗ್ಯವಾದ ಭೂಮಿಯನ್ನು ಬಿಟ್ಟು ಕೊಟ್ಟು ಊರಿಗೆ ದೂರವಾಗಿ ಕಾಡನ್ನು ಬೆಳೆಸುತ್ತೇವೆ ಎಂದು ಇದಕ್ಕೆ ತದ್ವಿರುದ್ಧವಾಗಿ ಇವತ್ತು ಅರಣ್ಯ ಇರಾಖೆಯವರು ನಡೆಯುತ್ತಾ ಇದ್ದಾರೆ, ಅದಕ್ಕೆ ಎಷ್ಟು ಕಂದಾಯ ಕೊಡಬೇಕೋ ಯಾರಿಗೂ ಗೊತ್ತಿಲ್ಲ. ಇವತ್ತು ಈ ಅದಿವಾಸಿ ಜನರಿಗೆ ಅರಣ್ಯ ಇರಾಖೆಯವರಿಂದ ಆಗತಕ್ಕ ಕಿರುಕುಳವನ್ನು ತಪ್ಪಿಸುವುದೂ ಕೂಡ ಅರಣ್ಯ ಮಂತ್ರಿಗಳ ಮತ್ತು ರಾಜಸ್ವ ಮಂತ್ರಿಗಳ ಜವಾಬ್ದಾರಿಯಾಗಿರುತ್ತದೆ. ಇದು ನಾನು ಮೊದಲೇ ಹೇಳಿದ ಹಾಗೆ ಒಂದಕ್ಕೆ ಒಂದು ಹೊಂದಿಕೊಂಡ ವಿಷಯವಾಗಿದೆ.

ಕೊನೆಯದಾಗಿ ರಾಜ್ಯದಲ್ಲಿ ಬಹುಪಾಲು ಮಳೆ ನೆರಳಿನ ಭಾಗ ಎಂದು ಹೇಳಬಹುದು. 10–13–14–15–18 ಇಂಚು ಮಳೆ ವರ್ಷದಲ್ಲಿ ಆಗುತ್ತದೆ. ಆಗುಂಬೆಯಂಥ ಕಡೆ 200 ಇಂಚೂ ಆಗಬಹುದು. ಮರೆನಾಡಿನಲ್ಲಿ 200 ಇಂಚಿನಿಂದ ಹಿಡಿದು 16–18 ಇಂಚಿನವರೆಗೂ ಮಳೆ ಯಾಗತಕ್ಕ ಪ್ರದೇಶವಿದೆ. ಶಿರಾಳಕೊಪ್ಪ, ಅಥವಾ ಸೊರಬ ಇಂತಹ ಕಡೆ 16–18 ಇಂಚು ಮಳೆಯಾಗುತ್ತದೆ. ಬಿಜಾಪುರ ಇಂತಹ ಪ್ರದೇಶ ಯಾವಾಗಲೂ ಕ್ಷಾಮದ ದವಡೆಯಲ್ಲಿರತಕ್ಕ ಊರುಗಳೂ ಕೂಡ ಇವೆ. ತಾವು ಹೋದವರ್ಷ ಹೇಳಿದರಿ ಈ ಮಾನ್ಯ ನಭೆಯಲ್ಲಿ ಒಂದು ಅಥವಾ ಎರಡು ಕೋಟಿ ರೂಪಾಯಿ ಆದರೂ ಸಾಧವಿಲ್ಲ ಹತ್ತು ಕೋಟಿ ರೂಪಾಯಿಗಳ ನೆರವು ಕೇಂದ್ರ ದವರು ನಮಗೆ ಕೊಡಬೇಕಾಗುತ್ತದೆ, ಇಲ್ಲಿ ಬಹಳ ಕ್ಷಾಮ ಇದೆ, ಧಾತು ಈಶ್ವರ ಕ್ಷಾಮದಂತಹ ಕ್ಷಾಮ ಮತ್ತೆ ಬರುತ್ತದೆ, ಇದು ಪದೇ ಪದೇ ಬರುತ್ತ ಇದೆ, ಆದ್ದರಿಂದ ಎಲ್ಲಿತನಕ ಭೂಮಿಗೆ ನೀರಾವರಿ ಸೌಕರ್ಯವನ್ನು ಒದಗಿಸಿಕೊಡುವುದಿಲ್ಲವೋ ಅಲ್ಲಿಯ ತನಕ ಮಳೆ ಬರದೇ ಇದ್ದಲ್ಲಿ ಈ ಅಭಾವ, ಮಳೆ ಬಂದರೆ ಅತಿವೃಷ್ಟಿ ಇದರಿಂದ ಭೂಮಿ ಹಾಳಾಗುವುದು, ಇದು ಸಾಮಾನ್ಯ ನಿಯಮ ಇದನ್ನು ಕ್ಷಾಮ ಮತ್ತು ನೆರೆಗಳು ಎಂದು ನಾವು ಹೇಳಬಹುದು ಇದರಲ್ಲಿ ಕಂದಾಯ ವಸೂಲು ಮಾಡುವುದಕ್ಕೆ ತಮ್ಮ ಅಧಿಕಾರಿಗಳು ಬರೆಯುತ್ತಾರೆ ನಾನು ನೋಡಿದ್ದೇನೆ, ಶಿವಮೊಗ್ಗಾದಲ್ಲಿ ಒಬ್ಬರು ಜಿಲ್ಲಾಧಿಕಾರಿಗಳಿದ್ದರು ಅವರು ಒಂದು ರಿಪೋರ್ಟ್ ಬರೆದರು. 'ಜಿಲ್ಲೆಯಲ್ಲಿ ಸುಮಾರು 90 ಭಾಗ ಮಳೆ ನೀರಿನಿಂದ ಬೆಳೆಯಾಗುವ ಭೂಮಿ ಇದೆ ಎಂದು. ನೂರಕ್ಕೆ 90 ಭಾಗ ಎಂದರೆ ಮುಗಿಯಿತಲ್ಲಾ. ಇನ್ನು ಹತ್ತು ಭಾಗ ಉಳಿದದ್ದು ತುಂಗಾ ಒಂದು ಸಣ್ಣ ಅಣೆಕಟ್ಟು, ಭದ್ರಾದಲ್ಲಿ ಸ್ವಲ್ಪ ಭಾಗ ಈಚೆಗೆ ಕೃಷಿಯಾಗಿದೆ. ಇನ್ನು ಸಣ್ಣ ಶಾಂತಿ ಸಾಗರ ಇತ್ಯಾದಿ ಕೆಲವು ಇವೆ. ಕೇಕಡೆ 90 ರಷ್ಟು ಭೂಮಿಯಲ್ಲಿ ಮಳೆ ನೀರಿನಿಂದ ಬಿತ್ತ ಬೆಳೆಯುತ್ತಾರೆ ಅಂತ ಆ ನಾಯಕರು ಹೇಳಿದರು. ಆ ಮೇಲೆ 4 ಆಣೆಗಿಂತ ಕಮ್ಮಿ ಬೆಳೆ ಆಗಿಲ್ಲ ಅಂಥ ಪೂರ್ತಿ ಕಂದಾಯ ವಸೂಲು ಮಾಡಿದರು. ಮಳೆ ಬರಲಿ, ಬರದೇ ಇರಲಿ ಮಲೆನಾಡಿನಲ್ಲಿ ಗೇಣಿದಾರ—ಮೂಲಗೇಣಿದಾರ—ಅವಧಿ ಗೇಣಿದಾರ—ಮತ್ತು ಚಾಲಗೇಣಿದಾರ ಗೊತ್ತಾದ ಗೇಣಿಯನ್ನು ತೆರಲೇ ಬೇಕು. ಅದಕ್ಕೆ ಒಡೆಯನ ಗಂಟು ಅಂತ ಹೇಳುತ್ತಾರೆ. ಶ್ರೀಮತಿ ರೈರವರು. ನಾನು ದಕ್ಷಿಣ ಕನ್ನಡ ಜಿಲ್ಲೆಯನ್ನು ನೋಡಿದ್ದೇನೆ. ನಾನು ತಮ್ಮ ರೈತನನ್ನು ನೋಡಿದ್ದೇನೆ—ಕಾಫೀನ ಒಂದು ಬಿಟ್ಟು ಅವನ ಪ್ಲಸ್ ಮೇಲೆ ಏನಾದರೂ ಬಿತ್ತೆ ಇದೆಯೇ! ಯಾವುದಾದರೂ ಒಂದು ತೋರಿಗೆ ಹೋಗುವಾಗ ಒಂದು ಬುಚಗಾನಿ ಹೊದ್ದುಕೊಂಡು ಮುಂಡಾನು ನುತ್ತಿಕೊಂಡು, ಕಾಲಿಗೆ ಒಂದು ಬೆಳ್ಳಿ ಸರಿಗೆ ಹಾಕಿಕೊಂಡು ಹೋಗುತ್ತಾನೆ. ಮಲೆನಾಡಿನ ರೈತನನ್ನು ಮೂದಲಿಸುತ್ತೇನೆ, ಹಳಿಯುತ್ತೇನೆ ಎಂದು ತಾವು ತಿಳಿಯಬಾರದು. ಶ್ರೀಮತಿ ರೈರವರು ಜವಾಬ್ದಾರರು, ಮತ್ತು ಜವಾಬ್ದಾರಿಯುತ ಸದಸ್ಯರು ಅವರು ಹೇಳುತ್ತಾರೆ. ಅವರನ್ನು ಟೀಕೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಇವತ್ತಿಗೂ ಕೂಡ ಮುಡಿ ಅಕ್ಕಿ ಕೊಟ್ಟು ಧಣಿಯ ಪಾದಕ್ಕೆ ಬಿದ್ದು ಗೇಣಿದಾರ ಮನೆಗೆ ಹೋಗುತ್ತಾ ಇದ್ದಾನೆ. ಇದನ್ನು ನಾನು ನೋಡಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಲಕ್ಷಾಂತರ ಜನರು ಶಿವಮೊಗ್ಗ ಜಿಲ್ಲೆಗೆ ಬಂದು ಇಲ್ಲಿ ತೋಟಗಳಲ್ಲಿ ಕೂಲಿ ಕೆಲಸ ಮಾಡಿ ಮತ್ತೆ ಮಳೆಬಂದಾಗ ತಮ್ಮ ಊರಿಗೆ ಅವರು ಹೋಗುತ್ತಿದ್ದಾರೆ; ಅಲ್ಲಿ ಬೇಸಾಯ ಮಾಡಲಿಕ್ಕೆ ಈ ದಿವಸವೂ ಕೂಡ ಈ ಘುಂಜೆಯಲ್ಲಿ ಕೂಡ ಅವರು ಆ ರೀತಿ ಬಂದು ಹೋಗುತ್ತಿದ್ದಾರೆ. ನಾನು ಅದನ್ನು ಕಣ್ಣಾರೆ ನೋಡಿದ್ದೇನೆ. ಇದನ್ನು ನಾನು ಮಾಡಬಹುದು, ಬೇಕಾದರೂ ವಿಚಾರ ಮಾಡಬಹುದು. ನಾವು ಈ ದಿವಸವೇ ಬೇಕಾದರೂ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗೋಣ, ಅಲ್ಲ ನೋಡೋಣ. ಆ ಜನರ ಸ್ಥಿತಿಗತಿಗಳನ್ನು ನಾವು ಆ ಕನ್ನಡಜಿಲ್ಲೆಯ ಗೇಣಿದಾರರ ಬಗ್ಗೆ ಅಥವಾ..

ಅವರ ಪರವಾಗಿ ಹೇಳುವುದಾದರೆ ನಾನು ಧೈರ್ಯವಾಗಿ ಹೇಳುತ್ತೇನೆ ಅಲ್ಲಿಯ ಗೇಣಿದಾರರು ಶೋಷಿತ ವರ್ಗದಲ್ಲಿ ಶೋಷಿತ ವರ್ಗ. ಅವನ ಮೈಮೇಲೆ ಕಾಪಿನ ಒಂದನ್ನು ಬಿಟ್ಟರೆ ಇನ್ನು ಏನೂ ಇರುವುದಿಲ್ಲ. ಹಾಗಿದ್ದರೂ ಅವನು ಕಾಲಕ್ಕೆ ಸರಿಯಾಗಿ ತನ್ನಲ್ಲಿರತಕ್ಕ ಅಕ್ಕಿಯ ಮುಡಿಯನ್ನು ಗಂಟುಕಟ್ಟಿಕೊಂಡು ಅದನ್ನು ತಲೆಯಮೇಲೆ ಹೊತ್ತುಕೊಂಡು ಜಮೀನುದಾರನ ಮನೆಗೆ ಹೋಗಿ ಮುಡಿಯಕ್ಕಿ ಗಂಟನ್ನು ಕೊಟ್ಟು ಧಣಿಯ ಪಾದಕ್ಕೆ ಬಿದ್ದು ಅವನು ತನ್ನ ಮನೆಗೆ ಹೋಗುತ್ತಿದ್ದಾನೆ. ಅದು ಇಲ್ಲಿಯವರೆಗೂ ನಡೆಯುತ್ತಿದ್ದದ್ದು ಹೀಗೆ. ಈಗ ಅದು ಬದಲಾಗಿದೆ. ಈ ದಿವಸ ಗೇಣಿದಾರ ಭೂಮಾಲೀಕನ ಮನೆಗೆ ಬರುವುದಿಲ್ಲ. ಭೂಮಾಲೀಕನೇ ಅವನ ಗುಡಿಸಿಲಿಗೆ ಹೋಗಿ ಅವನನ್ನು ಒದ್ದು ಹೊರಗೆ ಹಾಕಿ ಅವನನ್ನು ಬೈಯ್ದು ಹೊಡೆದು, ಅವನು ಮಾಡಿದ ಕಳ್ಳನ್ನು ಕುಡಿದು ಅವನ ಹೆಂಡ್ತಿ ಮಕ್ಕಳನ್ನೂ ಒದ್ದು ತನ್ನ ಮನೆಗೆ ಬಂದಿರತಕ್ಕದನ್ನು ನಾನು ನೋಡಿದ್ದೇನೆ. ಅದರಬಗ್ಗೆ ನಾನು ಕಣ್ಣೀರನ್ನು ಹಾಕಿದ್ದೇನೆ. ನಾನು ಅಲ್ಲ ಅಂದರೆ ದಕ್ಷಿಣ ಕನ್ನಡಜಿಲ್ಲೆಯಲ್ಲ ಪಾಣಿ ಮಂಗಳೂರು, ಬಂಟವಾಳ, ಉಡುಪಿ, ಕುಂದಾಪುರ, ಬ್ರಹ್ಮಾವರ, ಪುತ್ತೂರು ಬೈಂದೂರು ಮತ್ತು ಕಾರ್ಕಳ ಇವೆಲ್ಲವನ್ನೂ ನೋಡಿದ್ದೇನೆ. ಹಿಂದೆ ಇಂದು ಮೈನೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರತಕ್ಕ ನಾಗಪ್ಪ ಆಳ್ವರವರು ಪಿ. ಎಸ್. ಪಿ. ಪಾರ್ಟಿಯಲ್ಲಿದ್ದರು. ಆಗ ಕೇರಳದಲ್ಲಿ ಪಟ್ಟಂ ತಾನು ಪಿಳ್ಳೆಯವರ, ಮುಖ್ಯಮಂತ್ರಿಗಳಾಗಿದ್ದರು. ಆಗ ನಾನೂ ಪಾಣಿಮಂಗಳೂರಿನಲ್ಲಿ ಭಾಷಣ ಮಾಡಿದ್ದೇನೆ. ಅಲ್ಲಿ ಆಗ ನಾಗಪ್ಪ ಆಳ್ವರಿದ್ದರು. ಅವರು ಪಿ. ಎಸ್. ಪಿ. ಪಕ್ಷದಲ್ಲಿದ್ದರು. ಹೀಗೆ ಕಾಲ ಬದಲಾಯಿಸುತ್ತಿದೆ. ಚಕ್ರನೆತ್ತುತ್ತಿರುವಾಗ ಮೇಲಿದ್ದವು ಕೆಳಕ್ಕೆ ಬರಲೇ ಬೇಕು. ಅದರಂತೆ ನಾವು ಈ ಕಾಲಚಕ್ರದಲ್ಲಿ ಸಿಕ್ಕಿಕೊಂಡು ಸುತ್ತುತಿರುಗುತ್ತಿದ್ದೇವೆ. ನಮಾಜದಲ್ಲಿ ಇಂದು ಇರತಕ್ಕ ಸ್ಥಿತಿಗತಿಗಳೂ ಹೀಗೇ ಇರುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆ ಯಾರಾದರೂ ನಂಬಿದ್ದರೆ ಅದು ಅವರ ಅಜ್ಞಾನ. ನಮಾಜದಲ್ಲಿ ಒಂದು ಕ್ರಾಂತಿಯುಂಟಾಗುವುದಕ್ಕೆ ಮೊದಲೇ ಎಚ್ಚೆರ ಗೊಳ್ಳಬೇಕು. ಅದು ಜಾಣ್ಮೆ. ಹಾಗಿಲ್ಲದೆ ಸಮಾಜದಲ್ಲಿ ಒಂದು ದೊಡ್ಡ ಕ್ರಾಂತಿಯೆದ್ದಾಗ ಅದರಲ್ಲಿ ಸಿಕ್ಕಿಕೊಂಡು ಪ್ರಾಣಬಿಡುವುದು ಜಾಣ್ಮೆಯಲ್ಲ. ಈ ದಿವಸ ಅಮೆರಿಕೆಯ ಇರತಕ್ಕ ಕೆಲವು ಸದಸ್ಯರನ್ನು ಕೇಳಿದರೆ ಅಂದರೆ ನೀವೆ ಆಸ್ತಿಯನ್ನು ಬಿಡುತ್ತೀರೋ ಪ್ರಾಣವನ್ನು ಬಿಡುತ್ತೀರೋ ಎಂದು ಒಂದು ಪ್ರಶ್ನೆ ಹಾಕಿದರೆ ಅವರು ಆಸ್ತಿಯನ್ನು ಬಿಡುತ್ತೇವೆಂದು ಹೇಳಬಹುದು ಅನ್ನತಕ್ಕ ನಂಬಿಕೆ ನನಗಿದೆ. ಈ ದಿವಸ ಆಸ್ತಿವಂತರೆನಿಸಿಕೊಂಡವರೆಲ್ಲಾ ಆಸ್ತಿವಂತರಲ್ಲ. ತಮ್ಮ ಆಸ್ತಿ ಮತ್ತು ತಮ್ಮ ಪ್ರಾಣ ಈ ಎರಡರಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳತಕ್ಕ ಕಾಲ ಬೇಗ ಬೇಗ ಬರುತ್ತಿದೆ, ಎಂದು ನನಗೆ ಅನಿಸುತ್ತಿದೆ. ನಾನು ಗ್ರಾಮುಕನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಆ ಕಾಲ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಟ್ಟುಕೊಂಡು ಬೇಗ ಬೇಗ ಬರುತ್ತಿದೆ. ಅದನ್ನು ತಾವು ಗಮನಿಸಿದೆ ವಿಳಂಬ ಮಾಡಿದ್ದೇ ಆದರೆ ಅಧಿಕಾರದಲ್ಲಿರತಕ್ಕ ಜನ ಅವರ ಅಧಿಕಾರಕ್ಕೂ ಪ್ರಾಣಕ್ಕೂ ದೊಡ್ಡ ಗಂಡಾಂತರವನ್ನು ತಂದುಕೊಳ್ಳುತ್ತಿದ್ದಾರೆಂದು ಹೇಳುತ್ತೇನೆ. ಜೂಲಿಯಸ್ ಸೀಜರನ ಕಥೆಯನ್ನು ತಾವೆಲ್ಲರೂ ಓದಿದ್ದೀರಿ. ಅಲ್ಲಿ ಬರತಕ್ಕ ಬ್ರೂಟಸ್ಸಿನ ನಂತರ ಆಂತೋಣಿ ಅನ್ನತಕ್ಕವನು ಭಾಷಣ ಮಾಡುತ್ತಾನೆ. ಅವನು ಭಾಷಣಮಾಡತಕ್ಕ ಕಾಲದಲ್ಲಿ ಜನರು ಎದ್ದೆದ್ದು ತಮ್ಮ ಮನೆಗಳಿಗೆ ಹೋಗುತ್ತಾರೆ. ಹಾಗೆ ಜನರು ಮನೆಗಳಿಗೆ ಹೋಗುತ್ತಿದ್ದ ಕಾಲದಲ್ಲಿ ಆ ದಂಗೆಕೋರರ ಕೈಗೆ ಒಬ್ಬ ಸಿನ್ನ ಎನ್ನತಕ್ಕವನು ಸಿಕ್ಕಿಬೀಳುತ್ತಾನೆ. ಅವನು ನನ್ನಂಥ ಒಬ್ಬ ಬಡವ. ಆಗ ಅಲ್ಲಿದ್ದ ಜನರು ಅವನು ಕೈಗೆ ಸಿಕ್ಕಿದ್ದಾನೆ ಹೊಡೆಯಿರಿ ಎಂದರು. ಆಗ ಅವನು "I am not conspirator Sinha; I am poet Sinha." Then he said: "You may be conspirator Sinha or poet Sinha; We want to kill you." Instantaneously he was killed. ಜನರು ದಂಗೆ ಎದ್ದಾಗ ಯಾರು ಒಳ್ಳೆಯವರು ಯಾರು ಕೆಟ್ಟವರು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದಲೇ ಹಿಂದೆ ಪಂಜಾಬಿನಲ್ಲಿ ಜನರು ದಂಗೆ ಎದ್ದಾಗ ಮೂರು ಜನರು ಒಂದು ಖಾದೀ ಅಂಗಡಿಯಲ್ಲಿ ಕುಳಿತಿದ್ದರಂತೆ ಅವರನ್ನು ಆ ಅಂಗಡಿ ಮುಚ್ಚುವಂತೆ ಹೇಳಿದರೆ ಅವರು ಕೇಳಲಿಲ್ಲ. ಅವರು ಅಂಗಡಿಯನ್ನು ಬಂದ್‌ಮಾಡುವುದಿಲ್ಲ ಎಂದು ಹೇಳಿ ಅಲ್ಲೇ ಕುಳಿತರಂತೆ ಹಾಗಾದರೆ ನೀವು ಇಲ್ಲೇ ಕುಳಿತುಕೊಳ್ಳುತ್ತೀರಾ ಎಂದು ಹೇಳಿ ಆ ಜನರು ಹೋಗಿ ಒಂದು ಡಬ್ಬ ಚಿಮಣಿ ಎಣ್ಣೆಯನ್ನು ತಂದು ಅದನ್ನು ಆ ಅಂಗಡಿಗೆ ಸುರಿದು ಒಂದು ಬೆಂಕಿಕಡ್ಡಿಯನ್ನು ಗೀಚಿಟ್ಟರಂತೆ. ಆಗ ಅಲ್ಲದ್ದ ಆ ಮೂರು ಜನಗಳೂ ಮತ್ತು ಖಾದಿ ಅಂಗಡಿ ಎಲ್ಲವೂ ಬೂದಿಯಾಯಿತಂತೆ ಅನಂತರ ಅಲ್ಲಗೆ ಪೋಲೀಸರು ಬಂದು ನೋಡಿದರಂತೆ ಇದಿನ್ನೂ ಮೊನ್ನೆ ಮೊನ್ನೆ ನಡೆದ ಕಥೆ. ಇದನ್ನು ತಾವು ಅಳವೆ ಆಚೆಗೆ ಕಪ್ಪುಕಡಲೆ ಅಂತ, ...

ಶ್ರೀ ಚಿಕ್ಕೇಗೌಡ (ಗುಬ್ಬಿ).—ಮಾನ್ಯ ಸದಸ್ಯರು ವಿಷಯವನ್ನು ಅಂಕಿ ಅಂಶಗಳ ಸಮೇತ ಬಹಳ ಸೊಗಸಾಗಿ ಹೇಳುತ್ತಿದ್ದಾರೆ. ಕೇಳುತ್ತಿದ್ದರೆ ಬಹಳ ಇಂಪಾಗಿದೆ. ಅವರು ಹೇಳುತ್ತಿರುವುದಕ್ಕೆ ಸ್ವಲ್ಪ ವಾದ್ಯದವರನ್ನು ಜೊತೆ ಮಾಡಿದ್ದರೆ ಇನ್ನೂ ಕೇಳುವುದಕ್ಕೆ ಬಹಳ ಆನಂದವಾಗುತ್ತಿತ್ತಲ್ಲವೇ ?

ಶ್ರೀ ಎಸ್. ಗೋಪಾಲಗೌಡ.—ನಾನೇನು ಇಲ್ಲಿ ಶಂಬಾವಾದ್ಯ ಮಾಡುತ್ತಿದ್ದೇನೆಂದು ಅವರು ಭಾವಿಸಿದ್ದಾರೋ! ಅವರು ನನ್ನ ಭಾಷಣವನ್ನು ಕೇಳಿದಿದ್ದರೂ ಚಿಂತೆಯಿಲ್ಲ. ಉಪಾಧ್ಯಕ್ಷರಾದರೂ ಕೇಳುತ್ತಿದ್ದಾರೆಂದರೆ ಅಷ್ಟೇ ಸಾಕು. ನನಗೇನೂ ವಾದ್ಯ ಬೇಕಿಲ್ಲ. ಆ ಮಾನ್ಯ ಸದಸ್ಯರಿಗೇ ಚಟ್ಟ ಬೇಕೇನೋ ಕೊಡಲಿ .....

ಉಪಾಧ್ಯಕ್ಷರು.—ತಾವು ಮೂರು ಗಂಟೆಗಳ ಕಾಲಾವಕಾಶ ಬೇಕೆಂದು ಕೇಳಿದ್ದೀರಿ. ಈಗ ಮೂರು ಗಂಟೆ ಮುಗಿದು ಮೇಲೆ 15 ನಿಮಿಷ ಆಗಿದೆ. ಆದ್ದರಿಂದ ತಾವು ಬೇಗ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಅಜೀಜ್ ಸೇಟ್.—ಇದು ಬಹಳ ಪ್ರಾಮುಖ್ಯವಾದ ವಿಷಯು ಮಾತನಾಡಲು, ಬಿಡಿ.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಈ ಭೂಕಂದಾಯವನ್ನು ಅಕ್ರಮವಾಗಿ ವಸೂಲ್ಮಾಡತ್ತಿದ್ದಾರೆಂದು ನಾವು ದೂರಗಳನ್ನು ಹೇಳಿದಾಗ ಸರ್ಕಾರದವರು ಈ ಮಸೂದೆಗೆ ಒಂದು ಸಮಗ್ರ ತಿದ್ದುಪಡಿಯನ್ನು ತರುವುದಾಗಿ ಹೇಳಿದ್ದರು. ಈ ಸರ್ವೆ ಅಂಡ್ ಸೆಟಲ್‌ಮೆಂಟ್ ಕಾನೂನಿನ ಪ್ರಕಾರ ಒಂದಾವರ್ತಿ ನಿಗದಿ ಮಾಡಿದ ಕಂದಾಯವನ್ನು 30 ವರ್ಷಗಳು ಕಳೆಯುವ ತನಕ ಬದಲಾವಣೆ ಮಾಡುವುದಿಲ್ಲ ಎಂಬ ಭರವಸೆಯನ್ನೂ ಕೂಡ ಕೊಡಲಾಗಿತ್ತು. ಆದರೆ ಇನ್ನು ಈ ಧಾರಣಿವಾಸಿಗಳ ಬಗ್ಗೆ ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರಗಳಾಗಲಿ ಒಂದು ಥೋರಣೆಯನ್ನು ತಾಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದವರು ಈ ದಿನ ಸರ್ಕಾರದವರ ನೆರವು ಯಾವ ರೀತಿಯಲ್ಲೂ ಇಲ್ಲದೆ ರೈತನು ಬೆಳೆದ ರಾಗಿ ಜೋಳ ನೆಲಗಡಲೆ ಇತ್ಯಾದಿ ಬೆಳೆಗಳಿಗೆ ತಜ್ಞರ ಮುಖೇನ ಬೆಲೆಯನ್ನು ನಿಗದಿ ಮಾಡಿಸಿ, ಅದನ್ನು ವಸೂಲ್ಮಾಡುವುದಕ್ಕಾಗಿ ಸರ್ಕಾರದವರು ಈಗ ಬೆಳೆಗಾರನ ಮನೆಯನ್ನು ನುಗ್ಗಿ ಅವರಿಂದ ದುಬಾರಿ ಕಂದಾಯವನ್ನು ವಸೂಲ್ಮಾಡುತ್ತಿದ್ದಾರೆ.

5-30 P.M.

ನೀವು ನಮಗೆ ಸರಿಯಾದ ಬೆಲೆಯನ್ನು ಕೊಡುತ್ತೇವೆಂದು ಭರವಸೆ ಕೊಟ್ಟರೆ ನಿಮಗೆ ಬೇಕಾದ ದವನ ಧಾನ್ಯಗಳನ್ನು ತಂದುಕೊಡುತ್ತೇವೆ. ಅಡಿಕೆಗೆ ಮಣ ಒಂದಕ್ಕೆ 100 ರೂಪಾಯಿಗಳನ್ನು ಕೊಡುತ್ತೀರಾ? ಬತ್ತಕ್ಕೆ ಮಾರ್ಕೆಟ್ಟಿನಲ್ಲಿರುವ ಬೆಲೆಯನ್ನು ಕೊಡಿಸುತ್ತೀರಾ? ರಾಗಿಗೆ ಈಗಿನ ಬೆಲೆಯನ್ನು ಕೊಡಿಸುತ್ತೀರಾ? ನೀವು ಧಾರಣೆ ನೀತಿಯಲ್ಲಿ ಹೋಲ್ಡ್ ದಿ ಪ್ರೈಸ್ ಲೈನ್ ಎಂದು ಏನು ಪಾದ ಹೂಡಿದ್ದೀರಿ, ಅದನ್ನು ಹೇಳಿಕೊಂಡು ಮೇಲೆ ಹೋದಿರೇ ಹೊರತು ಪ್ರೈಸ್ ಲೈನ್ ಕೆಳಗೆ ಬರಲಿಲ್ಲ. ಸರ್ಕಾರದವರು ಏನು ನೀತಿಯನ್ನು ತೀರ್ಮಾನ ಮಾಡಿದರೋ, ಆ ನೀತಿ ಪ್ರಕಾರ ಸುಗ್ಗಿ ಆದ ನಂತರ ಬೆರೆ ಬದ್ದು ಹೋಗುವುದು, ಅನಂತರ ಬೆರೆ ಏರುವುದು ಸ್ವಲ್ಪ ಮಟ್ಟಿಗೆ ಕಡಿಮೆ ಆಯಿತು ಎಂದು ಹೇಳಬಹುದು. ಕಳೆದ ವರ್ಷ ಪಂಜಾಬು ಮಾರ್ಕೆಟ್ಟಿನಲ್ಲಿ ಸರ್ಕಾರ ನಿರ್ಧಾರ ಮಾಡಿದ ಬೆಲೆಗಿಂತ ಗೋಧಿ ಬೆರೆ ಕಡಿಮೆಯಾಗಿತ್ತು. ಆಹಾರ ಕಾರ್ಪೊರೇಷನ್ನಿನವರು ಹೋಗಿ ಗೋಧಿಯನ್ನು ಕೇಳದೇ ಇದ್ದರೆ ಕಷ್ಟಪಟ್ಟು ಬೆಳೆದಂಥ ರೈತರ ಮನೆಗಳು ದಿವಾಳಿಯಾಗುತ್ತಿತ್ತು. ಇವತ್ತು ಅಡಿಕೆ ಫಸಲು ಬೆಳೆಯುತ್ತಾರೆ. ತಾಯ್‌ಡುಂಗ್ ಬತ್ತ ಬೆಳೆಯುತ್ತಾರೆ. ಹೈಬ್ರಿಡ್ ಜೋಳ ಬೆಳೆಯುತ್ತಾರೆ. ಆ ರೀತಿ ಬೆಳೆಯುವಾಗ ಗೊಬ್ಬರಕ್ಕೆ ಮತ್ತು ಬೀಜಕ್ಕೆ ಸಾಲ ಮಾಡಿರುತ್ತಾರೆ. ಸೊಸೈಟಿಯಲ್ಲಿಯೂ ಸಾಲ ಮಾಡಿರುತ್ತಾರೆ. ಆದ್ದರಿಂದ ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದು ಕೊಳ್ಳುವುದು ಬಹಳ ಅಗತ್ಯವಾಗಿದೆ. ಸೆಟಲ್‌ಮೆಂಟ್ ಅಧಿಕಾರಿಗಳು ಜೆನ್ನಾಗಿ ಬೆರೆ ಬರುತ್ತದೆಂದು ಹೇಳುತ್ತಿದ್ದಾರೆ. ಆದರೆ 1930ರಿಂದ 1936ರ ತನಕ ಬೆರೆಗಳ ಪರಿಸ್ಥಿತಿ ಏನೇನಾಗಿತ್ತು, ಎರಡನೇ ಮಹಾಯುದ್ಧ ಆರಂಭವಾಗುವವರೆಗೂ ಬೆರೆಗಳು ಬದ್ದುಹೋಗಿ ಕಂದಾಯ ಕೊಡರಾರದೆ ಎಷ್ಟೋ ಭೂಮಿಗಳು ಹರಾಜು ಆದವು. ಸಾಲಕ್ಕೆ ಎರ್ಲಾ ಬೆಳೆಯನ್ನೂ ಮಾರಾಟಮಾಡಿದರೂ ಕೊಡರಾರದೆ ಬಡ್ಡಿಗಾಗಿ ಎರ್ಲಾ ಆಸ್ತಿಪಾಸ್ತಿಗಳನ್ನು ಸಾಲ ಕೊಟ್ಟವರಿಗೆ ಕೊಟ್ಟು ಕೈತೊಳೆದು ಕೊಂಡಿದ್ದರು, ಇನ್ನು 30 ವರ್ಷಗಳವರೆಗೆ ಅಂತಹ ಪರಿಸ್ಥಿತಿ ಬರುವುದಿಲ್ಲ, ರೈತರಿಗೆ ಈಗ ದೊರೆಯುವಷ್ಟು ಬೆಲೆಯನ್ನು ಅವರು ಬೆಳೆದಂಥ ಪದಾರ್ಥಗಳಿಗೆ ಕೊಡುತ್ತೇವೆಂದು ಹೇಳಿದ್ದಿರಾ? ಒಂದು ಮಣ ಅಡಿಕೆಗೆ ಎಷ್ಟು ಬೆಲೆಯಾಗುತ್ತದೆಂದು ಕಂಡುಹಿಡಿದು, ಅವನಿಗೆ ನೆಟ್ ಇನ್‌ಕಂ ಎಷ್ಟು ಬರುತ್ತದೆಯೋ ಅದನ್ನು ಸ್ಯೆಂಟಿಫಿಕ್ಕಾಗಿ ಕಂಡುಹಿಡಿದು ಕೆಲಸಮಾಡುತ್ತೇವೆಂಬ ಭರವಸೆಯನ್ನು ಈ ಮಸೂದೆ ಪಾಸ್ ಆಗುವುದಕ್ಕೆ ಮುಂಚೆ ಕೊಡುವುದಕ್ಕೆ ನೀವು ಸಿದ್ಧರಿದ್ದೀರಾ? ಬೆಲೆಯ ಆಧಾರದ ಮೇಲೆ ನೀವು ಕಂದಾಯ ನಿರ್ಧಾರಮಾಡಿದ್ದೀರಿ. ಕಾಫಿ ಬೆರೆ ಏನಿದೆಯೋ ಅದರ ಆಧಾರದ ಮೇಲೆ ಚಿಕ್ಕಮಗಳೂರಿನಲ್ಲಿ ಜಮೀನಿಗೆ ಕಂದಾಯ ತೀರ್ಮಾನಮಾಡಿದ್ದೀರಿ. ಕಾಫಿ ಬೆರೆ ಇಳಿಯುವುವಿಲ್ಲ, ಬತ್ತದ ಬೆರೆ ಇಳಿಯುವುದಿಲ್ಲ. ಏಲಕ್ಕಿ ಬೆಳೆ ಇಳಿಯುವುದಿಲ್ಲ, ಅಡಿಕೆ, ಬೆರೆ ಇಳಿಯುವುದಿಲ್ಲ, ರಾಗಿ

ಬೆಲೆ ಇಳಿಯುವುದಿಲ್ಲ. ಜೋಳದ ಬೆಲೆ ಇಳಿಯುವುದಿಲ್ಲವೆಂದು ಭರವಸೆ ಕೊಡುತ್ತೀರಾ? ಇದಕ್ಕೆ ಕೇಂದ್ರಸರ್ಕಾರ ಭರವಸೆ ಕೊಡಬೇಕು. ಇಲ್ಲವಿದ್ದರೆ ನೀವು ಈ ಮನೆಯ ಆಚೆ ಹೋಗಬೇಕು. ನಿಮ್ಮ ಬೆಳೆಯನ್ನು ಏಮೇಮಾಡಿ, ನಾವು ಹಣ ಕೊಡುತ್ತೇವೆಂಬ ಆಶ್ವಾಸನೆಯನ್ನು ರೈತರಿಗೆ ಕೊಡಬೇಕು. ಯಾರೋ ಒಬ್ಬರು ಕಬ್ಬು ಬೆಳೆದು ಅದಕ್ಕೆ ಒಳ್ಳೆಯ ಬೆಲೆ ಬಂದಿದೆ ಎಂದು ಎಲ್ಲರೂ ಕಬ್ಬು ಹಾಕಿದರು. ಈಗ ಒಂದು ಕ್ವಿಂಟಾಲಿಗೆ 65 ರೂಪಾಯಿಗಳು ಬಂದಿವೆಯೆಂದು ಮಾನ್ಯ ಶ್ರೀ ಚನ್ನಾರೆಡ್ಡಿಗಾರವರು ಹೇಳುತ್ತಿದ್ದಾರೆ. ಸಕ್ಕರೆಗೆ ಪಾಂಡವಪುರಕ್ಕೆ ಒಂದು ದರ, ಮಂಡ್ಯಾಕ್ಕೆ ಒಂದು ದರ, ಗೌರಿಬಿದನೂರಿಗೆ ಒಂದು ದರ, ಕಂಪ್ಲಿಗೆ ಒಂದು ದರ, ಉತ್ತರ ಪ್ರದೇಶಕ್ಕೆ ಒಂದು ದರ, ದಕ್ಷಿಣಪ್ರದೇಶಕ್ಕೆ ಒಂದು ದರ—ಹೀಗೆ ಮನಸ್ಸಿಗೆ ಬಂದಂತೆ ದರಗಳನ್ನು ನಿಗದಿಮಾಡುವ ಉದ್ದೇಶವಾದರೂ ಏನು? ಇದನ್ನು ಸಕ್ಕರೆ ಸ್ಟಾಕ್ ಆಧಾರದ ಮೇಲೆ ಗೊತ್ತುಮಾಡುತ್ತೀರೋ, ಅಥವಾ ರಾಜಕೀಯ ಆಧಾರದ ಮೇಲೋ ಅಥವಾ ಜಮೀನಿನ ಫರ್ಟಿಲಿಟಿ ಆಧಾರದ ಮೇಲೆ ಗೊತ್ತುಮಾಡುತ್ತಿರೋ? ಮಲೆನಾಡಿನಲ್ಲಿ ನಾನು ನೋಡಿದ್ದನ್ನು ಇಲ್ಲಿ ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಅಲ್ಲಿ ವಿಶೇಷವಾಗಿ ಮಳೆಯಾಗಿ ಅಲ್ಲಿನ ಜಮೀನೆರ್ಲಾ ನಿಸ್ಸಾರವಾಗಿದೆ. ಸಾರವೇ ಇಲ್ಲ. ಒಂದು ದಿವಸ ಮಳೆ ಹೋದರೆ ಎರಡನೇ ದಿವಸ ಅದನ್ನು ಉಳುಮೆ ಮಾಡುವುದಕ್ಕಾಗುವುದಿಲ್ಲ. ಭೂಮಿ ಅಷ್ಟು ಗಟ್ಟಿಯಾಗಿರುತ್ತದೆ. ರ್ಯಾಟರೈಟ್ ಸಾಯಿಲ್ ಇದೆ. ಅಲ್ಲಿಯೂ ಕೂಡ ತರೀ ಜಮೀನಿಗೆ 70-80 ರೂಪಾಯಿಗಳ ಕಂದಾಯ ಹಾಕಿದ್ದಾರೆ. ನಮ್ಮ ಸ್ನೇಹಿತರ ಹುಡುಗನನ್ನು ಕೇಳಿದೆ. ಹಿಂದೆ 60 ರೂಪಾಯಿಗಳಷ್ಟು 2-3 ಎಕರೆಗೆ ಕಂದಾಯವನ್ನು ಹಾಕಿದ್ದರು. ಅವನನ್ನು ಇವತ್ತು 620 ರೂಪಾಯಿಗಳಷ್ಟು ಕಂದಾಯ ಕೊಡುವ ಸ್ಥಿತಿಗೆ ತಂದಿದ್ದೀರಿ. ನೀವು ಐದಾರು ವರ್ಷಗಳದ್ದು ಒಟ್ಟಿಗೆ ಕೊಡಬೇಕೆಂದರೆ ಅವನು ಜಮೀನು ಆಸ್ತಿಯನ್ನೆರ್ಲಾ ಹರಾಜುಮಾಡಬೇಕಾಗಿದೆ. ತೋಟ ಫಸಲುಮಾಡಬೇಕಾದರೆ ಸುಮಾರು 12 ವರ್ಷಗಳ ಕಾಲ ಮೆಹನತ್ ಮಾಡಬೇಕಾಗುತ್ತದೆ. ಗೊಬ್ಬರ ಹಾಕಬೇಕಾದರೆ ಸಾಲ ಮಾಡಿ ತರಬೇಕಾಗುತ್ತದೆ. ಅಡಿಕೆ ಸಸಿ ನೆಡುವ ಮುಂಚೆಯೇ ಬಾಗಾಯಿತು ಜಮೀನು, ಯಾವ ಹಣ್ಣನ್ನು ನೆಡುವ ಮುಂಚೆಯೇ ಬಾಗಾಯಿತು, ಯಾವ ನೀರು ಬಂದರೂ ತರೀ ಜಮೀನು, ತಲಪರಿಗೆ ನೀರು ಬಂದರೂ ತರೀ ಜಮೀನು, ಅಣೆಕಟ್ಟಿನ ನೀರು ಬಂದರೂ ತರಿ, ಬಂಜರಾಗಿ ಜಾಲ ಮರ ಬೆಳೆದರೂ ಖುಷ್ಕಿ, ಅಲೂಗೆಡ್ಡೆ ಬೆಳೆದರೂ ಖುಷ್ಕಿ ಅಂದರೆ, ಅದಕ್ಕೆ ಯಾವ ಒಂದು ವೈಜ್ಞಾನಿಕ ಹಿನ್ನೆಲೆ ಇದೆ? ನೀವು ನವಂಬರ್‌ಗೆ ಬರತಕ್ಕಂಥ ಉತ್ಪಾದನೆಗೆ ಈಗ್ಲೆ ಎಂದು ಏನು ಹೇಳುತ್ತೀರಿ, ಅದಕ್ಕೆ ನೀವು ಹೊಣೆ ಇರಬೇಕು. ಒಂದು ವೇಳೆ ಬೆಳೆ ಹೋದರೆ ಕ್ಲಾಸಿಫಿಕೇಷನ್ ಪುನರ್ವಿಮರ್ಶೆ ಮಾಡುವ ಹೊಣೆಯನ್ನು ನೀವು ಹೊರಬೇಕು. ಅದು ಒಂದೆರಡು ವರ್ಷಗಳಲ್ಲಿ ಆಗುವುದಿಲ್ಲ. ಆಗ ಯಾವ ರೈತನನ್ನೂ ನೀವು ಕೋರ್ಟಿಗೆ ಕರೆಯುವಂತೆ ಮಾಡುವುದಿಲ್ಲ. ನಾವೇ ಅವನ ಮನೆಗೆ ಹೋಗಿ ಭೂಸುಧಾರಣೆಯ ವಿಷಯದಲ್ಲಿ, ಕಂದಾಯದ ವಿಷಯದಲ್ಲಿ ತೀರ್ಮಾನವನ್ನು ಕೊಡುತ್ತೇವೆ, ನ್ಯಾಯಾಧೀಶರನ್ನು ಕಳುಹಿಸಿದರೆ, ಅದರಲ್ಲಿಯೂ ಒಬ್ಬಿಬ್ಬರು ದೊಡ್ಡವರು ಇದ್ದರೆ, ಅವರಿಗೆ ಪುರುಸತ್ತು ಇದ್ದರೆ, ನೀವೇ ಹೋಗುತ್ತೇವೆಂದು ಹೇಳುತ್ತೀರಿ. ಈ ಒಂದು ತಿದ್ದುಪಡಿಯಿಂದ ಲಿಟಿಗೇಷನ್ನಿಗೆ ಅವಕಾಶವಾಗುತ್ತದೆ. ಪ್ರತಿಯೊಬ್ಬನ ಕಂದಾಯದ ವಿಷಯದಲ್ಲಿಯೂ, ಜಮೀನು ಖುಷ್ಕಿಯೇ, ಬಾಗಾಯಿತೇ ಎನ್ನುವ ವಿಷಯದಲ್ಲಿಯೂ ವಿವಾದಾಸ್ಪದಕ್ಕೆ ಎಡೆಕೊಟ್ಟು ಅವನು ಕೋರ್ಟಿಗೆ ಹೋಗಬೇಕೆಂದರೆ, ಅವನ ಮನೆ ಹಾಳಾಗುತ್ತದೆ. ಈ ಸ್ಥಿತಿಗೆ ಅವನನ್ನು ತಂದಿದ್ದೀರಿ. ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆಮಾಡಬೇಕು. ನಾನು ಈಗ ವಿಶೇಷವಾಗಿ ಕಾಂಗ್ರೆಸ್ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ವಿಷಯದಲ್ಲಿ ಮಾತ್ರ ಈ ಸಭಾನಾಯಕರಿಗೆ ಅಂದರೆ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳಬೇಕು. ಇದು ಪಕ್ಷದ ವಿಚಾರವಲ್ಲ. ಇದು 30 ವರ್ಷಗಳು ರೈತರು ಕೊಡಬೇಕಾದ ಕಂದಾಯದ ವಿಷಯ. ಜೊತೆಗೆ ವಾಟರ್ ರೇಟ್ ಇದೆ. ಬೆಟರ್‌ಮೆಂಟ್ ಲೆವಿ ಇದೆ. ಇನ್ನೂ ನಾನಾ ರೀತ್ಯ ಸೆಸ್‌ಗಳಿವೆ. ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಮುಂದೆ ಅವನ ಸ್ಥಿತಿ ಉತ್ತಮವಾಗುವುದಕ್ಕೆ ಕಲ್ಲು ಹಾಕುತ್ತೀರಿ ಎಂಬ ಮಾತನ್ನು ನಾನು ತಿಳಿಸುತ್ತಿದ್ದೇನೆ. ಮುಂದೆ ಯಾವ ಭಾಗದಲ್ಲಿಯೂ ಯಾವ ಅಡ್ಡಿ ಆತಂಕಗಳಿಲ್ಲದೆ ಈ ಮನೂದೆಯನ್ನು ನಿರ್ವಿಕಲ್ಪ ಬುದ್ಧಿಯಿಂದ, ಒಳ್ಳೆಯ ಮನಸ್ಸಿನಿಂದ ನಿಷ್ಪಕ್ಷಪಾತವಾಗಿ ಪರಿಶೀಲನೆಮಾಡುವುದಕ್ಕೆ ಈ ಸಭೆಯಲ್ಲಿ ಮಾನ್ಯ ಕಾಂಗ್ರೆಸ್ ಸದಸ್ಯರಿಗೆ ಅವಕಾಶ ಕಲ್ಪಿಸಿಕೊಡಬೇಕು. ದೊಡ್ಡ ಮನಸ್ಸು ಮಾಡಬೇಕು. ಈ ಕಂದಾಯವನ್ನು ವಜಾ ಮಾಡುವುದಾದರೆ ಕಾಂಗ್ರೆಸ್ ಜಮೀನ್ದಾರರಿಗೆ ಮಾತ್ರ ವಿನಾಯ್ತಿ ಆಗುವುದಿಲ್ಲ. ರಾಜ್ಯದಲ್ಲಿರತಕ್ಕ ಎರ್ಲಾ ರೈತರಿಗೂ ಕಂದಾಯದ ವಿನಾಯ್ತಿಯಾಗುತ್ತದೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಬಹಳ ಹೊತ್ತು ಅವಕಾಶ ಕೊಟ್ಟುಂಥಾ ಮಾನ್ಯ ಅಧ್ಯಕ್ಷರಿಗೂ, ಮಾನ್ಯ ವಿರೋಧಪಕ್ಷದ ನಾಯಕರಿಗೂ, ಮಾನ್ಯ ಸದಸ್ಯರಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಈ ಸಭೆಯಲ್ಲಿ ಕುಳಿತುಕೊಂಡು

(ಶ್ರೀ ಎಸ್. ಗೋಪಾಲಗೌಡ)

ಮಾತನಾಡುವುದು ನಮ್ರತೆಯ ವಿಷಯವಲ್ಲ. ನನ್ನ ಆರೋಗ್ಯ ಕೆಟ್ಟಿರುವುದರಿಂದ ನಾನು ಕುಳಿತುಕೊಂಡು ಮಾತನಾಡುವುದು ಅನಿವಾರ್ಯವಾಯಿತು. ಮತ್ತು ಬಹಳ ಉದ್ದವಾಗಿ ಮಾತನಾಡತಕ್ಕದ್ದು ಕೂಡ ಈ ಸಭೆಗೆ ತಕ್ಕುದಲ್ಲ. ಈಗ ನಾನು ಮಾಡಿದಂತಹ ಭಾಷಣ ಏನಿದೆ ಅದು ಈ ಸಭೆಯಲ್ಲಿ ಬಹಿರಂಗವಾಗಿ ಮಾಡುವಂಥಾ ಭಾಷಣವಾಗುವಾರದಾಗಿತ್ತು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೂ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).—ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ರಾಜಸ್ವ ಮಂತ್ರಿಗಳು ಈ ಸಭೆಯಮುಂದೆ ಮಂಡಿಸಿರತಕ್ಕಂಥ ಮೈಸೂರು ರಾಜ್ಯದ ಭೂಕಂದಾಯಕ್ಕೆ ಸಂಬಂಧಿಸಿದ (ಎರಡನೆಯ ತಿದ್ದುಪಡಿಯ) ವಿಧೇಯಕ, 1969; ಈ ಮಸೂದೆಯನ್ನು ತಂದಿರತಕ್ಕಂಥ ಹಿನ್ನೆಲೆ ಈ ಸಭೆಗೆ ಬಹುಶಃ ಈ ಸಭೆಯ ನಡವಳಿಕೆಗಳ ಬಗ್ಗೆ ಜಾಗ್ರತರಾಗಿತಕ್ಕ ಈ ರಾಜ್ಯದ ಎಲ್ಲಾ ಜನತೆಗೂ ಗೊತ್ತಿದೆ. ಈ ಹಿನ್ನೆಲೆಯಿಂದ ಯೋಚನೆಮಾಡಿ ಮಸೂದೆ ಸಭೆಗೆ ಬಂದಾಗ ಒಮ್ಮತದಿಂದ ಪಾಸಾಗುತ್ತದೆ ಎಂದು ನಾವು ನಿರೀಕ್ಷಣೆ ಇಟ್ಟುಕೊಂಡಿದ್ದೆವು. ಆದರೆ ಅದು ಆ ರೀತಿ ಆಗದ್ದೇ ಸಂಪೂರ್ಣವಾಗಿ ಇದಕ್ಕೆ ಭಾರಿ ಪ್ರಮಾಣದಲ್ಲಿ ತಿರುವುಮುವಾಗಿರತಕ್ಕದ್ದು ಬಹಳ ಶೋಚನೀಯವನ್ನುಂಟುಮಾಡಿರತಕ್ಕ ವಿಚಾರ. ಈ ಭೂಕಂದಾಯಕ್ಕೆ ಸಂಬಂಧಪಟ್ಟಹಾಗೆ ಒಂದು ಸಮಗ್ರವಾದ ತಿದ್ದುಪಡಿ ಮಸೂದೆಯನ್ನು ಸರ್ಕಾರದವರು ತರುತ್ತೇವೆಂದು ಹೇಳಿದ್ದರು. ಆದರೆ ಈಗ ಸಮಗ್ರವಾದ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆಯೇ ಸಮಗ್ರವಾದ ಮಸೂದೆ ಎಲ್ಲಿದೆ ಎಂದು ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಬಹಳ ಪ್ರಬಲವಾಗಿ ವಾದ ಮಾಡಿ ಮಾತನಾಡಿದ್ದಾರೆ. ನನಗೆ ಗೊತ್ತಿರುವ ಹಾಗೆ ಸಮಗ್ರವಾದ ಕಾಯಿದೆಯನ್ನು ತರುತ್ತೇವೆ ಎಂದು ಸರ್ಕಾರದವರು ಭರವಸೆಯನ್ನು ಕೊಟ್ಟಿರಲಿಲ್ಲ. ಈಗ ಒಂದು ಕಾಂಪ್ರಹೆನ್ಸಿವ್ ಅಮೆಂಡ್‌ಮೆಂಟ್ ಬಿಲ್ಲನ್ನು ಈ ಸಭೆಯಮುಂದೆ ಇಟ್ಟಿದ್ದಾರೆ. 'It is not a comprehensive Bill with any number of amemdments, but it is a Bill with comprehensive amemdments.' ಸಮಗ್ರ ಎನ್ನತಕ್ಕಂಥ ಶಬ್ದದ ಹಿನ್ನೆಲೆಯನ್ನೂ ಕೂಡ ದಯವಿಟ್ಟು ಗಣನೆಗೆ ತೆಗೆದುಕೊಳ್ಳಬೇಕು, ಈಗ ಹಿಂದಿನ ಅಧಿವೇಶನದಲ್ಲಿ ವಿರೋಧಪಕ್ಷದ ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಒಂದು ತಿದ್ದುಪಡಿ ಮಸೂದೆಯನ್ನು ಈ ಸಭೆಯ ಪರಿಶೀಲನೆಗೆ ತಂದಿದ್ದರು. ಅದರಲ್ಲಿ ಒಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅದು ಆ ಮಸೂದೆಯ ಸ್ಟೇಟ್‌ಮೆಂಟ್ ಅಂಡ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಈ ರೀತಿ ಹೇಳಿದ್ದಾರೆ: "Classification of survey was done before the promulgation of the Mysore Land Revenue Act, 1964. The reclassification of the soil and the assessment in some areas has been arbitrary. Therefore, it is considered necessary that the State Government shall be vested with inherent powers to rectify these things. Hence this Bill." 1964ನೇ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟ್ ಏನಿದೆ ಅದರಲ್ಲಿರತಕ್ಕ 112ನೇ ಸೆಕ್ಷನ್ ಅನ್ನೂ ತಿದ್ದುಪಡಿ ಮಾಡುವುದಕ್ಕೆ ಸೂಚನೆ ಮಾಡಿದ್ದಾರೆ. ಸೆಕ್ಷನ್ 112 (1) 112 (2) ಇವೆರಡನ್ನೂ ತಿದ್ದುಪಡಿ ಮಾಡಬೇಕೆಂದು ಅವರು ಸೂಚನೆಮಾಡಿದ್ದಾರೆ. ಸೆಕ್ಷನ್ 112 (2)ರಲ್ಲಿ:

> "Notwihstanding anything contained in sub-section 1, above whenever the State Government feels that great hardships and injustices are done in a general classification of the soil of any area, the State Government shall have the inherent powers either to direct a fresh survey of such area or for the revision of the assessment of such area."

ಎಂದು ಹೇಳಿದ್ದಾರೆ. ಮಾನ್ಯ ರೆವಿನ್ಯೂ ಸಚಿವರು ಇದರಲ್ಲಿ ಇಷ್ಟಂತಹ ತತ್ವವನ್ನು ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದರು. ಆ ಕಡೆ ಮತ್ತು ಈ ಕಡೆಯ ಅನೇಕ ಮಾನ್ಯ ಸದಸ್ಯರುಗಳು ಸರ್ವೆ ಸೆಟ್ಲ್‌ಮೆಂಟಿನಲ್ಲಿ ಲೋಪದೋಷಗಳಾಗಿವೆ ಎಂದು ಹೇಳಿದ್ದಾರೆ. ಮತ್ತು ಈ ಸರ್ವೆ ಸೆಟ್ಲ್‌ಮೆಂಟಿನಲ್ಲಿ

ರತಕ್ಕ ಲೋಪದೋಷಗಳು, ನ್ಯೂನಾತಿರಿಕ್ತಗಳು ಏನಿವೆ ಅವುಗಳು ನಮ್ಮ ಗಮನಕ್ಕೂ ಬಂದಿವೆ. ಇದನ್ನು ಎಲ್ಲಾ ಭಾಗದ ಸದಸ್ಯರೂ ಮತ್ತು ಸಾರ್ವಜನಿಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ ಅನೇಕ ಜನ ಸರ್ಕಾರಕ್ಕೆ ನೇರವಾಗಿ ಮನವಿಯನ್ನು ಸಲ್ಲಿಸಿದ್ದಾರೆ. ಅಲ್ಲದೆ ಅನೇಕರು ಉನ್ನತ ನ್ಯಾಯಾಲಯಕ್ಕೆ ಹೋಗಿ ಈ ತಪ್ಪನ್ನು ಅವರ ಗಮನಕ್ಕೂ ತಂದಿದ್ದಾರೆ. ಒಂದು ಸಾರ್ತಿ ಸರ್ವೆ ಸೆಟ್ಲ್‌ಮೆಂಟ್ ಮಾಡಿದನಂತರ ಅದರ ಆಧಾರದ ಮೇಲೆ ಸ್ಟಾಂಡರ್ಡ್ ರೇಟ್ ಕ್ಲಾಸಿಫಿಕೇಷನ್ ರೇಟ್ ಫಿಕ್ಸ್ ಮಾಡಿದನಂತರ ಅದರ ಆಧಾರದ ಮೇಲೆ ಇಂಡಿವಿಜುಯಲ್ ಅಸೆಸ್‌ಮೆಂಟ್ ಮಾಡಿದನಂತರ ಅದನ್ನು ಹಿಂದಕ್ಕೆ ಹಾಕುವುದಕ್ಕೆ ಬರುವುದಿಲ್ಲ ಪುನರ್ ವಿಮರ್ಶೆ ಮಾಡುವುದಕ್ಕೆ ಬರುವುದಿಲ್ಲ; ಇಪ್ಪತ್ತು ರ್ಯಾಂಡ್‌ರೆಪಿನ್ಯೂ ಆಕ್ಟ್ ಸೆಕ್ಷನ್ 114 (2) ರ ಪ್ರಕಾರ ಅದನ್ನು ಏಪಾಸನ್ನು ಹಾಕುವುದಕ್ಕೆ ಬರುವುದಿಲ್ಲ; 30 ವರ್ಷಗಳು ಆಗುವವರೆಗೂ ಯಾವುದೇ ರೀತಿಯ ಪುನರ್‌ವಿಮರ್ಶೆ ಮಾಡುವುದಕ್ಕೆ ಬರುವುದಿಲ್ಲ; ಎಂದು ಕಾನೂನು ತಜ್ಞರು ಅಭಿಪ್ರಾಯ ಪಟ್ಟಿರುವುದರಿಂದ ಅದನ್ನು ಪುನರ್‌ವಿಮರ್ಶೆ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ. ಇದರಲ್ಲಿ ಏನು ಮೂಲಭೂತವಾದ ಲೋಪದೋಷಗಳು ಇವೆ ಅವುಗಳನ್ನು ಸರಿಪಡಿಸಬೇಕು. ಇತ್ತೀಚೆಗೆ ನಡೆದಂತಹ ಸರ್ವೆ ಸೆಟ್ಲ್‌ಮೆಂಟ್ ಕಾಲದಲ್ಲಿ ನಾನಾ ತರಹ ತಪ್ಪು ನಡೆದಿದೆ. ಯಾವ ಯಾವ ತಪ್ಪುಗಳು ನಡೆದಿವೆ ಎಂಬುದು ಹಲವಾರು ಸಾರ್ತಿ ಈ ಸಭೆಯ ಮುಂದೆ ಪ್ರಸ್ತಾಪವಾಗಿದೆ. ನಾಲ್ಕು ಬಾಳೆಯ ಗಿಡ, ನಾಲ್ಕು ತೆಂಗಿನ ಗಿಡ, ನಾಲ್ಕು ಹೇರಳೆ ಗಿಡ, ನಾಲ್ಕು ಮಾವಿನ ಗಿಡವನ್ನು ಒಂದು ಜಮೀನಿನಲ್ಲಿ ನೆಟ್ಟ ಮಾತ್ರಕ್ಕೇ ಬಾಗಾಯ್ತು ಆಗುತ್ತದೆಯೇ? ಅದರ ಪಕ್ಕದಲ್ಲಿ ಅಡಿಕೆ ತೋಟ ಇದ್ದರೆ ಅದರ ಸ್ಟಾಂಡರ್ಡ್ ರೇಟ್ ಕ್ಲಾಸಿಫಿಕೇಷನ್ ರೇಟ್ ಅನ್ನು ಆ ಬಾಗಾಯ್ತಿಗೆ ವಿಧಿಸಿದರೆ ಸರಿಹೋಗುತ್ತದೆಯೇ? ಇನ್ನು ಇಂಡಿವಿಜುವಲ್ ಅಸೆಸ್‌ಮೆಂಟ್ ಸರ್ವೆಯಲ್ಲಿ ಕೂಡ ತಪ್ಪಾಗುತ್ತದೆ. ಮೆಟ್ರಿಕ್ ಚೈನ್ ಹಿಡಿದುಕೊಂಡು ಅದನ್ನು ಪರಿವರ್ತನೆ ಮಾಡಿಕೊಳ್ಳಬೇಕಾದರೆ, ಲೆಕ್ಕ ತಪ್ಪಿದರೆ, ಒಂದು ಗುಂಟೆ ಜಾಸ್ತಿಯಾಗುವುದು ಉಂಟು, ಒಂದು ಗುಂಟೆ ಕಡಿಮೆಯಾಗುವುದೂ ಉಂಟು. ಆದರೆ ಅದು ಭ್ರಮೆ. ಕಡಿಮೆಯಾದುದೂ ಇಲ್ಲ, ಜಾಸ್ತಿಯಾದುದೂ ಇಲ್ಲ. ಇಬ್ಬರೂ ಹೈಕೋರ್ಟಿಗೆ ಹೋಗಿ ಹೊಡೆದಾಡುವ ಪರಿಸ್ಥಿತಿ ಇದೆ. ಹೀಗೆ ನಾನಾ ರೀತಿಯ ತೊಂದರೆಗಳು ಸರ್ವೆ ಸೆಟ್ಲ್‌ಮೆಂಟ್ ಕಾಲದಲ್ಲಿ ಆದವು. ಇದನ್ನು ಸರ್ಕಾರ ಮನಗಂಡು ಶ್ರೀ ನಂಜೇಗೌಡರು ಅಮೆಂಡ್‌ಮೆಂಟ್ ಸೂಚಿಸಿಸುವಾಗ, ಸರ್ಕಾರ ಇವತ್ತು ಸರ್ವೆ ಸೆಟ್ಲ್‌ಮೆಂಟ್ ಏನು ಮಾಡಿದೆ, ಅದನ್ನು ಮೂವತ್ತು ವರ್ಷಗಳ ಕಾಲ ಮತ್ತೆ ಪುನರ್‌ವಿಮರ್ಶೆ ಮಾಡುವುದಕ್ಕೆ ಸಾಧ್ಯವಿಲ್ಲ, ಆ ಪರಿಸ್ಥಿತಿಯನ್ನು ಬದಲಾಯಿಸಬೇಕು, ಅದಕ್ಕೆ ಬೇಕಾದ ಅಧಿಕಾರವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂಬುದೇ ಅವರ ಅಭಿಪ್ರಾಯವಾಗಿತ್ತು. ಸರ್ಕಾರಕ್ಕೆ ಇಲ್ಲದಿರತಕ್ಕ ಹೊಸದನ್ನು ಸೃಷ್ಟಿಮಾಡಿ ಕೊಡುತ್ತಾ ಇಲ್ಲ. ವಿರೋಧಪಕ್ಷದ ಸದಸ್ಯರು ಸರ್ಕಾರಕ್ಕೆ ಅಧಿಕಾರ ಇರಬೇಕು, ಇದು ಅತ್ಯಾವಶ್ಯಕವೆಂದು ಹೇಳಿದ್ದರು. ಆ ಅಧಿಕಾರವನ್ನು ನಮಗೆ ಕೊಡಿ ಎಂದು ಕೇಳುತ್ತಿದ್ದೇವೆ. ಕಾಂಪ್ರಹೆನ್ಸಿವ್ ಎನ್ನುವುದರ ಅರ್ಥ ಏನೆಂದರೆ, ನಂಜೇಗೌಡರು ಸೆಕ್ಷನ್ 112 (2)ರ ಕುರಿತು ತಿದ್ದುಪಡಿ ತಂದಿದ್ದರೂ ಅದು ಸಮರ್ಪಕವಾಗಿ ಇರಲಿಲ್ಲ. ಆ ಸೆಕ್ಷನನ್ನು ಯಾವ ಉದ್ದೇಶಕ್ಕಾಗಿ ತರಬೇಕೆಂದು ಬಯಸಿದರೋ ಆ ಒಂದು ಪರಿಣಾಮವನ್ನು ಸಾಧಿಸಲಕ್ಕೆ ಇದೊಂದು ಸೆಕ್ಷನ್ ರ್ಯಾಂಡ್ ರೆವೆನ್ಯೂ ಕೋಡಿಗೆ ಸೇರಿಸಿದ ಮಾತ್ರಕ್ಕೆ ಸಾಧ್ಯವಾಗುತ್ತಿರಲಿಲ್ಲ. ಮಾನ್ಯ ನಂಜೇಗೌಡರು ತಂದಂತಹ ರ್ಯಾಂಡ್ ರೆವೆನ್ಯೂ ಬಿಲ್ಲಿನಲ್ಲಿ ಒಂದು ಸೆಕ್ಷನ್ ಇತ್ತು. ಇವತ್ತಿನ ದಿವಸ ನಮ್ಮ ಮುಂದಿರುವ ತಕ್ಕಂತಹ ಸರ್ಕಾರದ ಮತಿಯಿಂದ ಮಂಡಿಸಲ್ಪಟ್ಟ ರ್ಯಾಂಡ್ ರೆವೆನ್ಯೂ ಅಮೆಂಡ್‌ಮೆಂಟ್ ಬಿಲ್ಲಿನಲ್ಲಿ ಸೆಕ್ಷನ್ 114 (ಎ) 122(ಎ) 122(ಬಿ) ಎಂಬುದಾಗಿ ಮೂರು ಸೆಕ್ಷನ್ನುಗಳು ಇವೆ. ಈ ಮೂರು ಸೆಕ್ಷನ್ನುಗಳು ಈಗ ಇದ್ದಂತಹ ಲೋಪವನ್ನು, ದೋಷವನ್ನು ತಿದ್ದುಪಾಟು ಮಾಡುತ್ತವೆ. ಇದನ್ನು ಮಾಡಲಕ್ಕೆ ನಂಜೇಗೌಡರು ಅಮೆಂಡ್‌ಮೆಂಟ್ 112(2)ರಲ್ಲಿ ಏನು ಸೂಚನೆ ಮಾಡಿದ್ದರೋ, ಅದನ್ನು ಒಪ್ಪಿಕೊಂಡಿದ್ದರೆ ಸಾಧ್ಯವಾಗುತ್ತಿರಲಿಲ್ಲ. ಎರಡನ್ನೂ ಹೋಲಿಕೆಮಾಡಿ ನೋಡಿದರೆ, ಅರ್ಥವಾಗುತ್ತದೆ. 39 ಜೋನಿನಲ್ಲಿ ಸರ್ವೆ ನಡೆದು, ಕ್ಲಾಸಿಫಿಕೇಷನ್ನಿಗೆ ಸಂಬಂಧಪಟ್ಟ ಮೂಲಭೂತ ತತ್ವಗಳನ್ನು ಅನ್ವಯಮಾಡಿ ತೀರ್ಮಾನಕ್ಕೆ ಬಂದು ಸ್ಟಾಂಡರ್ಡ್ ಕ್ಲಾಸಿಫಿಕೇಶನ್ ರೇಟುಗಳನ್ನು ಅವರು ಫಿಕ್ಸ್ ಮಾಡಿ ಅದರಂತೆ ಅಸೆಸ್‌ಮೆಂಟ್ ನಡೆದಿದೆ. ಯಾವ ಜೋನಿನಲ್ಲಿ ಈ ಸ್ಟಾಂಡರ್ಡ್ ರೇಟುಗಳಿಗೆ ಬಂದಿರತಕ್ಕಂತಹ ಕಂಕ್ಲೂಶನ್ನು ತಪ್ಪೋ, ಎಲ್ಲಿ ಸರ್ವೆ ಸೆಟ್ಲ್‌ಮೆಂಟ್ ಸಂಪೂರ್ಣವಾಗಿ ದೋಷಪೂರ್ಣವಾಗಿದೆಯೋ, ಅಂಥ ಜೋನುಗಳಲ್ಲಿ ಸರ್ವೆ ಸೆಟ್ಲ್‌ಮೆಂಟ್ ಹೊಸದಾಗಿ ಮಾಡಬೇಕಾದ ಪ್ರಸಂಗ ಬಂದಿದೆ. ಆ ಸರ್ವೆ ಸೆಟ್ಲ್‌ಮೆಂಟ್ ಹೊಸದಾಗಿ ಮಾಡಲಕ್ಕೆ ಏನು ಹಳೆಯ 114ನೇ ಸೆಕ್ಷನ್‌ನಲ್ಲಿ ಪ್ರತಿಬಂಧಕ ಇದೆಯೋ ಅದನ್ನು ಮುರಿಯಲಿಕ್ಕೋಸ್ಕರವಾಗಿ 114 (ಎ) ಯನ್ನು ತಂದಿದ್ದಾಗಿದೆ. ನಂಜೇಗೌಡರು ಉಪಯೋಗಿಸಿದ್ದಂತಹ ಶಬ್ದಗಳು, ಸೆಕ್ಷನ್ 114

(ಶ್ರೀ ಕೆ. ಎಚ್. ಶ್ರೀನಿವಾಸ್)

(ಎ) ಉಪಯೋಗಿಸಿದ ಶಬ್ದಗಳು, ಇವರೆಡರಲ್ಲೂ ಇರುವ ವ್ಯತ್ಯಾಸವನ್ನು ಮನಗಂಡರೆ ನಮಗೆ ಗೊತ್ತಾಗುತ್ತದೆ. 114(ಎ)ಯಲ್ಲಿ ಹೀಗೆ ಇದೆ:

> "If at any time after the introduction of a settlement of land revenue under Section 122, the State Government for reasons to be recorded in writing, is of the opinion that in any zone, the settlement of land revenue requires modification"

ಇದರ ಬದಲು ನಂಜೇಗೌಡರ್‌ತಿದ್ದುಪಡಿಯಲ್ಲಿ ಹೀಗೆ ಇದೆ:

> "Notwithstanding anything contained in Sub-Section, whenever the State Government feels that great hardships and injustice are done in a general classification of the soil of any area, the State Government shall have the inherent powers either to direct a fresh survey of such area or for the revision of the assessment of such area."

ಮುಂದಿನವರಿದು ೧೧೪(ಎ) ಯಲ್ಲಿ ಹೀಗೆ ಹೇಳಿದೆ:

> "It may by order direct the revision of settlement of land revenue in such zone and the provisions of this chapter relating to a revision settlement of land revenue shall be applicable to such revision of settlement."

ಇದು ಒಂದು ಸೆಕ್ಷನ್. ಇದಕ್ಕೂ ಅದಕ್ಕೂ ಲೀಗರ್ ಟರ್ಮಿನೋಲಜಿಯಲ್ಲಿ ಎಷ್ಟು ವ್ಯತ್ಯಾಸ ಇದೆ ಎಂಬುದನ್ನು ಬಹುಶಃ ಪರಿಚಯ ಇರತಕ್ಕವರು ಸುಲಭವಾಗಿ ಮನಗಾಣಲಕ್ಕೆ ಸಾಧ್ಯವಿದೆ. ಆಂಧ್ರದ ಕೇಸಿನ ಮೇಲೆ ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿದೆ. ಕೇವಲ ಚಾವಡಿಯಲ್ಲಿ ನೋಟೀಸ್ ಹಾಕಿ ಮನೆಗೆ ಹೋದರೆ ಸಾಧ್ಯವಿಲ್ಲ. ಸರ್ವೆ ಅದನಂತರ ಪ್ರತಿಯೊಬ್ಬರಿಗೂ ಜಮೀನು ಎಷ್ಟು ಇದೆ, ಆ ಜಮೀನಿಗೆ ಅಪ್ಲಿಕೇಬಲ್ ಆಗತಕ್ಕಂತಹ ಸ್ಟ್ಯಾಂಡರ್ಡ್ ರೇಟ್ ಏನು ಮತ್ತು ಅದರ ಕ್ಲಾಸಿಫಿಕೇಶನ್ ವ್ಯಾಲ್ಯು ಏನು ಎಷ್ಟು ಕಂದಾಯವನ್ನು ಅತನು ಕೊಡಬೇಕಾಗುತ್ತದೆ. ಇಷ್ಟು ವಿಷಯವನ್ನು ನಮೂದಿಸಿ, ಪ್ರತಿಯೊಬ್ಬನಿಗೂ ನೋಟೀಸು ಜಾರಿ ಮಾಡಬೇಕು. ಹಿಂದೆ ಈ ನೋಟೀಸು ಜಾರಿ ಮಾಡಬೇಕೆನ್ನುವ ವಿಧಿ ಇರಲಿಲ್ಲ. 122(ಎ)ಯಲ್ಲಿ ಕಡ್ಡಾಯವಾಗಿ ಇವತ್ತು ಮಾಡಿದ್ದಾರೆ. ಪ್ರತಿಯೊಬ್ಬ ಮನುಷ್ಯನಿಗೂ ಕೂಡ ಅವನ ಜೋಸೀನಲ್ಲಿ ಯಾವ ಒಂದು ಸ್ಟ್ಯಾಂಡರ್ಡ್ ರೇಟು ಅಂತಿಮವಾಗಿ ತೀರ್ಮಾನವಾಗಿದೆ, ಅದು ಕೊನೆಯ ರೇಟೆಂದು ಹೇಳುವುದಕ್ಕಾಗುವುದಿಲ್ಲ. ಆ ಜೋಸೀನಲ್ಲಿ ಸರ್ವೆ ಸೆಟ್ಲ್‌ಮೆಂಟ್ ಪುನಃ ಮಾಡಬೇಕೆಂದು ಸರ್ಕಾರ ಒಪ್ಪಿಕೊಂಡರೆ ಅಲ್ಲಿ ಮಾಡಿಫಿಕೇಶನ್ ಮಾಡಬಹುದು. ಆದ್ದರಿಂದ ಸ್ಟ್ಯಾಂಡರ್ಡ್ ರೇಟ್ ಫಿಕ್ಸ್ ಮಾಡಿದ್ದು ಅಂತಿಮ ವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಯಾವಾಗ ತೀರ್ಮಾನ ಫೈನಲ್ ಆಗುತ್ತದೋ ಅಂದರೆ, ಸರ್ಕಾರದವರು 122(ಎ) ಪ್ರಕಾರ ಪ್ರತಿಯೊಬ್ಬ ಹಿಡುವಳಿದಾರನಿಗೂ ಜಮೀನು ಎಷ್ಟು, ಅದರ ಕ್ಲಾಸಿಫಿಕೇಶನ್ ವ್ಯಾಲ್ಯು ಏನು, ಅತನಿಗೆ ವಿಧಿಸಿರತಕ್ಕಂತಹ ರೇಟ್ ಏನು, ಒಟ್ಟು ಮೊತ್ತದ್ದು ಅಸೆಸ್‌ಮೆಂಟ್ ಎಷ್ಟು ಎಂದು ಕ್ರಮಬದ್ಧವಾದ ನೋಟೀಸನ್ನು ಅವನ ಮೇಲೆ ಜಾರಿ ಮಾಡಬೇಕು. ಇದರಲ್ಲಿ ಎರಡು ತರಹ ಅನ್ಯಾಯವಾಗಿರುತ್ತದೆ, ಮೊದಲನೆಯದು ಸ್ಟ್ಯಾಂಡರ್ಡ್ ರೇಟಿನಲ್ಲಿ ಇಡೀ ಜೋಸೀಗೆ ಆಗಿರತಕ್ಕ ಅನ್ಯಾಯ. ಮೊದಲು ಇಡೀ ಜೋಸೀಗೆ ಆದ ಅನ್ಯಾಯ ಸರಿಪಡಿಸಿದನಂತರ ಇಂಡಿವಿಜುವಲ್ ಅಸೆಸ್‌ಮೆಂಟಿನಲ್ಲಿ ನಾನಾ ರೀತಿಯ ರೋಪದೋಷಗಳು ಆಗಬಹುದು. ಒಬ್ಬನ ಜಮೀನು ಕಡಿಮೆ ಬರೆದಿರಬಹುದು. ಅವನ ಜಮೀನನ್ನು ಖುಷ್ಕಿ ಇದ್ದದನ್ನು ಭಾಗಾಯತು, ಬಾಗಾಯತು ಇದ್ದುದನ್ನು ತರಿ ಎಂದು ಈ ರೀತಿಯಲ್ಲಿ ತಪ್ಪು ಮಾಡಿರಬಹುದು. ಹೀಗೆ ನಾನಾ ರೋಪದೋಷಗಳನ್ನು ತಿದ್ದುಪಾಟು ಮಾಡುವುದಕ್ಕೆ ಹಿಂದೆ ಅವಕಾಶ ಇರಲಿಲ್ಲ. ನೋಟೀಸು ಕೊಟ್ಟನಂತರ ಡೆಪ್ಯೂಟಿ ಕಮಿಶನರೇ ಖುದ್ದಾಗಿ ಸರಿಪಡಿಸುವುದಕ್ಕೆ 122(ಬಿ)ಯಲ್ಲಿ ಅವಕಾಶ ಮಾಡಿ ಕೊಟ್ಟಿದ್ದಾರೆ. ಡೆಪ್ಯೂಟಿ ಕಮಿಶನರು ಸ್ವತಃ ರೋಪದೋಷಗಳನ್ನು ತಿದ್ದುಪಾಟು ಮಾಡ ಬಹುದು. ಯಾರಿಗೆ ತೊಂದರೆ ಆಗಿದೆಯೋ ಅವನು ಅಪ್ಲಿಕೇಶನ್ ಹಾಕಿದಾಗ ಡೆಪ್ಯೂಟಿ

ಕಮಿಶನರ್ ವಿಮರ್ಶೆ ಮಾಡಿ, ಅದರ ಬಗ್ಗೆ ಏನು ಪರಿಹಾರ ಕೊಡಬೇಕೋ, ಅದನ್ನು ಕೊಡಬಹುದು. ಆ ಪರಿಹಾರದಿಂದ ತೃಪ್ತಿ ಆಗದಿದ್ದ ಪಕ್ಷಕ್ಕೆ ಡಿವಿಜನರ್ ಕಮಿಶನರಿಗೆ ಅಪೀಲು ಹೋಗಬಹುದು. ಅವರು ಏನು ತೀರ್ಪಾನಕ್ಕೆ ಬರುತ್ತಾರೋ ಅದು ಫೈನರ್. ಇಷ್ಟು ಇಂಡಿವಿಜುವರ್ ಅಸೆಸ್‌ಮೆಂಟ್ ಮೇಲೆ ಏನಾದರೂ ರೋಪ ದೋಷ ಇದ್ದರೆ, ಅದಕ್ಕೆ ಇದರಲ್ಲಿ ಒದಗಿಸಿಕೊಟ್ಟಿರತಕ್ಕಂತಹ ಪರಿಹಾರ. ಇದರಿಂದ ಎಲ್ಲರೂ ಕೋರ್ಟಿಗೆ ಹೋಗುವ ಸ್ಥಿತಿಯಾಗಿದೆ ಎಂದು ನನ್ನ ಮನಸ್ಸಿಗೆ ಅನ್ನಿಸುವುದಿಲ್ಲ. ವಿಶೇಷವಾಗಿ ಲಾಯರುಗಳನ್ನು ತೆಗೆದುಕೊಳ್ಳುವ ಪ್ರಸಂಗ ಎಲ್ಲಿಯಾದರೂ ಒಂದೆರಡು ಕಡೆ ಬರಬಹುದು. ಪ್ರತಿಯೊಬ್ಬರೂ ಲಾಯರನ್ನು ಇಡುವ ಪ್ರಸಂಗ ಬರಲಿಕ್ಕೆ ಇಲ್ಲ. ಹೊಸದಾಗಿ ಸರ್ವೆ ಸೆಟ್ಲ್‌ಮೆಂಟ್ ಆದರೂ ಕೂಡ ಮತ್ತೆ ಅದು ಅಸೆಂಬ್ಲಿ ಮುಂದೆ ಬಂದು ಚರ್ಚೆಯಾಗಿ ಫೈನರ್ ಆಗಬೇಕು. ಸರ್ಕಾರದವರು ಖುಶಿ ಬಂದಂತೆ ಮಾಡಲು ಅಧಿಕಾರ ತೆಗೆದುಕೊಂಡಿದ್ದಾರೆಂದು ಹೇಳುವುದು ಸರಿಯಲ್ಲ.

Sri D. B. KALMANKAR.—ಇದರಲ್ಲಿ If the Government so desires..... ಎಂದು ಹೇಳಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—114(ಎ)ಯಲ್ಲಿ ಹೀಗೆ ಹೇಳಿದೆ.

.....provisions of this chapter relating to the revision settlement of Land Revenue shall be applicable to such revision of settlements.

(*b*) The Land Revenue settled by such settlement shall if so directed by the State Government, with the approval of both the Houses of the State Legislature be leviable. "with the appoval" is not subject to the directions by the Government. That is not the qualifying clause.

"Be liviable" ಗೆ qualify ಯಾಗುತ್ತದೆ. "with the approval" of the both the Houses of Legislature ಗೆ apply ಆಗುವುದಿಲ್ಲ.

6-00 P.M.

ಇಷ್ಟೇ ಅಲ್ಲದೆ ಬೇಕಾದಷ್ಟು ಸರ್ಕುಲರ್ ಕೂಡ ಕೊಟ್ಟಿದ್ದಾರೆ. ಅನೇಕ ತಾತ್ಕಾಲಿಕ ಪರಿಹಾರಗಳನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ಪರಿಗಣನೆಗೆ ವಿರೋಧ ಪಕ್ಷದವರು ತೆಗೆದುಕೊಳ್ಳದೆ ಸರ್ಕಾರದವರು ರೈತರ ಕೊರಳಿಗೆ ಉರುಳು ಹಾಕುವುದಕ್ಕೆ ಹೊರಟಿದ್ದಾರೆಂದು ಹೇಳಿದ್ದಾರೆ. 114 (ಸಿ)ನಲ್ಲಿ ಈ ರೀತಿ ಸ್ಪಷ್ಟವಾಗಿ ಹೇಳಿದ್ದಾರೆ :

> "114 (c) where a settlement of land revenue is directed to be revised under clause (a), the land revenue on the lands in the zone concerned shall, pending such revision, be leviable and payable at the same rates as were in force prior to the introduction of such settlement, and after the revision of settlement of land revenue comes into force, the difference, if any between the amount of land revenue paid, pending the revision, and the amount of land revenue payable for the period, in accordance with the revised settlement of land revenue shall be paid or refunded, as the case may be."

ಇದಕ್ಕಿಂತ ಇನ್ನೂ ಸಮಗ್ರವಾದ ಪ್ರಾವಿಜನನ್ನು ತರಬೇಕೆಂದು ಹೇಳಿದರೆ ಅದಕ್ಕೆ ಏನು ಹೇಳಬೇಕೋ ನನಗೆ ಅರ್ಥವಾಗುತ್ತಿಲ್ಲ. ವಿರೋಧ ಪಕ್ಷದವರು ಮಾಡಿದ ಟೀಕೆಗಳಲ್ಲಿ ನಿಜವಾದಂಥ ಸತ್ವ ಇದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ಯಾವ ಏರಿಯಾದಲ್ಲಿ ಯಾವ ಜೋನ್‌ನಲ್ಲಿ ಮಾಡಿರತಕ್ಕಂಥ ಸರ್ವೆ ಸೆಟಲ್‌ಮೆಂಟ್ ಪ್ರಕಾರ ಕಂದಾಯದಲ್ಲಿ ಹೆಚ್ಚು ಕಡಿಮೆಯಾಗಿದೆಯೋ ಅದನ್ನು ಸರಿಪಡಿಸುವುದಕ್ಕೋಸ್ಕರ ಈ ಒಂದು ತಿದ್ದುಪಡಿಯನ್ನು ತರಲಾಗಿದೆ. "Statement of Objects and Reasons–ನಲ್ಲಿ ಈ ಬಗ್ಗೆ ಹೇಳಲಾಗಿದೆ. ಸಂಬಂಧಪಟ್ಟ ರೈತರಿಗೆ ನೋಟೀಸು ಕೊಟ್ಟು ನಂತರ ಸರ್ವೆ ಕೆಲಸ ಮಾಡಿ ಕಂದಾಯವನ್ನು ನಿಗದಿ ಮಾಡಲಾಗುತ್ತದೆ. ಅದು ಅತನಿಗೆ ತೃಪ್ತಿಕರವಾಗಿಲ್ಲದಿದ್ದರೆ, ಏನಾದರೂ ರೋಪದೋಷಗಳು ಕಂಡು ಬಂದರೆ ಆ ಬಗ್ಗೆ ಜಿಲ್ಲಾಧಿಕಾರಿ

(ಶ್ರೀ ಕೆ. ಎಚ್. ಶ್ರೀನಿವಾಸ್)

ಗಳಿಗೆ ಅರ್ಜಿ ಕೊಡುವುದಕ್ಕೆ ಅವಕಾಶವಿದೆ. ಅನಂತರ ಬೇಕಾದರೆ ಡಿವಿಜನಲ್ ಕಮೀಷನರಿಗೂ ಕೂಡ ಅರ್ಜಿ ಕೊಡ ಬಹುದಕ್ಕೆ ಅವಕಾಶವಿದೆ. ಶ್ರೀಮಾನ್ ನಂಜೇಗೌಡರು ಹಿಂದೆ ತಂದಿದ್ದ ತಿದ್ದುಪಡಿಯನ್ನು ಮತ್ತು ಇದನ್ನು ಇಟ್ಟುಕೊಂಡು ನೋಡಿದರೆ ಸಮಗ್ರವಾಗಿ ತಿದ್ದುಪಡಿಯ ಅರ್ಥ ಏನೆಂಬುದು ಗೊತ್ತಾಗುತ್ತದೆ. "Bill with comprehensive Amendments-not a comprehensive Bill with any number of amendments" ಎಂದು ನಾವು ಹೇಳಿದ್ದು, ಆದ್ದರಿಂದ ಶ್ರೀಮಾನ್ ನಂಜೇಗೌಡರ ತಿದ್ದುಪಡಿ ಮತ್ತು ಈಗ ಸರ್ಕಾರದವರು ತಂದಿರುವ ತಿದ್ದುಪಡಿಯನ್ನು ಅಂದರೆ ಎರಡನ್ನೂ ಇಟ್ಟುಕೊಂಡು ನೋಡಿದರೆ ವಿಶೇಷವಾದಂಥ ವ್ಯತ್ಯಾಸ ಕಾಣುತ್ತಿಲ್ಲ. ಆದ್ದರಿಂದ ವಿವರಣೆ ಕೊಡುವುದು ಅವಶ್ಯಕವಿಲ್ಲ. ಆದರೂ ಕೂಡ ಈ ವಿಚಾರದಲ್ಲಿ ವಿರೋಧಪಕ್ಷದವರು ಹೇಳುವ ಧಾಟಿಗೂ ನಾವು ಹೇಳುವ ಧಾಟಿಗೂ ವ್ಯತ್ಯಾಸವಿದೆ. ಅವರ ಧಾಟಿಯಲ್ಲಿ ಅವರು ಹೇಳುತ್ತಾರೆ, ನಮ್ಮ ಧಾಟಿಯಲ್ಲಿ ನಾವು ಹೇಳುತ್ತೇವೆ. ಈ ಒಂದು ತಿದ್ದುಪಡಿಯನ್ನು ತರಬೇಕೆಂದು ಅವರೇ ಹೇಳುತ್ತಿದ್ದರು ಮತ್ತು ಆ ರೀತಿ ಏಪ್ರಿಲ್ ತಿಂಗಳ ಮೊದಲವಾರದಲ್ಲಿ ತರಲಾಗುತ್ತದೆ ಎಂದು ಸರ್ಕಾರದವರು ಭರವಸೆ ಕೊಟ್ಟಾಗ ವಿರೋಧ ಪಕ್ಷದವರು ಹಿಡಿದ ನೆಲಬಿಟ್ಟು ಆಸನದಲ್ಲಿ ಕುಳಿತರು. ಕೊಟ್ಟ ವಚನದ ಪ್ರಕಾರ ಸರ್ಕಾರದವರು ಈಗ ಈ ತಿದ್ದುಪಡಿಯನ್ನು ಸಭೆಯಲ್ಲಿ ಮಂಡಿಸಿರುವಾಗ ಅವರಿವಾಗಿ ತರುತ್ತಿದ್ದೀರಿ, ಲಕ್ಷಾಂತರ ಜನರ ಸಮಸ್ಯೆಗಳನ್ನು ಬಗೆಹರಿಸಲು ಈ ತಿದ್ದುಪಡಿಯಲ್ಲಿ ಸಾಕಷ್ಟು ಅವಕಾಶಗಳು ಇಲ್ಲ ಎಂದು ಹೇಳಿದರೆ ಅದಕ್ಕೆ ಏನು ಎಂದು ಹೇಳಬೇಕೋ ನನಗೆ ಅರ್ಥವಾಗಲಿಲ್ಲ. ಭೂ ಕಂದಾಯದ ಪ್ರಶ್ನೆ ಜನರಿಗೆ ಅರ್ಥವಾಗಿಲ್ಲ ಎನ್ನುವ ಕಾರಣವನ್ನು ಇಟ್ಟುಕೊಂಡು ವಿರೋಧಪಕ್ಷದವರು ಈ ಒಂದು ನಿಲುವನ್ನು ತಳೆಯುತ್ತಿದ್ದಾರೆ. ಮತ್ತು ಜನರಿಗೂ ಕೂಡ ತಿದ್ದುಪಡಿಯ ಬಗ್ಗೆ ಅಭಿಪ್ರಾಯವನ್ನು ಹೇಳುವುದಕ್ಕೆ ಹೊರಟಿದ್ದಾರೆ. ಸರ್ಕಾರದವರು ಯಾವ ರೀತಿ ತಿದ್ದುಪಡಿಯನ್ನು ತರುತ್ತೇವೆಂದು ಹೇಳಿದ್ದರೋ ಅದೇ ರೀತಿ ತಂದಿದ್ದಾರೆ. ಸ್ಪಷ್ಟವಾದ ರೀತಿಯಲ್ಲಿ ತಂದಿದ್ದಾರೆ. ಎಷ್ಟು ಸಮಗ್ರವಾಗಿ ತರಬೇಕಾಗಿತ್ತೋ ಅಷ್ಟೇ ಸಮಗ್ರವಾಗಿ ತಂದಿದ್ದಾರೆ. ಸೆಕ್ಷನ್ ಬೈ ಸೆಕ್ಷನ್ ತಿದ್ದುಪಡಿಮಾಡಿ ಬಿಲ್ಲನ್ನು ತರುತ್ತೇವೆಂಬ ಭರವಸೆಯನ್ನು ಸರ್ಕಾರದವರು ಕೊಟ್ಟಿರಲಿಲ್ಲ. ಕೊಟ್ಟಿರುವ ಭರವಸೆಯ ಪ್ರಕಾರ ಈಗ ತಿದ್ದುಪಡಿಯನ್ನು ತಂದಿದ್ದಾರೆ. ಶ್ರೀ ಮಾನ್ ಚೆನ್ನಬಸಪ್ಪನವರು ರೈತರು ಕೊಡುತ್ತಿರುವ ಕಂದಾಯ ರೆಂಟೇ ಅಥವಾ ತೆರಿಗೆಯೇ ಎಂದು ಕೇಳಿದರು. ಮಾನ್ಯ ಸದಸ್ಯರಲ್ಲಿ ಒಂದು ವಿಷಯವನ್ನು ವಿನಯಪೂರ್ವಕವಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದು ಒಂದು ಯಕ್ಷ ಪ್ರಶ್ನೆಯಾಗಿದೆ. ಇದನ್ನು ಯಾರೂ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದನ್ನು ತೀರ್ಮಾನ ಮಾಡಲು Indian Taxation Enquiry Committee 1924-1926—ಅವರಿಗೆ ವಹಿಸಿದಾಗ ಅವರಿಗೂ ಕೂಡ ಉತ್ತರ ಕೊಡುವುದಕ್ಕೆ ಆಗಲಿಲ್ಲ. ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಶ್ರೀ Baden Powel ಅವರು Rent Assessment in British India ಎಂಬ ಪುಸ್ತಕದಲ್ಲಿ "We are not able to solve the problem whether it is rent or whether it is tax" ಎಂದು ಹೇಳಿದ್ದಾರೆ. ಅಲ್ಲೂ ಕೂಡ ಒಮ್ಮತದ ಅಭಿಪ್ರಾಯ ಬಂದಿಲ್ಲ. ನಿರ್ದಿಷ್ಟವಾಗಿ ರೆಂಟೇ ಅಥವಾ ತೆರಿಗೆಯೇ ಎಂದು ನಿರ್ಧರಿಸುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ —ರೈತನನ್ನು ಹಣಕೊಡಬೇಕೆಂದು ಕೇಳಿದಾಗ ಏತಕ್ಕೋಸ್ಕರ ಕೊಡಬೇಕು, ಇದು ಏನು ಲೂಟಿಯೇ, ತೆರಿಗೆಯೇ, ಕಂದಾಯವೇ, ಅಥವಾ ಗೇಣಿಯೇ ಎನ್ನುವುದನ್ನು ಹೇಳುವುದಕ್ಕೆ ಈ ಸರ್ಕಾರಕ್ಕೆ ಶಕ್ತಿ ಇಲ್ಲದಿದ್ದರೆ ಈ ಸರ್ಕಾರವಾದರೂ ಕೂಡ ಇರುವುದಕ್ಕೆ ರಾಯಕ್ಕೆ ಎನ್ನುವ ಪ್ರಶ್ನೆ ಬರುತ್ತದೆ. ಪ್ರಜಾಪ್ರಭುತ್ವದಲ್ಲಿ ಒಬ್ಬ ಮನುಷ್ಯನ ಹತ್ತಿರ ಹಣ ಕೇಳಬೇಕಾದರೆ ಕಾರಣಗಳನ್ನು ಕೊಡಬೇಕಾಗುತ್ತದೆ. ಈ ಸ್ವರೂಪದ ಗೇಣಿ, ಈ ಸ್ವರೂಪದ ತೆರಿಗೆ ಕೊಡಬೇಕೆಂದು ಕೇಳುವುದು ಸಾಧುವಾದುದು. ಮತ್ತು ಅದು ಒಂದು ಕ್ರಮ. ಮತ್ತು ಕಾನೂನಿಗೆ ಅನುಗುಣವಾದುದು. ಅದು ಬಿಟ್ಟು ಇದು ಯಕ್ಷ ಪ್ರಶ್ನೆ ಎಂದು ಹೇಳಿದರೆ, ಅದು ನಿಮಗೆ ಯಕ್ಷ ಪ್ರಶ್ನೆಯಾಗಿರಬಹುದೇ ಹೊರತು .....

ಶ್ರೀ ಡಿ. ಎಂ. ಸಿದ್ದಯ್ಯ.—ತಾವು ಕೂಡ ದೊಡ್ಡ ಜಮೀನ್‌ದಾರರಾಗಿದ್ದೀರಿ. ತಾವೂ ಕೂಡ ಕಂದಾಯವನ್ನು ಕೊಟ್ಟುಕೊಂಡು ಬಂದಿದ್ದೀರಿ. ನೀವು ಯಾವ ರೀತಿ ಕೊಟ್ಟಿರಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಒಂದು ಮಾತಿನಲ್ಲಿ ಹೇಳುತ್ತೇನೆ. ಹಿಂದೆ ರಾಜಮಹಾರಾಜರುಗಳು ತಮ್ಮ ಸೌಕರ್ಯಕ್ಕೋಸ್ಕರವಾಗಿ ತಮ್ಮ ಪಾಲಿಗೆ ಇಷ್ಟಿಷ್ಟು ಕೊಡಬೇಕೆಂದು ಮುಗ್ಧರಾದ ಜನರ ಹತ್ತಿರ ವಸೂಲಿಮಾಡಿಕೊಂಡು ಬಂದಿದ್ದರು. ಅದನ್ನೇ ನಾವು ಮತ್ತು ನೀವು ಮುಂದು

ವರಿಸಿಕೊಂಡು ಬಂದು ಈ ಜನರನ್ನು ಶೋಷಣೆ ಮಾಡಿಕೊಂಡು ಬಂದಿದ್ದೇವೆ. ಇನ್ನು ಮುಂದೆ ಇದು ಇರಬಾರದು. ಕೋಟ್ಯಾಂತರ ಜನ ಮೂಕ ಪ್ರಾಣಿಗಳನ್ನು ಈ ಮೂಲಕ ಶೋಷಣೆ ಮಾಡುವುದು ಬೇಡ. ಈಗ ಅನೇಕ ವಿಷಯಗಳು ರೂಪಾಂತರ ಹೊಂದಿವೆ. ಅವೇ ರೀತಿ ಕಂದಾಯವೂ ಕೂಡ ರೂಪಾಂತರ ಹೊಂದಬೇಕು. ಈಗ ಅಧಿಕಾರ ನಿಮ್ಮ ಕೈಯಲ್ಲಿ ಇದೆ. ಆದಕಾರಣ ಇದನ್ನು ರೂಪಾಂತರ ಮಾಡುವ ಅವಕಾಶವನ್ನು ಬಿಡಬೇಡಿ ಎಂದು ನಾನು ಹೇಳುತ್ತಿರುವುದು.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಒಂದು ಜಟಿಲ ಪ್ರಶ್ನೆಯನ್ನು ಬಗೆಹರಿಸಲು ತಾವು ಆಡಳಿತ ಪಕ್ಷದೊಡನೆ ಸಹಕರಿಸಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಒಂದು ಯಕ್ಷ ಪ್ರಶ್ನೆಯನ್ನು ಬಗೆಹರಿಸಲು ಸಹಾಯ ಮಾಡಿ ಎಂದು ನಮ್ಮನ್ನು ಸರ್ಕಾರದವರು ಕೇಳಿದರೆ ಸಹಾಯ ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ಈ ಪ್ರಶ್ನೆಯನ್ನು ಯಾವ ರೀತಿ ಬಿಡಿಸಬೇಕು ಎಂಬ ಬಗ್ಗೆ ನಾನು ನಾಳೆ ಮಾತನಾಡುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಇದು ಯಕ್ಷ ಪ್ರಶ್ನೆ ಏನೂ ಅಲ್ಲ, ಸರ್ಕಾರಕ್ಕೆ ಹಣಬೇಕು, ಅದಕ್ಕೆ ಈ ರೂಪದಿಂದ ವಸೂಲಿ ಮಾಡುತ್ತಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—1924ರಲ್ಲಿ ಟ್ಯಾಕ್ಷೇಷನ್ ಎನ್‌ಕ್ವೈರಿ ಕಮಿಟಿಯವರು ಇದರ ಬಗ್ಗೆ ಯಾವುದೇ ನಿರ್ದಿಷ್ಟವಾದ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇದಕ್ಕೆ ಯಾವ ಯಾವ ಕಾರಣಗಳಿವೆ ಎನ್ನುವುದನ್ನು ಇಲ್ಲಿ ವಿವರವಾಗಿ ಹೇಳಬೇಕಾದರೆ ನನಗೆ ನಾಲ್ಕೈದು ತಾಸುಗಳು ಬೇಕಾಗುತ್ತವೆ. ಇಂತಹ ತೆರಿಗೆಯ ರಚನೆ ನೀತಿ ಬಗ್ಗೆ ಕೆಲವರು ಗೇಣ್ ಎಂದು ಕರೆಯಬೇಕೇ, ಇಲ್ಲವೇ ತೆರಿಗೆ ಎಂದು ಕರೆಯಬೇಕೇ, ಇವರ ಬಗ್ಗೆ ಉತ್ತರವೇನು ಎಂದು ಕೇಳಿದರು. ಇದಕ್ಕೆ ಅಂತಹ ಉತ್ತರ ಕೊಡಬೇಕಾದ ಅಗತ್ಯ ವಿಲ್ಲ. ಯಾವುದೇ ತೆರಿಗೆ ವಿಧಾಯಕ ಮಾಡಬೇಕಾದರೂ ಅದಕ್ಕೆ ನಾಲ್ಕು ವಿಧವಾದ ಕ್ಯಾನನ್ಸ್ ಆಫ್ ಟ್ಯಾಕ್ಸೇಷನ್ ಇರುತ್ತವೆ. ಒಂದನೇದು, ಸರ್ಟಂಟಿ, ಎರಡನೇದು, ಕನ್‌ವೀನಿಯನ್ಸ್, ಮೂರನೇದು ಎಕಾನಮಿ ಮತ್ತು ನಾಲ್ಕನೇದು ಎಬಿಲಿಟಿ. ದೇಶದಲ್ಲಿ ರ್ಯಾಂಡು ರೆವಿನ್ಯೂ ಬಗ್ಗೆ ಒಂದು ಪೆಷಿನರಿ ಇಟ್ಟುಕೊಂಡು ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಈ ಅಧಿಕಾರಿಗಳು ರ್ಯಾಂಡು ರೆವಿನ್ಯೂ ವಸೂಲು ಅಲ್ಲದೇ ಇತರ ಹುದ್ದೆಗಳನ್ನೂ ಮಾಡುತ್ತಿದ್ದಾರೆ. ಹಿಂದೆ ಕಂದಾಯವನ್ನು ಆರ್‌ಬಿಟ್ರರಿಯಾಗಿ ನಿಗದಿ ಮಾಡುತ್ತಿದ್ದಾರೆ ಎಂದಾಗ ಅದನ್ನು ಎಬಿಲಿಟಿ ಮೇರೆ ನಿರ್ಧಾರ ಮಾಡುವ ಸಲುವಾಗಿ ಮೂವತ್ತು ವರ್ಷಕ್ಕೊಮ್ಮೆ ಸರ್ವೆ ಮಾಡಬೇಕು ಎಂದು ಸರಕಾರ ತೀರ್ಮಾನಿಸಿ ಅದೇ ಪ್ರಕಾರ ಸರ್ವೇ ಸೆಟಲ್‌ಮೆಂಟು ಮಾಡುತ್ತಾ ಬರುತ್ತಿದ್ದಾರೆ. ಸರ್ವೇ ಸೆಟರ್ ಮೆಂಟು ಮಾಡುವ ಉದ್ದೇಶ ಯಾವುದೇ ಒಂದು ರೀತಿಯಾಗಿ ತೆರಿಗೆಯನ್ನು ಹೆಚ್ಚು ಮಾಡಬೇಕು ಎಂದಲ್ಲ. ಹಾಗೆ ಹೇಳುವುದಕ್ಕೆ ಯಾವ ಬೇಸಿನ್ನೂ ಇಲ್ಲ. ಹಿಂದಿನಿಂದ ನಡೆದುಕೊಂಡು ಬಂದಿರುವ ಕಂದಾಯವನ್ನು ರದ್ದುಮಾಡಿಕ್ಕದ್ದು ಸರಿಯಲ್ಲ. ರದ್ದು ಮಾಡುವ ಅವಶ್ಯಕತೆ ಬಂದಂಥ ಕಾಲದಲ್ಲಿ ಅದಕ್ಕೆ ಬದಲಾಗಿ ಅಗ್ರಿಕರ್‌ಚರಲ್ ಇನ್‌ಕಂ ಟ್ಯಾಕ್ಸ್ ಎಂದು ಹಾಕಬೇಕಾಗಿ ಬರುತ್ತದೆ. ಅಗ್ರಿಕರ್‌ಚರಲ್ ಇನ್‌ಕಂ ಟ್ಯಾಕ್ಸ್ ತಂದು ಜನಗಳ ಮೇಲೆ ಹಾಕಿದರೆ ಇದರಿಂದ ಕರ ಕೊಡುವವರೂ ಕಡಿಮೆಯಾಗುತ್ತಾರೆ. ಇಲ್ಲಿ ಇರುವ ಪ್ರಶ್ನೆ ಕಂದಾಯವನ್ನು ರದ್ದು ಮಾಡಬೇಕೇ ಎನ್ನುವುದು. ಅದಕ್ಕೆ ಯಾವ ಪ್ರಬಲವಾದ ಕಾರಣಗಳೂ ಇವೆ ಎಂದು ನಮಗೆ ಕಂಡು ಬರಲಿಲ್ಲ. ಕಂದಾಯವನ್ನು ಇರುವ ಹಾಗೇ ಮುಂದುವರಿಸಿಕೊಂಡು ಬರಲಿಕ್ಕೆ ಹೋದರೆ ರಚನ ಭ್ರಷ್ಟ ಸರಕಾರದವರು ಎಂದು ಹೇಳುತ್ತಾರೆ. 1972ರಲ್ಲಿ ಚುನಾವಣೆಗಳು ಬರುತ್ತವೆ ಎಂದು ಇಲ್ಲಿ ಶ್ರೀಮಾನ್ ಗೋಪಾಲಗೌಡರು ಹೇಳಿದರು. ಚುನಾವಣೆ ಎನ್ನುವುದು ಕೇವಲ ಕಾಂಗ್ರೆಸ್ಸು ಪಕ್ಷ ಒಂದಕ್ಕೆ ನಡೆಯುವುದಿಲ್ಲ. ಚುನಾವಣೆಯಲ್ಲಿ ವಿರೋಧ ಪಕ್ಷದವರೂ ಬರುತ್ತಾರೆ. 1972ರ ಚುನಾವಣೆಯಲ್ಲಿ ಜನರ ಮುಂದೆ ಹೋದಾಗ ಸರಕಾರದವರು ಏನೇನು ಮಾಡಿದ್ದಾರೆ ನೀವೇನು ಮಾಡಿದ್ದೀರಿ ಎನ್ನುವುದನ್ನೆಲ್ಲಾ ವಿಮರ್ಶೆ ಮಾಡುವ ಜನ ಇದ್ದಾರೆ. ಇದರಂತೆ ವಿಮರ್ಶೆ ಮಾಡಿ ಅವರು ವೋಟು ಕೊಡುತ್ತಾರೆ. ನಾವು, ನೀವು ಎಲ್ಲರೂ ಚುನಾವಣೆಗೆ ಬರುತ್ತೇವೆ ಎಂದು ಹೇಳಬಹುದಾಗಿತ್ತು. ಆದುದರಿಂದ ನಾವು ರಚನ ಭ್ರಷ್ಟರಾಗಿದ್ದೇವೆ ಎನ್ನುವ ಮಾತನ್ನು ಇಲ್ಲಿ ಹೇಳುವುದು ಸರಿಯಲ್ಲ. ಇದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದ ವಿಚಾರ ಎಂದು ಇಲ್ಲಿ ಸ್ಪಷ್ಟಪಡಿಸಬಯಸುತ್ತೇನೆ. ಏನು ಭರವಸೆಗಳನ್ನು ಕೊಟ್ಟಿದ್ದರೋ ಅಂತಹ ಭರವಸೆಗಳನ್ನು ಸರಕಾರ ಈ ತಿದ್ದುಪಡಿ ಮಸೂದೆ ಮೂಲಕ ಈಡೇರಿಸಿದ್ದಾರೆ.

(ಶ್ರೀ ಕೆ. ಎಚ್. ಶ್ರೀನಿವಾಸ)

ವಿರೋಧ ಪಕ್ಷದ ನಾಯಕರು ಇಲ್ಲಿ ಇನ್ನೊಂದು ವಿಚಾರ ಹೇಳಿದರು. ನಮ್ಮಲ್ಲಿ ಯಾವ ರೆಕ್ಕೆ ಪತ್ರಗಳೂ ಇಲ್ಲ ಎಂದು ಟೀಕೆ ಮಾಡಿದರು. ನಮ್ಮಲ್ಲಿ ಎಷ್ಟು ರೆಕ್ಕೆ ಪತ್ರಗಳು ಇರಬೇಕೋ ಅವೆರಾ ಇವೆ. ಇದರಂತೆ ಜನರಿಗೆ ನೋಟೀಸುಗಳೂ ಹೋಗುತ್ತವೆ. ಅದರಲ್ಲಿ ರೆಕ್ಕೆಗಳನ್ನೂ ನಮೂದಿಸಿ ಕಳುಹಿಸುತ್ತಾರೆ. ಇದರಲ್ಲೇನು ರೋಷ ಇಲ್ಲ. ಇವೊತ್ತು ಕಂದಾಯ ಇರಬೇಕೇ ಬೇಡವೇ ಮತ್ತು ರೈತರಿಂದ ಕಂದಾಯವನ್ನು ವಸೂಲು ಮಾಡುವಾಗ ಅವರಿಗೆ ಬೇಕಾದಷ್ಟು ಕರುಕುಳಗಳು ಆಗುತ್ತವೆ ಎಂದು ಶ್ರೀಮಾನ್ ಗೋಪಾಲಗೌಡರು ಇಲ್ಲಿ ಸುದೀರ್ಘವಾದ ಭಾಷಣವನ್ನು ಮಾಡಿದರು. ಆದರೆ ನಾನು ಅವರ ಭಾಷಣದ ಬಗ್ಗೆ ಇಲ್ಲಿ ಹೆಚ್ಚಾಗಿ ಟೀಕೆ ಮಾಡಲು ಬಯಸುವುದಿಲ್ಲ. ಅವರು ಮೂಲಭೂತವಾಗಿ ಈ ದೇಶದಲ್ಲಿರುವ ದೀನ ದಲಿತರಾಗಿರುವ ಜನಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಇಲ್ಲಿ ತರ್ಕ ಬದ್ಧವಾದ ಭಾಷಣ ಮಾಡಿದ್ದನ್ನು ನಾವು ಕೇಳಿದ್ದೇವೆ.

ಆದರೆ ನನ್ನ ಒಂದೇ ಒಂದು ಸಂದೇಹ ಏನೆಂದರೆ ಅವರ ಭಾಷಣಕ್ಕೂ ನಮ್ಮ ಸಭೆಯು ಮುಂದಿರತಕ್ಕ ತಿದ್ದುಪಡಿ ಮಸೂದೆಗೂ ಏನಾದರೂ ಸಂಬಂಧ ಇದೆಯೇ ಎಂದು. ಶ್ರೀಮಾನ್ ಗೋಪಾಲಗೌಡರ ಭಾಷಣಕ್ಕೆ ನಾನು ಟೀಕೆಟಿಪ್ಪಣಿ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಒಂದು ಪತ್ರಿಕೆಯಲ್ಲಿ ಅವರ ಭಾಷಣದ ಬಗ್ಗೆ ಏನೋಂದು ಸಣ್ಣ ಪ್ಯಾರಾ ನನ್ನ ಗಮನಕ್ಕೆ ಬಂತೋ ಅದನ್ನು ಮಾತ್ರ ಇಲ್ಲಿ ಓದುತ್ತೇನೆ. ಅದು ಹೀಗಿದೆ —

> "The long-winding speech of Mr. Gopala Gowda, SSP leader—the only speaker of the day—however failed to throw any significant points except his characterstic sarcastic digs at the Government sending peels of laughter acr ss the thinly—attended House."

ಮೂಲಭೂತವಾದ ಪ್ರಶ್ನೆ ಎತ್ತಿದ್ದಾರೆ. ಅವರು ಎತ್ತಿದ ಪ್ರಶ್ನೆಗೂ ನಮ್ಮ ಮುಂದೆ ಇರುವ ತಿದ್ದುಪಡಿಗೂ ಸಂಬಂಧವನ್ನು ಕಲ್ಪಿಸುವುದು ಅತ್ಯಂತ ಕಷ್ಟಸಾಧ್ಯವಾದ ವಿಚಾರ ಎಂದು ತಮ್ಮ ಮೂಲಕ ಈ ಸಭೆಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಇಷ್ಟು ಮಾತ್ರ ಹೇಳುತ್ತೇನೆ. ಸರ್ಕಾರದವರು ಈ ಸರ್ವೆ ಸೆಟಲ್‌ಮೆಂಟನ್ನು ಪುನಃ ಮಾಡಬೇಕೆಂದು, ಒಂದು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ; ಒಂದು ಸದುದ್ದೇಶದಿಂದ ಈ ಅಮೆಂಡ್‌ಮೆಂಟನ್ನು ತಂದಿದ್ದಾರೆ. ಈವೊತ್ತು ಎಲ್ಲೆಲ್ಲಿ ಜಾಸ್ತಿ, ಎಲ್ಲೆಲ್ಲಿ ಕಡಿಮೆ ಎನ್ನುವುದನ್ನು ಯಾವ ಆಧಾರದ ಮೇಲೆ ನಿರ್ದಿಷ್ಟ ಪಡಿಸುತ್ತಾರೆ ಎನ್ನುವುದಕ್ಕೆ ಸರ್ವೆ ಅಂಡ್ ಸೆಟಲ್‌ಮೆಂಟ್ ಪ್ರಿನ್ಸಿಪಲ್‌ಗಳು ಇವೆ. ಆ ಪ್ರಿನ್ಸಿಪಲ್‌ಗಳು ಪೂರ್ತಿ ವೈಜ್ಞಾನಿಕವಲ್ಲವಿರಬಹುದು. ಆದರೆ ಅವು ಅವೈಜ್ಞಾನಿಕವೇನೂ ಅಲ್ಲ. ಸರ್ವೆ ಅಂಡ್ ಸೆಟಲ್‌ಮೆಂಟ್ ಮಾಡುವುದಕ್ಕೆ ಡಿಸ್ಕ್ರಿಷನ್ ಪಾತ್ರ ಬಹಳಮಟ್ಟಿಗೆ ಇದೆ. ಎಷ್ಟೇ ಪ್ರಿನ್ಸಿಪಲ್‌ಗಳನ್ನು ಅಪ್ಲೈ ಮಾಡಿದರೂ, ಗೋಪಾಲಗೌಡರು ತುದಿ ಪ್ಯಾರಾದಲ್ಲಿ ಏನು ಹೇಳುತ್ತಾರೆ ಎಂದರೆ ಸರ್ವೇಯರ ಪಾತ್ರವೇ ಬಹಳ ಮಹತ್ವವಾಗಿದ್ದು ಕೊಂಡಿದೆ ಅನ್ನುತ್ತಾರೆ. ಒಂದು ಜೋನ್‌ನಲ್ಲಿ ಅಥವಾ ಒಂದು ಕ್ಷೇತ್ರದಲ್ಲಿ ಎಲ್ಲೆಲ್ಲಿ ರೀಸೆಟಲ್‌ಮೆಂಟ್ ಆರ್ಡರ್ ಮಾಡಬಹುದು ಎಂದರೆ, ಎಲ್ಲೆಲ್ಲಿ ಕಂದಾಯ 1 00 ಕ್ಕೆ 100 ರಷ್ಟು, ಅಂದರೆ ಒಂದಕ್ಕೆ 2 ಪಟ್ಟು ಜಾಸ್ತಿಯಾಗಿದೆಯೋ ಅಲ್ಲಿ ಪುನಃ ಸರ್ವೆ ಅಂಡ್ ಸೆಟಲ್‌ಮೆಂಟ್ ಮಾಡಬೇಕು ಅನ್ನತಕ್ಕಂಥಾದ್ದು ಸರ್ಕಾರದ ಅಂತರಂಗದಲ್ಲಿರಬೇಕಾದ ವಿಚಾರ. ಮಾನ್ಯ ರೆವಿನ್ಯೂ ಸಚಿವರು ಈ ರೀಸೆಟಲ್‌ಮೆಂಟ್ ಪುನಃ ಮಾಡುವಾಗ ಎತ್ತಿಯೂ ಈಗಿರುವುದಕ್ಕಿಂತ ಎರಡುಪಟ್ಟು ಜಾಸ್ತಿಯಾಗದಂತೆ ಸರ್ಕಾರ ಎಚ್ಚರಿಕೆ ವಹಿಸುತ್ತದೆ ಎಂಬ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು. ರೀಸೆಟಲ್‌ಮೆಂಟ್ ಆರ್ಡರ್ ಮಾಡಿದಾಗಲೂ ಸಹ ಪ್ರಿನ್ಸಿಪಲ್‌ಗಳನ್ನು ಅಮೆಂಡ್‌ಮಾಡುವುದಕ್ಕೆ ಸಾಧ್ಯ ಇದೆ. ಎಷ್ಟೇ ಪ್ರಿನ್ಸಿಪಲ್‌ಗಳಿದ್ದರೂ ಮೇಲಿಂದ ಕೆಳಗೆ, ಕೆಳಗಿಂದ ಮೇಲಕ್ಕೆ ಹಾಕುವುದಾದರೆ ಅವು ಪ್ರಯೋಜನವಾಗುವುದಿಲ್ಲ. ರೆವಿನ್ಯೂ ಸೆಟಲ್‌ಮೆಂಟ್ ಪ್ರಿನ್ಸಿಪಲ್‌ಗಳ ಪ್ರಕಾರ ಕನ್‌ಕ್ಲೂಷನ್‌ಗೆ ಬರಬೇಕಾದರೆ ಸ್ಟ್ಯಾಂಡರ್ಡ್ ರೇಟುಗಳನ್ನು ನಿರ್ಧರಿಸಬೇಕಾಗಿದ್ದರೆ ಇಂಥದೇ ತೀರ್ಮಾನಕ್ಕೆ ಬರುವುದಿಲ್ಲ ಎಂದು ಹೇಗೆ ಹೇಳುವುದು? ಕಂದಾಯದ ಪ್ರಮಾಣ ಒಂದಕ್ಕೆ ಎರಡು ಪಟ್ಟು ಜಾಸ್ತಿಯಾಗದೆ ಇರುವಂತೆ ಯಾವ ಗ್ಯಾರಂಟಿ. ಈ ಒಂದು ಪ್ರಶ್ನೆಯನ್ನು ರೆವಿನ್ಯೂ ಸಚಿವರಿಗೆ ಕೇಳಲು ಬಯಸುತ್ತೇನೆ. ಹೇಗೆ ಮಾಡಬೇಕು ಅನ್ನುವುದು ಅವರಿಗೆ ಬಿಟ್ಟ ವಿಚಾರ. ಈ ಸಭೆಗೆ ಹಾಗೂ ರೆವಿನ್ಯೂ ಸಚಿವರಿಗೆ ನನಗಿಂತಲೂ ಚೆನ್ನಾಗಿ ಗೊತ್ತಿದೆ. ರೀಸೆಟಲ್‌ಮೆಂಟ್ ಮಾಡುವುದಕ್ಕೆ

ಪುನಃ ಎಲ್ಲೆಲ್ಲಿ ಆರ್ಡರ್ ಮಾಡುತ್ತಾರೋ ಅಲ್ಲಿ ಭೂಕಂದಾಯ ಹೆಚ್ಚುವರಿ ಈಗಿರುವುದಕ್ಕಿಂತ ಎರಡು ಪಟ್ಟು ಜಾಸ್ತಿಯಾಗುವ ಸಂದರ್ಭ ಬಂದರೆ ಈ ಪ್ರಾವಿಷನ್‌ನಲ್ಲಿ ನಿರೀಕ್ಷಿಸಿದಂಥ ಪರಿಣಾಮ ಬರುವುದಿಲ್ಲ. ಎಲ್ಲೆಲ್ಲಿ ಆರ್ಡರ್ ಮಾಡುತ್ತಾರೆ, ಅಲ್ಲಲ್ಲಿ ನಿರೀಕ್ಷಿಸಿದ ಪರಿಣಾಮ ಬರುವ ರೀತಿಯಲ್ಲಿ ಅನಕ್ಕೆ ಪಹಸಿ, ಕ್ರಮವನ್ನು ಯೋಚಿಸಬೇಕಾದುದು ಸರ್ಕಾರದ ಜವಾಬ್ದಾರಿ.

ಜನರ ಭಾವನೆಯಾದರೂ ಕಂದಾಯವನ್ನು ತೆಗೆದುಹಾಕಿ ಎಂಬ ವಿಚಾರ ಅವರಲ್ಲಿ ಅಷ್ಟಿದ್ದಂತಿಲ್ಲ. ಒಂದಕ್ಕೆ ಎರಡಕ್ಕಿಂತ ಮೇಲೆ ವಿಧಿಸುವುದು ಸರಿಯಲ್ಲ. ಪುನಃ ರಿವಿಜನ್ ಸೆಟಲ್‌ಮೆಂಟ್ ಮಾಡುವಾಗ ಎಲ್ಲಿಯೂ ಕೂಡ ಒಂದಕ್ಕೆ ಎರಡಕ್ಕಿಂತಲೂ ಜಾಸ್ತಿಯಾಗದ ರೀತಿಯಲ್ಲಿ ಮಾಡಬೇಕು. ಇದು ಆಗದೆ ಹೋದರೆ ಮಾತ್ರ, ರೀಸೆಟಲ್‌ಮೆಂಟ್ ಆರ್ಡರ್ ಮಾಡಿದರೂ ಸಹ, ಜನರು ನಿರೀಕ್ಷಿಸಿದಂಥ ಪರಿಹಾರವನ್ನು ಒದಗಿಸಿದಂತಾಗುವುದಿಲ್ಲವೆಂದು ರೆವಿನ್ಯೂ ಸಚಿವರ ಗಮನಕ್ಕೆ ತರುತ್ತೇನೆ. ಸರಕಾರ ಸಮಗ್ರ ತಿದ್ದುಪಡಿ ಮಸೂದೆ ತರುವುದಾಗಿ ಅಶ್ವಾಸನೆ ನೀಡಿತ್ತೇ ವಿನಾ ಭೂಕಂದಾಯದ ಬಗ್ಗೆ ಇವತ್ತಿನವರೆಗೆ ಈ ರೆವಿನ್ಯೂ ಸಚಿವರೇ ಆಗಲಿ, ಹಿಂದಿದ್ದ ರೆವಿನ್ಯೂ ಸಚಿವರೇ ಆಗಲಿ ಸಮಗ್ರ ವಿಧೇಯಕ ತರುವುದಾಗಿ ಅಶ್ವಾಸನೆ ನೀಡಿ ಅದನ್ನು ಈಡೇರಿಸಬೇ ಇದ್ದಾರೆ, ಈಡೇರಿಸುವ ವಿಚಾರ ಮಾಡಬಹುದಾಗಿತ್ತು. ಸರ್ಕಾರದವರು ಏನು ಅಶ್ವಾಸನೆ ಕೊಟ್ಟಿದ್ದರೋ ಅದನ್ನು ಈ ತಿದ್ದುಪಡಿ ಮಸೂದೆಯಿಂದ ಈಡೇರಿಸುತ್ತಿದ್ದಾರೆ. ಈ ಮಸೂದೆಯಿಂದ ಏನು ಅಧಿಕಾರವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೋ ಅದನ್ನು ಒಳ್ಳೆಯ ಸದುದ್ದೇಶದಿಂದ ಕಾರ್ಯಗತ ಮಾಡಿ ಜನರಿಗೆ ಪರಿಹಾರ ಒದಗಿಸುತ್ತಾರೆಂಬ ನಂಬಿಕೆ ಇದೆ. ವಿರೋಧಪಕ್ಷದ ಸ್ನೇಹಿತರೂ ಈ ತಿದ್ದುಪಡಿಯಿಂದ ಸಮರ್ಥವಾದ ಪರಿಹಾರವನ್ನು ಕೈಕೊಳ್ಳಬಹುದೆಂದು ಮನಗಾಣಲೇಬೇಕು. ವಿರೋಧ ಪಕ್ಷದಲ್ಲೂ ಬುದ್ಧಿವಂತರೂ, ಶಕ್ತಿವಂತರೂ ಇದ್ದಾರೆ. ಅವರಿಗೂ ಸೂಕ್ತ ಪರಿಹಾರ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳಬೇ ಇರುವುದಿಲ್ಲವೆಂದು ಗೊತ್ತಿದೆ. ಈ ಮಸೂದೆ ಇದೇ ಅಧಿವೇಶನದಲ್ಲಿ ಅಂಗೀಕಾರವಾದರೆ, ಅವರು ಜನತೆಯ ಮುಂದೆ ಏನು ಈ ಒಂದು ಕಂದಾಯದ ಸಮಸ್ಯೆಯನ್ನು ಅದ್ಭುತಾಕಾರವಾಗಿ ಎತ್ತಿ, ಸರ್ಕಾರದ ವಿಫಲತೆಯನ್ನು ಜನರ ಮೇರೆ ಅಫೀಸರುಗಳ ದರ್ಬಾಳಿಕೆಯನ್ನೂ ಪ್ರತಿಪಾದಿಸುತ್ತಿದ್ದಾರೆ, ಆ ಅನ್ಯಾಯ ಮಾಯವಾದೀತೆಂಬ ಭಯ ವಿರೋಧಪಕ್ಷದವರಿಗೆ ಕಾಣಿಸುತ್ತಿದೆ. ಆದುದರಿಂದ ಆ ಭಯ ಬಿಟ್ಟು ಜನಗಳಿಗೆ ಅನುಕೂಲವಾಗುವ ಈ ತಿದ್ದುಪಡಿ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ.—ಈ ಸಭೆ 7 ಗಂಟೆಯವರೆಗೆ ಇದೆ. ಅರ್ಧಗಂಟೆ ಡಿಸ್ಕಷನ್ ಯಾವಾಗ ತೆಗೆದುಕೊಳ್ಳುತ್ತೀರಿ?

ಉಪಾಧ್ಯಕ್ಷರು.—ಈ ಸಭೆಯ ಕಾರ್ಯಕಲಾಪಗಳು ಮುಗಿದ ಮೇಲೆ ಅರ್ಧಗಂಟೆ ಡಿಸ್ಕಷನ್ ತೆಗೆದುಕೊಳ್ಳುತ್ತೇನೆ.

Sri B. P. KADAM (Karwar).—Sir, The Mysore Land Revenue (Second Amendment) Bill, 1969, is under discussion. It has only five Clauses and those seek a few changes, deletions and additions.

In Clause 2, the words "a part of a district comprising" found to be superfluous in Section 10 of the original Act, is sought to be deleted. We have no objection to this clause.

In Clause 3, one or two words are sought to be inserted after the designation of the Superintendent of Land Records and the Assistant Superintendent of of Land Records. This, of course, is something consequential.

Then by Clause 5, another Section, namely, Section 114-A, is sought to be inserted after Section 114 of the principal Act. As I read through the Clause to be inserted, I find that lot of discretion is given to the State Government. The Clause itself begins with the words "if at any time after the introduction of a settlement of land revenue". Regarding the time from which the land revenue is leviable also, there

(SRI B. P. KADAM)

is discretion. So, there is double discretion for the Government. So, in both the sub-clauses (a) and (b), there is discretion for the Government; there is more discretion in sub-clause (b). In sub-clause (c), of course, there are certain provisions for making abjustment of land revenue amount. This, of course, is consequential.

Then under the proposed new Sections 122A and 122B, certain efficers have to issue notice to the occupant of the land liable to pay land revenue specifying the extent of land, the class of such land, the standard rate applicable and the land revenue payable thereon.

Then under the new Section 122B, the Deputy Commissioner has certain powers. He may*suo motu* pass such orders as he deems fit.

Under sub-section (1) (ii), he has got the right to consider applications received from individuals. Then there is a proviso in sub-section (3) under which if any person is aggrieved by an order of the Deputy Commissioner, he can appeal to the Divisional Commissioner whose orders shall be final. Under the first proviso, there is another princplie laid down that an order cannot be passed by the Deputy Commissioner against an applicant without giving him a chance of being heard. This, of course, was not necessary. All that is contemplated under this amending bill is only a category of zones which may be taken up for revision settlement under clause 4. The persons affected will be intimated by notice; the Deputy Commissioner has got certain rights. That is all that is envisaged under this amening bill; nothing more and nothing less.

6-30 P.M.

The other day the Minister for Law and Parliamentary Affairs stated candidly that the Government would introduce a comprehensive bill for regularising the assessment of land revenue. This bill judged in the context of his assurance is extremely treading a very narrow path; it is not comprehensive, not broad-based and conveys no principles. Judged by all standards it carries the agricurists no further.

In order to understand certain fundamental principles of taxation, especiall about land revenue and land tenures, the old Land Revenue Act will have to be gone through. I shall do so as briefly as possible. The old notion of land being held on behalf of the Crown as the lessee of the Crown by the agriculturists or the ryots no longer holds good. Formerly, the land belonged to the Crown and the occupant was considered to be in charge of it only as a lessee and the consideration was land revenue. Those old principles are now, of course, exploded. Now, land belongs to the State, that means, to the public who are the virtual sovereign or popular sovereign and the consideration for it is a little tax. Judged in this context we have to see whether the levy of land revenue in its present form can be justified. The land revenue System

to as old as history itself. It is a source of revenue to the State Exchequer from the most ancient times. Even to the British rulers till 1930 it was the principal source of revenue. Only after about 1930 the sources changed to some extent. We have been stressing that the Government must have certain principles for levying land revenue. First is that the weaker sections must be exemped from land revenue. We do not hold that the land is held on behalf of the State; we hold that the land belongs to the public who are the ultimate sovereign. They hold it as a matter of right and exploit it to serve the country at large. The hon. member Sri Gopala Gowda has narrated the extent of holdings by so many sections. We have been stressing from the very beginning that the uneconomic holdings must be exempted, that people with less than 5 acres must be exempted because 5 acres cannot make an economic holding. For example, take the case of a man having 10 acres of dry land with alluvial soil and with heavy rainfall. Because of heavy rainfall, the manure will be washed away and so he cannot make his livelihood. Whereas a man with 3 or 4 acres of land having assured rainfall or irrigation facilities can have three crops and can have a bumper crop and can have a luxurious life. So, we must see how far uneconomic holdings should be given relief. So, the question arises whether the earlier survey settlements were carried out according to certain principles. At least in our parts the original survey settlement and the revisional survey settlement were based on certain principles. They considered so many factors such as water facilities, how much the land can grow, cost of cultivation, communications, prices, labour, etc. The former Survey Settlement Officers felt that they had a great sense of responsibility in this matter. For example, Col. Anderson did survey settlement in our part; then there is the survey settlement of Ankola by Sri Yenamadi. Then there were some other survey settlements by other British officers in Karwar and Kumta also. They were mostly Britishers but there were one or two Indians also and they followed certain principles.

They moved round-by and large, to all the localities. They moved on foot, on bullock carts and on horses. Now in the present era of 1960's there are a good deal of roads, but in the olden days there were no roads. Now we have also conveyances like cars, jeeps and what not. Judged by the facilities available then the efforts put in by those people of 1870 and 1910 were far, far superior to the efforts put in by the present day people with all facilities who have done survey settlement. The performance of the present day people is not only miserable but also shameful. One Mr. Gai undertook survey settlement in Karwar in 1964. You know how he did his work. He sat in an airy room of the Deputy Commissioner's office for 3 to 6 months and wrote a report recommending doubling and trebling of the assessment in certain areas without following any principle. In the olden days Col. Anderson and Mr. Mac Gregor toured the entire villages through jungles and forests on foot, or on bullock cart or on horses inspected every spot and did their job very thoroughly. The basis on which assessments were recommended in 1910

(SRI B. P. KADAM)

does not now hold good in many places because there have been lot of changes from 1910. Now on account of heavy rainfall the fertility of the land has been completely washed away or on account of manure put in the soil the fertility has gone down very much. In 1910 the assessment was recommended on the basis that the land is fit for sugar cane cultivation, but now the tanks have been silted up and the fertility of the soil also has gone down and sugar cane cannot be grown there. On the basis that sugar cane could be grown in 1910 the assessment was recommened at Rs. 6 to 7 per acre in Karwar Taluk, but now the condition of the land is such that not even paddy could be grown there. Only one crop could be grown and even then Mr. Gai has reccommended doubling and in certain places even trebling of the assessment. All this he has done without even visiting the spot but only sitting in the cosy room of the Deputy Commissioner's Office for 6 months. He has not followed any principle while making this recommendation. I challenge the propriety in making this recommendation to double or treble the assessment in such areas. It has also to be remembered that some of these lands are ravaged by wild animals in the interior forests of North Kanara. In the olden days the villagers had enough protection from the wild animals because the forest rules were not so regorous then, they were very liberal. People could carry gun and gun powder of English make. But now there are a good deal of restrictions. Now it is very difficult even to get a gun licence. If an agriculturist applies for a gun licence he will have to pay a good deal of dakshina to the village officer, the tahsildar and the Assistant Commissioner before his application is recommended for issue of licence and then he had to pay similar dakshina to the police also from the village police to the S. I. Now so much effort is required to be put in to get a gun licence. Nowadays it is difficult to get a good gun. Formerly there was lot of local manufacture, but now that has been prohibited. So now it is very difficult to escape from the ravages of wild animals. Formerly the Kanara Forest Privilege Rules were very liberal and people could escape from the ravages of wild animals by beating the jungle up to 3 to 4 miles from the belt of their fields.

Now, there is no provision. Last time, in 1954, when the Mysore Forest Act was discussed here, I myself had tabled a good deal of amendments, but they were not adopted by this House—I have no grouse. The privileges granted the districts of North Kanara by the British rulers to have not been carried out or respected by this Government. Sir, the tiger menace has gone up considerably. In the old days, we used to get cartridges and the cost of 10 cartridges was only a rupee in 1937. Now it is Rs. 15 each cartridge and Rs. 25 for 3" cartridges, and it is going up. Of course, we get cartridges from the Kirkee factory at Poona. But, the difficulty is, if we use them against a bore or a tiger, they do not explode. That way our Indian Cartridges are extremely non-violent. Under such circumstances, what should we do to drive the

these wild animals ? Government is not giving us any facility. They cannot be driven by mantras. When the crop is ripe during the season, people put certain fire in the night, because they cannot get gunpowder.

MR. DEPUTY SPEAKER:—Please conclude in five minutes, because we have to take up half-an-hour discussion at 7.00.

Sri B. P. KADAM.—Sir, I respectfully submit that it is not possible. I have not made up a single point yet. In fact, I do not speak much; I am one of the quiet persons.

I was just saying how the present survey and settlement that was carried out four years back is totally inconsistent. In our area it is double, treble and has risen still further. It is not based on any principle, Sir, survey and settlement must be bassed upon certain principles. They should consider the types of land for the purpose of assessment, such as fallow lands, waste lands, etc. There are water logged areas along the rivers, and then there are areas of assured rainfall. But the fertility is extremely poor, the soil being alluvial, the manure being washed off and small tanks being silted. On such lands, only one crop can be grown. Even if the rain is 120" every year, these lands are always useless. The late Sri Kurvey, when he came to North Kanara, said : "there is crop every year." but virtually famine conditions exist every year". What he meant was, there is assured rain-fall, there is crop, but famine conditions exist everywhere. The land is subjected to heavy rain-fall and even if we put 50 cartloads of manure per acre, it is washed off and nothing is left. So, the Government cannot have one yard-stick to say that the entire west coast is having good rain-fall. That would be a curse inflicting and calculated misery upon the people, if the Govenment were to think like that. Of course, there are certain areas, where two crops and even three crops can be grown. I have no objection to such lands being assessed more. If there are irrigation facilities and if there is assured irrigation, such lands can be taxed more. I request that a person, who has an economic holding and whose entire income is not more than Rs. 2,000 per annum-I take Rs. 2,000 as a reasonable figure for a family—must be exempted from all types of land assessment. One may have three, five or ten acres of land with assured rainfall and irrigation, where he could have two to three crops.

MR. DEPUTY SPEAKER :—The Hon. Member may continue his speech tommorrow. I call upon hon. member Sri I. Somashekarappa to raise half-hour discussion.

Half an Hour Discussions arising out of Replies given to Starred Questions 943 *re:* Bulldozers, Borewell machines and tractors in the state with Government.

† ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಮಾನ್ಯ ಅಧ್ಯಕ್ಷರೇ ಶ್ರೀಮತಿ ನಾಗರತ್ನಮ್ಮ ಹರೇಮಠ್ ಅವರು ಕಳುಹಿಸಿದ್ದ 943ನೆಯ ಪ್ರಶ್ನೆಯ ಬಗ್ಗೆ ಅರ್ಧಗಂಟೆಯ ಚರ್ಚೆಗೆ ಕಾರಣವಾಕಾಶ

(ಶ್ರೀ ಐ. ಸೋಮಶೇಖರಪ್ಪ)

ಮಾಡಿಕೊಡಬೇ ೆಂದು ನಾನು ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೆನು. ಮಾನ್ಯ ಅಧ್ಯಕ್ಷರು ದೊಡ್ಡ ಮನಸ್ಸು ಮಾಡಿ ಆ ಒಂದು ಚರ್ಚೆಗೆ ಈಗ ಅವಕಾಶ ಮಾಡಿಕೊಟ್ಟಿದ್ದಾರೆ.

7-00 P. M.

ನಮ್ಮ ರಾಜ್ಯದಲ್ಲಿರತಕ್ಕ ಬುಲ್‌ಡೋಜರ್‌ಸ್, ಟ್ರಾಕ್ಟರ್‌ಸ್, ಬ್ಲಾಸ್ಟರಿಂಗ್ ಮೆಷೀನ್‌ಗಳು, ಬೋರ್ ವೆಲ್ ಮಿಷನ್‌ಗಳ ವಿಚಾರದತ್ತ ಸರ್ಕಾರದವರ ಗಮನವನ್ನು ನಾನು ಸೆಳೆಯಲಿಚ್ಛಿಸುತ್ತೇನೆ. ಈ ದಿವಸ ಈ ಯಂತ್ರೋಪಕರಣಗಳು ನಿಜವಾಗಿಯೂ ರಾಜ್ಯದ ಹಿತದೃಷ್ಟಿಯಿಂದ, ಸರ್ಕಾರದವರ ಹಿತದೃಷ್ಟಿಯಿಂದ ಹಾಗೂ ರೈತರ ಹಿತದೃಷ್ಟಿಯಿಂದ ಯಾವ ರೀತಿ ಕೆಲಸಮಾಡುತ್ತಿವೆ ಅನ್ನುವುದನ್ನು ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ವ್ಯವಸಾಯಕ್ಕೆ ಅನುಕೂಲವಾಗತಕ್ಕಂಥ ಜಮೀನು ಎರಡೂವರೆ ಕೋಟಿ ಎಕರೆಗಳಿದೆ. ಆ ಎರಡೂವರೆ ಕೋಟಿ ಎಕರೆ ಭೂಮಿಯಲ್ಲಿ ಸುಮಾರು 25 ಲಕ್ಷ ಎಕರೆ ನಿರಾವರಿಯಾಗತಕ್ಕ ಪ್ರದೇಶವಿದೆ. ನಮ್ಮ ರಾಜ್ಯದಲ್ಲಿರ್ಕ್ಕ ಇರಿಗೇಷನ್ ಪೊಟೆನ್ಶಿಯಾಲಿಟಿ ಎಷ್ಟಿದೆ ಎಂದರೆ ಅದು ಸುಮಾರು ಶೇಕಡ 26ರಷ್ಟಿದೆ ಎಂದು ಗೊತ್ತಾಗಿದೆ. ಅಂದರೆ ನಮ್ಮ ರಾಜ್ಯದಲ್ಲಿರತಕ್ಕ ನಣ್ಣ ಮತ್ತು ದೊಡ್ಡ ಎರ್ರಾ ಕೆರೆಗಳನ್ನೂ ಕಟ್ಟಿ ಅವುಗಳಲ್ಲಿ ನೀರನ್ನು ತಡೆದರೆ ನಮ್ಮ ರಾಜ್ಯದಲ್ಲಿ ಇರಿಗೇಷನ್ ಪೊಟೆನ್‌ಷಿಯಲಿಟಿ ಶೇಕಡ 26 ರಷ್ಟು ಆಗುತ್ತದೆಂದು ಹೇಳುತ್ತಾರೆ. ಅದಕ್ಕಾಗಿ ನಾವಿನ್ನೂ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಇನ್ನು ಇದರ ಜೊತೆಗೆ ನೀರಾವರಿ ಬೇಸಾಯಕ್ಕೆ ಅನ್‌ಟ್ಯಾಪ್ಡ್ ವಾಟರ್ ರಿಸೋರ್ಸ್‌ನನ್ನು ಅಂದರೆ ಸಬ್‌ಸಾಯಿಲ್ ವಾಟರನ್ನು ಪಡೆದು ಅದರಿಂದ ನಮ್ಮ ಬೇಸಾಯವನ್ನು ಅಭಿವೃದ್ಧಿ ಮಾಡಬೇಕಾಗಿದೆ. ಇದಕ್ಕೆ ನಮ್ಮ ವ್ಯವಸಾಯದ ಇಲಾಖೆಯವರು ತೀವ್ರ ಕ್ರಮವನ್ನು ಕೈಗೊಳ್ಳಬೇಕು. ಆದರೆ ನಮ್ಮ ವ್ಯವಸಾಯದ ಇಲಾಖೆಯವರು ಈ ಸಬ್‌ಸಾಯಿಲ್ ವಾಟರ್ ಮೂಲಕ ಇರಿಗೇಷನ್ ಪೊಟೆನ್‌ಷಿಯಲಿಟಿಯನ್ನು ಕೈಗೊಂಡಿಲ್ಲ ಎಂದು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ನಮ್ಮ ವ್ಯವಸಾಯ ಹೆಚ್ಚಿಸತಕ್ಕ ಮಾರ್ಗದಲ್ಲಿ ಏನೇನೂ ಕ್ರಮಗಳನ್ನು ಇಲಾಖೆಯ ಮುಖ್ಯ ಗುರಿ ರೈತರಿಗೆ ಒಳ್ಳೆಯ ಉತ್ತಮ ಬೀಜಗಳನ್ನು ಒದಗಿಸುವುದು ರಾಸಾಯನಿಕ ಗೊಬ್ಬರವನ್ನು ಒದಗಿಸುವುದು ಜಮೀನುಗಳಿಗೆ ಹೆಚ್ಚಿನ ನೀರಾವರಿ ಅನುಕೂಲತೆಗಳನ್ನು ಕಲ್ಪಿಸುವುದು ಮತ್ತು ಎಲ್ಲೆಲ್ಲಿ ಭೂಮಿ ಸಮತಳವಾಗಿಲ್ಲವೋ ಅಲ್ಲಿ ಭೂಮಿಯನ್ನು ಸಮತಳ ಮಾಡಿಕೊಡುವುದು ಇವು ಬಹಳ ಮುಖ್ಯವಾದ ಕಾರ್ಯಗಳು. ಆದರೆ ಈ ಕಾರ್ಯಗಳನ್ನು ಸಾಧಿಸುವುದರಲ್ಲಿ ನಮ್ಮ ವ್ಯವಸಾಯದ ಇಲಾಖೆ ಎಷ್ಟರಮಟ್ಟಿಗೆ ಸಫಲವಾಗಿದೆ ಎಂಬುದನ್ನು ಕೆಲವು ಅಂಕಿ ಅಂಶಗಳನ್ನು ಇಟ್ಟು ಕೊಂಡು ನೊಡೋಣ. ಆ ದಿವಸ ಮಾನ್ಯ ಸಚಿವರು ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ನಮ್ಮಲ್ಲಿ 97 ಬುಲ್‌ಡೋಜರ್‌ಗಳಿವೆ, 60 ಬೋರ್‌ವೆಲ್ ಮಿಷೀನ್‌ಗಳಿವೆ, 45 ಟ್ರಾಕ್ಟರುಗಳಿವೆ, 40 ಬ್ಲಾಸ್ಟರಿಂಗ್ ಮಿಷಿನ್ ಗಳಿವೆ ಎಂದು ಹೇಳಿದ್ದರು. ಇಷ್ಟೂ ನಮ್ಮ ವ್ಯವಸಾಯದ ಇಲಾಖೆಯ ಸುಪರ್ದಿನಲ್ಲಿವೆ ಎಂಬುದಾಗಿ ಹೇಳಿದ್ದಾರೆ. ನಮ್ಮಲ್ಲಿರತಕ್ಕ 97 ಬುಲ್‌ಡೋಜರುಗಳು ಇಲ್ಲಿ ಎಷ್ಟು ಕೆಲಸ ಮಾಡಿವೆ ಎಂಬುದನ್ನು ನೋಡುವುದಾದರೆ 1966-67ರಲ್ಲಿ 9261 ಎಕರೆಗಳಷ್ಟು ಭೂಮಿಯನ್ನು ಸಮತಳ ಮಾಡಿವೆ. ಅನಂತರ 1967-68 ರಲ್ಲಿ 10982 ಎಕರೆಗಳನ್ನು ಸಮತಳ ಮಾಡಿವೆ. ಅಂದರೆ ನಮ್ಮ ವ್ಯವಸಾಯದ ಇಲಾಖೆಯಲ್ಲಿ ರಜಾ ದಿನಗಳನ್ನು ಕಳೆದು ಹಾಗೂ ರಿಪೇರಿಯ ಬಗ್ಗೆ ಹಿಡಿದ ದಿನಗಳನ್ನು ಕೈಬಿಟ್ಟು ಇನ್ನು ವರ್ಷದಲ್ಲಿ ಕನಿಷ್ಟ 300 ದಿನಗಳು ವರ್ಕಿಂಗ್ ಡೇಸ್ ಎಂದು ಇಟ್ಟುಕೊಂಡಾಗ್ಗೂ ಇವು ಒಂದು ತಿಂಗಳಲ್ಲಿ 300 ಎಕರೆಗಳನ್ನು ಸಮತಳ ಮಾಡಿದಂತೆ ಆಯಿತು. ಅಂದರೆ ಸರಾಸರಿ ಮೂರು ದಿನಕ್ಕೆ ಒಂದು ಎಕರೆ ಭೂಮಿಯನ್ನು ಸಮತಳ ಮಾಡಿದಂತಾಯಿತು. ನಮ್ಮ ಬುಲ್‌ಡೋಜರುಗಳು ಮತ್ತು ವ್ಯವಸಾಯದ ಇಲಾಖೆ ಎಷ್ಟು ಎಫಿಸಿಯೆಂಟಾಗಿ ಕೆಲಸಮಾಡಿವೆ ಎಂಬುದನ್ನು ಇದು ಎತ್ತಿ ಹಿಡಿಯುತ್ತದೆ. ಒಂದು ಎಕರೆ ಭೂಮಿಯನ್ನು ಸಮತಳ ಮಾಡುವುದಕ್ಕೆ 3 ದಿನಗಳನ್ನು ತೆಗೆದುಕೊಂಡರೆ ರೈತನಾಗಲೀ ರಾಜ್ಯವಾಗಲಿ ಉದ್ಧಾರವಾಗುತ್ತದೆಯೇ, ಎಂದು ಕೇಳುತ್ತಿದ್ದೇನೆ. ನಾನು ಇಲ್ಲಿ ಈಗ ಹೇಳುತ್ತಿರುವ ಅಂಕಿ ಅಂಶಗಳೆಲ್ಲಾ ನಮಗೆ ಸರ್ಕಾರದವರೇ ಒದಗಿಸಿರತಕ್ಕವುಗಳಾಗಿವೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 97 ಬುಲ್‌ಡೋಜರುಗಳನ್ನು ಇಟ್ಟುಕೊಂಡು 92 ಸಾವಿರ ಎಕರೆ ಭೂಮಿಯನ್ನು ಸಮತಳ ಮಾಡಿದ್ದಾರೆ. ಅಂದರೆ ಅವುಗಳಿಂದ 5 ವರ್ಷಗಳ ಅವಧಿಯಲ್ಲಿ ಒಂದು ಲಕ್ಷ ಎಕರೆ ಕೂಡ ಸಮ ಮಾಡುವುದಕ್ಕೆ ಆಗಲಿಲ್ಲ ಎಂದ ಹಾಗಾಯಿತು. ಇದಿಷ್ಟೂ ನಮ್ಮ ಬುಲ್‌ಡೋಜರುಗಳ ಹಾಗೂ ವ್ಯವಸಾಯದ ಇಲಾಖೆಯ ದಕ್ಷತೆಯ ಬಗ್ಗೆ ಹೇಳಿದ್ದಾಯಿತು.

ಇನ್ನು ಬೋರ್‌ವೆಲ್‌ಗಳ ಮತ್ತು ಡ್ರಿಲ್ಲಿಂಗ್ ಮೆಷೀನ್‌ಗಳ ವಿಚಾರಕ್ಕೆ ಬಂದರೆ ಇವುಗಳ ಬಗ್ಗೆ ಸರ್ಕಾರದವರು ತಪ್ಪು ತಪ್ಪು ಅಂಕಿ ಅಂಶಗಳನ್ನು ಈ ಸಭೆಗೆ ಒದಗಿಸಿದ್ದಾರೆ. 1961-62ರಲ್ಲಿ 71 ಬಾವಿಗಳನ್ನು ತೆಗೆದಿದ್ದಾರೆಂದು ಹೇಳಿದ್ದಾರೆ. ಅದಾದನಂತರ 1967-68ಕ್ಕೆ ಶ್ರೀ ವೆಂಕಟಗಿರಿಯಪ್ಪನವರ ಪ್ರಶ್ನೆಗೆ ಮಾನ್ಯ ಸಚಿವರು ಒಂದು ಸಾರ್ತಿ 90 ಬಾವಿಗಳನ್ನು ತೆಗೆಸಲಾಗಿದೆ ಎಂದು ಹೇಳಿ ಮತ್ತೆ ಅದೇ ಸಾಲಿನಲ್ಲಿ ಅಂದರೆ 1967-68ರಲ್ಲಿ 97 ಬಾವಿಗಳನ್ನು ತೆಗೆಸಲಾಗಿದೆ ಎಂದು ಹೇಳಿದ್ದಾರೆ. ಹೀಗೆ ಮಂತ್ರಿಗಳು ಒಂದೊಂದು ಸಾರ್ತಿ ಒಂದೊಂದು ರೀತಿಯ ಉತ್ತರವನ್ನು ಒದಗಿಸಿದ್ದಾರೆ. ಶ್ರೀಮತಿ ನಾಗರತ್ನಮ್ಮನವರು ಕೇಳಿದ್ದ ಪ್ರಶ್ನೆಗೆ ಉತ್ತರ ಕೊಡುತ್ತಾ 71 ಬಾವಿಗಳನ್ನು ತೆಗೆಯಲಾಗಿದೆ ಎಂದು ಉತ್ತರ ಹೇಳಿದ್ದಾರೆ. ಅಂದರೆ ಶ್ರೀ ವೆಂಕಟಗಿರಿಯಪ್ಪನವರ ಪ್ರಶ್ನೆಗೆ ಹೇಳಿದಂತೆ 97 ಬಾವಿಗಳಿಂದಾಗ ಆ 27 ಬಾವಿಗಳು ಎಲ್ಲಿಂದ ಬಾದೂ ಆದವು? ಅವುಗಳನ್ನು ಎಲ್ಲಿಂದ ಮಾಯಾಮಂತ್ರ ಮಾಡಿ ಮಾಡಿಸಿದರು? ಹೀಗೆ ಸರ್ಕಾರದವರು ಕೊಡತಕ್ಕ ಅಂಕಿ ಅಂಶಗಳನ್ನು ಸದಸ್ಯರು ನಂಬಬೇಕೋ ನಂಬಬಾರದೋ ಅಥವಾ ಅವುಗಳನ್ನು ನಾವು ಒಂದು ಬೋಗಸ್ ಫಿಗರ್ಸ್ ಎಂದೂ ಭಾವಿಸಬೇಕೋ ಒಂದು ತಿಳಿಯುದಾಗಿದೆ. ಒಂದೊಂದು ಡ್ರಿಲ್ಲಿಂಗ್ ಯಂತ್ರವು ಒಂದು ವರ್ಷದಲ್ಲಿ ಒಂದೂವರೆ ಬಾವಿಯನ್ನು ತೆಗೆದಿದೆ. ಇದೇ ಯಂತ್ರಗಳು ಯಾರಾದರೂ ಖಾಸಗೀ ಜನರಲ್ಲಿದ್ದರೆ ಅವರು ಡ್ರೈವರುಗಳ ಕಂಡಕ್ಟರ ಹಾಗೂ ಆಳುಗಳ ಸಂಬಳ ಸಾರಿಗೆಯನ್ನು ಕಳೆದು ಸಾವಿರಾರು ರೂಪಾಯಿಗಳ ಲಾಭ ಸಂಪಾದನೆಯನ್ನು ಮಾಡುತ್ತಿದ್ದರು. ಇತ್ತೀಚೆಗೆ ಸರ್ಕಾರದವರು ಪೋಲೆಂಡಿನಿಂದ 17 ಲಕ್ಷದ 70 ಸಾವಿರ ರೂಪಾಯಿಗಳನ್ನು ಕೊಟ್ಟು 4 ದೊಡ್ಡ ರಿಗ್ಸ್‌ಗಳನ್ನು ತರಿಸಿದ್ದಾರೆ. ಅವು ಎಲ್ಲಿ ಕೆಲಸಮಾಡುತ್ತಿವೆಯೋ ಗೊತ್ತಿಲ್ಲ. ಅಲ್ಲದೆ ಆ ಯಂತ್ರಗಳನ್ನು ನಡೆಸಬಲ್ಲ ಚೈತನ್ಯವುಳ್ಳ ಡ್ರೈವರುಗಳು ನಮ್ಮಲ್ಲಿದ್ದಾರೆಯೇ? ಅಂಥ ಸಾಮರ್ಥ್ಯವುಳ್ಳ ಜನರು ಇದ್ದಾರೆಂಬ ನಂಬಿಕೆ ನನಗಿಲ್ಲ. ಇನ್ನು ವೆರಿಬೋರಿಂಗ ಮಿಷಿನ್‌ಗಳು ವ್ಯವಸಾಯದ ಇಲಾಖೆಯ ಸುಪರ್ದಿನಲ್ಲೂ ಮೈನಿಂಗ್ ಅಂಡ್ ಜಿಯಲಾಜಿಕಲ್ ಇಲಾಖೆಯಲ್ಲೂ ಮತ್ತು ಹಲ್ತ್ ಇಲಾಖೆಯಲ್ಲೂ ಇರುತ್ತವೆ. ಹೀಗೆ ಇವುಗಳನ್ನು ಅಲ್ಲಲ್ಲಿ ಇಡುವುದಕ್ಕೆ ಬದಲಾಗಿ ಎಲ್ಲಾ ಯಂತ್ರಗಳನ್ನೂ ಒಂದು ಕಡೆಯಲ್ಲಿ ಒಂದು ಇಲಾಖೆಯ ಸುಪರ್ದಿನಲ್ಲಿ ಇಲ್ಲವೆ ಒಂದು ಕಾರ್ಪೊರೇಷನ್ ಮಾಡಿ ಅಲ್ಲಿ ಇವುಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಇಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಹೀಗೆ ಇವುಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಇಡದೆ ಇದ್ದ ಕಾರಣ 15 ವರ್ಷಗಳಿಂದ ಕೆಲಸ ಏನೇನೂ ಸಮರ್ಪಕವಾಗಿ ನಡೆದಿಲ್ಲ. ನಮ್ಮಲ್ಲಿ ಇರತಕ್ಕ ಟ್ರಾಕ್ಟರುಗಳ ಸಂಖ್ಯೆ ಬಹಳವಾಗಿ ಕಂಡರೂ ಅವುಗಳಲ್ಲಿ ಅರ್ಧೋಗ್ಯವಾಗಿ ಕೆಲಸಕ್ಕೆ ಯೋಗ್ಯವಾಗಿರತಕ್ಕ ಯಂತ್ರಗಳೆಷ್ಟು ಎಂಬುದು ಮುಖ್ಯ. ದಿವಸಕ್ಕೆ ಈ ಟ್ರಾಕ್ಟರುಗಳು 2—3 ಎಕರೆಗಳನ್ನು ಉತ್ತರೆ ಅವುಗಳನ್ನು ಸುಧಾರಿಸುವುದಕ್ಕೆ ನಮ್ಮ ರಾಜ್ಯದ ಬಡ ರೈತರಿಂದ ಸಾಧ್ಯವೇ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಈ ಟ್ರಾಕ್ಟರುಗಳನ್ನು ಈ ದಿವಸ ಬಾಡಿಗೆಗೆ ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ 20—25 ಟ್ರಾಕ್ಟರುಗಳನ್ನು ಇಟ್ಟಿದ್ದರೆ ಅಲ್ಲಿ ಸಣ್ಣ ಮತ್ತು ದೊಡ್ಡ ರೈತರಿಗೆ ಅನುಕೂಲವಾಗಬಹುದು. ಈ ದಿವಸ ಆಂಧ್ರದಲ್ಲಿ ನೂರಕ್ಕೆ 40 ಎಕರೆ ತರಿ ಇದೆ. ತಮಿಳು ನಾಡಿನಲ್ಲಿ 26 ಪರ್ಸೆಂಟಿದೆ. ಅವರ ಮಟ್ಟಕ್ಕೆ ಬರಬೇಕಾದರೆ, ನಾವು ಇನ್ನೂ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ನಮ್ಮಲ್ಲಿ ಬ್ಲಾಸ್ಟಿಂಗ್ ಮಿಷನ್‌ಗಳೂ ಮತ್ತು ಬೋರ್‌ವೆಲ್ ಯಂತ್ರಗಳಿದ್ದಾಗ್ಗೂ ವ್ಯವಸಾಯದ ಇಲಾಖೆ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಅಂದರೆ ವ್ಯವಸಾಯದ ಇಲಾಖೆಯಲ್ಲಿರತಕ್ಕ ಇಂಜಿನಿಯರಿಂಗ್ ಸೆಕ್ಷನ್ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ.

ನಮ್ಮ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಒಂದು ಇಂಜಿನಿಯರಿಂಗ್ ಸೆಕ್ಷನ್ ಎಷ್ಟರಮಟ್ಟಿಗೆ ದಕ್ಷತೆಯಿಂದ ಕೆಲಸ ಮಾಡುತ್ತಿದೆಯೆಂಬುದು ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ನಿಜವಾಗಿ ತೀವ್ರ ಗಮನ ಹರಿಸಬೇಕು. ಈ ಇಲಾಖೆಯಲ್ಲಿರುವ ಇಂಜಿನಿಯರಿಂಗ್ ಶಾಖೆಗೆ ಒಬ್ಬ ಜಾಯಿಂಟ್ ಡೈರೆಕ್ಟರ್ ಇದ್ದಾರೆ. ಅಲ್ಲಿ ಜವಾನರು, ಟೈಪಿಸ್ಟ್‌ಗಳು ಎಲ್ಲರೂ ಇದ್ದಾರೆ. ಅಪರೇಟರ್ಸ್ ಇದ್ದಾರೆ. ಜೀಪ್ಸ್ ಇವೆ. ಅಲ್ಲಿ ಇವತ್ತು 10 ಲಕ್ಷ 60 ಸಾವಿರ ರೂಪಾಯಿಗಳನ್ನು ಆಲ್ಲಿನ ಸಿಬ್ಬಂದಿಗಾಗಿ ಖರ್ಚು ಮಾಡುತ್ತಿದ್ದಾರೆ. ಸರ್ಕಾರಕ್ಕೆ ಒಂದು ಬಾವಿ ತೆಗೆಯುವುದಕ್ಕೆ ಎಷ್ಟು ಖರ್ಚು ಬೀಳುತ್ತದೆ? ಆ ಹಣವನ್ನು ಈಗ ಸಿಬ್ಬಂದಿಗೆ ಕೊಡುವ ಹಣದಿಂದ ಅಥವಾ ಡಿಪ್ರಿಸಿಯೇಷನ್‌ನಿಂದ ತೆಗೆದುಕೊಂಡು ಈ ಬಾವಿ ಕೆಲಸ ಮಾಡಬಹುದು. ಒಂದು ಎಕರೆ ಭೂಮಿ ಸಾಗುವಳಿ ಮಾಡಬೇಕಾದರೆ ಎಷ್ಟು ರೂಪಾಯಿಗಳು ಖರ್ಚಾಗುತ್ತದೆ ಎನ್ನುವುದನ್ನು ಉತ್ತರ ಕೊಡುವಾಗ ಹೇಳಬೇಕು. ಸಿಬ್ಬಂದಿ ಖರ್ಚು, ಮೆಷನರಿ ಡಿಪ್ರಿಸಿಯೇಷನ್ ಎಷ್ಟು ಬರುತ್ತದೆಂಬುದನ್ನು ಯೋಜನೆ ಮಾಡಿ. ಒಂದು ಬೋರ್‌ವೆಲ್ ತೆಗೆಯಬೇಕಾದರೆ ಎಷ್ಟು ಖರ್ಚು ಮಾಡುತ್ತಾರೆಂಬುದನ್ನು ಯೋಜನೆ ಮಾಡಬೇಕು. ಇವರಿಗಿಂತ ಖಾಸಗೀ ಸಂಸ್ಥೆಗಳು ಎಷ್ಟೋ ಚೆನ್ನಾಗಿ ಕೆಲಸ

(ಶ್ರೀ ಐ. ಸೋಮಶೇಖರಪ್ಪ)

ಮಾಡುತ್ತವೆ. ಹಾಗಿರುವಾಗ ಇದಕ್ಕಾಗಿ ಒಂದು ಕಾರ್ಪೋರೇಷನ್ ಮಾಡಿದರೆ, ಅದು ಚೆನ್ನಾಗಿ ಕೆಲಸ ಮಾಡದೆ ದಿವಾಳಿಯಾಗುತ್ತದೆ ಎಂದು ಹೇಳಿದರೆ ಹೇಗೆ?

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಈ ಇಲಾಖೆಯಲ್ಲಿರತಕ್ಕ ಒಬ್ಬ ಜಾಯಿಂಟ್ ಡೈರೆಕ್ಟರ್ ಸತ್ಯವಂತ ಹಾಗೂ ನೀತಿವಂತನಾಗಿ ಬಹುದು. ಆದರೆ ಇವರು ಲಂಚಕೋರರು ಇರಬಹುದು. ದಯವಿಟ್ಟು ಈ ಇಲಾಖೆಯಲ್ಲಿ ಅಧಿಕಾರಿಗಳನ್ನು ಬಹಳ ವರ್ಷಗಳವರೆಗೆ ಇಡಬೇಡಿ. ಇವರನ್ನು ಇಲ್ಲಿಟ್ಟರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಇವರನ್ನು ಇಲ್ಲಿಂದ ವರ್ಗ ಮಾಡಬೇಕು. ದಕ್ಷ ಅಧಿಕಾರಿಗಳನ್ನು ದಯವಿಟ್ಟು ಇಲ್ಲಿಗೆ ತಂದುಕೊಡಿ. ಡ್ರಿಲಿಂಗ್ ಮೆಷಿನ್ಸ್ ಮತ್ತು ಬೋರ್‌ವೆಲ್ಸ್ ಗಳನ್ನು ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಮುಖಾಂತರ ಪಡೆದು ಪಬ್ಲಿಕ್ ಸೆಕ್ಟರ್‌ನಲ್ಲಿ ಒಂದು ಕಾರ್ಪೊರೇಷನ್ ಮಾಡಿ, ಇದರ ಅಡಿಟ್ಸ್ ವರ್ಗಾವಣೆ ಮಾಡುವುದಾದರೆ, ಸಬ್ ಸಾಯಿರ್ ಪಾಟರ್ ಟ್ಯಾಪ್ ಮಾಡಿ ಕೋಲಾರ, ತುಮಕೂರು, ಶಿವಮೊಗ್ಗಾ, ಮತ್ತು ಇನ್ನೂ ಕೆಲವು ಭಾಗಗಳಲ್ಲಿ ಬೋರ್‌ವೆಲ್‌ಗಳನ್ನು ತೆಗೆಯುವ ಮೂಲಕ, ಜನರಿಗೆ ಸಹಾಯ ಮಾಡುವುದಲ್ಲದೆ ಬುಲ್‌ಡೋಜರುಗಳನ್ನೂ ಮತ್ತು, ಕನಿಷ್ಠಪಕ್ಷ 25 ಟ್ರಾಕ್ಟರುಗಳನ್ನು ಪ್ರತಿಯೊಂದು ತಾಲ್ಲೂಕಿಗೂ ಜಾಗ್ರತೆ ಒದಗಿಸಬೇಕೆಂದು ಹೇಳಿ, ಸರ್ಕಾರವು ಈ ರಾಜ್ಯದ ಕಲ್ಯಾಣ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರಪ್ಪನವರು ಅರ್ಧಗಂಟೆ ಚರ್ಚೆಗೆ ಅವಕಾಶ ತೆಗೆದುಕೊಂಡು ಬೋರ್‌ವೆಲ್ ಮತ್ತು ಬ್ಲಾಸ್ಟಿಂಗ್ ಮೆಷಿನ್‌ಗಳಿಂದ ಭೂಮಿಯಲ್ಲಿರತಕ್ಕ ನೀರನ್ನು ತೆಗೆದುಕೊಳ್ಳುವುದಕ್ಕೋಸ್ಕರ ಆ ಯಂತ್ರಗಳನ್ನು ನಡೆಸುವಂಥ ಅಗ್ರಿಕಲ್‌ಚರಲ್ ಇಂಜಿನಿಯರಿಂಗ್ ಪದವಿ ಅವರ ಬಗ್ಗೆ ಕೆಲವು ಮುಖ್ಯ ವಿಷಯಗಳನ್ನು ಈ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಇಲಾಖೆಯಲ್ಲಿ ಎಷ್ಟು ಮೆಷಿನ್ನುಗಳಿವೆಯೋ ಅಷ್ಟೂ ಕೂಡ ಕೆಲಸ ಮಾಡುತ್ತಿವೆ. ಆದರೆ ಅವರ ಬಗ್ಗೆ ಈ ದಿವಸ ಇನ್ನು ಯಾವುದಾದರೂ ಪ್ರೈವೇಟ್ ಕಾರ್ಪೊರೇಷನ್ನಿನವರು ಸ್ವಂತವಾಗಿ ಇವರು ಮಾಡುವ ರೀತಿಯಲ್ಲಿ ನಡೆಸಿದ್ದರೆ ಆ ಕಂಪನಿ ಮುಳುಗಿ ಹೋಗುತ್ತಿತ್ತು. ಆದರೆ ಸರ್ಕಾರದವರು ಅಲ್ಲಿ ಖರ್ಚು ಮಾಡುವಂಥ ಹಣಕ್ಕೆ ಏನೂ ತೊಕ್ಕವಿಲ್ಲ. ಇದು ಯಾರದೂ ಸ್ವಂತ ಹಣವಲ್ಲ. ಏನೋ ತಂದಾಯ, ಸರ್ವೆ ಸೆಟಲ್‌ಮೆಂಟ್‌ನಲ್ಲಿ ಜಾಸ್ತಿ ಮಾಡಿದರೆ ಆಯಿತು, ಹಣ ಕರೆಕ್ಷನ್ ಆಗುತ್ತದೆ, ಯಾರೋ ಖರ್ಚು ಮಾಡುತ್ತಾರೆ, ಎಂದು ಇವರು ಹೇಳಬಹುದು. ಮುಖ್ಯ ಸಮಸ್ಯೆ ಏನಿದೆಯೆಂದರೆ, ಅಂಡರ್‌ಗ್ರೌಂಡ್ ವಾಟರನ್ನು ಎಕ್ಸ್‌ಪ್ಲಾಯಿಟ್ ಮಾಡುವುದು. ಇದು ಮೂಲಭೂತವಾದ ಹಾಗೂ ಬಹು ಮುಖ್ಯವಾದ ಪ್ರಶ್ನೆ. ಕೋಲಾರ, ಬೆಂಗಳೂರು ಮತ್ತು ತುಮಕೂರು ಮತ್ತು ಇತರ ಕೆಲವು ಜಿಲ್ಲೆಗಳಲ್ಲಿ ಮೇಜರ್ ಇರಿಗೇಷನ್ನಿಗೆ ಏನೂ ಅವಕಾಶವಿಲ್ಲ, ಮಧ್ಯಮ ಇರಿಗೇಷನ್ನಿಗೂ ಅವಕಾಶವಿಲ್ಲ. ಲಿಟಲ್ ಮೈನರ್ ಇರಿಗೇಷನ್ನುಗಳನ್ನು ಎಕ್ಸ್‌ಪ್ಯಾಂಡ್ ಮಾಡುವುದಕ್ಕೂ ಸಹ ಅವಕಾಶವಿಲ್ಲ. ಅಲ್ಲಿರುವ ಅವಕಾಶ ಎಂದರೆ ಬೋರ್‌ವೆಲ್ ಮತ್ತು ಬ್ಲಾಸ್ಟಿಂಗ್ ಯಂತ್ರಗಳ ಸಹಾಯದಿಂದ ಬಾವಿಗಳನ್ನು ತೆಗೆದು ನೀರನ್ನು ಉಪಯೋಗ ಮಾಡುವುದು. ಸರ್ಕಾರದವರು ಇದಕ್ಕಾಗಿ ಕೆಲವು ಮೆಷಿನ್ನುಗಳನ್ನು ಇಟ್ಟಿದ್ದೇವೆಂದು ಹೇಳಿದರೆ, ಅವು ಏನೇನೂ ಸಾಲದು. ಕೋಲಾರದ ಪರಿಸ್ಥಿತಿಯನ್ನು ತೆಗೆದುಕೊಂಡರೆ ಈ ಬೋರ್‌ವೆಲ್ ಮೆಷಿನ್ನುಗಳಿಗೆ ಮತ್ತು ಬ್ಲಾಸ್ಟಿಂಗ್ ಮೆಷಿನ್ನುಗಳಿಗೆ ಸುಮಾರು ಒಂದು ಸಾವಿರ ಅರ್ಜಿಗಳು ಕೋಲಾರ ಅಸಿಸ್ಟೆಂಟ್ ಇಂಜಿನಿಯರ್ ಆಫೀಸಿನಲ್ಲಿವೆ. ಅವರಿಗೆ ಕೊಟ್ಟರು, ಇವರಿಗೆ ಕೊಟ್ಟರು, ನಮಗೆ ಕೊಟ್ಟಿಲ್ಲವೆಂಬುದಾಗಿ ದಿನವೂ ಅಲ್ಲಿ ತಕರಾರು ಇದೆ. ಸುಮ್ಮನೆ ಬಕಾನುರನ ಹೊಟ್ಟೆಗೆ ಮೂರು ಕಾಸು ಮಜ್ಜಿಗೆ ಕೊಟ್ಟ ಹಾಗೆ ಆಗಿದೆ. ಆದ್ದರಿಂದ ನಾವು 20 ಮೆಷಿನ್ನುಗಳನ್ನು ಮಾತ್ರ ಇಟ್ಟಿದ್ದೇವೆಂದು ಸರ್ಕಾರದವರು ಹೇಳಬಾರದು. ಏನಾಗಿ ಶಕ್ತ ಇಲ್ಲವಿದ್ದರೆ, ಸರ್ಕಾರ ದಿವಾಳಿಯಾಗುವ ಹಾಗೆ ಇದ್ದರೆ, ಈ ಇಲಾಖೆಯನ್ನು ಮುಚ್ಚಿ. ಬಹಳ ಸಂತೋಷ. ಇದು ಬಹಳ ಮುಖ್ಯ ಪ್ರಶ್ನೆ. ಅದರಲ್ಲಿಯೂ ಈ ಯಂತ್ರಗಳು ಸಾಕಷ್ಟು ಇಲ್ಲದಿದ್ದರೆ ನಿಜವಾಗಿಯೂ ಬೆಂಗಳೂರು ಮತ್ತು ಕೋಲಾರ ಪ್ರದೇಶಗಳಲ್ಲಿ ವ್ಯವಸಾಯವನ್ನು ಯಶಸ್ವಿಯಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಕನಿಷ್ಠ ಪಕ್ಷ ಸರ್ಕಾರದವರು 400 ಬ್ಲಾಸ್ಟಿಂಗ್ ಮೆಷಿನ್ನುಗಳಿವೆ ಎಂಬುದಾಗಿ ಹೇಳಿದರೂ ನಮ್ಮ ರಾಜ್ಯಕ್ಕೆ ಇನ್ನು 200 ಮೆಷಿನ್ನುಗಳನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಒಂದೊಂದು ತಾಲ್ಲೂಕಿನಲ್ಲಿ 2-3 ಬೋರ್‌ವೆಲ್ ಮೆಷಿನ್ನುಗಳನ್ನು ಮತ್ತು ಬ್ಲಾಸ್ಟಿಂಗ್ ಮೆಷಿನ್ನುಗಳನ್ನು ಕೊಡಬೇಕು. ಇಲ್ಲದೇ ಹೋದರೆ ನೂರಾರು ಜನರು ಯಾವಾಗಲೂ ಆಫೀಸುಗಳ ಮುಂದೆ ಇರುತ್ತಾರೆ. ಒಂದು ವೇಳೆ ಏನಾದರೂ ದೊಡ್ಡ ಮನುಷ್ಯರು ಎಂದು ಅವರಿಗೆ ಕೊಟ್ಟರೆ, ದೊಡ್ಡ ದೊಡ್ಡ ಜಮೀನ್ದಾರರಿಗೆ

ಕೊಟ್ಟರೆ, ಖಂಡಿತವಾಗಿ ತಕರಾರು ಯಾವಾಗಲೂ ಇದ್ದೇ ಇರುತ್ತದೆ. ಆದ್ದರಿಂದ ದಯವಿಟ್ಟು ಸಂಬಂಧಪಟ್ಟ ಮಂತ್ರಿಗಳು ಇದನ್ನು ತಲೆಗೆ ಹಚ್ಚಿಕೊಳ್ಳಬೇಕು. ಏಕೆಂದರೆ ಈ ಸಮಸ್ಯೆ ಬಹಳ ಮುಖ್ಯವಾದುದು ಎಂಬುದಾಗಿ ತಿಳಿದುಕೊಂಡು ಹೆಚ್ಚು ಹೆಚ್ಚಾಗಿ ಬೋರ್‌ವೆಲ್ ಮತ್ತು ಬ್ಲಾಸ್ಟಿಂಗ್ ಮೆಷಿನ್ನುಗಳನ್ನು ನಮ್ಮ ರಾಜ್ಯದ ಪ್ರತಿಯೊಂದು ತಾಲ್ಲೂಕಿಗೆ ಒದಗಿಸಿಕೊಡಬೇಕು. ಇಂತಹ ಯೋಜನೆಗಳನ್ನು ಅವಲಂಬಿಸಿರತಕ್ಕ ಕೋಲಾರ ಮತ್ತು ಇತರ ಜಿಲ್ಲೆಗಳಿಗೆ ಈ ಮೆಷಿನ್‌ಗಳನ್ನು ಒದಗಿಸಿ ನಿಜವಾಗಿಯೂ ನೀರಿಗೋಸ್ಕರ ಹಾಹಾಕಾರ ಪಡುತ್ತಿರುವ ಜನಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹಾಗೂ ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಳ್ಳಬೇಕೆಂದು ಈ ಸಂಬಂಧದಲ್ಲಿ ನಾನು ಮಂತ್ರಿಗಳಿಗೆ ತಿಳಿಸಬಯಸುತ್ತೇನೆ.

† ಶ್ರೀ ಎನ್. ಎ. ಚನ್ನೇಗೌಡ (ಹೊಸಕೋಟೆ).—ಅಧ್ಯಕ್ಷರೇ, ಸರ್ಕಾರದ ವತಿಯಿಂದ ಇರತಕ್ಕ ಬುಲ್‌ಡೋಜರ್ಸ್ ಮತ್ತು ಟ್ರಾಕ್ಟರ್ಸ್ ಮತ್ತು ಬೋರ್‌ವೆಲ್ ಮೆಷಿನ್ನುಗಳ ಬಗ್ಗೆ ಮಾನ್ಯ ಸದಸ್ಯರಾದಂಥ ಶ್ರೀ ಸೋಮಶೇಖರಪ್ಪನವರು ಅರ್ಧ ಗಂಟೆ ವೇಳೆ ಪ್ರಶ್ನೆಗಳನ್ನು ಹಾಕಿ ಸರ್ಕಾರದ ಉತ್ತರದ ಬಗ್ಗೆ ಕೆಲವು ವಿಷಯಗಳನ್ನು ಹೇಳಿದರು. ನಾನಾದರೂ ಶ್ರೀ ಸೋಮಶೇಖರಪ್ಪನವರಿಗಾಗಲೀ, ಅಥವಾ ಮಾನ್ಯ ಶ್ರೀ ವೆಂಕಟಗಿರಿಯಪ್ಪನವರಿಗಾಗಲೀ ಕೆಲವು ವಿಷಯಗಳನು ಹೇಳಬೇಕಾಗಿದೆ. ಅವರು ಬಾವಿಗಳನ್ನು ತೆಗೆಯುವ ಯಂತ್ರಗಳನ್ನು ಪಡೆದು ಅವನ್ನು ಸರ್ಕಾರದ ವತಿಯಿಂದ ನಡೆಸಿದರೆ ಅದರಲ್ಲಿ ನಷ್ಟವಾಗಿ ರೈತರಿಗೆ ಏನೂ ಉಪಯೋಗವಾಗುತ್ತಾ ಇಲ್ಲವೆಂದು ಹೇಳಿದರು. ಅದನ್ನು ಪ್ರೈವೇಟ್‌ನವರಿಗೆ ಕೊಡಬೇಕು ಎನ್ನುವ ರೀತಿಯಲ್ಲಿ ಹೇಳಿದರು. ಆದರೆ ಅವರಿಗೇ ಕೊಡಿ ಎಂದು ಹೇಳಲಿಲ್ಲ. ಸರ್ಕಾರದ ಉದ್ದೇಶ ಒಂದು ಟ್ರಾಕ್ಟರ್ ಆಗಲಿ, ಬುಲ್‌ಡೋಜರ್ ಆಗಲೀ, ಬ್ಲಾಸ್ಟಿಂಗ್ ಮೆಷಿನ್ ಆಗಲೀ ಇಟ್ಟುಕೊಳ್ಳದೇ ಇರುವ ಜನಸಾಮಾನ್ಯರಿಗೆ ಅನುಕೂಲವಾಗಬೇಕೆಂಬುದು ಆಗಿದೆ. ಆದರೆ ಇವುಗಳಿಂದ ಜನಗಳಿಗೆ ಉಪಯೋಗವಾಗುವ ಹಾಗೆ ಈ ವ್ಯವಸಾಯ ಇಲಾಖೆ ಬೆಳೆದಿಲ್ಲ. ಆ ರೀತಿ ಈ ಇಲಾಖೆಯನ್ನು ಇಟ್ಟಿದ್ದೀರಿ. ಇವರ ವಶದಲ್ಲಿರತಕ್ಕ ಬುಲ್‌ಡೋಜರ್ಸ್ ಎಷ್ಟು ಎಂಬುದನ್ನು ನೋಡಬೇಕು. ನಮ್ಮ ಸಂಸ್ಥಾನದಲ್ಲಿ ಬುಲ್‌ಡೋಜರ್ಸ್ 47, ಟ್ರಾಕ್ಟರ್ಸ್ 46, ಬೋರ್‌ವೆಲ್ ಮೆಷಿನ್ಸ್ 22 ಇರತಕ್ಕ ವಿಷಯಗಳನ್ನು ಪ್ರಸ್ತಾಪಿಸಿದರು. ನನಗೆ ತಿಳಿದಮಟ್ಟಿಗೆ ನಾನು ಆ ವಿಷಯವನ್ನು ಸಂಬಂಧಪಟ್ಟ ಇರಾಖೆಯನ್ನು ಕೇಳಿದ್ದರಲ್ಲಿ, ಮಂತ್ರಿಗಳನ್ನು ವಿಚಾರಿಸಿದ್ದರಲ್ಲಿ 34 ಬುಲ್‌ಡೋಜರ್ಸ್ ಅನ್‌ಸರ್ವಿಸಬಲ್, ಡಿಸ್‌ಪೋಜ್ ಮಾಡಬೇಕು ಎಂದು ಹೇಳುತ್ತಾರೆ. ಅಂದ ಮೇಲೆ ಕೇವಲ 66 ಬುಲ್‌ಡೋಜರ್ಸ್ ಮಾತ್ರ ಉಳಿದಿರುತ್ತವೆ. ಆದರೆ ನಮ್ಮಾರು ಒಂದು ಲಕ್ಷ ಎಕರೆ ಸಾಗು ಮಾಡುವುದಕ್ಕಾಗಲಿಲ್ಲವೆಂದು ಮಾನ್ಯ ಶ್ರೀ ಸೋಮಶೇಖರಪ್ಪನವರು ಹೇಳಿದರು. 1966–67ನೇ ಸಾಲಿನಲ್ಲಿ ಇವರ ಹತ್ತಿರ ಇರತಕ್ಕ ಬುಲ್‌ಡೋಜರ್ ಮತ್ತು ಟ್ರಾಕ್ಟರ್‌ಗಳಿಂದ 10,062 ಎಕರೆಗಳೂ, ಮತ್ತು 1967–68ರಲ್ಲಿ 12,150 ಮತ್ತು 7,226 ಎಕರೆಗಳಷ್ಟು ಸಮ ಮಾಡಿದ್ದಾರೆಂದು ಅಂಕಿ ಅಂಶ ಸಿಕ್ಕಿದೆ.

ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳು ರೈತರಿಗೆ ಸಾಕಷ್ಟು ದೊರೆಯುತ್ತಿಲ್ಲ. ಮತ್ತು ಈಗ ಎಲ್ಲೆಲ್ಲಿ ಟ್ರಾಕ್ಟರು ಮತ್ತು ಬುಲ್‌ಡೋಜರುಗಳನ್ನು ಸರ್ಕಾರದವರು ರೈತರಿಗೆ ಒದಗಿಸಿದ್ದಾರೆಯೋ ಅಲ್ಲ ಕೆಲವು ತಾಂತ್ರಿಕ ತೊಂದರೆಗಳು ಬಂದಿವೆ. ಸರಿಯಾದ ತಾಂತ್ರಿಕ ಕೆಲಸಗಾರರು ಸಿಕ್ಕದೆ ತೊಂದರೆಯಾಗಿದೆ. ಇದಕ್ಕೆ ಯಾರನ್ನು ಜವಾಬ್ದಾರರನ್ನು ಮಾಡುವುದು? ಸಂಬಂಧಪಟ್ಟ ಇರಾಖೆಯ ಅಧಿಕಾರಿಗಳಾಗಲೀ, ಮಂತ್ರಿಗಳಾಗಲೀ ಇದರ ಜವಾಬ್ದಾರಿಯನ್ನು ತೆಗೆದುಕೊಂಡು ತಾಂತ್ರಿಕ ತರಬೇತಿಯನ್ನು ಪಡೆದಿರತಕ್ಕ ಕೆಲಸಗಾರರನ್ನು ಪಡೆದು ರೈತರಿಗೆ ಬೇಕಾದಾಗ ಟ್ರಾಕ್ಟರ್ ಮತ್ತು ಬುಲ್‌ಡೋಜರುಗಳ ಕೆಲಸಕ್ಕೆ ಮತ್ತು ರಿಪೇರಿ ಇತ್ಯಾದಿಗಳಿಗೆ ಅವರನ್ನು ಕಳುಹಿಸಲು ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಸರ್ಕಾರದವರು ಮುಂಜಾಗ್ರತೆ ಕ್ರಮವನ್ನು ತೆಗೆದುಕೊಂಡು, ಅದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ನಾನು ಹೇಳಬಯಸುತ್ತೇನೆ. ಮುಖ್ಯವಾಗಿ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಈಗಿರತಕ್ಕ ವ್ಯವಸಾಯ ಇಲಾಖೆಯ ಮೂಲಕ ಅಗತಕ್ಕಂಥಾದ್ದನ್ನು ಬೇರೆ ಇಲಾಖೆಗೆ ವಹಿಸಬೇಕು ಎಂದು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ಜಿಯಾಲಜಿಕಲ್ ಸರ್ವೆ ಡಿಪಾರ್ಟ್‌ಮೆಂಟ್ ಬೆಂಗಳೂರು ಜಿಲ್ಲೆಯಲ್ಲಿರತಕ್ಕದ್ದು ಎಷ್ಟರಮಟ್ಟಿಗೆ ರೈತರಿಗೆ ಸಹಾಯಕವಾಗಿದೆ ಎಂಬುದರ ಬಗ್ಗೆ ಅನೇಕರು ಅನುಭವವನ್ನು ಪಡೆದಿದ್ದಾರೆ. ಅವರು ವೆಲ್‌ಬೋರಿಂಗ್ ರಿಗ್ಸ್ ಇಟ್ಟುಕೊಂಡು ವ್ಯವಸಾಯಕ್ಕೆ ಹೆಚ್ಚಿಗೆ ಅನುಕೂಲ ಆಗಿಲ್ಲ. ವ್ಯವಸಾಯಕ್ಕೆ ಅವುಗಳಿಂದ ಹೆಚ್ಚಿನ ಲಾಭ ದೊರಕಿಲ್ಲ ಎಂದೂ ಮಾನ್ಯ ಸದಸ್ಯರು ಹೇಳಿದ್ದಾರೆ. ವ್ಯವಸಾಯ ಇಲಾಖೆಯಲ್ಲಿಯೂ ಕೂಡ ಹೆಚ್ಚಿಗೆ ಟ್ರಾಕ್ಟರು, ಬುಲ್ಡೋಜರುಗಳು ಮತ್ತು ರಿಗ್ಸ್ ಇದ್ದರೂ ಕೂಡ ಅವುಗಳಿಗೆ ಬೇಕಾದ ಎಕ್ವಿಪ್‌ಮೆಂಟ್‌ಗಳು ಮತ್ತು ತಾಂತ್ರಿಕ ಕೆಲಸಗಾರರು, ಸ್ಪೇರ್ ಪಾರ್ಟ್ಸ್‌ಗಳು

(ಶ್ರೀ ಎನ್. ಎ. ಚನ್ನೇಗೌಡ)

ಸರಿಯಾಗಿ ಸಿಕ್ಕುವೆ ಇರುವುದರಿಂದ ಟ್ರಾ್ಯಕ್ಟರು, ಬಲ್ಕೋಜರುಗಳು, ಮತ್ತು ರಿಗ್ಸ್‌ಗಳನ್ನು ರೈತರಿಗೆ ಸರಿಯಾಗಿ ಒದಗಿಸುವುದಕ್ಕೆ ಆಗುತ್ತಾ ಇಲ್ಲ. ಸ್ಪೇರ್‌ಪಾರ್ಟ್ಸುಗಳು ಪರದೇಶದಿಂದ ಬರಬೇಕಾಗಿರುವುದರಿಂದ ಸ್ವಲ್ಪ ತೊಂದರೆಯಾಗಿದೆ. ನಾವು ವ್ಯವಸಾಯ ಇಲಾಖೆಯ ಬೇಡಿಕೆಯ ಮೇರೆ ಮಾತನಾಡುವಾಗ ಈ ವಿಷಯವನ್ನು ಹೇಳಿದ್ದೇನೆ. ಮಾನ್ಯ ಮಂತ್ರಿಗಳೂ ಸಹ ಈ ಬಗ್ಗೆ ಬಹಳ ಕಷ್ಟಪಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಒಂದು ಕೆಲಸ ಬಹಳ ಕಷ್ಟ ಇದೆ. ಬೆಂಗಳೂರು ಜಿಲ್ಲೆಯಲ್ಲಿ 22 ರಿಗ್ಸ್ ಇವೆ. ಒಟ್ಟು ಮೈಸೂರು ಸಂಸ್ಥಾನದಲ್ಲಿ 119 ರಿಗ್ಸ್‌ಗಳು ಇವೆ. ಅವುಗಳಿಂದ ಅನೇಕ ಬಾವಿಗಳನ್ನು ನಮ್ಮ ರಾಜ್ಯದಲ್ಲಿ ತೆಗೆದಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ರಿಗ್ಸ್‌ಗಳಿಂದ 800 ಬಾವಿಗಳನ್ನು ತೆಗೆದಿದ್ದಾರೆ. ಇನ್ನೂ ಹೆಚ್ಚಿಗೆ ರಿಗ್ಸ್ ಬೇಕಾಗುತ್ತದೆ ಎಂದು ಶ್ರೀಮಾನ್ ವೆಂಕಟರಿಯಪ್ಪನವರೂ ಹೇಳಿದ್ದಾರೆ. ತುಮಕೂರು, ಕೋಲಾರ, ಜಿಲ್ಲೆಗಳಲ್ಲಿ ಹೆಚ್ಚಿಗೆ ನೀರಾವರಿ ಬಾವಿಗಳನ್ನು ಮಾಡುವುದಕ್ಕೆ ಅವಕಾಶ ಇದೆ ಎಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಬಾವಿಗಳನ್ನು ತೆಗೆಯುವುದಕ್ಕೆ ಮುಂಚೆ ಜಿಯರಾಪಿಕಲ್ ಸರ್ವೇ ಮಾಡಿ ನಂತರ ಬಾವಿಯನ್ನು ತೆಗೆಸಬೇಕು.

ಅಗ್ರಿಕಲ್‌ಚರ್ ಕಾಲೇಜಿನಲ್ಲಿ ಒಬ್ಬರು ವಿದ್ಯಾರ್ಥಿ ಇದ್ದಾರೆ, ಅವರು ಒಳ್ಳೆಯ ಕೆಲಸಗಾರರು. ಅವರಿಗೆ ಒಳ್ಳೆಯ ತಾಂತ್ರಿಕ ಜ್ಞಾನವೂ ಇದೆ. ಅವರನ್ನು ಬೇರೆ ಕಡೆ ಕಳುಹಿಸಕೂಡದು. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಲ್ಲಿಯೂ ಕೂಡ ಮಾತನಾಡಿದ್ದೇನೆ. ಆ ವಿದ್ಯಾರ್ಥಿ ಪಾಸಿದ್ದಾರೆ ಅವರು ಒಳ್ಳೆಯ ಎಕ್ಸ್‌ಪರ್ಟ್ ಆಗಿದ್ದಾರೆ. ಆದ್ದರಿಂದ ಅವರ ಸೇವೆಯನ್ನು ಹೆಚ್ಚಿಗೆ ಪಡೆದುಕೊಂಡು ಈ ಇಲಾಖೆಯಲ್ಲಿ ಇರತಕ್ಕ ನ್ಯೂನತೆಗಳನ್ನು ನಿರಿಪಡಿಸಬೇಕು. ರಿಗ್ಸ್‌ಗಳನ್ನು ಹೆಚ್ಚಿಗೆ ತರಿಸಿ ರೈತರಿಗೆ ಒದಗಿಸಬೇಕು. ಬ್ಲಾಸ್ಟರಿಂಗ್ ಮಿಷನ್ಸ್, ಟ್ರಾ್ಯಕ್ಟರುಗಳು ಮತ್ತು ಬುಲ್ಡೋಜರುಗಳು ಇವುಗಳಿಂದ ರೈತರಿಗೆ ಅನುಕೂಲ ಇದೆ. ಆದ್ದರಿಂದ ಅವುಗಳನ್ನು ರೈತರಿಗೆ ಸರಿಯಾಗಿ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ವ್ಯವಸಾಯ ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನು ನಿರಿಪಡಿಸಬೇಕು. ಈ ಟ್ರಾ್ಯಕ್ಟರು, ಬುಲ್ಡೋಜರುಗಳು, ಬ್ಲಾಸ್ಟರಿಂಗ್ ಮೆಷಿನ್‌ಗಳು, ರಿಗ್ಸ್‌ಗಳು ಇವುಗಳನ್ನು ರೈತರಿಗೆ ಒದಗಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಮತ್ತು ಅವುಗಳ ಕೆಲಸಕ್ಕೆ ಬೇಕಾದಂತಹ ತ್ರಾಂತಿಕ ಕೆಲಸಗಾರರು ಮತ್ತು ಬಿಡಿ ಭಾಗಗಳನ್ನೂ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ಅವುಗಳ ಸಹಾಯದಿಂದ ರೈತರು ಹೆಚ್ಚು ಹೆಚ್ಚು ಬಾವಿಗಳನ್ನು ತೆಗೆಯುವುದಕ್ಕೆ ಸರ್ಕಾರದವರು ಸಹಾಯಮಾಡಿ ನೀರಾವರಿ ಪರ್ಸೆಂಟೇಜ್ ಹೆಚ್ಚುಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದರಿಂದ ಆಹಾರ ಉತ್ಪಾದನೆಯನ್ನು ಜಾಸ್ತಿಮಾಡಿ ಸಾಧ್ಯವಾದಮಟ್ಟಿಗೆ ಆಹಾರದ ಅಭಾವವನ್ನೂಕೂಡ ಕಡಿಮೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಷ್ಟುಹೇಳಿ ಈ ಪ್ರಸ್ತಾಪ ಮಾಡುವುದಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟ ದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :—ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಈ ಅರ್ಧಘಂಟೆಯ ಚರ್ಚೆಯಲ್ಲಿ ನಮ್ಮಪಕ್ಕದ ಜಿಲ್ಲೆಯವರೇ ಆಗಿರತಕ್ಕ ಶ್ರೀಮಾನ್ ಸೋಮಶೇಖರಪ್ಪನವರು ಬುಲ್ಡೋಜರುಗಳು ಟ್ರಾ್ಯಕ್ಟರುಗಳು ಮತ್ತು ವೆರ್‌ಬೋರಿಂಗ್ ಮೆಷಿನ್‌ಗಳು ಯಾವರೀತಿ ಕೆಲಸ ಮಾಡುತ್ತವೆ ಎನ್ನುವ ವಿಚಾರದಲ್ಲಿ ಮಾತನಾಡಿದ್ದಾರೆ. ಈಗ ಮಲೆನಾಡಿನಲ್ಲಿ ಈ ವೆರ್‌ಬೋರಿಂಗ್ ಮೆಷಿನ್‌ನ ಅವಶ್ಯಕತೆ ಇಲ್ಲಿಯವರೆಗೂ ಕಂಡು ಬಂದಿರಲಿಲ್ಲ. ಮಲೆನಾಡಿನಲ್ಲಿ 280 ಇಂಚು ಮಳೆ ಬೀಳುತ್ತಿತ್ತು. ಆದ್ದರಿಂದ ಯಾವರೀತಿಯ ತೊಂದರೆಯೂಕೂಡ ನಗುತ್ತಾ ಇರಲಿ. ಅಲ್ಲಿ ಹಿಂದೆ ಏನು ಮಳೆ ಬೀಳುತ್ತಿತ್ತೋ ಆದರಲ್ಲಿ ಈಗ ಅರ್ಧಕ್ಕಿಂತ ಕಡಿಮೆಯಾಗಿದೆ. ಆದ್ದರಿಂದ ಅಲ್ಲಿ ನೀರಿನ ತೊಂದರೆಯಾಗಿರುವುದರಿಂದ ಬಾವಿಗಳನ್ನು ತೋಡಲು ಎಲ್ಲರೂ ವೆರ್‌ಬೋರಿಂಗ್ ಮೆಷಿನ್ ಬೇಕು ಎಂದು ಕೇಳುತ್ತಿದ್ದಾರೆ. ಇದರಿಂದಾಗಿ ಆ ವೆರ್‌ಬೋರಿಂಗ್ ಮೆಷಿನ್‌ಗಳ ಅವಶ್ಯಕತೆ ಹೆಚ್ಚಾಗಿದೆ ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ವೆರ್‌ಬೋರಿಂಗ್ ಮೆಷಿನ್ ಒಂದೂ ಕೆಲಸಮಾಡುತ್ತಿಲ್ಲ ಎಂದು ನಾನು ಅಧ್ಯಕ್ಷರ ಮುಖಾಂತರ ಸಂಬಂಧಪಟ್ಟ ವ್ಯವಸಾಯ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ವ್ಯವಸಾಯ ಇಲಾಖೆಯಲ್ಲಿ 45 ಟ್ರಾ್ಯಕ್ಟರುಗಳು ಇವೆ. ಬುಲ್ಡೋಜರುಗಳು 97 ಇವೆ. ವೆರ್‌ಬೋರಿಂಗ್ ಮೆಷಿನ್‌ಗಳು 60 ಇವೆ. ಆದರೆ ಇವು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಕೆಲಸಮಾಡುತ್ತವೆ ಎನ್ನತಕ್ಕಂಥಾದ್ದನ್ನು ಮಾನ್ಯ ಮಂತ್ರಿಗಳು ಉತ್ತರಕೊಡುವಾಗ ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೆಲಸಮಾಡದೆ ಐಡರ್ ಆಗಿರತಕ್ಕ ಟ್ರಾ್ಯಕ್ಟರುಗಳು ಒಂದು ಎಂದು ಕೊಟ್ಟಿದ್ದಾರೆ. 12 ಬುಲ್ಡೋಜರುಗಳು ಕೆಲಸಮಾಡುತ್ತಿಲ್ಲ ಎಂದು ಕೊಟ್ಟಿದ್ದಾರೆ. ವೆರ್ ಬೋರಿಂಗ್ ಮೆಷಿನ್‌ಗಳು 6 ಕೆಲಸ ಮಾಡುತ್ತಿಲ್ಲ ಎಂದು ರಿಪೋರ್ಟಿನಲ್ಲಿ ಸರ್ಕಾರದವರು ಕೊಟ್ಟಿದ್ದಾರೆ. ಈ ಮೆಷಿನ್‌ಗಳು ಇದ್ದೂ ಕೆಲಸಕ್ಕೆ ಬಾರದೆ ಹೋಗಿರುವ ವಿಚಾರದಲ್ಲಿ ನಾನು ಒಂದು ಮಾತು ಹೇಳುತ್ತೇನೆ. ಸರ್ಕಾರದವರು ಮೆಷಿನರಿಗಳನ್ನು ತರಿಸತಕ್ಕಂಥಾದ್ದು ಹೆಚ್ಚು ಅಲ್ಲ. ಅವುಗಳನ್ನು ಸರಿಯಾದ ರೀತಿಯಲ್ಲಿ ಮೇಂಟೇನ್ ಮಾಡಿಕೊಂಡು ಹೋಗತಕ್ಕಂಥಾದ್ದು ಅವರ ಆದ್ಯಕರ್ತವ್ಯ.

7-30 P.M.

ಈ ಬುಲ್ಡೋಜರ್‌ಗಳನ್ನು ತರಿಸುವುದಕ್ಕೆ ಮೊದಲು ಅವುಗಳನ್ನು ನೋಡಿಕೊಳ್ಳುವಂತಹ ತಜ್ಞರನ್ನು ತಯಾರು ಮಾಡಬೇಕು. ತಜ್ಞರು ಇಲ್ಲದಿರುವುದರಿಂದ ಈ ರೀತಿ ಮೆಷಿನ್‌ಗಳು ಕೆಟ್ಟು ನಿಂತಿವೆ ಎಂದು ಸಂಬಂದಪಟ್ಟ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಮಲೆನಾಡಿನ ಅನೇಕ ಹಳ್ಳಿಗಳಲ್ಲಿರುವ ಬಾವಿಗಳಲ್ಲಿ ನೀರು ಇಲ್ಲದೆ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲದೆ ತೊಂದರೆ ಪಡುತ್ತಿದ್ದಾರೆ. ಬಾವಿಗಳನ್ನು ಆಳಪಡಿಸುವ ಶಕ್ತಿ ಆ ಜನರಿಗೆ ಇಲ್ಲವಾಗಿದೆ. ಸರ್ಕಾರದವರ ಬಳಿ ಬಾವಿ ಕೊರೆಯುವ ಯಂತ್ರಗಳು ಬೇಕಾದಷ್ಟು ಇವೆ. ಇವುಗಳ ಜೊತೆಗೆ ಬ್ಲಾಸ್ಟಿಂಗ್ ಮಿಷಿನ್‌ಗಳು ಸಹ ಇದ್ದರೆ ಬಹಳ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ ಬುಲ್ಡೋಜರ್‌ಗಳು ಆಗಲಿ, ಬಾವಿ ಕೊರೆಯುವ ಯಂತ್ರಗಳಾಗಲೀ, ಟ್ರಾ್ಯಕ್ಟರ್‌ಗಳಾಗಲೀ ಕೆಲಸ ಮಾಡುತ್ತಿಲ್ಲ. ಈ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಈಗಾಗಲೇ ತಂದಿದ್ದೇನೆ.

ಶ್ರೀ ಬಿ. ವೆಂಕಟಗಿರಿಯಪ್ಪ :—ನಿಮ್ಮ ಜಿಲ್ಲೆಯಲ್ಲಿ ಮಳೆ ಜಾಸ್ತಿಯಾಗಿ ಆಗುತ್ತವೆ ಅಲ್ಲವೆ ?

ಶ್ರೀ ಪಿ. ಎಂ. ಶಾಸ್ತ್ರಿ :—ಇವತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ 250 ಇಂಚ್ ಮಳೆಯಾಗುತ್ತಿದ್ದ ಪ್ರದೇಶದಲ್ಲಿ 100 ಇಂಚ್ ಆಗುತ್ತದೆ, 40-50 ಇಂಚ್ ಮಳೆಯಾಗುತ್ತಿದ್ದ ಕಡೆ 15 ಇಂಚ್ ಆಗುತ್ತದೆ. ಈ ಕಾರಣದಿಂದ ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಯಾವ ರೀತಿ ಸರ್ಕಾರದವರು ಕೆಲವೊಂದು ಮಿಷನ್‌ಗಳನ್ನು ಒದಗಿಸಿದ್ದಾರೋ ಅದೇ ರೀತಿ ನಮ್ಮ ಜಿಲ್ಲೆಗೂ ಒದಗಿಸಬೇಕೆಂದು ಕೇಳುತ್ತಿರುವುದು. ರೈತರ ಉಪಯೋಗಕ್ಕಾಗಿ ತರಿಸಿದಂಥ ಈ ಯಂತ್ರಗಳು ಮಿಸ್-ಯೂಸ್ ಆಗುತ್ತವೆ. ಅಂದರೆ ದೊಡ್ಡ ದೊಡ್ಡ ಕಂಪನಿಗಳವರಿಗೆ ಬಾವಿ ತೆಗೆಯುವುದಕ್ಕೆ ಸರ್ಕಾರದವರು ಕೊಡುತ್ತಿರುವುದು ಸರಿಯಲ್ಲ. ವ್ಯವಸಾಯಗಾರರ ಉಪಯೋಗಕ್ಕೆ ಮಾತ್ರ ಈ ಯಂತ್ರಗಳನ್ನು ಉಪಯೋಗಿಸಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳಿಕೊಂಡು ನನಗೆ ಇಷ್ಟು ಕಾಲ ಮಾತಾಡುವುದಕ್ಕೆ ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಇರಾಖೆಯ ಮಂತ್ರಿಗಳು).—ನನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಸೋಮಶೇಖರಪ್ಪನವರು ಅರ್ಧಗಂಟೆಯ ಚರ್ಚೆಯನ್ನು ಮಾಡಿ ಆ ಮೂಲಕ ನನಗೆ ಒಂದು ಉಪಕಾರ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇದೇ ಸಭಾಯದಲ್ಲಿ ಇತರ ಮೂರು ಜನ ಮಾನ್ಯ ಸದಸ್ಯರುಗಳು ಕೂಡ ಚರ್ಚೆಯಲ್ಲಿ ಭಾಗವಹಿಸಿ ವ್ಯವಸಾಯದ ಇಂಜಿನಿಯರಿಂಗ್ ಇರಾಖೆಯಲ್ಲಿ ಕೆಲಸ ಮಾಡತಕ್ಕಂಥ ಬುಲ್ಡೋಜರ್‌ಗಳು, ಬಾವಿ ಕೊರೆಯುವ ಯಂತ್ರಗಳು, ಟ್ರಾ್ಯಕ್ಟರ್‌ಗಳು ಮತ್ತು ಬ್ಲಾಸ್ಟಿಂಗ್ ಯಂತ್ರಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಈ ಒಂದು ಡಿವಿಜನ್ ನಲ್ಲಿ ಯಾವ ತ್ವರಿತಗತಿಯಿಂದ ಕೆಲಸವಾಗಬೇಕಾಗಿತ್ತೋ ಆ ರೀತಿ ಆಗುತ್ತಿಲ್ಲ ಎಂಬುದು ಆ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಇರಬಹುದು. ಈ ಯಂತ್ರಗಳಿಂದ ಆಗಬೇಕಾಗಿರತಕ್ಕಂಥ ಕೆಲಸಗಳು ಆಗಾಧವಾಗಿವೆ. ಮೈಸೂರು ಸಂಸ್ಥಾನದಲ್ಲಿ 100ಕ್ಕೆ 90 ಭಾಗ ಖುಷ್ಕಿ ಜಮೀನು ಇದೆ. ಈ ಜಮೀನಿನಲ್ಲಿರತಕ್ಕ ನೀರನ್ನು ಈ ಯಂತ್ರಗಳ ಸಹಾಯದಿಂದ ಉಪಯೋಗಿಸಿಕೊಂಡು ವ್ಯವಸಾಯವನ್ನು ಮಾಡುವುದಕ್ಕೆ ಯಾವ ಒಂದು ಯೋಜನೆಗಳನ್ನು ಸಹ ಸರ್ಕಾರದವರು ಹಾಕಿಕೊಂಡಿಲ್ಲ, ಈ ಬಗ್ಗೆ ವ್ಯವಸಾಯ ಇರಾಖೆ ವಿಫಲವಾಗಿದೆ ಎಂಬುದಾಗಿ ಶ್ರೀಮಾನ್ ಸೋಮಶೇಖರಪ್ಪನವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದರು. ಆಯವ್ಯಯದ ಅಂದಾಜಿನ ಚರ್ಚೆಯಲ್ಲಿ ಉತ್ತರ ಕೊಡುವಾಗ ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುವ ಪ್ರದೇಶಗಳಲ್ಲಿ ಮತ್ತು ಡ್ರೈ ಏರಿಯಾಗಳಲ್ಲಿ ಈ ಯಂತ್ರಗಳ ಸಹಾಯದಿಂದ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುವ ಸಲುವಾಗಿ 280 ಕೋಟಿ ರೂಪಾಯಿಗಳ ಕೆಲವಾರು ಯೋಜನೆಗಳನ್ನು ತಯಾರು ಮಾಡಲಾಗಿದೆ, ಆ ಯೋಜನೆಗಳಲ್ಲಿ ಬಾವಿ ತೋಡಿಸುವುದು, ಪೈಪ್‌ಲೈನ್ ಇರಿಗೇಷನ್‌ಗಳನ್ನು ಕೈಗೊಳ್ಳುವುದು ಸೇರಿದೆ, ಆರ್ಥಿಕ

(ಶ್ರೀ ಬಿ. ರಾಚಯ್ಯ)

ಇಲಾಖೆಯವರು ಈ ಕೆಲಸಕ್ಕಾಗಿ ಹಣ ಒದಗಿಸಿದಂತೆ ಕೆಲಸವನ್ನು ಮಾಡಿಕೊಂಡು ಬರಲಾಗುವುದು ಎಂದು ಹೇಳಲಾಗಿತ್ತು. ಈ ಕಾರಣದಿಂದ ಈ ಬಗ್ಗೆ ನಮ್ಮಲ್ಲಿ ಯಾವ ಒಂದು ಯೋಜನೆಗಳು ಇಲ್ಲ. ಎಂಬುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಹಣ ಒದಗಿದಂತೆ ಈ ಯೋಜನೆಗಳನ್ನು ಮಾಡ ಬೇಕಾಗಿದೆ. ಇವತ್ತಿನ ದಿವಸ ಕೃಷಿಗಾಗಿ, ನೀರಾವರಿಗಾಗಿ, ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಾಗಿದೆ ಎಂಬುದನ್ನು ಒಪ್ಪಿಕೊಂಡರೂ ಕೂಡ ನಮ್ಮ ಇಲಾಖೆಯ ದಾಹ ಎಷ್ಟು ಇದೆ ಎಂದರೆ ರಾಷ್ಟ್ರಸನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯನ್ನು ಕೊಟ್ಟಂತಾಗಿದೆ. 3 ತಿಂಗಳ ಹಿಂದೆ 37 ಬುಲ್‌ಡೋಜರ್‌ಗಳು ನಮ್ಮ ರಾಜ್ಯಕ್ಕೆ ಬಂದುವು. ಇನ್ನೂ 10 ಬುಲ್‌ಡೋಜರ್‌ಗಳು ಬರುವುದರಲ್ಲಿ ಇದೆ. ಕೆಲವು ಹಳೆಯ ಬುಲ್‌ಡೋಜರ್‌ಗಳು ನಮ್ಮಲ್ಲಿ ಇದ್ದವು. ಅವನ್ನು ತರಿಸಿ 25 ವರ್ಷಗಳಾಗಿದ್ದುದರಿಂದ ಆಗಾಗ್ಗೆ ರಿಪೇರಿಗಾಗಿ ಕಳಿಸ ಬೇಕಾಗಿತ್ತು. ಆ ಒಂದು ದೃಷ್ಟಿಯಿಂದ ಎಷ್ಟು ಕೆಲಸವನ್ನು ಮಾಡಬೇಕಾಗಿತ್ತೋ ಅಷ್ಟು ಕೆಲಸವನ್ನು ಈ ಹಳೆಯ ಯಂತ್ರಗಳಿಂದ ಮಾಡುವುದಕ್ಕೆ ಆಗಲಿಲ್ಲ. ಈಗ ಹೊಸದಾಗಿ 37 ಯಂತ್ರಗಳು ಬಂದಿರುವುದರಿಂದ ಕೆಲಸ ತ್ವರಿತವಾಗಿ ನಡೆಯುತ್ತಿದೆ. ಇನ್ನೂ 10 ಬುಲ್‌ಡೋಜರ್‌ಗಳು ಬರುವುದು ಇದೆ. ಈಗ 4 ದಿವಸಗಳ ಹಿಂದೆ ಕೇಂದ್ರದ ಕೃಷಿ ಮಂತ್ರಿಗಳು ರಷ್ಯಾದಿಂದ ಬರತಕ್ಕಂಥ 80 ಬುಲ್‌ಡೋಜರ್‌ಗಳನ್ನು ನಮ್ಮ ರಾಜ್ಯಕ್ಕೆ ಕೊಡಲು ಒಪ್ಪಿ ಅದಕ್ಕೆ ಬೇಕಾಗಿರ ತಕ್ಕಂಥ ಫಾರಿನ್ ಎಕ್ಸ್‌ಚೇಂಜನ್ನು ರಿಲೀಜ್ ಮಾಡಿಕೊಟ್ಟಿರುವ ಬಗ್ಗೆ ನಮಗೆ ತಿಳಿಸಿದ್ದಾರೆ. ಈಗ ಇರುವ ಬುಲ್‌ಡೋಜರ್‌ಗಳು ಮತ್ತು ಹೊಸದಾಗಿ ಬರುವ 80 ಬುಲ್‌ಡೋಜರ್‌ಗಳನ್ನು ಸೇರಿಸಿದರೂ ಕೂಡ ಪ್ರತಿ ಜಿಲ್ಲೆಯಿಂದ ಬರತಕ್ಕಂಥ ಬೇಡಿಕೆಗಳನ್ನು ಪೂರೈಸುವುದಕ್ಕೆ ಸಾಧ್ಯ ವಾಗುವುದಿಲ್ಲ. ಈ ಕಾರಣದಿಂದ ಇನ್ನೂ ಹೆಚ್ಚು ಹೆಚ್ಚಾಗಿ ಬುಲ್‌ಡೋಜರ್‌ಗಳನ್ನು ತರಿಸಿಕೊಳ್ಳ ಬೇಕಾಗಿ ಬರುತ್ತದೆ. ಈ ಇಂಜಿನಿಯರಿಂಗ್ ಇಲಾಖೆಯವರಿಂದ ಸಾಕಷ್ಟು ಕೆಲಸ ತೆಗೆದುಕೊಳ್ಳ ಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಆ ಬಗ್ಗೆ ಸಾಕಷ್ಟು ಗಮನವನ್ನು ಕೊಟ್ಟಿದ್ದೇವೆ. ನಾನು 5-6 ಸಾರಿ ವರ್ಕ್‌ಷಾಪ್‌ಗೆ ಹೋಗಿ ಯಾವ ಯಾವ ಯಂತ್ರಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ತಿಳಿದುಕೊಂಡಿದ್ದೇನೆ. ಈಗ ಹಳೆಯ ಕಥೆಯನ್ನೇ ಜ್ಞಾಪಿಸಿಕೊಂಡು ಇಂಜಿನಿಯರಿಂಗ್ ಇಲಾಖೆಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳುವುದು ಸರಿಯಲ್ಲ. ಕಳೆದ ಡಿಸೆಂಬರ್‌ವರೆಗೆ 119 ಬಾವಿಗಳು ಆಗಿವೆ. ಇಲಾಖೆಯಿಂದ ಬಂದಿರುವ ಅಂಕಅಂಶಗಳ ಪ್ರಕಾರ ಹಿಂದಿನ ವರ್ಷ ತೆಗೆಸಿದ 97 ಬಾವಿಗಳ ಪೈಕಿ 86 ಬಾವಿಗಳಲ್ಲಿ ತೃಪ್ತಿಕರವಾಗಿ ನೀರು ಬಂದಿದೆ.

ಇನ್ನು ಬುಲ್‌ಡೋಜರ್ ಬಗ್ಗೆ ಹೇಳುವುದಾದರೆ, 1956 ರಿಂದ 1961 ರವರೆಗೆ ಬುಲ್ ಡೋಜರ್‌ಗಳು 2,14,607 ಗಂಟೆಗಳವರೆಗೆ ಕೆಲಸ ಮಾಡಿ 53,651 ಎಕರೆ ಭೂಮಿಯನ್ನು ಸಮಪಾತ ಮಾಡಲಾಗಿದೆ. 1961 ರಿಂದ 1966 ರವರೆಗೆ 2,15,365 ಗಂಟೆಗಳ ಕೆಲಸ ಮಾಡಿ 53,841 ಎಕರೆಗಳಷ್ಟು ಭೂಮಿಯನ್ನು ಸಮಪಾತ ಮಾಡಲಾಗಿದೆ. 1966-67 ಮತ್ತು 1968ರ ಡಿಸೆಂಬರ್‌ವರೆಗೆ 29,438 ಎಕರೆಗಳಷ್ಟು ಭೂಮಿಯನ್ನು ಸಮಪಾತ ಮಾಡಲಾಗಿದೆ. ಇದಕ್ಕಿಂತ ಹೆಚ್ಚು ಕೆಲಸ ಮಾಡುವುದಕ್ಕಾಗಿಲ್ಲ. ಒಟ್ಟು 1,36,930 ಎಕರೆಗಳನ್ನು ಮಟ್ಟ ಮಾಡುವುದಕ್ಕೆ ಬುಲ್‌ಡೋಜರ್‌ಗಳು ಸಹಾಯ ಮಾಡಿವೆ ಎಂದು ತಮಗೆ ವರದಿಯ ಪ್ರಕಾರ ತಿಳಿಸುತ್ತಿದ್ದೇನೆ. ಆನೇಕರ್ ತಾಲ್ಲೂಕ್‌ನಲ್ಲಿ ಪ್ರಾಯೋಗಿಕವಾಗಿ ಎರಡು ಬ್ಲಾಸ್ಟಿಂಗ್ ಯೂನಿಟ್ಸ್‌ನ್ನು ಪ್ರಯೋಗ ಮಾಡಿದ್ದೇವೆ. 28-9-1968ರಿಂದ ಹೊಸದಾಗಿ 20 ಯೂನಿಟ್ಸ್‌ಗಳನ್ನು ಕೊಂಡುಕೊಂಡಿದ್ದೇವೆ. ಇದಕ್ಕೆ ಬೇಕಾಗಿರತಕ್ಕಂಥ ಕಂಟ್ರೋಲ್ ಕಮಾಡಿಟೀಸನ್ನು ನಮ್ಮ ತರಿಸಿಕೊಂಡು ಬ್ಲಾಸ್ಟಿಂಗ್ ಯೂನಿಟ್ಸ್‌ನ್ನು ಕೆಲವು ಕಡೆ ಪ್ರಯೋಗ ಮಾಡಲಾಗುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಬಾವಿ ತೋಡುವಾಗ ಕಲ್ಲು ಸಿಗುತ್ತಿರುವುದರಿಂದ ಬ್ಲಾಸ್ಟಿಂಗ್ ಯೂನಿಟ್ ಒಂದು ವರವಾಗಿದೆ. 27-3-1969ರಲ್ಲಿ 30 ಬ್ಲಾಸ್ಟಿಂಗ್ ಯೂನಿಟ್‌ಗಳನ್ನು ಕೊಂಡುಕೊಳ್ಳುವುದಕ್ಕೆ ಮುಂಜೂರಾತಿ ಕೊಟ್ಟಿದ್ದೇವೆ. 10ಕ್ಕೆ ಈಗಾಗಲೇ ಆರ್ಡರನ್ನು ಪ್ಲೇಸ್ ಮಾಡಿದ್ದೇವೆ. ಈಗ ಒಟ್ಟು ನಮ್ಮಲ್ಲಿ 52 ಯೂನಿಟ್‌ಗಳು ಇವೆ. ಮತ್ತೆ ಕೊಂಡುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೇವೆ. ಆದರೆ ಸಂಬಂಧಪಟ್ಟ ಕಂಪನಿಯವರಲ್ಲಿ ರೆಡಿ ಸ್ಟಾಕ್ ಇಲ್ಲದಿರುವುದರಿಂದ ಅವರು ಸಪ್ಲೈ ಮಾಡುವ ಸ್ಥಿತಿಯಲ್ಲಿ ಇಲ್ಲ. ಕ್ಯಾಲೆಕ್ಸ್ ಟೈಪ್ ಆಫ್ ಇಂಡಿಜಿನಸ್ ರಿಗ್ಸ್‌ನ್ನು ಮುಂದಿನ ತಿಂಗಳೊಳಗೆ 55ನ್ನು ಕೊಂಡು ಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ 25ನ್ನು ಹೊರಗಡೆಯಿಂದ ತರಿಸಿಕೊಡ ಬೇಕೆಂದು ಕೇಂದ್ರ ಸರ್ಕಾರದವರನ್ನು ಕೇಳಿದ್ದೇವೆ. ಈಗ ಕೇಂದ್ರ ಸರ್ಕಾರದವರು 2ನ್ನು ಮಾತ್ರ ತರಿಸಿಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಮೂರನ್ನು ಇಂಡಿಯಾದಲ್ಲಿ ತಯಾರಾಗುವುದನ್ನೇ

ಕೊಂಡುಕೊಳ್ಳಬೇಕೆಂದು ಹೇಳಿದ್ದಾರೆ. ಕೇಂದ್ರದ ಉಪಪ್ರಧಾನಮಂತ್ರಿಗಳು ಬಿಹಾರ್‌ನಲ್ಲಿರತಕ್ಕ ನಕೆಂಡ್-ಹ್ಯಾಂಡ್ ಯಂತ್ರಗಳನ್ನು ತೆಗೆದುಕೊಳ್ಳುವಂತೆ ಹೇಳಿದ್ದಾರೆ. ಆದರೆ ಆ ಸರ್ಕಾರದವರು ಕೊಡುವ ಬಗ್ಗೆ ಇನ್ನೂ ಅನುಮತಿ ಕೊಟ್ಟಿಲ್ಲ. 20 ರಿಗ್ಸ್ ಯೂನಿಟ್‌ಗಳಾದರೂ ನಮಗೆ ಬಂದರೆ ಒಂದು ದಿವಸದಲ್ಲಿ ಒಂದು ಬಾವಿಯನ್ನು ತೆಗೆಯುವುದಕ್ಕೆ ಅವಕಾಶವಾಗುತ್ತದೆ. ಈಗ ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯಲ್ಲಿ ಒಂದು, ಲೋಕೋಪಯೋಗಿ ಇಲಾಖೆಯಲ್ಲಿ ಒಂದು ಮತ್ತು ಜಿಯಲಾಜಿಕರ್ ಇಲಾಖೆಯಲ್ಲಿ ಒಂದು, ಈ ಪ್ರಕಾರ ಮೂರು ಯೂನಿಟ್‌ಗಳು ಇವೆ. ವ್ಯವಸಾಯದ ಇಂಜನಿಯರಿಂಗ್ ಇಲಾಖೆಯಲ್ಲಿರುವ ಯೂನಿಟ್ ಚೆನ್ನಾಗಿ ಕೆಲಸ ಮಾಡುತ್ತಿಲ್ಲವಾದ್ದರಿಂದ ಅದನ್ನು ಬೇರೆ ಇಲಾಖೆಗೆ ವರ್ಗ ಮಾಡಬೇಕೆಂದು ಶ್ರೀಮಾನ್ ಸೋಮಶೇಖರಪ್ಪನವರು ಹೇಳಿದರು. ಮದ್ರಾಸ್ ಮತ್ತು ಆಂಧ್ರದಲ್ಲಿರುವಂಥ ಯೂನಿಟ್‌ಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ಸಹ ನಾನು ತರಿಸಿಕೊಂಡು ನೋಡಿದ್ದೇವೆ. ನಮ್ಮಲ್ಲಿರುವ ಯೂನಿಟ್‌ಗಳು ನೆರೆ ರಾಜ್ಯಗಳಲ್ಲಿರುವ ಯೂನಿಟ್‌ಗಳಿಗಿಂತ ಚೆನ್ನಾಗಿ ಕೆಲಸ ಮಾಡುತ್ತಿವೆ. ಇದಕ್ಕೆ ಕೆಲವು ವಿವರಗಳನ್ನು ಕೊಡುತ್ತೇನೆ. 1967-68 ಮತ್ತು 1969ರ ಡಿಸೆಂಬರ್‌ವರೆಗೆ ರೆಕ್ಕ ವನ್ನು ತೆಗೆದುಕೊಂಡರೆ, ಲೋಕೋಪಯೋಗಿ ಇಲಾಖೆಯಲ್ಲಿರುವ ಒಂದು ಮೆಷಿನ್‌ನಿಂದ ಆವರೇಜ್ ಒಂದು ವರ್ಷದಲ್ಲಿ 2. 5 ಬಾವಿಗಳು ಆಗಿವೆ. ಮೈನ್ಸ್ ಅಂಡ್ ಜಿಯಲಾಜಿಕರ್ ಇಲಾಖೆಯಲ್ಲಿರುವ ಮೆಷಿನ್‌ನಿಂದ ಆವರೇಜ್ ಒಂದು ವರ್ಷದಲ್ಲಿ 3.96 ಬಾವಿಗಳು ಆಗಿವೆ. ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯಲ್ಲಿರುವ ಮೆಷಿನ್‌ನಿಂದ ಆವರೇಜ್ ಒಂದು ವರ್ಷದಲ್ಲಿ 2. 65 ಬಾವಿಗಳು ಆಗಿವೆ. ಆವರೇಜ್ ಡೆಪ್ತ್ ತೆಗೆದುಕೊಂಡರೆ ಲೋಕೋಪಯೋಗಿ ಇಲಾಖೆಯಲ್ಲಿರುವ ಮಿಷನ್ 125 ಅಡಿಗಳವರೆಗೆ ಕೆಳಗೆ ಹೋಗಿದೆ ಮೈನ್ಸ್ ಅಂಡ್ ಜಯಾಲಜಿ ಇಲಾಖೆಯಲ್ಲಿರುವ ಮಿಷನ್ 100ರಿಂದ 110 ಅಡಿಗಳವರೆಗೆ ಕೆಳಗೆ ಹೋಗಿದೆ, ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯಲ್ಲಿರುವ ಮಿಷನ್ 120 ರಿಂದ 130 ಅಡಿಗಳವರೆಗೆ ಕೆಳಗೆ ಹೋಗಿದೆ. ಜಿಯಲಾಜಿಕರ್ ಇಲಾಖೆಯವರು ಈ ಬಗ್ಗೆ ಇನ್ನೂ ಸಂಶೋಧನೆ ನಡೆಸುತ್ತಿದ್ದಾರೆ. ರೈತರು ಬಾವಿ ತೋಡಿಸುವಾಗ 40-50 ಅಡಿಗಳ ನಂತರ ಕಲ್ಲು ಸಿಕ್ಕಿದಾಗ ಬಾವಿ ಕೊರೆಯುವ ಯಂತ್ರಗಳನ್ನು ಒದಗಿಸಬೇಕೆಂದು ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯವರನ್ನು ಕೇಳುತ್ತಿದ್ದಾರೆ. ಕಬ್ಬನ್‌ಪಾರ್ಕ್ ಮತ್ತು ನನ್ನ ಮನೆಯ ಕಾಂಪೌಂಡ್‌ನಲ್ಲಿ ತೆಗೆಸುತ್ತಿರುವ ಬಾವಿಗಳಲ್ಲಿ ಕಲ್ಲು ಸಿಕ್ಕಿರುವುದರಿಂದ ಈ ಯಂತ್ರವನ್ನು ಉಪಯೋಗಿಸಲಾಗುತ್ತಿದೆ. ದಿನಕ್ಕೆ ಎರಡು ಅಡಿಗಳಿಗಿಂತ ಕೆಳಗೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ಕೆಲಸ ನಿಧಾನವಾಗುತ್ತಿದೆ. ಈಗ ಜಯಲಾಜಿಕಲ್ ಇಲಾಖೆಯವರ ಕೆಲಸವೇನೆಂದರೆ ಮೈನೂರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಬಾವಿ ತೋಡಿದರೆ ನೀರು ಸಿಗುತ್ತದೆ ಎಂಬುದನ್ನು ಕಂಡುಹಿಡಿಯುವುದು. ಲೋಕೋಪಯೋಗಿ ಇಲಾಖೆಯವರ ಕೆಲಸವೇನೆಂದರೆ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಿ ಕೊಡುವುದರ ಮೂಲಕ ಟ್ಯಾಂಕ್‌ಗಳನ್ನು ಕಟ್ಟಿಸಿ ಕೊಡುವುದು. ಅವರು ಕಂಟ್ರಾಕ್ಟರ್‌ಗಳ ಮೂಲಕ ಈ ಕೆಲಸವನ್ನು ಮಾಡಿಸುತ್ತಿದ್ದಾರೆ. ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯವರ ಕೆಲಸ ರೈತರಿಗೆ ಬಾವಿ ತೋಡಲು ಸಹಾಯ ಮಾಡುವುದು. ಇವರ ವಶದಲ್ಲಿರತಕ್ಕ ಯಂತ್ರವನ್ನು ಕಂಪನಿಯವರಿಗೆ ಬಾವಿ ತೋಡಿಸಿ ಕೊಳ್ಳಲು ಕೊಟ್ಟಿಲ್ಲ. ವ್ಯವಸಾಯದ ಉಪಯೋಗ ಕ್ಕಾಗಿ ಮಾತ್ರ ಬಾವಿ ತೋಡಿಸಲು ಉಪಯೋಗ ಮಾಡುತ್ತಿದ್ದಾರೆ. ಜಿಯಲಾಜಿಕಲ್ ಇಲಾಖೆಯಲ್ಲಿ ಸಂಶೋಧನೆಗಾಗಿ ಮೆಷಿನ್‌ಗಳು ಇವೆ. ಈಗ ನಾನು ಏನೇನು ಅವರೇಜ್ ಫಿಗರ್ಸ್ ಕೊಟ್ಟಿದ್ದೇನೋ ಅದು ತೃಪ್ತಿಕರವಾಗಿದೆ ಎಂದು ನಾನಾರೂ ಕೂಡ ತಿಳಿದುಕೊಂಡಿಲ್ಲ. ಇನ್ನೂ ಹೆಚ್ಚಿನ ಕೆಲಸವಾಗಬೇಕಾಗಿದೆ. ಆ ಇಲಾಖೆಯವರಿಗೆ ಇರುವ ತೊಂದರೆಗಳನ್ನು ತಿಳಿಸಬೇಕೆಂದು ಹೇಳಿದ್ದೇನೆ. ಈಗ ನಾವು ರಿಗಳನ್ನು ಕೊಂಡುಕೊಳ್ಳುವುದನ್ನು ತಡ ಮಾಡಿದ್ದೇವೆ. ಈ ಕೆಲಸ ಮಾಡಲು ಟ್ರೈನಿಂಗ್ ಆದ ಆಪರೇಟರ್‌ಗಳು ಬೇಕಾಗಿದ್ದಾರೆ. ಟ್ರೈನಿಂಗ್ ಕ್ಲಾಸ್ ಪ್ರಾರಂಭ ಮಾಡುವುದು ತಡವಾಯಿತು. ಇದಕ್ಕೆ ಕಾರಣಗಳು ಏನು ಎಂಬುದನ್ನು ಹೇಳಬೇಕಾಗಿಲ್ಲ. ಇಂತಹ ವಿಚಾರಗಳಲ್ಲಿ ಆರ್ಥಿಕ ಇಲಾಖೆಯವರು ಕೆಲವೊಂದು ಮಾಹಿತಿಗಳನ್ನು ಕೇಳುತ್ತಾರೆ. ಅವನ್ನೆಲ್ಲಾ ಒದಗಿಸಿಕೊಡಬೇಕಾಗುತ್ತದೆ. ಈ ಕಾರಣದಿಂದ ನಿಧಾನವಾಗುತ್ತದೆ. ಈಗ ಕೆಲವು ಬ್ಲಾಸ್ಟಿಂಗ್ ಯೂನಿಟ್‌ಗಳನ್ನು ಕೊಂಡುಕೊಂಡಿದ್ದೇವೆ. ಅದಕ್ಕೆ ಎಕ್ಸ್‌ಪ್ಲೋಸಿವ್‌ಗಳು ಬೇಕಾಗಿರುವುದರಿಂದ ಕಲ್ಕತ್ತಾದ ಕಂಜ್ಯೋಲರ್ ಅವರಿಗೆ ಬರೆದು ತರಿಸಬೇಕಾಗಿದೆ, ಅದು ಬರುವವರೆಗೆ ತಡವಾಗುತ್ತದೆ. ಬ್ಲಾಸ್ಟಿಂಗ್ ಸಾಗಿಸಿಕೊಂಡು ಹೋಗಲು ರಾರೀನ ಬೇಕಾಗಿವೆ. ಈ ದೃಷ್ಟಿಯಿಂದ ಎಷ್ಟು ವೇಗದಲ್ಲಿ ಕೆಲಸ ನಡೆಯ ಬೇಕಾಗಿತ್ತೋ ಅಷ್ಟು ವೇಗದಲ್ಲಿ ಕೆಲಸ ನಡೆಯುವುದಕ್ಕಾಗುವುದಿಲ್ಲ. ಅದಕ್ಕಾಗಿ ಅಲ್ಲಿರುವ ಸಿಬ್ಬಂದಿ ವರ್ಗದವರಿಗೆ ತರಬೇತಿ ಕೊಡುವುದಕ್ಕೆ, ಅವರ ಸಂಬಳಸಾರಿಗೆಗಳನ್ನು ಹೆಚ್ಚಿಸುವುದಕ್ಕೆ, ಅವರನ್ನು ಉತ್ತೇಜನ ಕೊಡುವುದಕ್ಕೆ ಎಲ್ಲಾ ವಿಷಯಗಳ ಬಗ್ಗೆ ಗಮನ ಕೊಟ್ಟಿದ್ದೇವೆ. ಈ ಒಂದು ವರ್ಷದಲ್ಲಿ ಕಳೆದ ವರ್ಷಕ್ಕಿಂತಲೂ

(ಶ್ರೀ ಬಿ. ರಾಚಯ್ಯ)

ಹೆಚ್ಚಿನ ಗಮನ ಕೊಟ್ಟಿದ್ದೇವೆ. ಮುಂದಿನ ಬಡ್ಜೆಟ್ ಅಧಿವೇಶನದವರೆಗೆ ಕಾದು ನೋಡಿ. ಅದರಲ್ಲಿ ಇನ್ನೂ ಹೆಚ್ಚು ಇಂಪ್ರೂವ್‌ಮೆಂಟ್ ಆಗುತ್ತದೆ. ಆವಾಗಲೂ ನಿಮ್ಮಿಂದ ಹೆಚ್ಚು ಟೀಕೆ ಟಿಪ್ಪಣಿಗಳು ಬಂದರೆ ಬಹಳ ಮಟ್ಟಿಗೆ ಸ್ವಾಗತಿಸುತ್ತೇನೆ. ಆದರೆ ಈಗ ಸ್ವಲ್ಪ ಕಾರಾವಕಾಶ ಕೇಳುತ್ತೇನೆ. ಈ ಇರಾಖೆಯಿಂದ ತೆಗೆದು ಬೇರೆ ಇರಾಖೆಗೆ ಕೊಡಿ ಎಂದರೆ ಅದರಿಂದ ನಮ್ಮ ಸಮಸ್ಯೆಯನ್ನು ಬಗೆ ಹರಿಸುವುದಕ್ಕಾಗುವುದಿಲ್ಲ. ಈಗ ಇರತಕ್ಕಂಥ ಸಮಸ್ಯೆ ಬ್ರಹಾದಾಕಾರದ ಸಮಸ್ಯೆ. ಇದನ್ನು ಇಂಪ್ರೂವ್ ಮಾಡುವುದಕ್ಕೆ ಹೆಚ್ಚು ಬೋರಿಂಗ ರಿಗ್ಸ್‌ಗಳನ್ನು ತರಿಸಬೇಕು. ಅದಕ್ಕೆ ಬೇಕಾಗಿರತಕಂಥ ಸಿಬ್ಬಂದಿ ವರ್ಗ ಕೊಡಬೇಕು. ಹಾಗೆ ಮಾಡದೇ ಒಂದೊಂದು ಇರಾಖೆಯನ್ನು ಕೈ ತೋರಿಸುತ್ತಾ ಹೋದರೆ ರೈತರಿಗೆ ಅನುಕೂಲವಾಗುವುದಿಲ್ಲ. ಅದಲ್ಲದೆ ವೈಯಕ್ತಿಕವಾಗಿ ಜಾಯಿಂಟ್ ಡೈರಕ್ಟರ್ ವಿಷಯದಲ್ಲಿ ಮಾತನಾಡಿ ಅವರನ್ನು ಬೇರೆ ಕಡೆ ವರ್ಗಮಾಡಬೇಕು ಎಂದು ಕೆಲವು ಸದಸ್ಯರು ಹೇಳಿದರು. ಅವರೇ ಬೇರೆಕಡೆ ವರ್ಗಮಾಡಿಕೊಡುವುದಕ್ಕೆ ಕೇಳಿದರು ಆದರೆ ನಾನುಒಂದು ಸೀಕ್ರೆಸಿಹೇಳುವುದಾದರೆ ಬುಲ್‌ಡೋಜರ್ಸ್‌ನ್ನು ಪರ್ಚೇಸ್ ಮಾಡುವ ನಂದರ್ಭದಲ್ಲಿ ಇದನ್ನು ಡೈರೆಕ್ಟ್ ಆಗಿ ತರಿಸೋಣವೇ ಆಥವಾ ಎಜೆನ್ಸಿ ಮುಖಾಂತರ ತರಿಸೋಣವೇ ಎನ್ನುವ ಪ್ರಶ್ನೆ ಬಂದಾಗ ಡೈರಕ್ಟ್ ಆಗಿ ಪರ್ಚೇಸ್ ಮಾಡುವುದು ಒಳ್ಳೆಯದು ಮತ್ತು ಗೌರ್ನಮೆಂಟು ಗೌರ್ನಮೆಂಟ್ ಅಕೌಂಟಿನಲ್ಲಿ ತರಿಸಿದರೆ ಒಳ್ಳೆಯದು, ಕಡಿಮೆ ದರ ಬೀಳುತ್ತದೆ ಎಂದು ಈ ರೀತಿ ಹೇಳಿದರು. ನಾನೂ ಪರೀಕ್ಷೆ ಮಾಡಿದ್ದೇನೆ. ಆ ರೀತಿ ಬುಲ್‌ಡೋಜರ್ಸ್‌ಗಳನ್ನು ಏಜೆನ್ಸಿ ಮುಖಾಂತರ ತರಿಸಿದ್ದೇ ಆಗಿದ್ದರೆ ಸರ್ಕಾರಕ್ಕೆ 15 ಸಾವಿರ ರೂಪಾಯಿ ನಷ್ಟವಾಗುತ್ತಿತ್ತು. ಕೆಲವು ಸದಸ್ಯರು ಈ ಇರಾಖೆ ಉದ್ಧಾರವಾಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ನೋಡಿದರೆ ಆಫೀಸರ್ ದಕ್ಷತೆ ಏನು ಎನ್ನುವುದು ತೋರಿಸುತ್ತದೆ. The officer recommended that it should be taken on government to government account that shows the integrity of the officer. ಇದರಲ್ಲಿ ಏನು ಇದೆ ಅನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಈ ರೀತಿ ಇನ್ನೂ ಅನೇಕ ಸಂದರ್ಭದಲ್ಲಿ ಪರೀಕ್ಷೆ ಮಾಡುತ್ತಾ ಇದ್ದೇನೆ. ಈ ಇರಾಖೆಯಲ್ಲಿರುವ ಜಾಯಿಂಟ್ ಡೈರಕ್ಟರ್ ಡೈರೆಕ್ಟರ ಸಾಯಿರ್ ಕನೆಸರ್ವೇಷನ್ ಡೈರಕ್ಟರ್ ಇವರಿಂದ ಯಾವ ರೀತಿ ಕೆಲಸ ಕಾರ್ಯಗಳನ್ನು ತೆಗೆಸಿಕೊಳ್ಳಬೇಕು ಎನ್ನುವುದಕ್ಕೆ ನನಗಿನ್ನೂ ಒಂದು ವರ್ಷ ಅವಕಾಶ ಕೊಡಿ. ಅವರ ಹತ್ತಿರ ಹೇಗೆ ಕೆಲಸ ತೆಗೆಸಿಕೊಳ್ಳಬೇಕು ಎನ್ನುವುದು ನನ್ನ ಜವಾಬ್ದಾರಿ ಮತ್ತು ಈ ಇರಾಖೆಯನ್ನು ಹೇಗೆ ನಡೆಸಿಕೊಂಡು ಹೋಗಬೇಕು ಎನ್ನುವುದು ನನ್ನ ಕರ್ತವ್ಯವಾಗಿದೆ. ಯಾರೇ ಆಗಲಿ ಅವರ ಕೆಲಸ ಹೇಗಿದೆ ಎನುವುದನ್ನು ಜಡ್ಜ ಮಾಡುವುದು ನನ್ನ ಕರ್ತವ್ಯವಾಗಿದೆ. ಮೈಸೂರು ಪ್ರಾಂತದಲ್ಲಿ ಜಾತಿ ನೋಡಿ ಮುಖದ ಮೇರೆ ಮಸಿ ಬಳಿಯುತ್ತಾರೆ ಎನ್ನುವ ಲೆಕ್ಕಾಚಾರ ಈ ಪೊತ್ತು ನಡೆಯುತ್ತಾ ಇದೆ. ಇದಕ್ಕೆ ಅವಕಾಶ ಕೊಡಬೇಡಿ. ಈ ಇರಾಖೆಯಲ್ಲಿ ಇನ್ನೂ ಹೆಚ್ಚು ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಯಾರು ಯಾರು ಅಡ್ಡಿ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇವೆ. ಅದಕ್ಕೋಸ್ಕರ ಇನ್ನೊಂದು ವರ್ಷ ಅವಕಾಶ ಕೊಡಿ ಇಂಪ್ರೂವ್ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇನೆ ಮತ್ತು ಈ ಕೃಷಿ ಬಗ್ಗೆ ಚೆನ್ನಾಗಿ ಕೆಲಸ ಮಾಡಿ ರೈತರಿಗೆ ಅನುಕೂಲವಾಗುವುದಕ್ಕೆ ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕೋ ಅದಕ್ಕೆ ನನ್ನ ಸರ್ವ ಪ್ರಯತ್ನವನ್ನೂ ಮಾಡುತ್ತೇನೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet tomorrow at 1-00 P.M.

The House adjourned at fifty-five minutes past seven of the Clock to meet again at One of the Clock on Wednesday the 9th April 1969.

WD 12782—GPB—600—11-8-1969

(Departmental Library)
(ಇಲಾಖಾ ಗ್ರಂಥಾಲಯ)
Accession No. 4860
ಮೈಸೂರು ವಿಧಾನಸಭೆ.....

MYSORE LEGISLATIVE ASSEMBLY

Wedesday, 9th April 1969.

The House met in the Assembly Chamber, Vidhana Soudha Bangalore, at One of the Clock.

Mr. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

Construction of Bunds to stop Flow of Salt Water in South Kanara District

93. Sri S. JAYAPRAKASH SHETTY (Brahmavar).—

Will the Minister of State for Minor Irrigation be pleased to State :—

(*a*) the number of bunds constructed in South Kanara District to stop salt water ;

(*b*) whether it has come to their notice that crops in thousands of acres of land were destroyed on account of overflow of salt water due to the defects in the doors to be put to them and the defects in its structure ;

(*c*) the action taken in this behalf ?

Sri D. PARAMESWARAPPA (Deputy Minister for Major Irrigation and Electricity) [On behalf of SRI A. J. DODDAMETI (Minister of State for Minor Irrigation)].—

(*a*) 25.

(*b*) No.

(*c*) Does not aries in view of the reply given above.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—(ಅ) ಗೆ ಉತ್ತರವಾಗಿ 'ಇಲ್ಲ' ವೆಂದು ಹೇಳಿದೆ. ಸೂಪರಿಂಟೆಂಡಿಂಗ್ ಇಂಜನಿಯರ್ ಅವರಿಗೆ ನಾನು ಈ ವಿಚಾರವನ್ನು ಬರದಿದ್ದೇನೆ. ಅಲ್ಲದೆ ಹಾರೂರು ಮತ್ತು ಕಪ್ಪತೋಡು ಈ ಎರಡು ಪ್ರದೇಶಗಳಲ್ಲಿ ಉಪ್ಪು ನೀರು ಒಳಗೆ ಬಂದು ಬೆಳೆ ನಾಶವಾಗಿ ಹೋಗಿದೆಯೆಂಬುದಾಗಿ ಅವರಿಗೆ ತಿಳಿಸಿದರೂ ಇಮವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವೇನು ?

Sri D. PARAMESHWARAPPA.—So far no representation has been made to Government direct, but my friend says that some complaint or representation was made to the Executive Engineer or Superintending Engineer. But according to the information furnished to Government, no damage has been caused.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಾರೆ. ಮಾನ್ಯ ಸದಸ್ಯರು ಈ ವಿಚಾರವನ್ನು ಸೂಪರಿಂಟೆಂಡಿಂಗ್ ಇಂಜನಿಯರ್ ಅವರ ಗಮನಕ್ಕೆ ತಂದು ಒಂದು ಪತ್ರದ ಮೂಲಕ ಅವರಿಗೆ ತಿಳಿಸಿದರೆ, ಅದು ನಿಮ್ಮ ಗಮನಕ್ಕೆ ಬಂದಂತಾಗುವುದಿಲ್ಲವೇ ? ಅವರು ಸರ್ಕಾರಕ್ಕೆ ಸಂಬಂಧಪಟ್ಟವರಾಗಿದ್ದಾರೋ ಇಲ್ಲವೋ ?

ಶ್ರೀ ಡಿ. ಪರಮೇಶ್ವರಪ್ಪ.—ನಾನು ಹೇಳಿದ್ದು ಇವರು ಫಾರೋ ಮಾಡಲಿಲ್ಲ. ಸರ್ಕಾರಕ್ಕೆ ನೇರವಾಗಿ ಆ ಬಗ್ಗೆ ಯಾವ ಮನವಿಯೂ ಬಂದಿಲ್ಲ. I do not deny that Executive Engineer or Superintending Engineer are part of the Government. They have sent information that no representation has been made. If at all my friend wants to challenge, let him give the date of his representation. I shall enquire into the matter.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—ನಿಮ್ಮ ಗಮನಕ್ಕೆ ತಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

Sri D. PARAMESWARAPPA.—Necessary action will be taken.

ಶ್ರೀ ಬಿ. ಎಂ. ಇದಿನಬ್ಬ.—ಅನೇಕ ಕಡೆಗಳಲ್ಲಿ ಉಪ್ಪು ನೀರು ಬಂದು ಬೆಳೆ ಹಾಳಾಗಿರುವ ವಿಷಯ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಮುಂದೆ ಈ ರೀತಿ ಆಗದ ಹಾಗೆ ಸರಿಯಾದ ಆದೇಶವನ್ನು ಕೊಟ್ಟು ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

Sri D. PARAMESWARAPPA.—It may so happen that the information furnished by the officer may be wrong. I do not deny, but in all such cases I would only suggest that it is desirable that spot inspection is held and we are convinced about the matter.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇದರಿಂದ ಸಾವಿರಾರು ಎಕರೆಗಳಷ್ಟು ಬೆಳೆ ನಷ್ಟವಾಗಿರುವುದರಿಂದ, ಇದರ ಮೇಲೆ ಇರತಕ್ಕ ಕಂದಾಯವನ್ನು ರದ್ದುಮಾಡುತ್ತೀರಾ ?

Sri D. PARAMESWARAPPA.—If the Government are satisfied fully that crops are damaged, certainly we will be sympathetic.

Repayment of Loan by the Ranibennur T. A. P. C. M. Society to District Co-operative Bank, Dharwar.

562. Sri N. L. BELLAD (Ranibennur).—

Will the Minister for Development be pleased to state :—

(*a*) the amount of loan to be repaid to District Co-operative Bank (K. C. C. Bank) Dharwar at present by the Ranibennur Taluk Agricultural Produce Co-operative Marketing Society ;

(*b*) the various purposes for which the amount has been taken from the District Bank together with the amount taken for each item ?

Sri B. L. GOWDA (Deputy Minister for Co-operation).—

(*a*) There is no amount of loan remaining to be repaid.

(*b*) Loan has been obtained as follows :—

Sl. No.	Purpose of loan	The extent of loan sanctioned	The loan amount obtained
1	2	3	4
		Rs.	Rs.
1	C. C. Loan.	1,00,000	1,00,000
2	Godown loan (Procurement)	1,00,000	97,000
3	Godown loan (Cotton)	1,00,000	50,000
4	Godown Loan (Except Cotton)	1,00,000	50,000

ಶ್ರೀ ಎನ್. ಎಲ್. ಬೆಲ್ಲದ.—ಈ ಸೊಸೈಟಿಯವರು ಜಿಲ್ಲಾ ಬ್ಯಾಂಕಿಗೆ ಏನು ಹಣವನ್ನು ಮರುಪಾವತಿ ಮಾಡಿದ್ದಾರೋ ಆ ಹಣ ಸ್ಪೇಟ್ ಮಾರ್ಕೆಟಿಂಗ್ ಸೊಸೈಟಿಗೆ ಗೊಬ್ಬರ ಮಾರಾಟ ಮಾಡಿ ಬಂದುದು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ಬಿ. ಎಲ್ ಗೌಡ.—ಗೊಬ್ಬರ ಮಾರಾಟ ಮಾಡಿ ಬಂದುದೋ ಅಥವಾ ಯಾವ ಮೂಲಕ ಬಂದುದು ಎಂಬುದು ಗೊತ್ತಿಲ್ಲ.

Sri SIDDAIAH KASHIMATH.—May I know whether the loan sanctioned to this society has been utilized for the purpose ?

Sri B. L. GOWDA.—Yes, it has been utilized for the same purpose for which it was borrowed.

ಶ್ರೀ ಎ. ಎಲ್. ಶಿವಪ್ಪ.—ಏನ್ನೆ ಒಂದು ಪ್ರಶ್ನೆಗೆ ಉತ್ತರವಾಗಿ ಸಾಲ ಕೊಟ್ಟಿರತಕ್ಕದ್ದು, ಮರು ಪಾವತಿ ಮಾಡಿರತಕ್ಕದ್ದು ಎಷ್ಟು ಎಂಬುದು ಗೊತ್ತಿಲ್ಲವೆಂದು ಹೇಳಿದ್ದಾರೆ. ಅಂದಮೇಲೆ ಆ ಸೊಸೈಟಿ ಏನಾದರೂ ಇದೆಯೇ ? ಇಲ್ಲವೇ ? ಇಷ್ಟು ಲಕ್ಷಾಂತರ ರೂಪಾಯಿಗಳನ್ನು ಒಂದೇ ಸೊಸೈಟಿಗೆ ಕೊಟ್ಟಿರುವಾಗ ಆ ಹಣ ವಾಪಸ್ಸು ಬರುತ್ತದೆಯೇ ? ಅವರ ಆಸ್ತಿ ಭದ್ರವಾಗಿದೆಯೇ ?

ಶ್ರೀ ಬಿ. ಎಲ್. ಗೌಡ.—ಪ್ರಶ್ನೆ ಹಾಕಿರುವುದು ಧಾರವಾಡ ಜಿಲ್ಲೆಗೆ ಸಂಬಂಧಪಟ್ಟುದು. ಧಾರವಾಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ 2 ಲಕ್ಷ 97 ಸಾವಿರ ರೂಪಾಯಿಗಳನ್ನು ವ್ಯವಸಾಯದ ಬಾಬುಗಳಿಗೆ ಸಾಲವಾಗಿ ಕೊಟ್ಟಿದ್ದಾರೆ. ಅವರು ಎಲ್ಲಾ ಸಾಲವನ್ನು ವಾಪಸ್ಸು ಮಾಡಿದ್ದಾರೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಸಾಲವನ್ನು ಪಡೆಯುವಾಗ ಒಂದು ಕೆಲಸ ಮಾಡುತ್ತೇವೆಂದು ಪಡೆದು ಅದಕ್ಕೆ ಉಪಯೋಗಿಸದೆ ಬೇರೆದಕ್ಕೆ ಉಪಯೋಗಿಸಿದರೆ ಸರ್ಕಾರದವರು ಏನು ಕ್ರಮ ತೆಗೆದು ಕೊಳ್ಳುತ್ತಾರೆ ?

†Indicates that remarks or speeches have not been revised by the member concerned.

ಶ್ರೀ ಬಿ. ಎಲ್. ಗೌಡ.—ಯಾವ ತರಹ ದುರುಪಯೋಗಮಾಡುತ್ತಾರೋ ಅದನ್ನು ತಿಳಿದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಎಲ್. ಬೆಲ್ಲದ.—ಸೊಸೈಟಿ ದಿವಾಳಿತನದಲ್ಲಿದ್ದರೆ ಕೊಟ್ಟ ಸಾಲ ಬ್ಯಾಂಕಿಗೆ ವಾಪಸ್ಸು ಬರುವುದಿಲ್ಲ. ಅದ್ದರಿಂದ ಜಿಲ್ಲಾ ಬ್ಯಾಂಕಿಗೆ ಹಣ ಕೊಡಬೇಕೆಂದು ಒತ್ತಾಯ ಮಾಡುತ್ತೀರಾ ?

ಶ್ರೀ ಬಿ. ಎಲ್ ಗೌಡ.—ಸೊಸೈಟಿ ದಿವಾಳಿತನಕ್ಕೆ ಬರುವುದು ಅದು ಅವರ ಅಭಿಪ್ರಾಯ. ಸಾಲ ಕೊಟ್ಟಮೇರೆ ಅದನ್ನು ವಾಪಸ್ಸು ಮಾಡಬೇಕು ಸಾಲ ಮರು ಪಾವತಿ ಮಾಡದೆ ಇರುವುದು ನರಿಯಲ್ಲ. ಮಾನ್ಯ ಸದಸ್ಯರು ಹೇಳುವುದು ಅದು ಒಂದು ಊಹಾಪೋಹದ ಮಾತು.

Execution of "Kudre Gundihalla" or "Addahalla" project in 'Hullahalli' Hobli

636. **Sri L. SRIKANTAIAH** (Nanjangud).—

Will the Minister for Public Works be pleased to state :—

(a) whether any project by name Kudre Gundihalla' or 'Addahalla' near Ediyala Village, Hullahalli Hobli, Nanjangud Taluk was surveyed by the Department in between the years 1955-64 ;

(*b*) if so, whether the execution of the said project has been taken up ;

(*c*) whether the execution and completion of the said project would not only provide irrigational facilities but also serve as a buffer reservoir for the Nugu project ;

(*d*) the amount sanctioned so far and the amount spent for the above project ;

(*e*) the irrigational capacity of the said project and the number of acres of land that would come in its command under wet cultivation ?

Sri D. PARAMESWARAPPA (Deputy Minister for Major Irrigation and Electricity) [On behalf of SRI A. J. DODDAMETI (Minister of State for Minor Irrigation)]:—

(*a*) Yes.

(*b*) No.

(*c*) The project is still under investigation.

(*d*) Nil.

(*e*) Does not arise in view of reply to (*e*) above.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರವನ್ನು ನಾನು ನೋಡಿದ್ದೇನೆ. ಈ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕಾದರೆ ಮಾರ್ಗಗಳು ಏನು, ಯಾರಿಗೆ ಯಾವ ರೀತಿ ಪ್ರೆಷರ್ ಹಾಕಬೇಕು, ಆ ಮಾರ್ಗಗಳನ್ನು ಹೇಳಿ ಕೊಡುತ್ತೀರಾ ?

Sri D. PARAMESWARAPPA:—I hope my hon. friend knows the steps to bring pressure on the concerned officers. The estimate was prepared for Rs. 10 lakhs for the Kudre Gundihalla tank but later on

a proposal was made that if a reservoir is constructed, it will supplement the flow in Nugu channel. That is being investigated.

ಶ್ರೀ ಎಲ್. ಶ್ರೀಕಂಠಯ್ಯ.—1955—56 ನೇ ಇಸವಿಯಲ್ಲಿ ಈ ಯೋಜನೆಯ ಸರ್ವೆ ಆಯಿತು, ರಿಪೋರ್ಟ್ ಕೂಡ ಬಂದಿದೆ. ಇವೆರ್ಲಾ ಆಗಿ ಈಗಾಗಲೇ 13—14 ವರ್ಷಗಳು ಕಳೆದು ಹೋಗಿದೆ. ನಿನ್ನೆ ಮೊನ್ನೆ ಸರ್ವೆ ಆದಂತಹ ಪ್ರಾಜೆಕ್ಟುಗಳು ಈಗಾಗಲೇ ಕಾರ್ಯಗತವಾಗುತ್ತಿವೆ. ಈ ಪ್ರಾಜೆಕ್ಟಿನ ಸರ್ವೆ ಆಗಿ 14 ವರ್ಷಗಳಾಗಿದ್ದರೂ ಈ ಪ್ರಾಜೆಕ್ಟ್ ಆಗದೇ ಇರುವುದಕ್ಕೆ ಆ ಪ್ರಾಜೆಕ್ಟ್ ಏರಿಯಾದ ಜನಗಳು ಏನು ಪಾಪ ಮಾಡಿದ್ದಾರೆ ?

Sri D. PARAMESWARAPPA.—I do concede that about 12 years ago a survey was conducted, As I said, the proposal was to take up this tank under minor irrigation scheme but later on there was a proposal to supplement the water of Nugu channel by constructing a reservoir. Investigation is being carried on in that direction.

ಶ್ರೀ ಎಲ್. ಶ್ರೀಕಂಠಯ್ಯ.—ಅದಷ್ಟು ಜಾಗ್ರತೆ ಈ ಬಗ್ಗೆ ಕಾರ್ಯ ಕ್ರಮ ತೆಗೆದುಕೊಂಡು ಈ ಯೋಜನೆಯನ್ನು ಕಾರ್ಯಗತ ಮಾಡಿ ಆ ಭಾಗದಲ್ಲಿ ನೀರು ಹರಿಸುವ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ಒಂದು ಒಳ್ಳೆಯ ದೊಡ್ಡ ಉತ್ತಮವಾದ ನಿಂತಾವರಿ ಕಾಮಗಾರಿ ಎಂದು ಕಾಣುತ್ತದೆ. ಅದಷ್ಟು ತೀವ್ರವಾಗಿ ಅದನ್ನು ತೆಗೆದುಕೊಳ್ಳುವ ರೀತಿಯಲ್ಲಿ ನಾವು ಪ್ರಯತ್ನ ಮಾಡುತ್ತೇವೆ.

Minor Irrigation Work in Chamarjanagar Taluk

656. Sri S.PUTTASWAMY (Chamarajanagar).—

Will the Minister of State for Minor Irrigation be pleased to state:—

(*a*) the number of Minor Irrigation Works budgetted and sanctioned in Chamarajanagar Taluk from 1966 to 1967;—

(*b*) the number of Minor irrigation works sanctioned in Santhemaranahalli Constituency and Chamarajanagar Constituency;

(*c*) Whether the Government have sanctioned four minor irrigation works by including them in the Budget during 1968-69;

(*d*) Whether the Government have accorded technical sanction to the budgetted works;

(*e*) Whether tenders were called for such of the technically sanctioned works;

(*f*) Whether the tender notification of Bandigowdanahalli tank work was withdrawn at the instance of a letter from the Secretary, Public Works Department;

(*g*) Whether Government proposed to direct the concerned authority to re-tender the work and start the work immediately in view of the scarcity condition ?

Sri D. PARAMESHWARAPPA (Deputy Minister for Major Irrigation and Electricity) [On behalf of SRI A. J. DODDAMETI (Minister of State for Minor Irrigation)].—

(*a*) 8 Works budgetted (Statement 'A' appended). 5 Works sanctioned (Statement 'B' appended).

(*b*) 7 Works (Statement 'C' appended).

(*c*) Four works are included in the budget of 1968-69 and one work is sanctioned Technically during 1968-69 (Statemement 'D' appended).

(*d*) One work has been technically sanctioned by the Superintending Engineer, out of 4 works budgetted during 1968-69.

(*e*) Yes

(*f*) No.

(*g*) Does not arise in view of reply to clause (*c*) above.

STATEMENT A

Statement showing the list of Budget works from 1966 to 1969 in Chamarajanagar Taluk.

Sl. No.	Name of work	Amount of estimate	Remarks
1	2	3	4
	1966-67		
1	Restoration of Irasavadi Tank ...	1,00,000	
2	Pickup across river Suvarnavathi near Kannegala.	2,25,000	
3	Diverting halla near Dasanur to feed Ummathur Tank.	1,60,500	
	1967-68		
4	Improvements to Hongalavadi channel ...	1,10,000	
	1968-69		
5	Construction of Bandigowdanahally ...	2,35,000	
6	Restoration of Homma Tank ...	3,70,000	
7	Restoration of Kempanapura Tank ...	2,35,000	
8	Restoration of Bagali Tank ...	1,49,000	

STATEMENT B

Statement showing the list of sanctioned Budgetted works in Chamarajanagar Taluk from 1966 to 1969.

Sl. No.	Name of work	C. R. No.	Sanctioned estimate amount	Remarks
1	2	3	4	5
1966-67				
1	Restoration of Irasavadi Tank ...	C.R.No. 15	1,31,000	
2	Diversion of halla near Dasanur to Feed Ummathur Tank.	C.R.No. 14	1,40,000	
3	Improvements to Hongalavadi Channel.	C.R.No. 16	1,30,000	
1967-68				
	Nil.			
1968-69				
4	New tank Bandigowdanahally ...	C.R.No. 20	2,70,000	
5	Pickup across river Suvarnavathi near Kannegala.	C.R.No. 29	3,56,000	

(SRI D. PARAMESHWARAPPA)

STATEMENT C

Statement showing the list of sanctioned works in Santhemarahalli and Chamarajanagar Constituencies from 1966 to 1969.

Sl. No.	Name of work	C. R. No.	Sanctioned estimate amount	Remarks
	1966-67		Rs.	
1	Restoration of Irasavadi tank.	15	1,31,000	Santhemarahally Constituency Budgetted work
2	Diversion of halla near Dasanur to feed Ummathur tank.	14	1,40,000	do
3	Improvements to Hongalavadi channel.	16	1,30,000	Chamarajanagar Constituency Budgetted work.
	1967-68			
4	Pickup across river Suvarnavathi near Punjur.	28	1,00,000	Chamarajanagar Constituency Budgetted work administratively sanctioned by Government.
	1968-69			
5	New tank in Bisalavadi village across Birige halla near Kodiugane.	19	1,24,000	Chamarajanagar Constituency Budgetted work sanctioned as a substitute work in lieu of unsanctioned budgetted works.
6	New tank near Bandigowdanahally.	20	2,70,000	Chamarajanagar Constituency Budgetted work sanctioned as a substitute work in lieu of unsanctioned budgetted works.
7	Pickup across river Suvarnavathi near Kannegala.	29	3,56,000	Santhemarahally Constituency Budgetted works.

STATEMENT D

Statement showing the four Budgetted works in Chamarajanagar Taluk during 1968–69.

Sl. No.	Name of work	Estimate amount	Remarks
		Rs.	
1	Construction of Bandigowdanahally Tank.	2,35,000	Sanctioned *Vide* C. R. No. 20.
2	Restoration of Homma tank	3,70,000	The estimate is pending with E. E. M. I. I. Division.
3	Restoration of Kempapura tank.	2,35,000	do
4	Restoration of Bogali tank...	1,49,000	do

ಶ್ರೀ ಎಸ್. ಪುಟ್ಟಸ್ವಾಮಿ.—ಈ ಪ್ರಶ್ನೆಯನ್ನು ಕೇಳುವುದಕ್ಕೆ ಮುಂಚೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಅದು ಏನೆಂದರೆ ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಮತ್ತು ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಅಂಕಿ ಅಂಶಗಳು ಮತ್ತು ಮೊತ್ತವನ್ನು ನೋಡಿದರೆ ವ್ಯತ್ಯಾಸ ಕಾಣುತ್ತದೆ. ಇದಕ್ಕೆ ತೃಪ್ತಿಕರವಾದ ಉತ್ತರವನ್ನು ಸರ್ಕಾರದವರು ಒದಗಿಸಿ ಕೊಟ್ಟಿಲ್ಲ. ಆದ್ದರಿಂದ ಈ ಪ್ರಶ್ನೆಯಮೇಲೆ ನಿರ್ದಿಷ್ಟವಾದ 5 ಮುಖ್ಯ ಪ್ರಶ್ನೆಗಳನ್ನು ಹಾಕುವುದಕ್ಕೆ ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟರೆ ನಾನು ಈ ಪ್ರಶ್ನೆಯನ್ನು ಕೇಳುತ್ತೇನೆ.

ಉಪಾಧ್ಯಕ್ಷರು.—ಅಗಲ, ಪ್ರಶ್ನೆಯನ್ನು ಕೇಳಿ.

ಶ್ರೀ ಎಸ್. ಪುಟ್ಟಸ್ವಾಮಿ.—ಸ್ವಾಮಿ 1966ನೇ ಇಸವಿಯಿಂದ 1969ನೇ ಇಸವಿಯವರೆಗೆ ಚಾಮರಾಜನಗರ ತಾಲ್ಲೂಕಿನಲ್ಲಿ ಮಂಜೂರಾಗಿರತಕ್ಕ ಸಣ್ಣ ನೀರಾವರಿ ಕಾಮಗಾರಿಗಳನ್ನು ತಃಖ್ತೆಯಲ್ಲಿ ಏನು ಒದಗಿಸಿದ್ದೀರಿ ಅದರ ಜೊತೆಗೆ ನಂಕೇಮಾರನಹಳ್ಳಿ ಕ್ಷೇತ್ರದಲ್ಲಿ ಇರತಕ್ಕ ಯಡಿಯೂರು ಅಡ್ಡಹಳ್ಳ ಮತ್ತು ಬೆಲ್ಲತ್ತನಾನೆ ಪ್ರಾಜೆಕ್ಟುಗಳನ್ನು ಮಂಜೂರು ಮಾಡಿರತಕ್ಕದ್ದು ನಿಜವೇ ? ಮತ್ತು ಈ ನೀರಾವರಿ ಯೋಜನೆಗಳ ಅಂದಾಜು ಪೆಚ್ಚ ಎಷ್ಟು, ಮತ್ತು ಈವರೆಗೆ ಆ ಯೋಜನೆಗಳ ಕೆಲಸ ಎಷ್ಟು ನಡೆದಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಒಂದು ವಿಷಯ ಈ ಮಾನ್ಯ ಸಭೆಯ ಗಮನಕ್ಕೆ ತರುವುದು ಏನೆಂದರೆ ಮಾನ್ಯ ಸದಸ್ಯರು ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಕೆಲವು ತಪ್ಪುಗಳು ಇವೆ ಎಂದು ತಿಳಿಸಿದ್ದೀರಿ, ನಾವಾದರೂ ಕೂಡ ಸರ್ಕಾರದ ವತಿಯಿಂದ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸುವುದು ನಮ್ಮ ಕರ್ತವ್ಯ. ಅದಕ್ಕೋಸ್ಕರವಾಗಿ, ನಾನು ಈ ಸಂದರ್ಭದಲ್ಲಿ ಅಧ್ಯಕ್ಷರನ್ನು ವಿನಂತಿಸಿಕೊಳ್ಳುವುದು ಏನೆಂದರೆ, ಬಹುಶಃ ಈ ಪ್ರಶ್ನೆಯನ್ನು ಹೋಲ್ಡ್ ಓವರ್ ಮಾಡಬಹುದು. ಯಾವ ಯಾವ ವತಿಯಲ್ಲಿ ಸಂಶಯ ಬರುತ್ತದೆ ಅದನ್ನು ನಿವಾರಣೆ ಮಾಡುವುದಕ್ಕೋಸ್ಕರ ಈ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳಬಹುದು.

Mr. DEPUTY SPEAKER.—I hold over the question.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಕ್ರಿಯಾಲೋಪ, ಸ್ವಾಮಿ. ಕನ್ನಡದಲ್ಲಿ ಒಂದು ರೀತಿ ಉತ್ತರ ಇದೆ, ಇಂಗ್ಲಿಷ್‌ನಲ್ಲಿ ಒಂದು ರೀತಿ ಉತ್ತರ ಇದೆ. ಇದರಲ್ಲಿ ಯಾವ ಉತ್ತರಕ್ಕೆ ಪ್ರಾಮುಖ್ಯತೆ ಕೊಡುತ್ತೀರಿ ?

ಉಪಾಧ್ಯಕ್ಷರು.—ಆ ಮೇಲೆ ಹೇಳುತ್ತೇನೆ. Now next question.

Improving the Water Supply position of C.L.B. Channel in K. R. Nagar Taluk

747. Sri M. BASAVARAJU (K. R. Nagar).--

Will the Chief Minister be pleased to state :—

† ಶ್ರೀ ಎಚ್. ಎಂ. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ನನಗೆ ಈ ದಿವಸ ಸ್ವಲ್ಪ ಪರಿತಾಪವಾಗಿದೆ. ಕಾರಣ ಈ ಸಭೆಯ ಕಾರ್ಯಕರಾಪಗಳಿಗೆ ಕಾಲವನ್ನು ಗೊತ್ತುಮಾಡಲು ಬಿಸಿನೆಸ್ ಅಡ್ವೈಜರಿ ಕಮಿಟಿಯಿದೆ ಅದು ಸಭೆಯ ಕಾರ್ಯಕರಾಪ ಅಂದರೆ ಖಾಸಗಿ ಕಾರ್ಯಕರಾಪವಲ್ಲದೆ ಸರಕಾರಿ ಕಾರ್ಯಕರಾಪವನ್ನು ಕೂಡ ಗೊತ್ತುಮಾಡಬೇಕು. ತಾವು ಖಾಸಗಿ ಕಾರ್ಯಕರಾಪಕ್ಕೆ ಅವಕಾಶವನ್ನು ಮುಂದೆ ಕೊಡಿಸಿಕೊಡುವುದಾಗಿ ಹೇಳಿದ್ದಿರಿ. ಆದರೆ ಪ್ರೈವೇಟ್ ಮೆಂಬರ್ಸ್ ಬಿಸಿನೆಸ್ಸಿಗೆ ಈ ದಿವಸ ನಾಕಷ್ಟು ಅವಕಾಶ ದೊರೆಯುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ರೂರ್ಸ್ ಪ್ರಕಾರ ಮತ್ತು ರಾಜ್ಯಾಂಗದ ಪ್ರಕಾರ ಸದಸ್ಯರಿಗೆ ಕೆಲವು ಪ್ರಿವಿಲೇಜಸ್ ಇವೆ, ಅವಕ್ಕೆ ಚುತಿ ಬರದಂತೆ ಪ್ರಯಾರಿಟಿ ಕೊಟ್ಟು ಅವಕಾಶ ಮಾಡಬೇಕಾದ್ದು ಈ ಸಭೆಯ ಆದ್ಯ ಕರ್ತವ್ಯ ಎಂದು ನಾನಾದರೂ ತಿಳಿದಿದ್ದೇನೆ. ನಾನು 312ನೆಯ ರೂರ್ ಪ್ರಕಾರ ಪ್ರೈವೇಟ್ ಮೆಂಬರ್ಸ್ ಬಿರ್ ಒಂದನ್ನು ಕೊಟ್ಟೆ, ಅದಕ್ಕೆ ರಾಜ್ಯಪಾಲರ ರೆಕಮೆಂಡೇಷನ್ ಆಗಬೇಕು ಎಂದು ತಾವು ನೋಟೀಸ್ ಕೊಟ್ಟಿರಿ. ಈಗ ಇವೆರ್ಲಾ ನೋಡಿ ನಮಗೊಂದು ಫೀಲಿಂಗ್ ಹೆಲಪ್ ಆಗುವುದಕ್ಕೆ ಅವಕಾಶವಾಗಿದೆ. ಸರಕಾರ ತಂದ ಬಿಲ್ಲುಗಳಿಗೆ ರೆಕಮೆಂಡೇಷನ್ ಇಲ್ಲದಿದ್ದರೂ ಪಾಸ್ ಮಾಡುವುದಕ್ಕೆ ಅವಕಾಶವಿದೆ. ಇಂಥ ಗಹನವಾದ ವಿಷಯುಗಳಿವೆ. ಅಧ್ಯಕ್ಷರು ಈ ಸಭೆಯ ಸದಸ್ಯರ ಹಕ್ಕುಗಳಿಗೆ ಹೆಚ್ಚು ಗಮನ ಕೊಟ್ಟು ಸರಕಾರಿ ಕಾರ್ಯಕರಾಪ ನಿಲ್ಲಿಸಬೇಕು, ಅದನ್ನು ಮುಂದೆ ತೆಗೆದುಕೊಳ್ಳಬಹುದು. ಈಗಲಾದರೂ ಈ ಅಧಿವೇಶನವನ್ನು ನಾಲ್ಕೈದು ದಿವಸ ಮುಂದು ವರೆಸಿ ಪರೂ ಪರವಾಗಿಲ್ಲ, ಹಾಗೆಮಾಡಿ ಖಾಸಗಿ ಕಾರ್ಯಕರಾಪಗಳಿಗೆ ಅವಕಾಶ ಮಾಡಿಕೊಡಬೇಕು. ತರಾತುರಿಯಿಂದ ಸಭೆಯನ್ನು ನಡೆಸಿ ಅಧಿವೇಶನ ಮುಕ್ತಾಯಮಾಡುವುದು ಉಚಿತವಲ್ಲ. ಸರಕಾರದ ಕಾರ್ಯವನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಬಹುದು, ಅವಕ್ಕೇನೂ

ಅವನರವಿಲ್ಲ. ನಾವು ಕೊಟ್ಟಿರುವ ಪ್ರಿವಿಲೇಜ್ ಪೋಷನ್ ಈ ಅಧಿವೇಶನದಲ್ಲಿ ತೆಗೆದುಕೊಳ್ಳದಿದ್ದರೆ ಅದಕ್ಕೆರುವ ಪ್ರಾಮುಖ್ಯತೆ ಹೋಗುವುದು. ಬಿಸಿನೆಸ್ ಅಡ್ವೈಜರಿ ಕಮಿಟಿಯಿರುವುದು ಸರಕಾರದ ಕಾರ್ಯಕರಾಪ ನಡೆಯುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಮಾತ್ರವಲ್ಲ, ಖಾಸಗಿ ಕಾರ್ಯಕರಾಪಗಳಿಗೂ ಅವಕಾಶ ಕೊಡಬೇಕು, ಸದಸ್ಯರ ಹಕ್ಕುಗಳಿಗೆ ಚ್ಯುತಿ ಬಂದಿರುವುದನ್ನು ಚರ್ಚಿಸಲು ತಾವು ಅವಕಾಶ ಕೊಡಬೇಕು. ಈಗ ಮಾಡುತ್ತಿರುವುದು ಸರಿಯಲ್ಲ. ಆದ್ದರಿಂದ ತಾವು ಪುನರ್ವಿಮರ್ಶೆ ಮಾಡಿ ಪ್ರಿವಿಲೇಜಸ್ ಸೂಚನೆಯನ್ನು ಈ ಅಧಿವೇಶನದಲ್ಲೇ ತೆಗೆದುಕೊಳ್ಳಬೇಕು. ಇದಕ್ಕೆ ಬೇಕಾದರೆ 4-5 ದಿವಸ ಹೆಚ್ಚಾಗಿ ಕೊಡಬಹುದು. ಇದಕ್ಕೆ ಅಧ್ಯಕ್ಷರು ಅವಕಾಶ ಮಾಡಿ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾನು ಎಷ್ಟು ನೋಟೀಸ್ ಕೊಟ್ಟರೂ ಕನದ ಬುಟ್ಟಿಗೆ ಹಾಕುತ್ತಿದ್ದೀರಿ. ರೂಲ್ಸ್ ಪ್ರಕಾರ ಕೊಟ್ಟಿರುವ ನೋಟೀಸುಗಳಿಗೆ ತಾವು ಬೆಲೆ ಕೊಡುತ್ತಿಲ್ಲ. ನನ್ನನ್ನು ಈ ಸಭೆಯ ಸದಸ್ಯನೆಂದು ತಿಳಿದುಕೊಂಡಿದ್ದೀರಾ?

ಅಧ್ಯಕ್ಷರು.—ಮಾನ್ಯ ಸದಸ್ಯರು ಮರ್ಯಾದೆಯನ್ನು ಉಲ್ಲಂಘನೆ ಮಾಡುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಪಾಯಿಂಟ್ ಆಫ್ ಆರ್ಡರ್. ಮಾನ್ಯ ವಾಟಾಳ್ ನಾಗರಾಜ್‌ರವರು ಕೊಟ್ಟ ನೋಟೀಸುಗಳನ್ನೆಲ್ಲಾ ಕನದಬುಟ್ಟಿಗೆ ತಾವು ಹಾಕುತ್ತೀರಿ ಎಂದು ಹೇಳಿದರು. ಸಾಮಾನ್ಯವಾಗಿ ನಾನು ತಿಳಿಯುತ್ತೇನೆ, ಸದಸ್ಯರಲ್ಲಿ ಯಾರು ಕೊಟ್ಟಿರುವುದನ್ನೂ ಕೂಡ ಕಸದಬುಟ್ಟಿಗೆ ಹಾಕುವುದಿಲ್ಲ, ಹಾಕುವುದಕ್ಕೆ ರೂಲ್ಸ್ ಪ್ರಕಾರ ಅಧಿಕಾರವಿಲ್ಲ. ಈ ರೀತಿ ಹೇಳುವುದು ಸಭೆಯ ಗೌರವಕ್ಕೆ ತಕ್ಕುದಲ್ಲ. ಅಧ್ಯಕ್ಷರಿಗೆ ಅನಾವಶ್ಯಕವಾಗಿ ಅಪ್ಪಟ್ಟಮಾಡಿದಂತಾಗುತ್ತದೆ. ಮಾನ್ಯ ಸದಸ್ಯರು ಆ ಪದವನ್ನು ವಾಪಸು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ತಾವು ಕಿಡಿ ಇಡಬೇಡಿ.

Mr. SPEAKER.—I do not permit Sri Vatal Nagaraj to speak.

ಶ್ರೀ ಕೆ. ಪುಟ್ಟಸ್ವಾಮಿ.—ಇದು ಅತೀರೇಕಕ್ಕೆ ಹೋಗುತ್ತಾ ಇದೆ ಸ್ವಾಮಿ, ನಾವು ಹೇಳುವುದು ಕಿಡಿ ಎಬ್ಬಿಸಿದಂತೆ ಆಗುತ್ತದೆ, ಅವರು ಹೇಳುವುದು ಶಾಂತತೆಯನ್ನುಂಟುಮಾಡುತ್ತದೆ ಎಂದು ಹೇಳುವುದು. ಇದು ಬಹಳ ಅತೀರೇಕವಾಗುತ್ತದೆ.

Sri B. P. GANGADHAR.—I rise to a point of order.

Mr. SPEAKER.—Whe the Speaker is addressing there can be no point of order.

I have told Sri Vatal Nagaraj that one motion was given at 1-55 P.M. He should have given it before the commencement of the sitting. Therefore that cannot be considered. The second motion is with regard to cash payment of a portion of dearness allowance to Government servants. This is not a subject which can be considered under rule 59. So I do not permit.

(Sri Vatal Nagaraj rose.)

I have given my definite ruling. Mr. Vatal Nagaraj should not again raise it. I do not give him permission to raise it.

Papers laid on the Table

Sri H. C. BORAIAH (Deputy Minister for Transport).—I beg to lay on the Table a copy of Resolution dated 31st December 1968 of Mysore State Transport Authority as promised on 11th March 1969 in reply to starred question No. 696 by Sri C. M. S. Sastry.

Mr. SPEAKER.—The paper is laid on the Table.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಒಂದು ಪ್ರಿವಿಲೇಜ್ ಮೋಷನ್ ಕೊಟ್ಟಿದ್ದೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಡೆದ ವಿಷಯವನ್ನೆ ನಾನು ಹೇಳುತ್ತಾ ಇದ್ದೇನೆ, ಶ್ರೀಮಾನ ಸಿದ್ದವೀರಪ್ಪ ನವರೂ ಕೂತ ನಮ್ಮ ಪರವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನನ್ನ ಪ್ರಿವಿಲೇಜ್ ಮೋಷನ್ ಒಂದು ಪತ್ರಿಕೆಗೆ ಸಂಬಂಧಪಟ್ಟದ್ದು, ಇನ್ನೊಂದು ಎಸ್. ಕೆ. ಪಾಟೀಲ್‌ರವರ ವಿಷಯಕ್ಕೆ ಸಂಬಂಧಪಟ್ಟದ್ದು, ಇದನ್ನು ಈಗ ತೆಗೆದುಕೊಳ್ಳದೇ ಇದ್ದರೆ ಅರ್ಥವೇ ಇಲ್ಲದಂತಾಗುತ್ತದೆ.

Mr. SPEAKER.—I have already stated that all motions including the one regarding Sri S. K. Patil will be taken up. When a general discussion on all aspects of privileges takes place. I cannot now consider the motion regarding Sri S. K. Patil alone.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಲಸ್ಟ್ ಆಫ್ ಬಿಸಿನೆಸ್‌ನಲ್ಲಿ ಇರುವಂತೆ ಟ್ರಾನ್ಸ್‌ಪೋರ್ಟ್ ಮಿನಿಸ್ಟರು ಕೆಲವು ವಿಷಯಗಳನ್ನು ಟೇಬಲ್ ಮುಂದೆ ಇಟ್ಟಿದ್ದಾರೆ. ಇದು ಬಹಳ ಮುಖ್ಯವಾದ ವಿಷಯ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನನಗೆ ಒಂದೆರಡು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಬರೆದು ಕೊಡಬೇಕು ಇಲ್ಲದೆ ಇದ್ದರೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ಪ್ರಾಮುಖ್ಯವಾದ ವಿಷಯವನ್ನು ತರಬೇಕಾಗಿದೆ. ಸರ್ಕಾರಕ್ಕೆ ಬರತಕ್ಕ ಲಕ್ಷಾಂತರ ರೂಪಾಯಿ ಹಣ ನಷ್ಟವಾಗುತ್ತಿದೆ.....

ಅಧ್ಯಕ್ಷರು.—ಎಲ್ಲ ವಿಷಯಗಳನ್ನೂ ಇಲ್ಲಿ ಚರ್ಚೆ ಮಾಡುವುದಕ್ಕೆ ಒಂದು ಪ್ರೊಸೀಜರ್ ಇದೆ. ಇಲ್ಲಿ ರೂಲ್ಸ್‌ನ್ನು ಬಿಟ್ಟು ಏನು ಮಾಡುವುದಕ್ಕೂ ಆಗುವುದಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ನನಗೆ ತಾವು ಎರಡು ನಿಮಿಷ.....

Mr. SPEAKER.—I am not permitting. I shall follow the Rules strictly.

Sri G. CHANDRAKANTH.—Sir, I would like to make a humble submission.

Mr. SPEAKER.—I am not permitting.

Sri D. B. KALMANKAR.—When we give notice of a motion, you don't allow us to speak. Why did you allow Sri Nanje Gowda to speak then ?

Mr. SPEAKER.—I do not allow anybody now.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾನು ಈ ಸಭೆಯಲ್ಲಿ ಒಂದು.....

Mr. SPEAKER.—The hon'ble Member should not obstruct the Chair to proceed with the business of the House.

ಶ್ರೀ ವಾಟಾಳ್ ನಾಗರಾಜ್.—ನನಗೆ ತಾವು ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಸಾಕು.

ಅಧ್ಯಕ್ಷರು.—ಒಂದು ನಿಮಿಷಾನೂ ಕೊಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ನಾನು ಮುಖ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯ ತರಬೇಕಾಗಿದೆ.. ...

ಅಧ್ಯಕ್ಷರು.—ನೀವು ರೂಲ್ಸ್ ಪ್ರಕಾರ ನೋಟೀಸನ್ನು ಕೊಡಬೇಕು. ನಾನು ಅದನ್ನು ನೋಡುತ್ತೇನೆ.

Sri G. CHANDRAKANTH.—Sir, you have not applied your mind to the notice that I have given.

Mr. SPEAKER.—I am not permitting the hon'ble Member to speak.

Sri D. B. KALMANKAR.—You have already permitted some people.****

Sri G. CHANDRAKANTH.—Sir, I am passing on the telegram which I have received, and you can consider.

Mr. SPEAKER.—I shall indicate the time that I propose to allot for the Mysore Land Revenue (Amendment) Bill. Two days have already been consumed for considering this Bill. In view of the fact that hon'ble Members want some more time, I have decided to allot today and tomorrow for the completion of this Bill. On this basis the consideration debate will be over by 3-00 P.M. tomorrow, and the hon'ble Minister for Revenue will reply at 3-00 P.M. After the reply, the consideration motion will be put to the vote of the House If it is passed, Amendments will be taken up for about 2½ hours, and after that we may require another half-an-hour for passing the Bill. I request hon'ble Members to meet me at 3-00 P.M. today to consider this matter.

ಶ್ರೀ ಎಸ್. ಚನ್ನಯ್ಯ.—ನಾನು ತಮಗೆ ಕೇಳುವ ಪ್ರಶ್ನೆ ಏನೆಂದರೆ, ಇದು ಬಿಜಿನೆಸ್ ಅಡ್ವೈಜರಿ ಕಮಿಟಿಯ ಅಭಿಪ್ರಾಯವೋ ಅಥವಾ ತಮ್ಮ ಸ್ವಂತ ಅಭಿಪ್ರಾಯವೋ ?

ಅಧ್ಯಕ್ಷರು.—ಇದು ಮೊದಲು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಚರ್ಚೆಯಾಗಿ 3 ದಿವಸಗಳ ವರೆಗೆ ಕೂತುಕೊಳ್ಳಬೇಕೆಂದು ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ ಬೈಜರಿ ಬೆಂಚಿನವರು ಇದರ ಚರ್ಚೆಗೆ 2 ದಿವಸ ಸಾಕು, ಹಾಗೆ ಒಂದು ವೇಳೆ ಚರ್ಚೆ ಮುಗಿಯದಿದ್ದರೆ ಇದಕ್ಕೆ 3 ದಿವಸ ಕೊಡೋಣವೆಂದು ಹೇಳಿದರು. ಇವೊತ್ತು ಮೂರನೆಯ ದಿವಸ. ಮೂರನೆಯ ದಿವಸ ದಲ್ಲಿಯೂ ಸಾಧ್ಯವಾಗಲಲ್ಲ. ಆದುದರಿಂದ 10ನೇ ತಾರೀಖಿನವರೆಗೆ ಇದನ್ನು ಚರ್ಚೆಮಾಡ ಬಹುದು. ಆದ್ದರಿಂದ ಇವತ್ತು ಮತ್ತು ನಾಳೆಯ ದಿವಸ ಇದರ ಚರ್ಚೆ ಮುಗಿಸಬೇಕು.

ಶ್ರೀ ಎಸ್. ಚನ್ನಯ್ಯ.—ನಾನು ಕೇಳುತ್ತಾ ಇರುವುದು, ಇದು ಬಿಜಿನೆಸ್ ಅಡ್ವೈಜರಿ ಕಮಿಟಿ ಅಭಿಪ್ರಾಯವೋ ಅಥವಾ ನಿಮ್ಮ ಸ್ವಂತ ಅಭಿಪ್ರಾಯವೋ ?

ಅಧ್ಯಕ್ಷರು.—ಅದು ನನ್ನ ಅಭಿಪ್ರಾಯ.

Sri H. N. NANJE GOWDA.—When we pray for something, the Chair is not generous enough to reply. ನಮ್ಮ ಹಕ್ಕುಬಾಧ್ಯತೆಗೆ ಚುತಿ ಬಂದಿದೆ. ಒಂದೊಂದು ಸಾರಿ ಪತ್ರಿಕೆಗಳು ನಮ್ಮ ಹಕ್ಕುಬಾಧ್ಯತೆಯಮೇಲೆ ಧಾಳಿ ಮಾಡುತ್ತವೆ. ಮಾನ್ಯ ಶ್ರೀ ಎಸ್. ಕೆ. ಪಾಟೀಲರೂ ನಮ್ಮ ಹಕ್ಕುಬಾಧ್ಯತೆಗೆ ಧಾಳಿ ಮಾಡಿದ್ದಾರೆ. ಆದರೆ ಇಲ್ಲಿ ನಮ್ಮನ್ನು ಬಹಳ ಲಘುವಾಗಿ ಟ್ರೀಟ್ ಮಾಡುತ್ತೀರಿ. This is a very serious matter. We cannot take it so lightly.

Mr. SPEAKER.—I am considering it. I am thinking of allotting some more time for this, if necessary.

Sri B. P. GANGADHAR.—Sir, let this be over first and the Bill can be taken up in the next Session.

ಶ್ರೀ ವಿ. ಎಲ್. ಶಿವಪ್ಪ.—ತಮಗೆ ತಿಪಟೂರಿನಲ್ಲಿ ಕಾಲವಾ ಇದೆಯೆಂದು ನಾನು ನೋಟೀಸ್ ಕೊಟ್ಟಿದ್ದೇನೆ. ಅದು ಏನಾಯಿತೋ ಗೊತ್ತಿಲ್ಲ.

**** Matter not recorded as ordered by the Chair.

ಅಧ್ಯಕ್ಷರು.—ಮಾನ್ಯ ಸದಸ್ಯರು ನೋಟೀಸ್ ಕೊಟ್ಟಿದ್ದಾರೆ. ಅದನ್ನು ನಾನು ನೋಡುತ್ತೇನೆ. The hon'ble Member will Please meet me in my Chamber.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ತಿಪಟೂರು ತಾಲ್ಲೂಕಿನಲ್ಲಿ ಕಾಲರಾದಿಂದ ಜನ ಸಾಯುತ್ತಿದ್ದಾರೆ. ಈ ಬಗ್ಗೆ ಶ್ರೀಮಾನ್ ಪಿ. ಎಲ್. ಶಿವಪ್ಪನವರು ಒಂದು ಕಾಲ್ ಅಟೆಂಷನ್ ನೋಟೀಸ್ ಕೊಟ್ಟು ಮೂರು ದಿವಸಗಳಾದುವು. ಇದುವರೆಗೂ ಆ ವಿಚಾರ ಬರಲಿಲ್ಲ. ಇದು ಬಹಳ ಪ್ರಾಮುಖ್ಯವಾದ ವಿಚಾರ.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಖಾಸಗೀ ಕಾರ್ಯಕಲಾಪಗಳನ್ನು ಪಟ್ಟಿಯಲ್ಲಿ ಹಾಕಿ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುತ್ತಿಲ್ಲ. ಇದರ ಬಗ್ಗೆ ಯಾವರೀತಿ ಮಾಡುತ್ತಾರೆ ಎಂಬುದೇ ಅರ್ಥವಾಗುವುದಿಲ್ಲ. ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿರತಕ್ಕ ನಮ್ಮ ವಿರೋಧಪಕ್ಷದ ಸದಸ್ಯರನ್ನು ಯಾವರೀತಿ ತರೆಸವರಿದರೋ ಗೊತ್ತಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಈ ವಯಸ್ಸಿನಲ್ಲಿ ನಾವು ತರೆ ಸವರಿಸಿಕೊಳ್ಳುವುದಿಲ್ಲ. ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ತೀರ್ಮಾನ ಏನಾಗಿದೆ ಅದನ್ನು ಈ ಸಭೆಯವರು ಬದಲಾವಣೆ ಮಾಡಬಹುದು. ಯಾವ ವಿಷಯವನ್ನು ಬೇಕಾದರೂ ತೆಗೆದುಕೊಳ್ಳಬಹುದು. ಈ ಮಾನ್ಯ ಸಭೆ ಮುಂದೆ ಚರ್ಚೆಗೆ ಬಂದಿರುವ ಮನೂದೆಗಿಂತ ಪ್ರಿವಿಲೇಜ್ ಮೋಷನ್ನೇ ಬಹಳ ಮುಖ್ಯವೆಂದು ಹೇಳುವುದಾದರೆ ಅದನ್ನೇ ತೆಗೆದುಕೊಳ್ಳಬಹುದು. ಆ ರೀತಿ ಒಂದು ತೀರ್ಮಾನ ಮಾಡುವುದಾದರೆ ಅದಕ್ಕೆ ಯಾರದೂ ಅಭ್ಯಂತರವಿಲ್ಲ. ನಾವು ಈ ವಯಸ್ಸಿನಲ್ಲಿ ತರೆಸವರಿಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಬೇಕಾದರೆ ನಾನು ಬಿಸಿನೆಸ್ ಅಡ್ವೈಜರಿ ಕಮಿಟಿಗೆ ರಾಜೀನಾಮೆ ಕೊಡುತ್ತೇನೆ. ಈ ಸಭೆಯನ್ನು ಈ ತಿಂಗಳು 10ನೇ ತಾರಿಖಿಗೆ ಮುಕ್ತಾಯ ಮಾಡಬೇಕು, ಆದ್ದರಿಂದ ಈ ಬಿಲ್ಲು ಬಹಳ ಮುಖ್ಯವಾದದ್ದು ಇದನ್ನು ಇವೊತ್ತು ತೆಗೆದುಕೊಳ್ಳಬೇಕೆಂದು ಈ ಸಭೆಯ ನಾಯಕರು ಹೇಳಿದರು. ಅದಕ್ಕಾಗಿ ನಾವು ಅವರ ಅಭಿಪ್ರಾಯಕ್ಕೆ ಒಪ್ಪಿಕೊಳ್ಳಬೇಕಾಯಿತು. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ನಡೆದಿದೆ ಎಂಬುದು ಸಾಮಾನ್ಯವಾಗಿ ಹೊರಗಡೆ ಬರುವುದಿಲ್ಲ. ತಾವು ಅಪ್ಪಣೆ ಕೊಟ್ಟದ್ದರಿಂದ ಮಾತನಾಡಬೇಕಾಗಿ ಬಂತು. ನಮ್ಮನ್ನು ಯಾರೂ ತರೆ ಸವರಿಲ್ಲ. ನಾವು ತರೆ ಸವರಿಸಿಕೊಳ್ಳುವ ಸ್ಪೇಜಿನಲ್ಲೂ ಇಲ್ಲ.

ಶ್ರೀ ಎಸ್. ಶಿವಪ್ಪ.—ಕಮಿಟಿ ಒಳಗಡೆ ಏನು ನಡೆದಿದೆ ಎನ್ನುವುದನ್ನು ಸಭೆಯ ಮುಂದೆ ಹೇಳುವುದು ಒಳ್ಳೆಯ ಸಂಪ್ರದಾಯವಲ್ಲ. ಕಮಿಟಿಯ ಒಳಗಡೆ ವಿರೋಧ ಪಕ್ಷದ ಸದಸ್ಯರು ಎಷ್ಟು ವಾದ ಮಾಡಿದ್ದಾರೆ ಎನ್ನುವುದು ತಮಗೆ ಗೊತ್ತಿದೆ. ಶ್ರೀ ನಂಜೇಗೌಡರು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಮ್ಮ ತರೆ ಸವರಿದರು ಎಂದು ಹೇಳಿದ್ದಾರೆ. ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಹಾಗೆ ವಾಪಸ್ಸು ತೆಗೆದುಕೊಂಡರೆ ಮುಖಂಡರಿಗೆ ಮರ್ಯಾದೆಯನ್ನು ಕೊಟ್ಟ ಹಾಗಾಗುತ್ತದೆ. ಈ ತರಹ ಮಾತುಗಳು ಸಭೆಯ ಕಾರ್ಯಕಲಾಪಗಳಿಗೆ ಗೌರವ ತರತಕ್ಕವಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ನಮ್ಮ ನಾಯಕರು ನಾನು ಹೇಳಿದುದನ್ನು ತಪ್ಪು ತಿಳಿದುಕೊಂಡಿದ್ದಾರೆ. ಖಾಸಗೀ ಕಾರ್ಯಕಲಾಪಗಳ ಬಗ್ಗೆ ಇಟ್ಟಿರುವ 2—3 ದಿವಸಗಳಲ್ಲಿ ಸರ್ಕಾರಿ ಕಾರ್ಯಕಲಾಪಗಳು ನಡೆದುವು. ಆಗ ಮಾನ್ಯ ಅಧ್ಯಕ್ಷರು ಮತ್ತು ನಾಯಕರೂ ಕೂಡ ಮುಂದೆ ಒಂದೆರಡು ದಿವಸ ಕೊಡಿಸಿಕೊಡುವುದಾಗಿ ಅಪ್ಪಣೆ ಕೊಡಿಸಿದರೂ ಹೀಗಾದರೆ ಖಾಸಗೀ ಕಾರ್ಯಕಲಾಪಗಳ ಗತಿ ಏನು ಎಂದು ಕೇಳಿದೆ.

Mr. SPEAKER.—I have given full time for non-official business. It has been agreed that two and half hours on each Friday will have to be allotted for non-official business. We have lost two Fridays and for that we have given one full day consisting of five hours for non-official business. So the promise for alloting time for non-Official business has been fulfilled. Therefore the complaint that enough time has not been given for non-official business, as per rules, is not correct.

ಶ್ರೀ ಎಂ. ನಾಗಪ್ಪ (ರಾಯಚೂರು).—ರೂಲ್ಸಿಗೆ ಮಾಪತ್ಯ ಕೊಡುವುದೇ ದೋಷವೆಂದು ನಾನು ತಿಳಿದುಕೊಂಡಿದ್ದೇನೆ. ಮಂತ್ರಿಗಳ ಈ ದಿವಸ ಹೇಳಿಕೆ ಕೊಡುತ್ತೇವೆಂದು ಬರವಣಿಗೆಯಲ್ಲಿ ಕೊಟ್ಟಿದ್ದೀರಿ. ಆ ಬರವಣಿಗೆಗೇ ಮಾಪತ್ಯ ಇಲ್ಲ ಅಂದರೆ ಹೇಗೆ?

Mr. SPEAKER.—Is the Hon. Minister going to make a statement ?

Sri B. L. GOWDA (Deputy Minister for Co-operation).—I have not yet got the information.

Mr. SPEAKER.—The hon. Minister will make a statement tomorrow.

Sri M. NAGAPPA.—I rise to a point of order. There must be some limit for the Hon. Minister to ask for sometime in writing and postponing it time and again. Previously also I have given one notice and that notice was dragged on from today, tomorrow and day-after tomorrow. Fifteen days are over, and now my notice has gone to waste-paper basket.

Mr. SPEAKER.—What is the point of order ?

Sri M. NAGAPPA.—Sir, my point of order is, how rules are being violated, I am bringing to the notice of the hon. Chair, On Monday I raised that matter and the Hon. Chair assured me that the Hon. Minister is going to make a statement tomorrow. The records may be looked into. Yesterday also I tried to raise that matter. The Hon. speaker was not in the Chair but the Hon. Deputy Speaker was in the Chair. Hon. Deputy Speaker stated that he will verify the records. Later on I kept quiet and sent a notice to the Deputy Speaker explaining the subject matter. On that notice, the Hon. Minister has endorsed saying that he is going to make a statement today which I have also seen. Since I could not find that matter on today's agenda I am raised this matter again. As per the rules, when once a statement is made, unless that statement is revoked on the flooor of the House that cannot be set aside. There must be some sanctity to the words spoken on the floor of this House or else, there would be no importance to the statements made here.

I therefore humbly request the Chair to force the Treasury Bench to give reply or else I will leave it to the Chair.

3-00 P.M.

Mr. SPEAKER.—The Hon. Minister wants some time to collect information. He tells me that he was not able to collect information up till now. The Hon. Minister may therefore make the statement tomorrow.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿರುವ ಕಾರ್ಯಕಲಾಪಗಳ ಬಗ್ಗೆ ನಾನು ಮಾತನಾಡುವಾಗ, ಆ ಕಮಿಟಿಯಲ್ಲಿ ವಿರೋಧಪಕ್ಷದ ಸದಸ್ಯರುಗಳು ಖಾನಗೀ ಕಾರ್ಯಕಲಾಪಗಳ ಬಗ್ಗೆ ಫ್ಲೈಟ್ ಮಾಡಿದ್ದಾರೆಯೇ ಇಲ್ಲವೇ ಎಂಬ ಬಗ್ಗೆ ನನಗೆ ಅನುಮಾನ ಬಂದು ಸ್ವಲ್ಪ ಹೊತ್ತಿನ ಮುಂಚೆ ನಾನು ರೋಷದಲ್ಲಿ ಕೆಲವು ಕಟುವಾದ ಮಾತುಗಳನ್ನು ಆಡಿದೆ. ನಮ್ಮ ವಿರೋಧಪಕ್ಷದ ನಾಯಕರು ನಮ್ಮ ಹಕ್ಕು ಬಾಧ್ಯತೆಯ ಬಗ್ಗೆ ಹೋರಾಟ ನಡೆಸಿಲ್ಲ ಎಂದು ನಾನು ಹೇಳಲಿಲ್ಲ. ಅವರಲ್ಲಿ ನನಗೆ ಸಂಪೂರ್ಣವಾದ ನಂಬಿಕೆ ಇದೆ. ಆಗ ನಾನು ಹೇಳಿದ ಮಾತಿನ ಬಗ್ಗೆ ನಮ್ಮ ನಾಯಕರ ಮನಸ್ಸಿಗೆ ನೋವಾಗಿದ್ದರೆ ಅವರಲ್ಲಿ ನಾನು ಕ್ಷಮೆ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

Sri B. P. GANGADHAR.— I rise to a point of order.

Mr. SPEAKER.—The Points of orders are being raised nowadays to obstruct the work.

Sri B. P. GANGADHAR.— I am really sorry for this remark.

Mr. SPEAKER.— The Points of orders are meant to facilitate the work being done properly. But unfortunately this weapon is being used otherwise. I request hon. members not to raise points of orders unnecessarily.

Sri B. P. GANGADHAR.—Under Rule 180 I am raising this point of order. Under this rule there is a specific procedure in respect of privilege motions. The notice has been admitted.

Mr. SPEAKER.— No, I have not admitted any notice.

Sri B. P. GANGADHAR.—Then, how can a day be allotted for discussion ?

Mr. SPEAKER.—Some Hon. Members requested me that they want to say something on this subject and wanted me to give my consent for that. I agreed to set apart some time for a protracted debate on this subject in a general way. But I had not given my consent to the privilege motion. The Hon. Member Sri Gangadhar has misunderstood me.

Sri B. P. GANGADHAR.— If we do not hammer it out in proper time, what is the use of it ?

† ಶ್ರೀ ಎಸ್. ಶಿವಪ್ಪ.—ಸ್ವಾಮಿ, ಹಕ್ಕುಬಾಧ್ಯತೆಗೆ ಸಂಬಂಧಪಟ್ಟ ವಿಚಾರವನ್ನು ಈ ಸಭೆಯಲ್ಲಿ ಒಂದು ದಿವಸ ಚರ್ಚೆ ಮಾಡಬೇಕು ಎಂದು ಹೇಳಿದುದಕ್ಕೆ ತಾವು ಅದನ್ನು ಮಾಡಲು ಭರವಸೆ ಕೊಟ್ಟದ್ದೂ ನಿಜ. ಮತ್ತೆ ಈ ವಿಚಾರವನ್ನು ಚರ್ಚೆ ಮಾಡಬೇಕು ಎನ್ನುವುದರಲ್ಲಿ ನೀವೇ ಅಲ್ಲ, ನಮಗೆಲ್ಲರಿಗೂ ಕಾತರತೆ ಇದೆ. ಈ ಸಭೆಯಲ್ಲಿ ಅವಷ್ಟೂ ಬೇಗ ಹಕ್ಕುಬಾಧ್ಯತೆಗಳೇ ವಿಚಾರವನ್ನು ಚರ್ಚೆ ಮಾಡಬೇಕು, ಇದು ಬಹಳ ಪ್ರಾಮುಖ್ಯವಾದ ವಿಚಾರ ಮತ್ತು ಹಾಗೆ ಮಾಡಬೇಕಾದುದೂ ಅಗತ್ಯ. ಆದರೆ ಈ ಸಭೆಯ ಕಾರ್ಯಕಲಾಪಗಳನ್ನು ಯಾವತ್ತು ಮುಗಿಸಬೇಕು ಎನ್ನುವ ವಿಚಾರ ಪ್ರಸ್ತಾಪಕ್ಕೆ ಬಂದಾಗ 10ನೇ ತಾರೀಖೇ ಮುಗಿಸಬೇಕು ಎನ್ನುವ ಒಂದು ಮಾತು ಬಂತು. ಇದು ಬಂದಾಗ ಲ್ಯಾಂಡ್ ರೆವೆನ್ಯೂ ಬಿಲ್ಲಿಗೆ ಕೊಟ್ಟಿರತಕ್ಕ ಕಾಲಾವಕಾಶ ಕಡಿಮೆ ಮಾಡಿ ಉಳಿದ ಕೆಲಸಕ್ಕೆ ಎಷ್ಟು ಸಾಧ್ಯವೋ ಅದನ್ನು ಕೊಟ್ಟು ಇಲ್ಲಿ ಚರ್ಚೆ ಮಾಡಬೇಕು ಎಂದು ಹೇಳಿದರು. ಆದರೆ ಆ ಬಿಲ್ಲನ್ನು ಚರ್ಚೆ ಮಾಡಲು ನಮಗೆ ಬೇಕಾದ ಕಾಲವನ್ನು ನಾವು ತೆಗೆದುಕೊಳ್ಳುತ್ತೇವೆ. ಇದಾದ ಮೇಲೆ ಹಕ್ಕುಬಾಧ್ಯತೆ ವಿಚಾರದ ಮೇಲೆ ಇಲ್ಲಿ ಚರ್ಚೆ ಮಾಡಲು ಒಂದೆರಡು ದಿವಸಗಳು ಬೇಕಾಗಬಹುದು. ಇವೊತ್ತಿನ ದಿನ ಇರುವ ಪರಿಸ್ಥಿತಿ ಏನಾಗಿದೆ ಎಂದರೆ ಇವೊತ್ತು ನಮ್ಮ ಅಧ್ಯಕ್ಷರು ಪರದೇಶಕ್ಕೆ ಹೋಗುವ ಒಂದು ಸಂದರ್ಭ ಬಂದಿದೆ. ಅವರೂ ಇದರಲ್ಲಿ ಭಾಗವಹಿಸಬೇಕು ಎನ್ನುವ ದೃಷ್ಟಿ ಇರುವುದರಿಂದ ಲ್ಯಾಂಡ್ ರೆವೆನ್ಯೂ ಬಿಲ್ಲನ್ನು ಚರ್ಚೆ ಮಾಡಲು ಸಾಕಷ್ಟು ಕಾರಾವಕಾಶ ಕೊಡಬೇಕೆಂದು ಕೇಳಿದರೂ ಅದನ್ನು ಕೊಡುವುದೂ ಕಷ್ಟವಾಗಿದೆ. ಹೇಗಾದರೂ 11ನೇ ತಾರೀಖು ಸಭೆ ಮುಗಿಯಲೇಬೇಕು ಎಂದು ಇದೆ. ಇದರ ಬಗ್ಗೆ ಸಭೆ ಹೇಗೆ ಒಪ್ಪುತ್ತೋ ಅದನ್ನು ನಾವು ಒಪ್ಪುಬೇಕಾಗುತ್ತದೆ. ಇದರ ಬಗ್ಗೆ ಇನ್ನೂ ಒಂದೆರಡು ದಿನ ಬೇಕಾದರೂ ನಾವು ಅವಿವೇಶನವನ್ನು ಮುಂದುವರಿಸಬಹುದಾಗಿತ್ತು. ಮಾನ್ಯ ಗಂಗಾಧರರವರು ತಡಾಗಲೇ ಹೇಳಿದ ಹಾಗೆ ಇಂತಹ ಪರಿಸ್ಥಿತಿ ಬಂದಾಗ ಸಭೆಯ ತೀರ್ಮಾನಕ್ಕೆ ಇದನ್ನು ಬಿಡುವುದು ನೂಕ್ತ ಎಂದು ನಮಗೂ ತೋರುತ್ತದೆ.

Mysore Land Revenue (Second Amendment)Bill, 1969.

Motion to Consider—(Debate contd.)

Sri B. P. KADAM (Karwar).—Yesterday I was telling that this amending Bill will not serve any purpose. The Government wants to show favour to some zones. In sub-clause (u) of section 114 A, it is stated like this:

> "The Government, for reasons to be recorded in writing, is of the opinion that in any zone, the settlement of land revenue requires modification, it may, by order, direct the revision of settlement of land revenue in such zone,....."

Then notices will be served by the authorities under the newly proposed Section 122A, and then under the newly proposed Section 122 (B), the Deputy Commissioner (i) may *suo motu* at any time and (ii) shall, on the application of any person aggrieved by the land revenue assessed within a period of thirty days, from the date of service of the notice under Section 122 A,....."

I think this will have a great political pressure. The Political parties will have greater influence in such zones. The vested interests will have greater influence over the Government. Therefore, justice cannot be sought fairly at the hands of the officialdom whether it is at the hands of the Deputy Commissioner or at the hands of the Divisional Commissioner. Only a particular class of people will enjoy the benefit and the poorer section will have to suffer always. Considered by these standards, I think this will serve no purpose.

Then of course, the land assessment envisaged under this Bill or in the earlier survey settlement is not the final thing. Over and above the land tax, we have got the health cess, the local fund cess, the education cess and also other things like the betterment levy and water rate, though they come under a separate legislation. Therefore, the best thing would be for the Government to withdraw this Bill in the present form and appoint a Committee to review the entire policy of land revenue so as to exempt uneconomic holdings.

As I said, yesterday, it must be the duty of the Government to see that uneconomic holdings are exempted from the land tax. Otherwise, the assurance given by the Government that they desire to bring a new amending Bill and have a comprehensive legislation to see that justice is done to all the regions concerned, will not be fulfilled.

Sir, I do not wish to take much time and thanking you for giving me this opportunity, I resume my seat.

(MR. DEPUTY SPEAKER in the Chair)

† ಶ್ರೀ ಡಿ. ಎಂ. ಸಿದ್ದಯ್ಯ (ಬೆಳಿಗೆರೆ).—ಮಾನ್ಯ ಸಭಾಪತಿಗಳೇ, ಮಾನ್ಯ ರೆವಿನ್ಯೂ ಸಚಿವರು ಮಂಡಿಸಿರುವ ಈ ರೆವಿನ್ಯೂ ಮಸೂದೆ ತಿದ್ದುಪಡಿಗೆ ಬೆಂಬಲವನ್ನು ಕೊಡುತ್ತಾ ಈ

(ಶ್ರೀ ಡಿ. ಎಂ. ಸಿದ್ದಯ್ಯ)

ಭೂಕಂದಾಯವನ್ನು ಪುನರ್ವಿಮರ್ಶೆ ಮಾಡಿದಾಗ ಇದು ಸರಿಯಾಗಿ ಆಗಿಲ್ಲ ಎನ್ನತಕ್ಕಂಥ ಅಭಿಪ್ರಾಯವನ್ನು ಈ ಮಾನ್ಯ ಸಭೆಯಲ್ಲಿ ಹಿಂದೆ ಚರ್ಚೆಗೆ ಬಂದಾಗ, ಬಹಳ ಜನ ಸದಸ್ಯರು ಸೂಚಿಸಿದ್ದರ ಫಲವಾಗಿ ಅದರಲ್ಲಿ ಇದ್ದಂಥ ನ್ಯೂನತೆಗಳನ್ನು ಸರಿಪಡಿಸುವ ಉದ್ದೇಶದಿಂದ ಒಂದು ಸಮಗ್ರವಾದ ತಿದ್ದುಪಡಿಯನ್ನು ಮಾನ್ಯ ರೆವಿನ್ಯೂ ಸಚಿವರು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಒಂದು ತಿದ್ದುಪಡಿ ಸಮಗ್ರವಾದ ದೃಷ್ಟಿಯಿಂದ ಕೂಡಿದೆ ಎನ್ನತಕ್ಕಂಥಾದ್ದನ್ನು ನಾನು ಸಮರ್ಥಿಸುವುದಕ್ಕೆ ಇಚ್ಛೆಪಡುತ್ತೇನೆ. ಅದು ಹೇಗೆ ಎಂದರೆ ರೆವಿನ್ಯೂ ರೀಸೆಟ್ಲ್‌ಮೆಂಟ್ ಆದಂಥ ಕಾಲದಲ್ಲಿ ಅನೇಕ ಜೋನ್‌ಗಳನ್ನು ಮಾಡಿ ಸರ್ಕಾರದವರು ಬೇಕಾದಷ್ಟು ಹಣವನ್ನು ಖರ್ಚು ಮಾಡಿ ಈ ಒಂದು ರೀಸೆಟಲ್‌ಮೆಂಟ್‌ನ್ನು ಮಾಡಿಸಿದರು. ಆವರೆ ಆವಾಗ್ಗೆ ಈ ರೀಸೆಟಲ್‌ಮೆಂಟ್ ಒಂದೊಂದು ಕಡೆ ಒಂದೊಂದು ರೀತಿ ನಡೆಯುತು. ಕೆಲವು ಕಡೆ ಕಂದಾಯದ ಬಗ್ಗೆ ಒಂದಕ್ಕೆ 4 ರಷ್ಟು 5 ರಷ್ಟು ಜಾಸ್ತಿಯಾಗಿದೆ ಎಂದು ಮತ್ತು ಇದರಿಂದ ರೈತರಿಗೆ ತೊಂದರೆಯಾಗಿದೆ ಎನ್ನುವ ಪರಿಸ್ಥಿತಿ ಸರ್ಕಾರದ ಮುಂದೆ ವಿಮರ್ಶೆಗೆ ಬಂದಾಗ ಸರ್ಕಾರದವರು ಉದಾರ ದೃಷ್ಟಿಯಿಂದ ಪರಿಶೀಲಿಸಿ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಈ ಒಂದು ರೀಸೆಟಲ್‌ಮೆಂಟ್ ಕೆಲವ ವಿಪರೀತವಾಗಿದೆ ಎನ್ನುವ ಮಾತನ್ನು ಈ ಮಾನ್ಯ ಸಭೆಗೆ ತಿಳಿಸುತ್ತೇನೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಪೈತ್ಯಸೂರು ಡಿಸ್ಟ್ರಿಕ್ಟ್‌ನಲ್ಲಿರುವ ಹೆಗ್ಗಡದೇವನಕೋಟೆ, ಪಿರಿಯಾ ಪಟ್ಟಣ, ಹುಣಸೂರು ತಾಲ್ಲೂಕುಗಳಲ್ಲಿ ಮಾಡಿರುವ ರೀಸೆಟಲ್‌ಮೆಂಟ್ ಹೀಗಿದೆ—

Class of land--

Dry land present Revenue as per first Revision Settlement 1,94,091.

Proposed Revenue increase 5,60,711.

Increase in levy 3,82,620.

Percentage of increase in Land Tax 408 per cent,

ಇದು ಬಹುಶಃ ಅತ್ಯಾಶ್ಚರ್ಯಕರವಾದ ಸಂಗತಿ. ಒಂದಕ್ಕೆ ನಾಲ್ಕರಷ್ಟು ಕಂದಾಯವನ್ನು ಜಾಸ್ತಿ ಮಾಡಿರತಕ್ಕದ್ದು, ರೀಸರ್ವೆ ಸೆಟಲ್‌ಮೆಂಟಿನವರು ಯಾವ ಆಧಾರದಿಂದ ವರದಿದರೋ ಅದು ನಮಗೆ ಅರ್ಥವಾಗುವುದಿಲ್ಲ.

ಎರಡನೆಯದು ಅದೇ ಭಾಗದಲ್ಲಿ ವೆಟ್ ಲ್ಯಾಂಡ್ಸ್ 1/16 ಭಾಗ, ಪ್ರೆಸೆಂಟ್ ರೆವೆನ್ಯೂ 45,735 ರೂಪಾಯಿ, ಪ್ರಪೋಸ್ಡ್ ರೆವಿನ್ಯೂ 1,12,149 ರೂಪಾಯಿ, ಇನ್‌ಕ್ರೀಸ್ ಇನ್ ರೆವೆನ್ಯೂ 66,414 ರೂಪಾಯಿ, 245 ಪರ್ಸೆಂಟ್ ಜಾಸ್ತಿಯಾಗಿದೆ. ಇದು ಮೊದಲನೇ ಗ್ರೂಪ್. ಎರಡನೇ ಗ್ರೂಪ್ ತೆಗೆದುಕೊಂಡರೆ ಡ್ರೈಲ್ಯಾಂಡಿಗೆ 64,071 ರೂಪಾಯಿ ಇದ್ದರೆ ರೀಸರ್ವೆ ಸೆಟಲ್‌ಮೆಂಟಿನಲ್ಲಿ 3,34,454 ರೂಪಾಯಿ ಮಾಡಿದ್ದು, ಹೆಚ್ಚಾಗಿರತಕ್ಕದ್ದು 1,70,383 ರೂಪಾಯಿ ಅಂದರೆ 366 ಪರ್ಸೆಂಟ್ ಜಾಸ್ತಿಯಾಗಿದೆ. ಹಾಗೆಯೇ ವೆಟ್‌ಲ್ಯಾಂಡ್ಸ್ ತೆಗೆದುಕೊಂಡರೆ 282 ಪರ್ಸೆಂಟ್ ಜಾಸ್ತಿಯಾಗಿದೆ. ಒಟ್ಟು 2,51,598 ರೂಪಾಯಿ ಹಿಂದಿನ ಕಂದಾಯವಿದ್ದರೆ ಈಗ ಪ್ರಪೋಸ್ ಮಾಡಿರತಕ್ಕದ್ದು 9,03,231 ರೂಪಾಯಿ. ಹೆಚ್ಚಾಗಿರತಕ್ಕದ್ದು 6,51,633 ರೂಪಾಯಿ ಅಂದರೆ ಗ್ರಾಂಡ್ ಟೋಟಲ್‌ನಲ್ಲಿ 259 ಪರ್ಸೆಂಟ್ ವ್ಯತ್ಯಾಸ ಬರುತ್ತದೆ. ಹಿಂದೆ ಇದ್ದ 2,51,59೮ಕ್ಕೂ ಹೊಸದಾಗಿ ಪ್ರಪೋಸ್ ಮಾಡಿರುವ 9,03,23, ರೂಪಾಯಿಗಳಿಗೆ ಇರುವ ಅಂತರವನ್ನು ನೋಡಿದರೆ ಇದು ಎಷ್ಟು ವೈಪರೀತ್ಯಕ್ಕೆ ಹೋಗಿದೆ ಎನ್ನುವುದು ಕಾಣುತ್ತದೆ. ಬಹುಶಃ ನಮ್ಮ ರಾಜ್ಯದ ಯಾವ ಭಾಗದಲ್ಲಿಯೂ ಕೂಡ ಇಷ್ಟು ಜಾಸ್ತಿಯಾದ ವ್ಯತ್ಯಾಸವನ್ನು ರೀಸರ್ವೆ ಸೆಟಲ್‌ಮೆಂಟ್ ಮಾಡಿಲ್ಲ. ಮಾನ್ಯ ಚನ್ನಬಸಪ್ಪನವರು ಆ ಭಾಗಕ್ಕೆ ಸೇರಿದವರು, ಅವರು ದೊಡ್ಡ ಜಮೀನ್ದಾರರಿದ್ದಾರೆ. ಅವರು ಹೆಚ್ಚು ಕಂದಾಯ ಕೊಡಲಿ ಎಂದು ಮಾಡಿದರೋ ಏನೋ ಗೊತ್ತಾಗಿಲ್ಲ. ಇದನ್ನು ಮಾಡಿರುವುದು ಬಹಳ ವೈಪರೀತ್ಯವಾದುದು. ಇಂಥ ವ್ಯತ್ಯಾಸಗಳು ಅನೇಕ ಕಡೆ ಕಂಡು ಬಂದುದರಿಂದ, ಇದನ್ನೆಲ್ಲ ಸರಿಪಡಿಸಬೇಕೆಂದು ಈ ತಿದ್ದುಪಡಿಯನ್ನು ಮಾನ್ಯ ಸಭೆಯ ಮುಂದೆ ಸರ್ಕಾರದವರು ತಂದಿದ್ದಾರೆ. ಇದರ ಹಿನ್ನಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಸರ್ಕಾರದವರು ಮಾನ್ಯ ಸಭೆಯ ಮುಂದೆ, ದೇಶದ ಮುಂದೆ ಹೇಳಿದ್ದು, ಭೂಕಂದಾಯದ ಹಳೇ ಪದ್ಧತಿ ಏನಿದೆ ಆ ರೀತಿಯಿಲ್ಲಿ ಅದು ಇರುವುದಿಲ್ಲ, ನಾಟ್ ಇನ್ ದಿ ಪ್ರೆಸೆಂಟ್ ಫಾರಂ, ಎನ್ನುವ ಮಾತನ್ನು ಸರ್ಕಾರದವರು ಹೇಳಿರತಕ್ಕದ್ದು ನಿಜ. ಭೂ ಕಂದಾಯವನ್ನು ವಜಾ ಮಾಡುತ್ತೇವೆಂದು ಯಾವತ್ತೂ ಹೇಳಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).—ರೀಸೆಟಲ್‌ಮೆಂಟ್ ಬಗ್ಗೆ ವರದಿಯನ್ನು ತಯಾರು ಮಾಡಿ ಸರ್ಕಾರಕ್ಕೆ ಕಳಿಸಿದಾಗ, ಈ ಸಭೆಯ ಮುಂದೆ ಇಟ್ಟಾಗ ಬಹಳ ಅನ್ಯಾಯ ನಡೆದಿದೆ ಎಂದು ಆಗ ಸರ್ಕಾರದ ದೃಷ್ಟಿಗೂ, ಮತ್ತು ಮಾನ್ಯ ಸದಸ್ಯರ ದೃಷ್ಟಿಗೂ ಬೀಳಲಿಲ್ಲವೊ ? ಆಗ ಅದರಲ್ಲಿ ಏನು ಲೋಪದೋಷಗಳಿವೆ ಎಂದು ಕಂಡುಕೊಂಡೂ ಕೂಡ ಅದನ್ನು ಸಭೆಯಲ್ಲಿ ಇಟ್ಟು ಪಾಸ್ ಮಾಡಲಾಯಿತೇ ?

ಶ್ರೀ ಡಿ. ಎಂ. ಸಿದ್ದಯ್ಯ.—ಲ್ಯಾಂಡ್ ರೆವೆನ್ಯೂ ರೀಸೆಟಲ್‌ಮೆಂಟ್ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾದಾಗ ಮಾನ್ಯ ಕೃಷ್ಣಪ್ಪನವರು ರೆವೆನ್ಯೂ ಸಚಿವರಾಗಿದ್ದರು. ನನ್ನ ಮಟ್ಟಿಗೆ ಹೇಳುವುದಾದರೆ ನಾನು ಈಗ ಏನು ಅಭಿಪ್ರಾಯವನ್ನು ಹೇಳುತ್ತಿದ್ದೇನೆಯೋ ಅದೇ ಅಭಿಪ್ರಾಯವನ್ನೇ ಆಗಲೂ ಹೇಳಿದೆ. ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿ ಇದ್ದರು. ಆಗಿನ ರೆವೆನ್ಯೂ ಸಚಿವರು ಇದನ್ನೆಲ್ಲ ಸರಿಪಡಿಸಬೇಕಾದರೆ ನಮಗೆ ಶಕ್ತಿ ಇಲ್ಲ, ಈ ಮಾನ್ಯ ಸಭೆ ಸರ್ಕಾರಕ್ಕೆ ಅನುಮತಿಯನ್ನು ತಿದ್ದುಪಡಿಯ ಮೂಲಕ ಕೊಟ್ಟರೆ ಮಾತ್ರ ಅದನ್ನು ಸರಿಪಡಿಸಲು ಸಾಧ್ಯ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ರೀ ಸೆಟಲ್‌ಮೆಂಟಿಗೆ ಈ ಸಭೆಯ ಅನುಮತಿಯನ್ನು ಪಡೆದ ಮೇಲೆ, ಸರ್ಕಾರ ಹುಕುಂ ಮಾಡಿದ ಮೇಲೆ ಕಾನೂನು ಸಭೆಯಲ್ಲಿ ಆಯಿತು. ಕಾನೂನು ಪ್ರಕಾರವಾಗಿ ಬದಲಾವಣೆ ಮಾಡುವುದಕ್ಕೆ ಅಧಿಕಾರವಿಲ್ಲ. ರೀಸೆಟಲ್‌ಮೆಂಟ್ ಸ್ಟೇಟ್‌ಮೆಂಟ್ ಏನಿತ್ತು, ಅದು ಸಭೆಯಲ್ಲಿ ಬರುವುದಕ್ಕೆ ಮುಂಚೆ ತಾವೆಲ್ಲ ನೋಡಿದ್ದಿರಿ, ಆಗ್ಗೆ ಈ ಅನ್ಯಾಯ ನಡೆದಿದೆ ಎಂದು ನಿಮಗೆ ಗೊತ್ತಾಗಲಿಲ್ಲವೊ ?

ಶ್ರೀ ಡಿ. ಎಂ. ಸಿದ್ದಯ್ಯ.—ರೀಸೆಟಲ್‌ಮೆಂಟ್ ಸಭೆಯ ಮುಂದೆ ಚರ್ಚೆಗೆ ಬಂದಂಥ ಕಾಲದಲ್ಲಿ ನಾವು ನಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದೆವು. ಆದರಲ್ಲಿ ಏನೇನು ಲೋಪದೋಷಗಳಿವೆ ಎನ್ನುವುದನ್ನೂ ಸೂಚಿಸಿದ್ದೇವೆ. ಆದರೆ ಇವತ್ತೇನು ತಿದ್ದುಪಡಿ ತಂದಿದ್ದಾರೆ ಅದನ್ನು ಹಿಂದೆಯೇ ಏಕೆ ತರಲಿಲ್ಲವೆಂಬುದು ಮಾನ್ಯ ಸದಸ್ಯರು ಹೇಳುವುದು. ಆ ರೀತಿಯ ತಿದ್ದುಪಡಿಯನ್ನು ಸರಕಾರದವರೇ ತರಬೇಕೆಂದು ಯೋಚನೆಮಾಡುತ್ತಿದ್ದರು, ಈಗ ತಂದಿರುವುದು ಕಾಕತಾಳ ನ್ಯಾಯವಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ರೀಸೆಟ್‌ಮೆಂಟ್ ಸರಿಯಾಗಿದೆ ಎಂದು ಕೈ ಎತ್ತಿದಿರಿ. ಈ ದಿವಸವಿರುವ ಬುದ್ಧಿ ಆ ದಿವಸ ಎಲ್ಲ ಹೋಗಿತ್ತು ?

ಶ್ರೀ ಡಿ. ಎಂ. ಸಿದ್ದಯ್ಯ.—ಆಗ ತಿದ್ದುಪಡಿ ತಂದು ಸರಿಪಡಿಸುತ್ತೇವೆಂದು ಭರವಸೆ ಕೊಟ್ಟಿದ್ದರ ಮೇಲೆ ಈಗ ಇದನ್ನು ತಂದಿರುವುದು. ವಿರೋಧ ಪಕ್ಷದವರು ಸತ್ಯಾಗ್ರಹ ಮಾಡಿದ ಮೇಲೆ ಇದನ್ನು ತಂದಿಲ್ಲ, ಇದು ಕಾಕತಾಳ ನ್ಯಾಯವಾಗಿದೆ. ಸತ್ಯಾಗ್ರಹ ನಡೆಯುದಿದ್ದರೂ ಕೂಡ ಈ ತಿದ್ದುಪಡಿ ಸಭೆಯ ಮುಂದೆ ಬರುತ್ತಿತ್ತು. ಆಗಲೇ ಮಾನ್ಯ ಸದಸ್ಯರು ತಮ್ಮ ಭಾಗದ ಉದಾಹರಣೆ ಹೇಳಿದರು, 2 ಲಕ್ಷವಿದ್ದುದು 9 ಲಕ್ಷವಾಗಿದೆ ಎಂದರೆ ರೈತರು ಅದನ್ನು ಕೊಡಲು ಖಂಡಿತ ಸಾಧ್ಯವಿಲ್ಲ. ನಮಗೆ ರೈತರ ಮೇಲೆ ನಿಮಗಿರುವುದಕ್ಕಿಂತ ಹೆಚ್ಚಿನ ಮಮತೆ ಇದೆ. ಸರಕಾರದವರು ಯಾವ ದೃಷ್ಟಿಯಿಂದ ಈ ತಿದ್ದುಪಡಿ ತಂದರೂ ಅದನ್ನು ಎಂದೋ ತರಬೇಕಾಗಿತ್ತು. ಅನಿವಾರ್ಯವಾಗಿ ಈಗ ತಂದಿದ್ದಾರೆ. ಈ ತಿದ್ದುಪಡಿಗೆ ಈ ಮಾನ್ಯ ಸಭೆ ಅನುಮತಿ ಕೊಟ್ಟರೆ ಎಲ್ಲ ಏನು ಬದಲಾಯಿಸಬೇಕೋ ಅದನ್ನು ಮಾಡಲು ಸರಕಾರ ಸಿದ್ಧವಾಗಿದೆ.

ಇದರಲ್ಲಿ ಮುಖ್ಯವಾಗಿ ಎರಡು ತಿದ್ದುಪಡಿಗಳನ್ನು ಸರ್ಕಾರದವರು ತಂದಿದ್ದಾರೆ, ಮೊದಲನೆಯದು ಯಾವ ಯಾವ ಜೋನ್‌ನಲ್ಲಿ ಸಭೆಯ ಮುಂದೆ ಹೇಳಿದಹಾಗೆ ಏರುಪೇರು ಆಗಿದೆ ಅಲ್ಲಿ ಸರಿಪಡಿಸುವುದಕ್ಕೆ ಅವಕಾಶ ಕಲ್ಪಿಸುವುದು. ಹಾಗೆ ಸರಿಪಡಿಸುವಾಗ ಪ್ರತಿಯೊಬ್ಬ ಜಮೀನುದಾರನಿಗೂ ನೋಟಿಸು ಕೊಡುವುದು ಮಹತ್ತರವಾದುದು. ಆ ನೋಟಿಸನ್ನು ತೆಗೆದು ಕೊಂಡಮೇಲೆ ಸರಿಯಾಗಿದ್ದರೆ ಸುಮ್ಮನಿರಬಹುದು, ಇಲ್ಲದಿದ್ದರೆ ಡಿ. ಸಿ. ಮುಂದೆ ಅಪೀಲುಮಾಡ ಬಹುದು. ಅಲ್ಲಿಯೂ ತೀರ್ಮಾನ ಸಮಾಧಾನಕರವಾಗಿ ಆಗದಿದ್ದರೆ ಡಿವಿಜನಲ್ ಕಮೀಷನರ ಮುಂದೆ ಹೋಗಬಹುದು. ಅವರು ಫೈನಲ್ ಅಥಾರಿಟಿ. ಒಂದು ಶಂಕೆ ಕೆಲವರು ಹೇಳಿದರು. ಅದರಲ್ಲೂ ಗೋಪಾಲಗೌಡರು ಅಧಿಕಾರಿಗಳ ಕೈಲಿ ಇಷ್ಟೊಂದು ಅಧಿಕಾರವನ್ನು ಕೊಡುವುದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಿದರು ; ನ್ಯಾಯ ಸಿಕ್ಕದೆ ಇರಬಹುದು ಎಂದು ಹೇಳಿದರು. ನಾನಾದರೂ ಹೇಳುವುದು ಎಲ್ಲರನ್ನೂ ಸಂತಯ ದೃಷ್ಟಿಯಿಂದ ನೋಡುವುದಾದರೆ ಬಹುಶಃ ರಾಜ್ಯಭಾರ ಮಾಡು

(ಶ್ರೀ ಡಿ. ಎಂ. ಸಿದ್ದಯ್ಯ)

ಪುದೇ ಕಷ್ಟ ಮತ್ತು ಪ್ರಜಾಪ್ರಭುತ್ವದಲ್ಲ ಉಳಿಯುವುದೇ ಕಷ್ಟ. ಸರಕಾರಿ ಅಧಿಕಾರಿಗಳು ಸರಿಯಾದ ರೀತಿಯಲ್ಲ ವರ್ತಿಸುತ್ತಾರೆ ಎಂಬ ಭರವಸೆ ಇಡಬೇಕು. ನಾನು ರೆವೆನ್ಯೂ ಸಚಿವರಲ್ಲಿ ತಮ್ಮ ಮೂಲಕ ಅರಿಕೆ ಮಾಡುವುದು ಒಂದು ಸರ್ಕ್ಯುಲರ್ ಕಳಿಸಿ ವಿಮರ್ಶೆಮಾಡುವಾಗ, ಅಪೀಲು ಮಾಡುವಾಗ, ಸರಿಯಾದ ರೀತಿಯಲ್ಲ ನಡೆಯಬೇಕು. ಮತ್ತೊಂದು ಸಲಹೆ ಮಾಡುತ್ತೇನೆ. ಈ ರೀತಿಯಾಗಿ ಒಂದು ಆಕ್ಸಿನಲ್ಲ ತಿದ್ದುಪಡಿಯಾಗಿ ಜಾರಿಗೆ ಬಂದನಂತರ ಎಲ್ಲ ರೈತರಿಗೆ ಕಷ್ಟವಿದೆ, ಎಲ್ಲ ಅಪೀಲು ಹಾಕುತ್ತಿದ್ದಾರೆ ಎಂದು ನೋಡಿ ಅಂಥ ಕಾಲದಲ್ಲ ಮಾನ್ಯ ರೆವೆನ್ಯೂ ಸಚಿವರು ಇಡೀ ರಾಜ್ಯದಲ್ಲ ಪ್ರವಾಸಮಾಡಿ ಪ್ರತಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿಗೂ ಹೋಗಿ, ಅಲ್ಲ ಯಾವ ರೀತಿ ವಿಮರ್ಶೆಮಾಡುತ್ತಿದ್ದಾರೆ, ಅಧಿಕಾರಿಗಳು ಸರಿಯಾದ ರೀತಿಯಲ್ಲ ಅಹವಾಲು ಕೇಳುತ್ತಿದ್ದಾರೆಯೇ, ಸರಿಯಾಗಿ ಇತ್ಯರ್ಥಮಾಡುತ್ತಿದ್ದಾರೆಯೇ ಎಂದು ನೋಡಬೇಕು, ರಾಜ್ಯದ 19 ಜಿಲ್ಲೆಗಳಲ್ಲೂ ಪ್ರವಾಸಮಾಡಿ ಇದರ ವಿಷಯದಲ್ಲ ಒಂದು ರೀತಿಯ ಸೂಪರ್‌ವಿಷನ್ ವ್ಯವಸ್ಥೆಮಾಡಿ ಕೆಲಸ ಮಾಡಬೇಕು ಎಂದು ನಾನು ಈ ಸಭೆಯಲ್ಲ ಅವರಿಗೆ ಸೂಚಿಸುತ್ತೇನೆ :

ಮಾನ್ಯ ಚನ್ನಬಸಪ್ಪನವರು ಒಂದು ಪ್ರಶ್ನೆ ಹಾಕಿದ್ದಾರೆ. ಇದು ರೆಂಟೋ ಟ್ಯಾಕ್ಸೋ ಎಂದು. ರ್ಯಾಂಡ್ ರೆವೆನ್ಯೂ ಯಾವ ಆಧಾರದ ಮೇಲೆ ಹಾಕಿದ್ದಾರೆ ಎಂದು ಅವರು ಮೂಲಭೂತವಾದ ಪ್ರಶ್ನೆಯನ್ನೆತ್ತಿದ್ದಾರೆ. ಅವರು ಸ್ವತಃ ಜಮೀನುದಾರರು, ಅಗ್ರಿಕಲ್ಚರರ್ ಕಮಿಟಿ ಅಧ್ಯಕ್ಷರಾಗಿ ದೇಶದ ಎಲ್ಲಾ ಕಡೆ ಪ್ರವಾಸಮಾಡಿ ಅಪಾರ ಅನುಭವ ಪಡೆದಿರುವವರು. ಅವರ ಅನುಭವ ನಮಗೆ ಮುಂದಿಟ್ಟರು.

ಇದು ಎಷ್ಟು ಜಟಿಲವಾದ ಸಮಸ್ಯೆ ಎಂದರೆ ಈ ಒಂದು ಸರ್ವೆ ನಡೆಸಿದಂತಹ ಕೆಲವು ಅಧಿಕಾರಿಗಳು ಈ ಪ್ರಶ್ನೆಯ ವಿಷಯದಲ್ಲ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಸ್ವಲ್ಪ ಭಾಗಗಳನ್ನು ನಾನು ಇಲ್ಲ ಓದುವುದಕ್ಕೆ ಇಚ್ಛೆಪಡುತ್ತೇನೆ.

> " The land-tax is neither, new, nor is it peculiar to our land. It existed from time immemorial and every country in the world had levied this tax in some form or another. It only differed from one country to another in the method adopted and the quantum levied.
>
> Even in India, there has been no uniform system for the land-taxation. Every State or Province adopted different procedure, and all this because, as the Indian Taxation Enquiry Committee have opined 'the Indian systems are the result of a gradual process of evolution from indigenous practices and that they have been moulded into this present shape by British Officers, quite independently of one another to suit local circumstances in different areas'. The present land revenue system of Mysore was first developed during the administration of Mysore by a British Commission and the policy adopted in Mysore was considerably influenced by that adopted in Madras and Bombay, though the influence of the latter is predominant ".
>
> "...Thus with the development of communication evolution of Regulated Markets, better and quick transport facilities and the changing character of agricultural economy, groups formed four or five decades back are bound to become out of date, and necessarily have to be revised ."

ಕೊನೆಯಲ್ಲಿ ಈ ಲ್ಯಾಂಡ್ ರೆವಿನ್ಯೂವನ್ನು ಅಸೆಸ್ ಮಾಡಬೇಕಾದರೆ ಯಾವ ಯಾವ ಸೇಲಯಂಟ್ ಫೀಚರ್ಸನ್ನು ಪರಿಶೀಲನೆ ಮಾಡಬೇಕು ಎಂಬ ಮಾತನ್ನು ಅವರು ತಮ್ಮ 4-5 ಅಭಿಪ್ರಾಯಗಳಿಂದ ನೂಚನೆ ಮಾಡಿದ್ದಾರೆ:

"(*a*) The yield of the principal crops and their prices shall be the main factors in determining the pitch of assessment;

(*b*) The area of settlement operations should be selected not necessarily on the basis of a small administrative unit like a taluk. It should be a zone comprising of a taluk or taluks of the same district or of more than one district which are homogeneous in respect of physical configuration, climate and rainfall and nature of crops grown predominantly and grouping should be done on the basis of soil characteristics, seasonal conditions, nature of crops grown and prices;

(*c*) The standard rate determined for an acre of 16 annas soil should be one-sixteenth of the value of the average gross yield of principal crops determined in terms of the average prices of these crops prevalent for a period of 3 to 10 years.

(*d*) The period of guarantee should remain at 30 years.

ಹೀಗೆ ಕೆಲವು ಪ್ರಾಮುಖ್ಯವಾದ ವಿಷಯಗಳನ್ನು ಅವರು ಗಮನಪಲ್ಲಿಟ್ಟುಕೊಂಡು ಲ್ಯಾಂಡ್ ರೆವಿನ್ಯೂ ಹಾಕತಕ್ಕ ವಿಧಾನವನ್ನು ಸೂಚನೆ ಮಾಡಿವ್ವಾರೆ. ಇಷ್ಟಾದರೂ ಕೂಡ ಒಂದು ತೃಪ್ತಿಕರವಾದ ರೀತಿಯಲ್ಲಿ ಮಾಡುವುದು ಕಷ್ಟ ಅನ್ನತಕ್ಕ ವಾತನ್ನು ಇನ್ನೊಬ್ಬ ಮಾನ್ಯ ಸೆಟ್ಲ್‌ಮೆಂಟ್ ಆಫೀಸರು ಅವರು 'ಎ ಥಾಟ್ ಅನ್ ಲ್ಯಾಂಡ್ ರೆವಿನ್ಯೂ' ಅಂತ ಅನ್ನತಕ್ಕ ನಂದರ್ಭದಲ್ಲಿ ಅಪ್ಪಣೆ ಕೊಡಿಸುತ್ತಾ ಅವರು ಈ ಮಾತುಗಳಲ್ಲಿ ಹೇಳುತ್ತಾರೆ :

"Since times immemorial a certain proportion of the income from land is always shared by the Government. Why does Government claim this share? Is it because the Government thinks that the whole land belongs to it and claims share as any other landlord would do from his tenant? Or is it because the Government claim a share of the produce, as it claims from industry and profession? It is not easy to offer a straight answer."

ನಾನು ಮಾನ್ಯ ಚನ್ನಬಸಪ್ಪನವರಿಗೆ ತಮ್ಮ ಮೂಲಕ ಹೇಳುವುದಾದರೆ ಈ ಟ್ಯಾಕ್ಸ್, ಈ ರೆಂಟ್, ಈ ಲ್ಯಾಂಡ್ ಯಾವಿಗೆ ಸೇರಿದ್ದು ಅನ್ನುವುದು ಬ್ಯಹತ್ ಸಮಸ್ಯೆಯಾಗಿದೆ. ಬಹುಶಃ ಇಷ್ಟು ಸುಲಭದಲ್ಲಿ ಇತ್ಯರ್ಥ ಮಾಡುವುದಕ್ಕೆ ಸಾಧ್ಯವಿಲ್ಲ, ಬಹಳ ಕಷ್ಟವಾಗುತ್ತದೆ ಅನ್ನುವುದು ನಮ್ಮೆಲ್ಲರಿಗಿಂತಲೂ ಅವರಿಗೆ ಬಹಳ ಚೆನ್ನಾಗಿ ಗೊತ್ತಿದೆ ಎಂದು ನೂಚಿಸುವುದಕ್ಕೆ ಇಚ್ಛೈಪಡುತ್ತೇನೆ. ಮತ್ತು ಅವರು ಇನ್ನೂ ಕೆಲವು ಅಮೂಲ್ಯವಾದ ನಲಹೆಗಳನ್ನು ಕೊಡುತ್ತಾರೆ. ಅವರು ಈ ರೀತಿ ಹೇಳುತ್ತಾರೆ :

"The earliest type of the land revenue was assessed on the basis of area, but during recent times land revenue is levied on an annual revenue or income from land or on the capital value of land. In our State the levy of land revenue is on the basis of gross income from land. For accurate application of the land revenue on this basis, it is imperative to classify the land according to its fertility and the type of use. The classification of land done in the past has little relation to the condition existing now."

(ಶ್ರೀ ಡಿ. ಎಂ. ಸಿದ್ದಯ್ಯ)

"Conversion of one class of land to another is a continuous process and the correction of land records has to be done immediately thereafter to give effect to levy of land revenue rates for that class of land. The reclassification of land is complete in the Mysore and T.-Narsipur Taluks and the work is in progress in the Nanjangud Taluk.

3-30 P.M.

ಹೀಗೆ ರೀಕ್ಲಾಸಿಫಿಕೇಷನ್ ವಿಚಾರ ಹೇಳುತ್ತಾ ಮೈಸೂರು ಮತ್ತು ಟಿ.ನರಸೀಪುರ ಈ ಸ್ಥಳಗಳ ಬಗ್ಗೆ ಹೇಳಿಕೊಂಡು ಹೋಗುತ್ತಾ ಅವರು ಇನ್ನೂ ಒಂದು ಮಾತನ್ನೂ ಏನು ಹೇಳಿದ್ದಾರೆ ಎಂದರೆ ಈ ದಿವನ ಒಬ್ಬ ಮನುಷ್ಯ ಒಂದು ವ್ಯಾಪಾರದಲ್ಲಿ 3 ಸಾವಿರ ಬಂಡವಾಳವನ್ನು ಹಾಕಿ ವ್ಯವಹಾರಮಾಡತಕ್ಕವನಿಗೂ ಮತ್ತು ಅದೇ 3 ಸಾವಿರ ರೂಪಾಯಿಗಳನ್ನು ಭೂಮಿಯಮೇಲೆ ಹಾಕಿ ಬೇಸಾಯ ಮಾಡತಕ್ಕವನಿಗೂ ಯಾವ ರೀತಿ ಹೋಲಿಕೆಮಾಡಿ ಹೇಳಿದ್ದಾರೆಂದರೆ:

"If a man with Rs. 3,000-00 starts a business other than agriculture, he need not have to pay tax to the Government, but if a man invests the same Rs. 3,000 on lands, he has to pay land revenue and there is no *quid pro quo*. Further there is no equity or equality, and it has no relation to paying capacity of the individuals. A man owning one acre of land has to pay the same rate of assessment as also a man with hundred acres of land. To the former, it would be a burden and to the latter it is not. So both do not feel the burden of assessment equally."

ಈ ಒಂದು ದೃಷ್ಟಿಯಿಂದ ನಾನು ಭೂಕಂದಾಯದ ವಿಚಾರದಲ್ಲಿ ಮಾತನಾಡತಕ್ಕ ಸಮಯದಲ್ಲಿ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಈಗ ತಂದಿರತಕ್ಕ ತಿದ್ದುಪಡಿ ಏನಿದೆ ಇದನ್ನು ಪಾಸ್ ಮಾಡಿದಮೇಲೆ ಎಲ್ಲೆಲ್ಲಿ ಭೂಕಂದಾಯ ಹೆಚ್ಚಾಗಿದೆ ಎಲ್ಲೆಲ್ಲಿ ರೈತರಿಗೆ ಇದರಿಂದ ಒಂದು ಹೆಚ್ಚಿನ ತೊಂದರೆಯಾಗಿದೆ ಎಂಬುದನ್ನು ಪರಿಶೀಲನೆ ಮಾಡಿ ಅಲ್ಲೆಲ್ಲ ಆ ಕಂದಾಯವನ್ನು ಕಡಮೆ ಮಾಡಬೇಕು. ನಾನು ಸರ್ಕಾರಕ್ಕೆ ಮತ್ತೊಂದು ಸಲಹೆ ಮಾಡುವುದೇನೆಂದರೆ ಯಾರು ಈ ದಿವನ 5 ಎಕರೆ ಮತ್ತು ಅದಕ್ಕಿಂತ ಕೆಳಪಟ್ಟು ಖುಷ್ಕಿ ಭೂಮಿಯನ್ನು ಇಟ್ಟುಕೊಂಡಿದ್ದಾರೋ ಅಂಥವರಿಗೆಲ್ಲಾ ಈ ಭೂಕಂದಾಯವನ್ನು ಸಂಪೂರ್ಣವಾಗಿ ಮನ್ನಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮಾನ್ಯ ಶ್ರೀ ಗೋಪಾಲಗೌಡರ ವಿಷಯದಲ್ಲಿ ನನಗೆ ಬಹಳ ಗೌರವವಿದೆ ಅವರು ಒಬ್ಬ ಅಪ್ಪಟ ಸಮತಾವಾದಿಗಳು. ಅವರಿಗೆ ರೈತರ ವಿಷಯದಲ್ಲಿ ಬಹಳ ಅನುಕಂಪವಿದೆ. ಆದರೆ ನಮ್ಮ ಪಕ್ಷದ ನಿಲುವೂ ಕೂಡ ಅದೇ ಆಗಿದೆ. ಆದರೆ ನಾವು ಇಲ್ಲಿಯವರೆಗೂ ಈ ಸಮತಾವಾದ ಸಮಾಜವನ್ನು ಕಟ್ಟುವುದರಲ್ಲಿ ದುಷ್ಟಶಕ್ತಿಗಳ ಹಿಡಿತಕ್ಕೆ ಸಿಕ್ಕಿ ನಾವು ಇದರ ಗುರಿ ಸಾಧನೆಯಲ್ಲಿ ನಿಧಾನವಾಗಿರಬಹುದು, ಇಲ್ಲವೇ ಎಡವಿರಬಹುದು, ಮುಗ್ಗರಿಸಿರಬಹುದು. ಆದರೆ ಅಂಡಜನ್ಮವೆಲ್ಲಾ ನಾವೀಗ ಬಹಳ ಜಾಗರೂಕತೆಯಿಂದ ನಡೆಸಿಕೊಂಡು ಮುಂದೆ ಬರುತ್ತಿದ್ದೇವೆ. ಅದು ಇಲ್ಲಿಯವರೆಗೂ ಯಶಶ್ವಿಯಾಗದಿದ್ದರ ಅದಕ್ಕೆ ಕಾರಣಗಳು ಹಲವಾರಿವೆ. ನಾವು ಇನ್ನಾದರೂ ಈ ನಮ್ಮ ತಪ್ಪು ಹೆಜ್ಜೆಯನ್ನು ಸರಿಪಡಿಸಿಕೊಂಡು ಸರಿಯಾದ ಪಥದಲ್ಲಿ ಮುನ್ನುಗದಿದ್ದರೆ ರಾಜ್ಯ ಮುಂದಕ್ಕೆ ಬರಲು ಸಾಧ್ಯವಿಲ್ಲ; ರಾಜ್ಯದಲ್ಲಿರತಕ್ಕ ಅಜ್ಞಾನ ಹಾಗೂ ಬಡತನಗಳನ್ನೂ ನೀಗುವುದಕ್ಕಾಗುವುದಿಲ್ಲ. ಈ ದಿವನ ಯಾರು ಒಂದು ಎಕರೆ ಭೂಮಿಯನ್ನು ಇಟ್ಟುಕೊಂಡಿದ್ದಾರೋ ಅಂಥವರಿಗೆ ಈ ಭೂಕಂದಾಯ ಒಂದು ಹೊರೆಯಾಗಿದೆ. ಆದರೆ ಅವೇ ಭೂಮಿಯನ್ನು 100 ಎಕರೆಗಳ ಗಟ್ಟಲೆ ಯಾರು ಇಟ್ಟುಕೊಂಡಿದ್ದಾರೋ ಅಂಥವರಿಗೆ ಇದು ಬಹಳ ಲಾಭದಾಯಕವಾಗಿದೆ. ಆದ್ದರಿಂದ ನಾನು ಈ ದಿವನ ಸರ್ಕಾರದವರಿಗೆ ಅದಕೆ ತೋಟ ಮತ್ತು ಬಾಳೆ ತೋಟದಂತಹ ಆದಾಯಬರತಕ್ಕ ಭೂಮಾಲೀಕರಿಗೆ ಕಂದಾಯ ಮಜಾ ಮಾಡಿ ಎಂದು ಹೇಳುತ್ತಿಲ್ಲ. ಇವತ್ತು

ಯಾರು ಕೇವಲ 5 ಎಕರೆ ಅಥವಾ ಅದಕ್ಕೂ ಕೆಳಪಟ್ಟು ಖುಷ್ಕಿ ಭೂಮಿಯನ್ನು ಇಟ್ಟುಕೊಂಡಿದ್ದಾರೋ ಯಾರು ಕೇವಲ ಮಳೆ ಆಧಾರದಿಂದಲೇ ಬೆಳೆಯನ್ನು ತೆಗೆಯುತ್ತಿದ್ದಾರೋ ಅಂಥವರಿಗೆ ಕಂದಾಯವನ್ನು ವಜಾಮಾಡಿ ಎಂದು ಕೇಳುತ್ತಿದ್ದೇನೆ. ಏಕೆಂದರೆ ಅಂತಹ ಭೂಮಿಯಲ್ಲಿ ಮಳೆ ಬಂದರೆ ಬೆಳೆ ಆಗುತ್ತೆ ಇಲ್ಲದಿದ್ದರೆ ಇಲ್ಲ. ಅಥವಾದ್ದರಲ್ಲಿ ಅದನ್ನೇ ನಂಬಿರುವ ಆ ರೈತನು ತನ್ನ ಹೆಂಡತಿ ಮಕ್ಕಳನ್ನು ಸಾಕುವುದಾದರೂ ಹೇಗೆ? ಅವನ ವರ್ಷದ ಜೀವನಕ್ಕೇನು ಗತಿ! ಅವರು ಬಟ್ಟೆಬರೆಗಳಿಗೇನು ಮಾಡಬೇಕು? ಇಷ್ಟೆಲ್ಲಾ ತೊಂದರೆಗಳಿರುವುದರಿಂದ ಅವರಿಗೆ ಮಾತ್ರ ಕಂದಾಯವನ್ನು ರದ್ದುಮಾಡಿ ಎಂದು ಹೇಳುತ್ತಿದ್ದೇನೆ. ಇದನ್ನು ಸರ್ಕಾರದವರು ಬಹಳ ಸಹಾನುಭೂತಿಯಿಂದ ಪರಿಶೀಲನೆಮಾಡುತ್ತಾರೆಂದು ಭಾವಿಸುತ್ತೇನೆ. ನಮ್ಮ ಪಕ್ಷದ ತತ್ವಗಳ ದೃಷ್ಟಿಕೋನವೂ ಸಹಾ ಒಂದೇ ಆಗಿರುವುದರಿಂದ ಸರ್ಕಾರದವರು ಬಹಳ ಔದಾರ್ಯದಿಂದ ವರ್ತಿಸುತ್ತಾರೆಂದು ನಾನು ಭಾವಿಸಿದ್ದೇನೆ. ಈ ವಿಚಾರದಲ್ಲಿ ಒಂದು ರಿಪೋರ್ಟನ್ನು ಮಾಡಿದ್ದಾರೆ. ಅದನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದಾರೆ. ಹಾಗೆ ಪರಿಶೀಲನೆ ಮಾಡುತ್ತಾ ಅವರು ಒಂದು ಮಾತನ್ನು ಹೇಳಿದ್ದಾರೆ:—

> "If the land revenue is regarded as a tax *in rem*, that is, levied without regard to personal characteristics of the payer, then it is not at all necessary that the land revenue should toe the canons of taxation. In fact, the land revenue, is a share claimed in the produce as any other landlord would do. It is fixed for a period of thirty years like any other contract of rent payment between the landlord and the tenant. All lands have to pay the land revenue. As such I am wont to call the land revenue as a rent rather than a tax payable to the Government."

ನಾನಾಗಲೆ ಹೇಳಿದಂತೆ ಇದು ಒಂದು ಬಹಳ ಜಠಿಲವಾದಂಥ ವಿಷಯ. ಇದನ್ನು ಪ್ರಾಜ್ಞರಾದಂಥ ಜನರು ಹಾಗೂ ಶ್ರೀಮಾನ್ ಚನ್ನಬಸಪ್ಪನವರು ತುಲನಾತ್ಮಕದೃಷ್ಟಿಯಿಂದ ಪರಿಶೀಲನೆ ಮಾಡಿ ಇದನ್ನು ತೀರ್ಮಾನ ಮಾಡಬೇಕಾಗಿದೆ. ಆದ್ದರಿಂದ ನಾವೀಗ ಇದರ ಬಗ್ಗೆ ಅಷ್ಟು ಹೆಚ್ಚಿಗೆ ತಲೆ ಕೆಡಿಸಿಕೊಳ್ಳಬೇಕಾದ್ದಿಲ್ಲ. ಸಧ್ಯ ನಭೆಯು ಮುಂದೆ ಬಂದಿರತಕ್ಕ ತಿದ್ದುಪಡಿಯ ವಿಚಾರದಲ್ಲಿ ಸರ್ಕಾರದವರು ಔದಾರ್ಯದಿಂದ ವರ್ತಿಸಿ ರೈತರಿಗೆ ತೊಂದರೆಯಾಗದಂತೆ ಇದನ್ನು ಜಾರಿಗೆ ತರತಕ್ಕ ಮಾರ್ಗದಲ್ಲಿ ಈ ಮಾನ್ಯ ನಭೆಗೆ ಒಂದು ಮರ್ಯಾದೆ ಹಾಗೂ ಗೌರವ ಬರತಕ್ಕ ರೀತಿಯಲ್ಲಿ ಇದನ್ನು ಪಾಸ್‌ಮಾಡಬೇಕಾಗಿದೆ. ಇನ್ನು ರೈತರಮೇಲೆ ಬಾಕಿ ನಿಂತಿರತಕ್ಕ ಕಂದಾಯ ಮತ್ತು ಸಂಘಾರ್ಜ್ ಇವೆಲ್ಲಾ 1965 ರಿಂದಲೂ ಹಾಗೇ ನಿಂತು ಬಂದಿವೆ. ಎಮರ್ಜೆನ್ಸಿ ಇದ್ದಕಾರಣ ಇವನ್ನು ಹಾಗೇ ಮುಲ್ತಿ ಇಡಲಾಯಿತು. ಆ ಬಾಕಿ ಹಣವನ್ನೆಲ್ಲಾ ಒಂದೇ ಗಂಟಿನಲ್ಲಿ ಕೊಡಬೇಕೆಂದು ಅಧಿಕಾರಿಗಳು ಖಡ್ತಾಯ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಸರ್ಕಾರದವರು ದಯವಿಟ್ಟು ಅದನ್ನು ಕಂತುಗಳ ರೂಪದಲ್ಲಿ ಬಾಕಿಯನ್ನು ವಸೂಲ್ಮಾಡುವಂತೆ ಅಧಿಕಾರಿಗಳಿಗೆ ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರೂಲ್ಸಿನಲ್ಲಿ ಒಂದೇ ಗಂಟಿನಲ್ಲಿ ವಸೂಲ್ಮಾಡಬೇಕೆಂದು ಹೇಳಿರಬಹುದು. ಸರ್ಕಾರದವರು ಈ ಪ್ರಶ್ನೆಯನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕಾದ್ದು ಅತ್ಯವಶ್ಯಕ. ರೈತನು ತಾನು ಬೆಳೆದಿರುವ ದವಸವನ್ನೆಲ್ಲಾ ಮಾರಾಟ ಮಾಡಿದರೂ ಆತ ಆ ಬಾಕಿಯನ್ನು ಪೂರ್ತಿಯಾಗಿ ಒಂದು ಗಂಟಿನಲ್ಲಿ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಮಾನ್ಯ ರಾಜಸ್ವಮಂತ್ರಿಗಳು ಈ ಬಾಕಿ ಕಂದಾಯದ ಮೊಬಲಗನ್ನೆಲ್ಲಾ ಕಂತುಗಳಮೇಲೆ ಕೊಡುವುದಕ್ಕೆ ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಪಕ್ಷಗಳ ಪ್ರಶ್ನೆ ಬರುವುದಿಲ್ಲ. ಇದನ್ನು ಪಕ್ಷಾತೀತವಾಗಿ ಪರಿಶೀಲನೆ ಮಾಡಬೇಕಾಗಿದೆ. ಸಾಧ್ಯವಾದ ಮಟ್ಟಿಗೂ ರೈತನಮೇಲೆ ಬೀಳತಕ್ಕ ಹೊರೆಯನ್ನು ತಗ್ಗಿಸಬೇಕು. ಆದರೆ ಈ ಕಂದಾಯದ ಬಾಬಿನಿಂದ ಬರತಕ್ಕ ಹಣವನ್ನು ಸರ್ಕಾರದವರು ಆ ಸ್ಥಳೀಯ ಸಂಸ್ಥೆಗಳಿಗೆ ಅಂದರೆ ತಾಲ್ಲೂಕ್ ಅಭಿವೃದ್ಧಿ ಬೋರ್ಡುಗಳಿಗೆ, ಪಂಚಾಯತಿಗಳಿಗೆ ಕೊಡುತ್ತಿರುವ ಕಾರಣ ಇದರಿಂದ ಬರತಕ್ಕ ಒಂದೊಂದು ಪುಡಿಗಾಸನ್ನೂ ಕೂಡ ಬಹಳ ಎಚ್ಚರಿಕೆಯಿಂದ ಶೇಖರಿಸಿಡಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ನಾನು ಮಾಡಿಕೊಂಡಿರತಕ್ಕ ಪ್ರಾರ್ಥನೆಯನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತಾರೆಂದು ನಂಬಿ ಇಷ್ಟಕ್ಕೆ ವಿರಾಮತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri H. M. CHANNABASAPPA.—Mr. Speaker, Sir.....

ಶ್ರೀಮತಿ ನಾಗಮ್ಮ (ಕಲಮಲ).—ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಾರಂಭಮಾಡುತ್ತೇನೆ.

ಈ ಭೂಸುಧಾರಣೆ ತಿದ್ದುಪಡಿ ಮಸೂದೆಯ ಬಗ್ಗೆ ಸುಮಾರು ನಿನ್ನೆ, ಮೊನ್ನೆಯಿಂದಲೂ ಕೂಡ ಈ ಸಭೆಯಲ್ಲಿ ಚರ್ಚೆಯಾಗಿದೆ. ಸರ್ಕಾರದ ಪರ ನಾಲ್ಕನಾಡಿದಂಥ ಸದಸ್ಯರು ಮತ್ತೆ ಮುಂಜೆ ಮಾತನಾಡತಕ್ಕಂಥ ಮಂತ್ರಿಗಳು ಇಬ್ಬರೂ ಕೂಡ ಏನು ಹೇಳುತ್ತಾರೆಂಬುದನ್ನು ನಾವು ನಿರೀಕ್ಷಣೆ ಮಾಡಬಹುದು. ಏನೋ ಇವು ಒಂದು ನಣ್ಣ ವಿಲ್ಲು, ಇದು ತಾವಾಗಿಯೇ ಕೇಳಿದ್ದು, ಸರ್ಕಾರ ಆ ಅಧಿಕಾರ ತೆಗೆದುಕೊಂಡು ನಮ್ಮ ಕಷ್ಟವನ್ನು ಪರಿಹಾರಮಾಡುವುದಕ್ಕೋಸ್ಕರ ಹೊರಟಿರುವುದು ಎಂದು ಹೇಳಬಹುದು. ಇಂತಹ ಸ್ವಾಗತಾರ್ಹವಾದ ಮಸೂದೆಯಲ್ಲಿ ವಿರೋಧಾಭಾಸವಾದುದು ಏನೂ ಇಲ್ಲವೆಂದು ನನ್ನ ಮಿತ್ರರಾದಂಥ ಮಾನ್ಯ ಶ್ರೀ ಕಾಜಲಗಿಯವರು ನನ್ನನ್ನು ಮೊದಲನುತ್ತಿದ್ದಾರೆ. ಆದರೆ ಈ ವಿಷಯ ತಾವು ತಿಳಿದುಕೊಂಡಿರುವಷ್ಟು ಸಣ್ಣದಲ್ಲ. ಇದರ ವ್ಯಾಪಕ ಬಹಳ ಮಹತ್ವದ್ದು ಇದೆ. ಸುಮಾರು ಕಲವಾರು ವರ್ಷಗಳಿಂದಲೂ ಈ ವಿಷಯದಲ್ಲಿ ಬಹಳ ತೀವ್ರವಾಗಿ ಆರೋಚನೆ ಮಾಡುತ್ತಿದ್ದೇವೆ. ಈ ಭೂಕಂದಾಯದ ವಿಷಯದಲ್ಲಿ ಚರ್ಚೆ ಪ್ರಾರಂಭವಾದುದು ಇವತ್ತು ಅಲ್ಲ, ಅನೇಕ ವರ್ಷಗಳ ಹಿಂದೆ ಇದು ಪ್ರಾರಂಭವಾಗಿ ಕೊನೆಗೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೂ ಕೂಡ ಬಹಳಮಟ್ಟಿಗೆ ವಿಮರ್ಶೆಯಾಗಿದೆ. 1965ನೇ ಇಸವಿಯಲ್ಲಿ ನಮ್ಮ ಸರ್ಕಾರ ಇದರ ಪ್ರಾಯೋಚನೆಮಾಡಿ ಭೂಮಿಯ ಗ್ರಾಸ್ ಪ್ರೊಡ್ಯೂಸ್‌ನಲ್ಲಿ ಸೇಕಡ (½ಕ್ಕೆ ಬದರಾಗಿ ಸೇಕಡ 4ರಂತೆ ತೆಗೆದುಕೊಂಡು ಸುಧಾರಣೆ ಮಾಡಬೇಕೆಂಬುದಾಗಿ ತೀರ್ಮಾನ ತೆಗೆದುಕೊಂಡು, ಅದಾದಮೇಲೆ ಒಂದು ಹೇಳಿಕೆ ಕೊಟ್ಟು ಬಹಳ ಮಟ್ಟಿಗೆ ರೈತರಿಗೆ ಈ ಕಂದಾಯ ಹೊರೆ ಕಡಿಮೆಮಾಡುತ್ತೇವೆಂದು ಹೇಳಿದರು. ಅಲ್ಲಿಂದ ಇವರು ವಿಮರ್ಶೆ ಪ್ರಾರಂಭ ಮಾಡಿದ್ದಾರೆ. ಇವರಿಗೆ ನಿರ್ದಿಷ್ಟ ಅಭಿಪ್ರಾಯವಿಲ್ಲ, ಧೋರಣೆ ಇಲ್ಲ. ಅವೆಲ್ಲವೂ ಗಾಳಿಗೆ ಹೋದ ಹಾಗೆ ತೂರಿಕೊಂಡು ಹೋಗುತ್ತಿವೆ. ಅಂದಮೇಲೆ ಸರ್ಕಾರ ಸರ್ಕಾರವಾಗಿ ಕೆಲಸ ಮಾಡುತ್ತಾ ಇಲ್ಲ. ತನ್ನ ನಿರ್ದಿಷ್ಟ ಧೋರಣೆ ಏನೆಂಬುದನ್ನು ಜನತೆಯ ಮುಂದೆ ಇಟ್ಟಿಲ್ಲ. ಇದುವುದಕ್ಕೆ ಹಿಂಜರಿಯುತ್ತಾ ಇದ್ದಾರೆ. ಇವರದು ಕಾಲಕಾಲಕ್ಕೆ ಬಂದಂತೆ, ಬಾಯಿಗೆ ಬಂದಂತೆ ಭಾಷಣಗಳನ್ನು ಮಾಡುವ ಧೋರಣೆಯೇ ಏನಾ, ಭೂಸ್ವಾಮ್ಯ ಪದ್ಧತಿಯಲ್ಲಿ, ಭೂಸುಧಾರಣೆ ಪದ್ಧತಿಯಲ್ಲಿ, ಭೂಉಪಯೋಗ ಪ್ರಶ್ನೆಯಲ್ಲಿ ಇವರಿಗೆ ಏನಾದರೂ ಒಂದು ನಿರ್ದಿಷ್ಟವಾದ ಅಭಿಪ್ರಾಯ ಇದೆಯೇ? ತಾ. 3-2-1967ರಲ್ಲಿ ಮುಖ್ಯ ಮಂತ್ರಿಗಳು ಈ ದೇಶದ ಮುಂದೆ ಚುನಾವಣೆ ಪ್ರಚಾರ ಮಾಡಿಕೊಂಡು ಹೋದರು. ಇವರು ಹೊಳೆನರಸೀಪುರದಲ್ಲಿ ತಾ 3-2-1967 ರಲ್ಲಿ ಚುನಾವಣೆ ಪ್ರಚಾರ ಮಾಡಿದಾಗ, ಇದು ಹಳೆಯ ಕಂದಾಯ ಪದ್ಧತಿ, ಈ ಭೂಸ್ವಾಮ್ಯ ಪದ್ಧತಿಯನ್ನು ರದ್ದು ಮಾಡುತ್ತೇವೆಂದು ಇಡೀ ದೇಶದ ರೈತರ ಮುಂದೆ ಘೋಷಣೆ ಮಾಡಿದರು. ಇವರು ಚುನಾವಣೆಯಾಗಿ ಇಲ್ಲಿಗೆ ಬಂದಮೇಲೆ ನಮ್ಮ ಸರ್ಕಾರ ಯಾವಾಗಲೂ ಕೂಡ ಭೂ ಕಂದಾಯ ವಜಾ ಮಾಡುತ್ತೇವೆಂದು ಹೇಳಲಿಲ್ಲ. ತಾ|| 24-3-1967ರಲ್ಲಿ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಈ ಅಬಾಲಿಷನ್ ಆಫ್ ರ್ಯಾಂಡ್ ರೆವಿನ್ಯೂ ಬಗ್ಗೆ ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ. "I am glad to inform this House that the Government has taken a decision to abolish land revenue in its present form." ಅಪೇಲೂ ನೀವು ಆಡಿದಂಥ ಮಾತನ್ನು ಉಳಿಸಿಕೊಳ್ಳಲಿಲ್ಲ. ಕಾಲಕ್ಕೆ ಬಂದಹಾಗೆ ಕುಣಿಯುವುದು ನಮಗೆ ಸರಿಹೋಗುವುದಿಲ್ಲ. ಸರ್ಕಾರಕ್ಕೂ ಅದು ಸಲ್ಲುವುದಿಲ್ಲ. ಇನ್ನೊಂದುಸಾರಿ ಕಂದಾಯ ವಜಾ ಮಾಡುವ ವಿಷಯದಲ್ಲಿ ತೀರ್ಮಾನ ಕೊಡುವುದಕ್ಕೋಸ್ಕರ ಒಂದು ಕಮಿಟಿ ನಿರ್ಮಾಣ ಮಾಡಿದ್ದರು. ಆ ಕಮಿಟಿಯವರ ಕೆಲಸ Inviting suggestions regarding land revenue abolition. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು 1966ರಲ್ಲಿ ಬಡ್ಜೆಟ್ ಅಧಿವೇಶನ ಕಾಲದಲ್ಲಿ ಉತ್ತರ ಕೊಡುವಾಗ್ಗೆ, ಈ ಭೂಕಂದಾಯವನ್ನು ವಜಾ ಮಾಡುವ ವಿಷಯದಲ್ಲಿ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ ಎಂದು ಹೇಳಿದರು. ಜನತೆಯ ಅಭಿಪ್ರಾಯ, ಈ ಸಭೆಯ ಅಭಿಪ್ರಾಯ, ಅಧಿಕಾರಿಗಳ ಸಲಹೆ ಮತ್ತು ನಮ್ಮ ಬೆಂಬಲಿಗರ ಅಭಿಪ್ರಾಯ ಎಲ್ಲವನ್ನೂ ತೆಗೆದುಕೊಂಡು 1967ರಲ್ಲಿ ನೀವು ಘಂಟಾಘೋಷವಾಗಿ ನಿಮ್ಮ ತೀರ್ಮಾನವನ್ನು ಹೇಳಿದ್ದೀರಿ. ಈ ತೀರ್ಮಾನವನ್ನು ತೆಗೆದುಕೊಳ್ಳಬೇಕಾದರೆ, ಬೇಜವಾಬ್ದಾರಿಯಿಂದ ತೆಗೆದುಕೊಳ್ಳಲಿಲ್ಲ. ಅತುರಾತುರವಾಗಿ ತೆಗೆದುಕೊಳ್ಳಲಿಲ್ಲವೆಂದು ಹೇಳುತ್ತಾರೆ. ಬಹಳ ಕೂಲಂಕಷವಾಗಿ ಚರ್ಚೆಮಾಡಿ ಇಂತಹ ತೀರ್ಮಾನವನ್ನು

ತೆಗೆದುಕೊಂಡ ಕೆಲವೇ ದಿವಸಗಳಲ್ಲಿ, ನಾವು ಭೂಕಂದಾಯ ವಜಾ ಮಾಡಲಿಕ್ಕಾಗುವುದಿಲ್ಲವೆಂದು ಹೇಳಿದರೆ ಇದು ಸರ್ಕಾರವೋ ಅಥವಾ ಪಾರ್ಕೆಟ್ಟಿನಲ್ಲಿ ನಾನೂ ನೀವೂ ಮಾತನಾಡತಕ್ಕ ವಿಷಯವೋ ತಾವು ಹೇಳೋಣವಾಗಲಿ. ಸರ್ಕಾರ ಅಂದಮೇಲೆ ಅದಕ್ಕೆ ತಕ್ಕಂತೆ ಕೆಲವು ಸ್ಟಾಂಡರ್ಡ್‌ಗಳು ಇವೆ. ಆಡಿದ ಮಾತು, ಕೊಟ್ಟ ನಂಬಿಕೆ ಹಾಗೂ ವಚನಗಳನ್ನು ಉಳಿಸಿಕೊಳ್ಳತಕ್ಕ ಅವಶ್ಯಕತೆ ಇದೆ. ಸಮಯ ಬಂದಂತೆ ಕಾಣಿಯುವುದಕ್ಕೆ ಸರ್ಕಾರ ಎಂದು ಹೇಳುವುದಿಲ್ಲ. ಈ ತೀರ್ಮಾನ ತೆಗೆದು ಕೊಳ್ಳುವುದಕ್ಕೆ ಮುಂಚೆ ಇತೀ ದೇಶದ ಪ್ರತಿನಿಧಿಗಳನ್ನು ಕರೆಸಿ, ಕೇಳಿ ವಿಚಾರಮಾಡಿ, ರಾತ್ರೋ ರಾತ್ರಿ ಬೆಳಕು ಹರಿಯುವುದರೊಳಗೆ ಕಂದಾಯವನ್ನು ವಜಾ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ, ನಮಗೆ ಏನು ಶಿಕ್ಷೆ ವಿಧಿಸಬೇಕು? ಶಿಕ್ಷೆ ಅಂದರೆ ಕಾರಾಗೃಹ ಶಿಕ್ಷೆಯಲ್ಲ. ನೀವೇ ಹೇಳಿ, ಯಾವ ತರಹ ಶಿಕ್ಷೆ ಬೇಕೆಂದು. ಅದನ್ನೇ ಕೊಡೋಣ.

ಶ್ರೀ ಎಚ್. ವಿ. ಕೌಜಲಗಿ (ಕಂದಾಯ ಶಾಖೆಯ ಮಂತ್ರಿಗಳು).—ಈಗ ಎಲೆಕ್ಷನ್ ಬಂತು. ಅಲ್ಲೇ ಶಿಕ್ಷೆ ಏನೆಂಬುದು ಗೊತ್ತಾಗುತ್ತದೆ.

Sri H. M. CHANNABASAPPA.— Democracy has both bright and dark aspects and I do not want to go into the large area covered by the dark aspects. I would only say that a good cause, a just cause and a cause by which I and the Revenue Minister swear is going to be defeated today or tomorrow by this brute majority. This is one of the dark aspects of democracy. ಹಿಂದೆ ರೀ ಸೆಟ್ಲ್‌ಮೆಂಟ್ ಮಾನೂದೆ ಈ ಸಭೆಯ ಮುಂದೆ ಬಂದಾಗ ಏತಕ್ಕೆ ಒಪ್ಪಿಗೆಯನ್ನುಕೊಟ್ಟಿರಿ?

Sri D. M. SIDDAIAH.—On the assurance given.

Sri H. M. CHANNABASAPPA.—We have lived enough by the assurances of your friends. Assurances given by a Government which has no value for its assurances and which has ceased to be Government, which has no semblance of Government, which cannot be called Government and which has not got any respect for its own assurances, cannot be accepted by anybody. This is a Government which has no respect for its own words and still you have got the courage to call it Government. ಈ ಭೂಕಂದಾಯದ ಬಗ್ಗೆ ಒಂದು ನಿರ್ದಿಷ್ಟವಾದ ಧೋರಣೆ ಇಲ್ಲ ಎಂಬುದು ಗೊತ್ತಾಗುತ್ತದೆ. ಕಂದಾಯದ ವಿಷಯದಲ್ಲಿ ಬಾಯಿಗೆ ಬಂದಹಾಗೆ ಹೇಳುವುದು ಸರಿಯಲ್ಲ. ಯೋಗ್ಯವಲ್ಲ, ಗೌರವವಲ್ಲ. ಇವೊತ್ತೂ ಕೂಡ ಸರ್ಕಾರದವರು ತಮ್ಮ ಭಾಷಣವನ್ನು ಉಳಿಸಿ ಕೊಳ್ಳಬೇಕಾದರೆ ಆಡಿದ ಮಾತನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಭೂ ಕಂದಾಯದ ವಿಷಯದಲ್ಲಿ, ಭೂಸ್ಯಾಮ್ಯ ವಿಷಯದಲ್ಲಿ ಒಂದು ಕ್ಲಿಯರ್ ಕಟ್ಟಾದ ಅಭಿಪ್ರಾಯ ನಿಮಗೆ ಇಲ್ಲ. ಈ ರೀತಿ ಮಾಡಬೇಕು, ನಿಮ್ಮ ಗುರಿ ಇಂಥಾದ್ದು, ನಿಮ್ಮ ಧೋರಣೆ ಇಂಥಾದ್ದು ಎಂಬುದು ನಿಮ್ಮ ಮನಸ್ಸಿನಲ್ಲಿ ಇಲ್ಲದೇ ನೀವೇನೂ ಮಾಡುತ್ತೀರಿ? ನೀವು ಕೋಟಿ ಕೋಟಿ ಜನರ ಜೀವನದ ಮೇಲೆ ನರ್ತನ ಮಾಡುತ್ತಿದ್ದೀರಿ. ಇದು ಹೆಚ್ಚು ಕಾಲ ನಡೆಯುವುದಿಲ್ಲ. ಇವೊತ್ತು ನಿಮಗೆ ಸಲಹೆ ಮಾಡತಕ್ಕ ಸರ್ಕಾರಿ ಅಧಿಕಾರಿಗಳು ಮತ್ತು ನೀವು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ. ರಾಜ್ಯದ ಆಡಳಿತವನ್ನು ನಡೆಸುವುದಕ್ಕೆ ನಿಮಗೆ ಎಲ್ಲಾ ಸೌಕರ್ಯಗಳನ್ನು ಕೊಟ್ಟಿದೆ. ಸಂಬಳ ಸಾರಿಗೆಗಳನ್ನು ಕೊಡುತ್ತಿದೆ. ದೊಡ್ಡ ದೊಡ್ಡ ಉನ್ನತ ಅಧಿಕಾರಿಗಳನ್ನು ಸಹಾಯಕ್ಕೆ ಕೊಟ್ಟಿದೆ. ನೀವು ಏನು ಮಾಡುತ್ತಿದ್ದೀರಿ, ರೀಸೆಟ್ಲ್‌ಮೆಂಟಿನಲ್ಲಿ ತುಂಬಾ ಅನ್ಯಾಯ ವಾಗಿದೆ ಎನ್ನುವುದನ್ನು ನೀವು ಒಪ್ಪಿಕೊಂಡಿದ್ದೀರಿ, ಅದಕ್ಕೋಸ್ಕರ ಈ ತಿದ್ದುಪಡಿ ಮಾನೂದೆಯನ್ನು ಈ ಸಭೆಯಮುಂದಿಟ್ಟು ಇದಕ್ಕೆ ಈ ಸಭೆಯ ಒಪ್ಪಿಗೆಯನ್ನು ಪಡೆಯಬೇಕು ಎಂದು ಹೇಳುವಾಗ ಇದರಲ್ಲಿ ದೋಷಪೂರಿತ ಅನ್ಯಾಯಗಳು ಆಗಿವೆ, ಆದ್ದರಿಂದ ಇದನ್ನು ಈ ಸಭೆಯಮುಂದೆ ಇಟ್ಟಿದ್ದೇವೆ, ಇದನ್ನು ಪುನರ್‌ವಿಮರ್ಶೆ ಮಾಡಬೇಕು ಎಂದು ಏತಕ್ಕೆ ಹೇಳಲಿಲ್ಲ? ಹೀಗೆ ಪದೇ ಪದೇ ಸರ್ಕಾರ ತಪ್ಪು ಮಾಡುತ್ತಾ ಇರುವುದನ್ನು ನೋಡುವಾಗ ಭೂಕಂದಾಯದ ಬಗ್ಗೆ ಸರ್ಕಾರಕ್ಕೆ ಒಂದು ನಿರ್ದಿಷ್ಟವಾದ ಧೋರಣೆ ಇಲ್ಲ ಎಂಬುದು ಗೊತ್ತಾಗುತ್ತದೆ. ನಿಮಗೆ ಚರ್ಮ ಮುಂದವಾಗಿದ್ದರೆ ಎಂತಹ ಸೂಜಿಯಿಂದ ಚುಚ್ಚಿದರೂ ನಿಮಗೆ ನೋವು ಆಗುವುದಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. Your thoughts are confused. Your

(SRI H. M. CHANNABASAPPA)

thoughts on the land question and land taxation are so clumsy that you have not the patience to apply your mind to the question. 19th September 1968 ರಲ್ಲಿ ಒಂದು ಸರ್‌ಕ್ಯುಲರ್ ಕಳುಹಿಸಿದ್ದಾರೆ. ಅದರಲ್ಲಿ Garden land-rain fed coming under Government source, new dry rates, not coming under Government source; new wet rates. ಎಂದು ಹೇಳಿದ್ದಾರೆ. ಆಮೇಲೆ 20-11-68 ರಲ್ಲಿ ಮತ್ತೊಂದು ಸರ್‌ಕ್ಯುಲರ್ ಹೊರಡಿಸಿ ಅದರಲ್ಲಿ Rain fed wet land not coming under Government source, old rate. ಎಂದು ಹೇಳಿದ್ದಾರೆ. ಹೀಗೆ ಸರ್‌ಕ್ಯುಲರ್ ಮೇಲೆ ಸರ್‌ಕ್ಯುಲರ್ ಕಳುಹಿಸಿದ್ದಾರೆ. ಇದರಲ್ಲಿ ಕ್ಲಿಯರ್ ಕಟ್ ಆದ ಆರ್ಡರ್ಸ್ಯಾಂಡಿಗ್ಸ್ ಏನಾದರೂ ಇವೆಯೆ? ಇದರ ಬಗ್ಗೆ ಸವಗ್ರವಾಗಿ ಪರಿಶೀಲನೆ ಮಾಡಿ ಏನು ಎನ್ನತಕ್ಕಂಥಾದ್ದನ್ನು ತಿಳಿದುಕೊಂಡಿದ್ದೀರಾ? ನಿಮ್ಮ ಸರ್‌ಕ್ಯುಲರ್‌ನಿಂದ ಇಡೀ ದೇಶದಲ್ಲಿರತಕ್ಕ ರೈತರ ಮನಸ್ಸಿನಲ್ಲಿ ದಿಗ್ಭ್ರಾಂತಿಯುಂಟಾಗಿದೆ. ಅವರಿಗೆ ಅನ್ಯಾಯ ಮಾಡುತ್ತಿದ್ದೀರಿ. ಇದು ಸರಿಯಲ್ಲ. ಈ ವಿಚಾರದಲ್ಲಿ ಯಾರಾದರೂ ರಿಟ್ ಪಿಟಿಷನ್ ಹಾಕಿದರೆ ಅವರಿಗೆ ಕಂದಾಯವನ್ನು ಮಾಫಿ ಮಾಡುತ್ತೇವೆ ಎಂದು ಹೇಳುತ್ತೀರಿ, ಸರ್ಕಾರದ ಸೌಜನ್ಯ ಎಷ್ಟರಮಟ್ಟಿಗೆ ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಈ ಸರ್‌ಕ್ಯುಲರ್‌ಗಳನ್ನು ಇಷ್ಯೂ ಮಾಡುವಾಗ, ಇದಕ್ಕೆ ಸೈನ್ ಹಾಕುವಾಗ ಸ್ವಲ್ಪ ಮನಸ್ಸಿಟ್ಟು ಯೋಚನೆ ಮಾಡಿದ್ದೀರಾ? ಈ ರೆವಿನ್ಯೂ ಖಾತೆಯನ್ನು ನಿಭಾಯಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳು ಒಳ್ಳೆಯ ವಕೀಲರಿದ್ದಾರೆ. ಅವರಿಗೆ 30 ವರ್ಷಗಳ ಅನುಭವಿಗಳಿದ್ದಾರೆ. ಅವರು ಏತಕ್ಕೆ ಈ ರೀತಿ ಮಾಡಿದರು? ಈ ವಿಷಯದಲ್ಲಿ ಸರ್ಕಾರದವರಿಗೆ ಒಂದು ನಿರ್ದಿಷ್ಟವಾದ ಅಭಿಪ್ರಾಯ ಇಲ್ಲ. ಒಂದು ನಿರ್ದಿಷ್ಟವಾದ ಥೋರಣ್ ಇವರಲ್ಲಿ ಇಲ್ಲ. ನಿಜವಾಗಿಯೂ ಇದು ಶೋಚನೀಯ: ಯಾವ ಯಾವ ಕಾಲಕ್ಕೆ ಏನು ಬರುತ್ತದೆ, ಹಾಗೆ ಸಮಯಕ್ಕೆ ಬಂದಹಾಗೆ ನಡೆದುಕೊಳ್ಳುತ್ತಾರೆ. ಭೂಮಿಯನ್ನೇ ಅವಲಂಬಿಸಿಕೊಂಡು ಜೀವನ ಮಾಡತಕ್ಕ ಕೋಟಿ ಕೋಟಿ ಜನಗಳ ಬಗ್ಗೆ ನೀವು ತಾತ್ಸಾರ ಮನೋಭಾವವನ್ನು ಹೊಂದಿದ್ದೀರೆಂಬುದು ಗೊತ್ತಾಗುತ್ತದೆ. ದೊಡ್ಡ ದೊಡ್ಡ ಕ್ಯಾಪಿಟಲಿಸ್ಟ್, ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಏನಿದ್ದಾರೆ ಅವರ ವಿಷಯುಗಳು ನಿಮಗೆ ಚೆನ್ನಾಗಿ ಗಮನದಲ್ಲಿರುತ್ತದೆ. ಬಡಪಾಯಿಗಳ ವಿಷಯುಗಳು ನಿಮ್ಮ ಗಮನದಲ್ಲಿರುವುದಿಲ್ಲ. ಇದರಲ್ಲಿ ಯಾವ ಸೋಷಿಯಲ್ ಜಸ್ಟೀಸ್ ಇದೆ. ನಿಜವಾಗಿಯೂ ನೀವು ರೈತರಿಗೆ ತುಂಬಾ ಅನ್ಯಾಯ ಮಾಡಿದ್ದೀರಿ. 3-11-68ರಲ್ಲಿ ಹೊರಡಿಸಿದ ಒಂದು ಸರ್‌ಕ್ಯುಲರ್‌ನಲ್ಲಿ Dry lands concerned in writ petition, old rates part payment, all other dry lands, new rates subject to double the old rate ಎಂದು ಹೇಳಿದ್ದಾರೆ. ಏತಕ್ಕೋಸ್ಕರ ಈ ತರಹ ಡಿಸ್‌ಕ್ರಿಮಿನೇಷನ್ ತೋರಿಸಿದ್ದೀರಿ. ರೈತರ ವಿಷಯದಲ್ಲಿ ಹೃದಯವಿರತಕ್ಕವರು ಬಹಳ ಕಡಿಮೆ. ಕೆಲವರು ಪ್ರಭಾವ ಇದ್ದರೂ ಪ್ರಭಾವ ಇಲ್ಲದಂತವರಾಗಿದ್ದಾರೆ.

[MR. SPEAKER in the Chair]

6-00 P.M.

ಒಬ್ಬರು ಮಾನ್ಯ ಸದಸ್ಯರು.—ತಾವು ವಕೀಲರಲ್ಲವೇ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಾವು ವಕೀಲರಲ್ಲವೇ ಎಂದು ಮಾನ್ಯ ಸ್ನೇಹಿತರು ಕೇಳಿದರು. ವಕೀಲತನವನ್ನು ಮಾಡುವುದು ಒಂದು ದುಡ್ಡಿಗೋಸ್ಕರ, ಇನ್ನೊಂದು ತತ್ವಕ್ಕೋಸ್ಕರ.

MR. SPEAKER.—If one represents anybody with or without money, he is an Advocate.

SRI H. M. CHANNABASAPPA.—Advocacy for consideration and advocacy for public good! I am doing advocacy for public good. I need not be termed as an Advocate in the legal term.

Now, I come to the point. I have made it very clear through you to the Government to and through the Government to the whole nation that this Government has very clumsy ideas about land tax, land

policies and land utilisation policy. It has led the whole issue into pell mell. It has created a confused state of affairs, amongst the officers, farmers, tax-payers and also all others in this country. Shall I say it is because of negligence or shall I say it is because of irresponsibility? What shall I say? You please suggest to me and I am prepared to accept it.

Now, before I pass on to the basic question, I will just say a few words on the merits of my friend's amendment before the House. What does the amendment say? ನುಧಾರಣೆ ಮಾಡುವುದಕ್ಕೋಸ್ಕರ ಈ ಅಮೆಂಡ್‌ಮೆಂಟನ್ನು ತಂದಿದ್ದಾರೆಂದು ಹೇಳುತ್ತಾರೆ.

New Section 114A (a) says:

"if at any time after the introduction of a settlement of land revenue under section 122, the State Government, for reasons to be recorded in writing, is of the opinion that in any zone, the settlement of land revenue requires modification, it may, by order, direct the revision of settlement of land revenue....."

This is unjust and therefore, it must be modified. ಒಂದು ಪ್ರಾಂತ್ಯದ ರೈತರು ತಮಗೆ ಅರ್ಜಿ ಕೊಡುತ್ತಾರೆಂದು ಇಟ್ಟುಕೊಳ್ಳೋಣ. ರೀಸೆಟ್ಲ್‌ಮೆಂಟ್ ಮಾಡಿರುವುದು ಸರಿಯೇ, ತಪ್ಪೇ, ಅದು ಮಾಡಿಫೈ ಆಗಬೇಕೇ, ಇಲ್ಲವೇ ಎಂದು ಜಡ್ಜ್‌ಮೆಂಟ್ ಕೊಡುವವರು ಯಾರು? ಪ್ರೈಮಾ ಫೆಸಿ ಕೇಸ್ ಇದೆ ಎಂದು ಹೇಳುವವರು ಯಾರು? ನಾವೂ ನೀವೂ ಪಾರ್ಟಿಗಳು. ಹಿಂದೆ ಅನ್ಯಾಯವಾಗಿ ರಿಸೆಟ್ಲ್‌ಮೆಂಟ್ ಮಾಡಿರುವವರು ನೀವು, ಅರ್ಜಿ ಹಾಕಿರುವವರು ನಾವು. ರಿಸೆಟ್ಲ್‌ಮೆಂಟ್ ಬಹಳ ಅನ್ಯಾಯವಾಗಿದೆ ಎಂದು ನಿಮ್ಮ ಘನ ಚಿತ್ತಕ್ಕೆ ಬಂದರೆ ಆಗ ರಿಸೆಟ್ಲ್‌ಮೆಂಟನ್ನು ಪುನರ್‌ವಿಮರ್ಶೆ ಮಾಡಬೇಕೆಂದು ಹೇಳಬಹುದೇ ವಿನಹ ನಿಮ್ಮ ಚಿತ್ತಕ್ಕೆ ಪುನರ್‌ವಿಮರ್ಶೆ ಮಾಡುವ ಮನನ್ನು ಇಲ್ಲ.

You cannot both be a prosecutor as well as a judge.

Mr. SPEAKER.—Hon. Member knows much of law.

Sri H. M. CHANNABASAPPA.—Thank you for the compliment. I put to you a very straight question: do you think it is fair, when an aggrieved party, against your decision, approaches you for relief? Whether there is a *prima facie* case or not, there should be somebody else who can see through things dispassionately and say, here is a case. Now, according to the amendment, if you say there is no justification, there is an end of the matter. What kind of amendment is this? What kind of justice is this? Therefore, on the very face of it, it requires to be thrown out. It is one-sided.

Mr. SPEAKER.—Member may please finish his speech within ten minutes.

Sri H. M. CHANNABASAPPA.—Is it fair on your part to choose to be both the prosecutor as well as the judge? When a disputed point is there between you and him, I believe, somebody else should say that the dispute is valid, there is *prima facie* case or not, and then you can appoint such officers as you deem fit to go into the matter. It is a serious lacuna which cannot be accepted in any sense of jurisprudence. Sir, there is a doubt in my mind and it is for the Hon. Minister to clear it. It is said that pending revision of the rates of resettlement of a case

(SRI H. M. CHANNABASAPPA)

which comes for consideration, the Government may collect at rates prevalent before resettlement. Whether it means enhanced rate or original rate, I want to know. If you clarify, there is no need for me to go further. If the Hon Minister for Revenue clears the doubt, I will stop at that.

Sri K. PUTTASWAMY.—Sir, I think, I can clarify the doubt the hon. Member is entertaining. If the Government orders reclassification or fresh classification, then in that zone, revenue at the old rate would be collected.

Sri H. M. CHANNABASAPPA.—Whether it is resettlement rate...

Sri K. PUTTASWAMY.—Not at the standard rate which has been settled by this Assembly in 1965, on the basis of which it has been calculated.

Sri H. M. CHANNABASAPPA.—I hope it is not part rate.

Sri K. PUTTASWAMY.—Sir, under the Land Revenue Act when Government orders fresh settlement, the recommendation of the Government on the report of the Resettlement Officers, will have to be placed before this House.

18,416 ಜನರು ಇದ್ದಾರೆ. ಒಟ್ಟು ಹಿಡುವಳಿದಾರರು 85,330 ಇದ್ದಾರೆ 48177 ಜನ 5 ಎಕರೆಗಿಂತ ಕಡಿಮೆ ಹಿಡುವಳಿ ಇರುವ ಜನರಾಗಿದ್ದಾರೆ. ಬಡರೈತರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿದರೆ ಅವರಿಗೆ ಹಿಂಸೆಯಾಗುವುದಿಲ್ಲವೇ ಎಂದು ಕೇಳುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳು ವಯೋವೃದ್ಧರು ಆಗಿದ್ದಾರೆ. ಇಂತಹವರ ಮೇಲೆ ಅವರಿಗೆ ಹೆಚ್ಚು ಅನುಕಂಪ ಇರಬೇಕು. ರೈತರ ಮೇಲೆ ಹೆಚ್ಚಿನ ಹೊರೆಯನ್ನು ತೆರಿಗೆ ರೂಪದಲ್ಲಿ ಹಾಕುವುದು ಸರಿಯಲ್ಲ. ಈ ರೀತಿ ತೆರಿಗೆಯನ್ನು ರೈತರ ಮೇಲೆ ಹಾಕಿದರೆ, ಅದರ ಒಂದು ಅಂಶವೂ ಬೇರೆಯವರ ಮೇಲೆ ಸಹ ಬೀಳುವುದಕ್ಕೆ ಅವಕಾಶವಿಲ್ಲ. Incidence of tax rests on the farmer. ಅರ್ಥ ಶಾಸ್ತ್ರಜ್ಞರು ಈ ರೀತಿ ಹೇಳಿದ್ದಾರೆ :

> "Even an exorbitant tax on agricultural land is likely to rest on the farmer. In contemporary low income countries the land tax is rarely an important source of revenue. Indirect taxes flood agriculture."

ಸೇಲಿನ್‌ಮನ್ನರು ಈ ರೀತಿಹೇಳಿದ್ದಾರೆ :

> "Under actual conditions the tax on agricultural land is but rarely shifted to the consumer."

ರೈತರು ಬರೀ ಕಂದಾಯವನ್ನು ಮಾತ್ರ ಕೊಡುತ್ತಿಲ್ಲ ಅವರಿಗೆ ಬಹಳ ತೆರಿಗೆಗಳು ಬೀಳುತ್ತಿವೆ. ಎಕರೆಗೆ ನುಮಾರು 45 ರೂಪಾಯಿ ಕಂದಾಯ ಮತ್ತು ನೀರಿನ ತೆರಿಗೆ ಕೊಡುವುದರ ಜೊತೆಗೆ ಈ ದಿವಸ ರೈತರು ಬೇರೆ ಬೇರೆ ತೆರಿಗೆಯನ್ನು ಸಹ ಕೊಡಬೇಕಾಗಿದೆ. ಇದರ ಜೊತೆಗೆ ದೊಡ್ಡ ದೊಡ್ಡ ಕಂಪನಿಯವರು ಸರ್ಕಾರಕ್ಕೆ ಕೊಡುವಂತಹ ಸೇಲ್ಸ್ ಟ್ಯಾಕ್ಸ್, ಇನ್‌ಕಮ್ ಟ್ಯಾಕ್ಸ್ ಇತರ ಎಕ್ಸೈಸ್ ಡ್ಯೂಟಿಗಳನ್ನು ಸಹ ಕೊನೆಯ ಘಟ್ಟದಲ್ಲಿ ರೈತರು ಕೊಡಬೇಕಾಗುತ್ತದೆ. ಈ ಪ್ರಕಾರ ನಾನು ರೀತಿಯ ತೆರಿಗೆಗಳನ್ನು ಕೊಟ್ಟು ಕೊಟ್ಟು ರೈತರ ಬೆನ್ನು ಬಗ್ಗಿಹೋಗಿದೆ. ಇಂತವರ ಮೇಲೆ ಮತ್ತೆ ಹೆಚ್ಚುವರಿ ತೆರಿಗೆಯನ್ನು ಹಾಕುವುದರ ಮೂಲಕ ಅವರನ್ನು ನೆಲಸಮ ಮಾಡಬೇಡಿ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ನವಿನಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಜಮೀನಿನ ಮೇಲೆ ತೆರಿಗೆ ಹಾಕುವಾಗ ಸರ್ಕಾರದವರು ಒಂದು ವಿಚಾರವನ್ನು ಗಮನದಲ್ಲಿಟ್ಟು ಕೊಳ್ಳಬೇಕು.

"Law of diminishing returns" ಎಂಬ ತತ್ವ ಸರ್ಕಾರದವರಿಗೆ ಗೊತ್ತಿರಬಹುದು. ಈ ತತ್ವ ಜಮೀನಿಗೆ ವಿಶೇಷವಾಗಿ ಅನ್ವಯವಾಗುತ್ತದೆ ಜಮೀನಿನ ವರಮಾನ ಒಂದು ಮಿತಿ ಮೀರಿದ ಮೇಲೆ ಬಂಡವಾಳಕ್ಕೆ ಅನುಗುಣವಾಗಿ ಬರುವುದಿಲ್ಲ. ಆ "ಮಿತಿ" ಆದನಂತರ ಹೆಚ್ಚು ಬಂಡವಾಳ ನಿಷ್ಫಲ. ಆ "ಮಿತಿ" ಮೀರಿದ ಮೇಲೆ ನಣ್ಣ ತೆರಿಗೆಯೂ ಕೂಡ ಒಂದು ಹೋರೆಯಾಗುತ್ತದೆ. ಜಮೀನಿನಲ್ಲಿ ಬೆಳೆಯುವ ಬೆಳೆಗಳ ಬಗ್ಗೆ ನಮ್ಮ ಜಿಲ್ಲೆಯನ್ನು ತೆಗೆದುಕೊಂಡರೆ Optimin income ಮಟ್ಟವನ್ನು ಮುಟ್ಟಲಾಗಿದೆ. ನಮ್ಮ ಕ್ಷೇತ್ರಗಳಲ್ಲಿ ಈ ದಿವಸ ಎಷ್ಟೇ ಹೆಚ್ಚಿನ ಬಂಡವಾಳವನ್ನು ಹೂಡಿ ಆಧುನಿಕ ಪದ್ಧತಿಯ ರೀತಿಯಲ್ಲಿ ಬೆಳೆದರೂ ಕೂಡ ಬೆಳೆದವರಿಗೆ ಹೆಚ್ಚಿನ ಪ್ರಮಾಣದಲ್ಲಿ ನಿವ್ವಳವರಮಾನ ಉಳಿಯುವುದಿಲ್ಲ. ಉಳಿಯದಿರುವುದಕ್ಕೆ ಕಾರಣ ಸರ್ಕಾರ ಹೆಚ್ಚುವರಿ ತೆರಿಗೆ ಮತ್ತು ಕಂದಾಯವನ್ನು ಕೊಡಬೇಕಾಗಿರುವುದರಿಂದ. ಈಗ ರೈತರ ಮೇಲೆ ಹಾಕುತ್ತಿರುವ ಕಂದಾಯ ದಭಾರಿ ವಿಷಯವಲ್ಲ, ಈ ಮೂಲಕ ರೈತರನ್ನು ನಿರ್ನಾಮವಾಗಿ ನಿರ್ನಾಮಮಾಡುವ ಪಿಶಾಚಿಯಾಗಿದೆ ಎಂದು ಹೇಳುತ್ತೇನೆ. ಸರ್ವೆಸೆಟ್‌ಲ್‌ಮೆಂಟ್ ಮಾಡುವಾಗ ಅಳತೆ ವಿಂಗಡಣೆ ಮತ್ತು ಅಸೆಸ್‌ಮೆಂಟ್ ಸರಿಯಾಗಿ ಆಗಿಲ್ಲ. 1932ನೇ ಫಸಲಿಯಲ್ಲಿ ನನ್ನ ಖಾತೆಯಲ್ಲಿರುವ ಒಂದು ಜಮೀನು 4 ಎಕರೆ ಮೂರು ಗುಂಟೆ ಎಂದು ಇತ್ತು. ರಕ್ಕೆಗಾಗಿ ಈ ಜಮೀನಿನಲ್ಲಿ ಸರ್ಕಾರದವರು 9 ಗುಂಟೆಯನ್ನು ಸ್ವಾಧೀನಪಡಿಸಿಕೊಂಡರು, ಪುನರ್ವಿಮರ್ಶಿತ ರೆಕ್ಕೆದ ಪ್ರಕಾರದಲ್ಲೂ ಹಳೆಯ ರೆಕ್ಕೆದಪ್ರಕಾರ ನಾಲ್ಕು ಎಕರೆ ಮೂರು ಗುಂಟೆಗೇ ಕಂದಾಯವನ್ನು ಮತ್ತು ನೀರಿನ ತೆರಿಗೆಯನ್ನು ವಿಧಿಸುತ್ತಿದ್ದಾರೆ. ಇದು ಸರಿಯೋ. ಇಂತಹ ತಪ್ಪುಗಳು ಸಾಮಾನ್ಯವಾಗಿ ಎಲ್ಲಾ ರೈತರಿಗೂ ಆಗಿವೆ. ಬಹು ರೈತರಿಗೆ ಹೇಳುವ ಬಾಯಿಲ್ಲ. ಹೇಳಿದ ದೂರುಗಳನ್ನು ಕೇಳುವವರೂ ಇಲ್ಲ. ತಾವು ಮಾಡಿರುವುದೇ ಸರಿ ಎನ್ನುವ ಕಾಲ ಇದು.

1932 ರಲ್ಲಿ ಹಿಂದೆ ಸರ್ವೆ ಮಾಡಿದಾಗ ನಾಲ್ಕು ಗುಂಟೆ ಜಮೀನಿಗೆ ಕಂದಾಯ ಏನು ಇತ್ತೋ ಅದೇ ಕಂದಾಯವನ್ನು ಈಗ ಹೆಚ್ಚು ಮಾಡಿ ಇಲ್ಲದ ಜಮೀನಿಗೆ ಕಂದಾಯ ತೆಗೆದು

ಕೊಳ್ಳುತ್ತಿದ್ದಾರೆ. ನಮ್ಮ ಹಳ್ಳಿಗಳಲ್ಲಿ ಸಾಮಾನ್ಯವಾಗಿ ನೋಡಿದರೆ ಪ್ರತಿಯೊಬ್ಬರಿಗೂ ಎರಡು ರೂಪಾಯಿಗಳು ಎಂದು ಕಂದಾಯ ಹಾಕಿದ್ದಾರೆ. ಹೊಸ ಕಂದಾಯ ಕಾನೂನಿನಲ್ಲಿ ಇದರಲ್ಲಿ ತೆಂಗಿಗೆ ಇಷ್ಟು ಪ್ಲಾಂಟೇಷನ್‌ಗೆ ಇಷ್ಟು, ಗಾರ್ಡನ್ ಲ್ಯಾಂಡಿಗೆ ಇಷ್ಟು ಎನ್ನುವುದನ್ನು ಸರಿಯಾಗಿ ಅಸೆಸ್ ಮಾಡಿ ಹಾಕಬೇಕೆಂದು ಇದೆ. ಹಿಂದೆ ಕಂದಾಯ ಹಾಕುವಾಗ ಬಾಗಯತಿಗೆ ಜಾಸ್ತಿ ಯಾಗಿರಲಿಲ್ಲ. ಈಗ ಕನಿಷ್ಠಪಕ್ಷ ಎಲ್ಲ ಕಡೆಗಳಲ್ಲೂ ಕಂದಾಯ ಜಾಸ್ತಿ ಮಾಡಿದ್ದಾರೆ. ಖುಷ್ಕಿ ಜಮೀನಿಗೆ ಹಿಂದೆ ಒಂದೂವರಾಣಿಯಿಂದ 2—12—0 ವರೆಗೆ ಇದ್ದಕಂದಾಯವನ್ನು ನಾಲ್ಕು ರೂಪಾಯಿಗೆ ಹೆಚ್ಚು ಮಾಡಿದ್ದಾರೆ. ತರಿಭೂಮಿಗೆ 3—8—0 ಯಿಂದ 14—4—0 ವರೆಗೆ ಮಾಡಿದ್ದಾರೆ. ಇದ್ದಕಂದಾಯವನ್ನು ನೀರಿನ ತೆರಿಗೆ ಸೇರಿಸಿ 60 ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಬಾಗಯತಿಗೆ 7ರೂಪಾಯಿಂದ 20ರೂಪಾಯಿಗಳವರೆಗೆ ಇದ್ದದ್ದನ್ನು 23ರ ವರಗೆ ಹೆಚ್ಚುಮಾಡಿದ್ದಾರೆ ಅಲ್ಲದೆ ಈ ಕಂದಾಯದ ಹೊರೆ ಸಮಾನವಾಗಿಲ್ಲ. ಕೆಲವು ಕಡೆ ಕೊಟ್ಟಿರುವ ಅಂಕೆ ಸಂಖ್ಯೆಗಳು ಕೂಡ ಸರಿಯಾವ ರೀತಿಯುಲ್ಲಲ್ಲ. ಈ ಕಡೆಗೆ ಸರಕಾರ ಲಕ್ಷ ಕೊಟ್ಟು ಇವನ್ನೆಲ್ಲಾ ಸರಿಪಡಿಸಬೇಕು. ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P.M.

†ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, 1956ನೇ ನವಂಬರಿನಲ್ಲಿ ಸಂಯುಕ್ತ ಕರ್ನಾಟಕವಾಯಿತು, ಇದಕ್ಕೆ ಮೊದಲು ಬೇರೆ ಬೇರೆ ಭಾಗದಲ್ಲಿ ಎನು ಒಂದು ಕಾನೂನಿತ್ತು ಅದರಂತೆ ಅಸೆಸ್‌ಮೆಂಟು ಕೂಡ ಬೇರೆ ಬೇರೆಯಾಗಿತ್ತು. ಆದರೆ ನಾವು ಇಲ್ಲಿಗೆ ಬಂದ ಮೇಲೆ ಒಂದೇ ಪ್ರಕಾರ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಕಂದಾಯ ಪದ್ಧತಿಯೂ ಆಗಬಹುದು ಎನ್ನುವ ಒಂದು ಆಸೆ ಇತ್ತು. ಆ ಪ್ರಕಾರ 1956 ರಿಂದ 1964ರ ವರೆಗೆ ಎಷ್ಟೋ ರಿವಿಜನ್‌ಗಳನ್ನೂ ಮಾಡಿದ್ದಾರೆ. ಇದನ್ನೆಲ್ಲಾ ಸೇರಿಸಿ 1964ರಲ್ಲಿ ಒಂದು ಬಿಲ್ ತಂದು ಇಲ್ಲಿ ಪಾಸು ಮಾಡಿಯಾಯಿತು. ಆದರೆ ಬೇರೆ ಬೇರೆ ಸ್ಟೇಟುಗಳಿಂದ ಇಲ್ಲಿಗೆ ಜನ ಬಂದಿರುವುದರಿಂದ ಅವರಿಗೆ ಇದರಿಂದ ಸಮಾಧಾನವಾಗಲಲ್ಲ. ಇದಕ್ಕಾಗಿ ಮಾನ್ಯ ಮಂತ್ರಿಗಳಲ್ಲಿ ಅಪೀಲೂ ಹೋಗಿ ಇಂತಹ ಕಾನೂನಿನಿಂದ ಸರಿಯಾದ ನ್ಯಾಯ ದೊರಕಲಲ್ಲ ಎಂದು ಹೇಳಿದ ಮೇರೆ ಸರಕಾರದವರು ಇವನ್ನೆಲ್ಲಾ ವಿಚಾರ ಮಾಡಿ ನೂಕ್ತವಾದ ಒಂದು ಬಿಲ್ಲು ತರುತ್ತೇವೆ ಎಂದು ಹೇಳಿದರು. 1964 ರಲ್ಲಿ ಡ್ರೈ ಲ್ಯಾಂಡು, ವೆಟ್ ಲ್ಯಾಂಡು, ಗಾರ್ಡನ್ ಲ್ಯಾಂಡು ಎಂದು ಬೇರೆ ಬೇರೆಯಾಗಿ ಜೋನು ಗಳನ್ನು ಮಾಡುವಾಗಲೂ ಒಂದು ಸಲಹೆ ಕೊಟ್ಟಿದ್ದೆವು. ನಮ್ಮಲ್ಲಿ ಎಷ್ಟು ವಿಧವಾದಭೂಮಿ ಇದೆ ಎನ್ನುವುದನ್ನು ಪ್ರತ್ಯೇಕವಾಗಿ ನೋಡಬೇಕು. ನಮ್ಮಲ್ಲಿ ಬ್ಲಾಕ್ ಕಾಟನ್ ಸಾಯಿರ್‌ರಾ ಕಿಸಾಯಿರ್ ಒಂದು ತರಹದ ಚೌಳು ಭೂಮಿ ಈರೀತಿ ನಾರ್ಕೆ ೨ದು ತರಹದ ಭೂಮಿಗಳ ಇವೆ. ಇವನ್ನೆಲ್ಲಾ ಎ. ಬಿ. ಸಿ. ಡಿ. ಇತ್ಯಾದಿ ಯಾಗಿ ಮಾಡುವುದನ್ನು ಬಿಟ್ಟು, ಜೋನುಗಳೆಂದು ಮಾಡಿ ತಂದಿದ್ದಾರೆ. ಇದನ್ನು ಮಾಡಿರುವುದರಿಂದ ಇಲ್ಲಿನ ಕ್ಲಾಸಿಫಿಕೇಷನ್‌ಗಳು ಸರಿಯಾಗುವುದಿಲ್ಲ. ನಾವು ಬಂದಿರುವ ಮೂರು ಜಿಲ್ಲೆಗಳಲ್ಲೂ ಯಾವ ರೀತಿಯಾದ ಒಂದು ಕಾನೂನು ಇತ್ತೋ ಅದರ ಪ್ರಕಾರ ನೋಡಿದರೆ ಈಗ ಕಂದಾಯ ಬಹಳ ಜಾಸ್ತಿಯಾಗಿರುತ್ತೆ. ಸೆಟರ್‌ಮೆಂಟು ಆಗುವುದಕ್ಕೆ ಮೊದಲು ಒಂದೊಂದು ಎಕರೆಗೆ 8 ಆಣೆ ಕೊಡುವ ಭೂಮಿ ಒಂದು ರೂಪಾಯಿ ಕೊಡುವ ಭೂಮಿ ಮತ್ತು, ಎರಡು ರೂಪಾಯಿ ಕೊಡುವ ಭೂಮಿ ಇವೆಲ್ಲವನ್ನು ಕ್ಲಾಸಿಫೈ ಮಾಡುವಾಗ 1964ರಲ್ಲಿ ಒಂದು ಜೋನು ಎಂದು ಮಾಡಿದರು. ಹೀಗೆ ಜೋನುಗಳನ್ನು ಮಾಡಿರುವುದರಿಂದ ಎಂಟಾಣೆ ಕೊಡುತ್ತಿದ್ದ ಭೂಮಿಗೆ ಆರು ರೂಪಾಯಿಗಳವರೆಗೆ ಆಯಿತು- ಎಲ್ಲ ಮೂರು ರೂಪಾಯಿಗಳು ಇತ್ತೋ ಅಲ್ಲಿ ನಾಲ್ಕು ರೂಪಾಯಿ ಹೆಚ್ಚಾಯಿತು. ಈ ಪ್ರಕಾರ ಲ್ಯಾಂಡ್ ರೆವೆನ್ಯೂ ಕೊಡಬೇಕೆಂದು ಮಾಡವಾಗ ರಾಕೇ ಸಾಯಿರ್ ಇರುವ ಭೂಮಿ ಇರುವ ಕಡೆಗಳಲ್ಲಿ ಒಂದಕ್ಕೆ ಎರಡು ಪಟ್ಟು ಕೆಲವು ಕಡೆ ಮೂರು ನಾಲ್ಕು ಪಟ್ಟುಗಳಷ್ಟು ಹೆಚ್ಚು ಮಾಡಿ ಕಂದಾಯ ಹಾಕಿದ್ದಾರೆ. ಇದು ಯಾವ ನ್ಯಾಯ ಎಂದು ಕೇಳ ಬೇಕಾಗಿದೆ. ಇದರ ಬಗ್ಗೆ ಇಲ್ಲಿ ಪದೇ ಪದೇ ಹೇಳುತ್ತಲೂ ಬರುತ್ತಿದ್ದೇವೆ. ಯಾವಾಗ ನಮ್ಮ ಹೈದರಾಬಾದು ಭಾಗದ ಪ್ರಶ್ನೆ ಬರುತ್ತದೋ ಲ್ಯಾಂಡ್ ರೆವೆನ್ಯೂ ಬಗ್ಗೆ ಒಂದು ಮಾತು ಇಲ್ಲಿ ಹೇಳಿ ಹುದು. ನಮ್ಮ ಕಡೆಗಳಲ್ಲಿ ಜಾಗೀರ್ ಲ್ಯಾಂಡ್ಸ್‌ಗಳಿದ್ದವು, ಮತ್ತು ಪಾಯಿಗಾ ಲ್ಯಾಂಡು ಗಳಿದ್ದವು, ಹಾಗೂ ಇನ್ನಿತರ ವಿಧವಾದ ಭೂಮಿಗಳಿದ್ದವು. ಇವುಗಳ ಪ್ರಶ್ನೆ ಬಂದಾಗಲೆಲ್ಲಾ ಸರಕಾರ ಇವನ್ನು ಇನ್ನೂ ಸರಿಯಾಗಿ ಪರಿಶೀಲನೆ ಮಾಡಿಲ್ಲ ಎಂದು ಇದಕ್ಕೆ ಚ್ಯೆಂ ತೆಗೆದುಕೊಂಡರು. ನನ್ನ ಹೈದರಾಬಾದು ಭಾಗದಲ್ಲಿ ಸ್ವಾತಂತ್ರ ಸಂಗ್ರಾಮವಾಗುವುದಕ್ಕೆ ಮೊದಲು ಯಾವ ಸ್ಥಿತಿ ಇತ್ತು ಎನ್ನುವುದನ್ನು ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ವಿ. ಎನ್. ವಾಟೀಲ್‌ರವರು ವಿವರವಾಗಿ ಹೇಳಿದ್ದಾರೆ. ಅವರೇ ಹೇಳಿದಂತೆ ಇಲ್ಲಿ ಜಹಗೀರು ಲ್ಯಾಂಡ್ಸ್, ಪಾಯಿಗಾ

(ಶ್ರೀ ಎಸ್. ಭೀಮಣ್ಣ)

ರ್ಯಾಂಡ್ಸ್‌ಗಳು ಸರಪ್ ಎಖಾನ್ ರ್ಯಾಂಡುಗಳು ಹಾಗೂ ಖಾಲಸಾ ರ್ಯಾಂಡುಗಳು ಇತ್ತು. ಇವಕ್ಕೆ ಬೇರೆ ಬೇರೆ ರೀತಿಯಾಗಿ ರ್ಯಾಂಡು ರೆವೆನ್ಯೂ ಇತ್ತು. ಜಹಗೀರು ಭೂಮಿಗಳು ಸರಕಾರದ ಅಧೀನದಲ್ಲಿ ಮೊದಲು ಇರಲಿಲ್ಲ. ಇಲ್ಲದ್ದೂ ವತನುದಾರರುಗಳು ಅವರ ಸ್ವಂತ ಖರ್ಚಿಗಾಗಿ ಕಂದಾಯ ಹಾಕಿ ವಸೂಲು ಮಾಡುತ್ತಿದ್ದರು. ಆಗ ಒಂದು ಎಕರೆಗೆ ಸುಮಾರು 6—8 ರೂಪಾಯಿಗಳಷ್ಟು ರ್ಯಾಂಡ್ ರೆವೆನ್ಯೂ ಎಂದು ಕೊಡುತ್ತಿದ್ದರು ; ಇದು ನ್ಯಾಯವಾಗಿಲ್ಲ ಎಂದು ಮೂವತ್ತು ವರ್ಷಗಳ ಹಿಂದೆ ಒಂದು ರೀತಿಯಾಗಿ ಕ್ರಾಂತಿ ನಡೆಸುತ್ತಿದ್ದರು. ಸುಮಾರು ಹತ್ತು ಸಾವಿರ ಜನರ ಒಂದು ಮೊರ್ಚಾ ಬಂದು ಆಗ ಚೀಫ್ ಮಿನಿಸ್ಟ್ರರಾಗಿದ್ದ ಶ್ರೀ ಬಿ. ರಾಮಕೃಷ್ಣರಾಯರಿಗೆ ಮನವಿ ಮಾಡಿ ಒತ್ತಾಯ ಮಾಡಿದ ಮೇರೆ ಜಾಗೀರ್ ಅಬಾಲಿಷನ್ ಆಕ್ಟ್ ಎಂದು 1951—52 ರಲ್ಲಿ ಪಾಸು ಮಾಡಿದರು. ಆಗಿನ ಕಾಲದಲ್ಲಯೇ ಮುಳೆ ಬೆಳೆ ಬರಲಿಲ್ಲ ಹಾಕಿರುವ ಕಂದಾಯ ಬಹಳ ಜಾಸ್ತಿ. 8—10 ರೂಪಾಯಿ ಇರುವುದನ್ನು ಶೇಕಡಾ 25 ರಷ್ಟು ಕಡಿಮೆ ಮಾಡಬೇಕು ಎಂದು ನಾವು ಸರ್ಕಾರಕ್ಕೆ ಮನವಿ ಮಾಡಿದೆವು ಇದರಿಂದ ಕೆಲವು ಕಡೆಗಳಲ್ಲಿ ನಾಲ್ಕು ರೂಪಾಯಿ ಕಂದಾಯ ಕೊಡಬೇಕು ಉಳಿಕೆಯನ್ನು ರಿಮಿಷನ್ ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದರು. ನಮ್ಮ ಭಾಗಗಳು 1956 ರಲ್ಲಿ ಮೈಸೂರಿಗೆ ಸೇರಿದ ಮೇರೆ 10-12 ವರ್ಷಗಳಾದರೂ ಕೆಲವು ಕಡೆ ರೈತರಿಗೆ ಕಂದಾಯವನ್ನು ರೈಟ್ ಆಫ್ ಮಾಡಿ ಸಸ್‌ಪೆಂಡು ಮಾಡುವ ಆರ್ಡರು ಮಾಡಿಲ್ಲ ರ್ಯಾಂಡ್ ರೆವಿನ್ಯೂ ರಿಕಾರ್ಡಿನಲ್ಲಿ ರಿಮಿಷನ್ ಕಡಿಮೆ ಮಾಡಬೇಕು ಎಂದು ಇದ್ದರು ಅದು ಕಡಿಮೆಯಾಗಲಿಲ್ಲ. ಇಲ್ಲಿ ಜೋನುಗಳನ್ನು ಮಾಡುವಾಗ ಕ್ಲಾಸಿಫಿಕೇಷನ್‌ಗಳೆಂದು ಮಾಡಿರುವುದು ಬಹಳ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದರೂ ಸರಕಾರ ಇದರ ಕಡೆಗೆ ಗಮನ ಕೊಡುತ್ತಿಲ್ಲ. ಜೋನು ಮಾಡಿರುವುದರಿಂದ ಕೆಲವು ಕಡೆ ಒಂದಕ್ಕೆ ಎರಡು ಪಟ್ಟು, ಕೆಲವು ಕಡೆ ಮೂರು ಪಟ್ಟು ಜಾಸ್ತಿ ಮಾಡಿ ಕಂದಾಯ ನಿಗದಿ ಮಾಡಿದ್ದಾರೆ. ಇದರಿಂದ 15 ಲಕ್ಷ ಬರುತ್ತಿದ್ದುದು 25 ಲಕ್ಷ ಬರುವಂತೆ ಆಯಿತು ಎಂದು ಹೇಳುತ್ತಾರೆ. ಎಂದರೆ 1964 ರ ಆಕ್ಟ್ ಪ್ರಕಾರ ಇದು ಡಬ್ಬರ್ ಆಯಿತು. ಇದರಲ್ಲೂ ಹೆಚ್ಚಿನ ಅನ್ಯಾಯ ನಮ್ಮ ಬದರು ಜಿಲ್ಲೆಯ ಜನತೆಗೆ ಆಗಿದೆ. ನಮ್ಮಲ್ಲಿ ಗಾರ್ಡನ್ ರ್ಯಾಂಡು ಎನ್ನುವುದು ಬಹಳ ಕಡಿಮೆ. ಒಂದು ಎಕರೆ ಜಮೀನಿಗೆ ಹಿಂದೆ 8 ರೂಪಾಯಿಗಳು ಇದ್ದದ್ದು ಇಂದು 92 ರೂಪಾಯಿಗಳು ಎಂದು ಕೊಡಬೇಕಾಗಿ ಬಂದಿದೆ. ಇದು ಒಂದಕ್ಕೆ ಎರಡು ಪಟ್ಟಿಗಿಂತ ಹೆಚ್ಚು ಆಯಿತು ಎನ್ನುವುದು ಇದರಿಂದ ಗೊತ್ತಾಗುತ್ತದೆ. ನಮ್ಮಲ್ಲಿ ಇನಾಂ ಅಬಾಲಿಷನ್ ಆಕ್ಟ್ ಬೇರೆ ಆಯಿತು. ಇದರಿಂದ ಸೋಷಿಯಲಿಸ್ಟ್ ಪ್ಯಾಟರನ್ ಮಾಡಲು ಆಯಿತೇ ಎಂದರೆ ಆ ರೀತಿ ಆಗಲಿಲ್ಲ. ಮತ್ತು ನಮ್ಮ ಸರಕಾರ ಇದನ್ನು ಮಾಡುವುದಕ್ಕೆ ಸಾಧ್ಯವೂ ಇಲ್ಲ. ನಮ್ಮಲ್ಲಿ ಇನಾಂಗಳನ್ನು ಹಿಂದೆ ಇದ್ದ ದೇಶಪಾಂಡೆಗಳು ಹಾಗೂ ದೇಶಮುಖರುಗಳು ಶೇಕಡ 20, 40, ಮತ್ತು 60 ರಷ್ಟು ಪ್ರಾಡ್ಯೂಸ್‌ನ್ನು ಚೆನೆಂಟುಗಳಿಂದ ವಸೂಲು ಮಾಡುತ್ತಿದ್ದರು. ಇದನ್ನು ಆಕ್ಟ್ ಪ್ರಕಾರ ಪರ್ಮನೆಂಟು ಚೆನೆಂಟೇ, ಪೊಚೆಕ್ಟ್‌ಡ್ ಚೆನೆಂಟೇ ಎನ್ನುವುದನ್ನು ನಿರ್ಣಯಿಸಿ ವಿಚಾರ ಮಾಡಿ ಮಾಡಲಿಲ್ಲ. ಹೀಗಿರುವಾಗ ರ್ಯಾಂಡ್ ರೆವಿನ್ಯೂವನ್ನು ಸರಕಾರ ನಿರ್ಣಯಿಸಿ ವಿಚಾರ ಮಾಡದೇ ತೆಗೆದುಕೊಳ್ಳುವುದು ನ್ಯಾಯವೇ ಎಂದು ಇಲ್ಲಿ ಕೇಳುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಅಲ್ಲಿ ಜಾಗೀರ್‌ದಾರರಿಗೆ ಅನ್ಯಾಯ ನಡೆದಿದೆ. ಅದಕ್ಕಾಗಿ ಅವರೆಲ್ಲಾ ರಿಟ್ ಹಾಕಿದ್ದಾರೆ. ಹಳೇ ರೇಟಿನಲ್ಲಿ ವಸೂಲ್ಮಾಡಬೇಕು ಎಂದು ನನಗೆ ಅನಿಸುತ್ತದೆ. ಮತ್ತು ನಾರ್ತ್ ಕರ್ನಾಟಕದಲ್ಲೂ ಕೂಡ ಈ ಜಾಗೀರ್‌ದಾರರ ಒಂದು ಅಸೆಸ್‌ಮೆಂಟ್ ಹೋರಾಟ ದೊಡ್ಡದಾಗಿ ನಡೆದಿದ ಎಂದು ಹೇಳುತ್ತೇನೆ. ಸರ್ಕಾರದವರಿಗೆ ಇದರ ಬಗ್ಗೆ ಲಕ್ಷ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈಗೊತ್ತು ಕಂದಾಯ 4 ಪಟ್ಟು 6 ಪಟ್ಟು ಜಾಸ್ತಿಯಾಗಿದೆ. ಸರ್ಕಾರಕ್ಕೆ ಈ ವಿಚಾರ ತಿಳಿಯದೇ ಇದ್ದರೆ ಅದು ತಪ್ಪು ಎಂದು ನನಗೆ ಅನಿಸುತ್ತದೆ. ಇದರಲ್ಲಿ ವಾಸ್ತವಿಕವಾಗಿ ನೋಡಿದರೆ, ಮೊದಲು ಒಂದು ಎಕರೆ ಭೂಮಿಗೆ 8 ಆಣೆ ಇದ್ದುದು, ಈಗೊತ್ತು 5-6 ರೂಪಾಯಿ ಕೊಡಬೇಕಾಗಿದೆ. ಇದು ಬಹಳ ಅನ್ಯಾಯ. ಅದಕ್ಕೆ ನಾನು ಸಲಹೆ ಮಾಡುವುದು ಇದನ್ನು ನಿರ್ಣಯಿಸುವುದಕ್ಕೆ ಇಂಡಿವಿಜ್ಯುಯರ್ ಅಪ್ಲಿಕೇಷನ್ ನಿರೀಕ್ಷಣೆ ಮಾಡುವುದು ಏನೂ ಸ್ಕ್ರೂಟಿನಿಯೋಜನವಿಲ್ಲ ಬ್ಲಾಕ್ ಡಿಸ್ಟ್ರಿಕ್ಟ್‌ನಿಂದ 10 ಸಾವಿರ ಅಪ್ಲಿಕೇಷನ್ ಬಂದಿವೆ. ಅವುಗಳ ಬಗ್ಗೆ ಏನೂ ವಿಚಾರ ಮಾಡಲಿಲ್ಲ. ಒಂದಕ್ಕೂ ಉತ್ತರವೂ ಕೊಡಲಿಲ್ಲ. ಕಾರಣ ಇದಕ್ಕೆ ಈಗ ಇರುವ ಸ್ಟಾಫ್ ಸಾಕಾಗುವುದಿಲ್ಲ. ಬೇರೆ ಸ್ಟಾಫ್ ತೆಗೆದುಕೊಳ್ಳಬೇಕಾಗುತ್ತದೆ. ಆ ಖರ್ಚನ್ನು ಜನಗಳೇ ಕೊಟ್ಟು ಲುಕ್ಸಾನೂ ಕೂಡ ಜನಗಳೇ ಕೊಡಬೇಕಾಗುತ್ತದೆ. ಇದರಿಂದ ಜನತೆಗೆ ಸಮಯವೂ ಅನಾವಶ್ಯಕವಾಗಿ ಹಾಳಾಗುತ್ತದೆ ಮತ್ತು ಸರ್ಕಾರದ ಅಧಿಕಾರಿಗಳ ಸಮಯವೂ ಅನಾವಶ್ಯಕವಾಗಿ

ಹಾಳಾಗುತ್ತದೆ. ಇದನ್ನು ಲಕ್ಷದಲ್ಲಿಡಬೇಕು. ಇವೆರ್ಲಾ ಒಂದೇ ದಿನದಲ್ಲಿ ಮಾಡುವುದಕ್ಕಾಗುವುದಿಲ್ಲ. ಈ ಕ್ಲಾಸಿಫಿಕೇಷನ್ ಜನಗಳ ಒತ್ತಡವಿಲ್ಲದೆ ಮಾಡಬೇಕು. ಈ ಕ್ಲಾಸಿಫಿಕೇಷನ್‌ನಲ್ಲಿ ರ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್ ಏನು ಇದೆ ಅದು ವಾಸ್ತವಿಕವಾಗಿ 5 ಪಟ್ಟು 6 ಪಟ್ಟು ಜಾಸ್ತಿಯಾಗಿದೆಯೇ ಅದನ್ನು ತಿಳಿಸಬೇಕು. ಸರ್ಕಾರದವರು ಡೆಪ್ಯೂಟಿ ಕಮೀಷನರಿಗೆ ಒಂದು ಆದೇಶ ಕೊಡಬೇಕು. ಅಪ್ಲಿಕೇಷನ್ಸ್ ಏನು ಬಿದ್ದಿವೆ ಆ ಅಪ್ಲಿಕೇಷನ್ಸ್‌ನ್ನು ತ್ಯಾಜ್ಯ ಮಾಡಬೇಕು ಎಂದು ಬದರ್ ಡಿಸ್ಟ್ರಿಕ್‌ನಲ್ಲಿ ಒಂದೇ ಕ್ಲಾಸಿಫಿಕೇಷನ್ ಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ಆಂಥ ಟೇಬರ್ ಇದ್ದರೆ ರೈತರೂ ಒಪ್ಪಿಕೊಳ್ಳುವುದಕ್ಕೂ ತಯಾರಾಗಿದ್ದಾರೆ.

ಉಪಾಧ್ಯಕ್ಷರು.—ಭಾಷಣ ಬೇಗ ಮುಗಿಸಬೇಕು.

ಶ್ರೀ ಎಸ್. ಭೀಮಣ್ಣ.—ನಮ್ಮ ಏರಿಯಾದಲ್ಲಿ ರೈತರಿಗೆ ಯಾವ ಪ್ರಕಾರ ಅನ್ಯಾಯವಾಗುತ್ತದೆ ಎಂದು ಹೇಳಲು ಯಾರೂ ಇಲ್ಲ. ಅದುದರಿಂದ ನನಗೆ ಮಾತನಾಡಲು ಸ್ವಲ್ಪ ಬೇಳೆ ಕೊಡಬೇಕು. ಅದುದರಿಂದ ನೀವು ಬೆಳೆಗಳ ದೃಷ್ಟಿಯಿಂದ ನೋಡುವುದಕ್ಕಾಗುವುದಿಲ್ಲ. ಜನರು ಏನು ರೆಪ್ರೆಜೆಂಟೇಷನ್ ಮಾಡುತ್ತಾರೆ ಅದನ್ನು ತಾವು ನೋಡಬೇಕು. ಕ್ಲಾಸಿಫಿಕೇಷನ್ ರಿಕಾರ್ಡ್ ಇದೆ, ಅದನ್ನು ತರಿಸಿ ನೋಡಿ ಬಹಳ ಅನ್ಯಾಯವಾಗಿದೆ. ಅದನ್ನು ಸರಿಪಡಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಮೈಸೂರು ರಾಜ್ಯದಲ್ಲಿ ರ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್ ಕೂಡ ಬೇಕಾದರೆ ಒಂದೇ ಪ್ರಕಾರ ಒಂದೇ ಕರ ಇರಬೇಕು. ಇಲ್ಲದಿದ್ದರೆ ತಪ್ಪಾಗುತ್ತದೆ. ಸಂಪೂರ್ಣವಾದ ಮಾಹಿತಿಯನ್ನು ಮುಂದಿಟ್ಟುಕೊಂಡು ಕ್ಲಾಸ್ ಆಫ್ ರ್ಯಾಂಡ್, ಕ್ಲಾಸಿಫಿಕೇಷನ್ ಕೂಡ ಸರಿಯಾಗಿ ಮಾಡಬೇಕು. ಭೂಮಿ ಸವಲತ್ತುಗಳನ್ನು ನೋಡಿಕೊಂಡು ಅದಕ್ಕೆ ಎಲ್ಲಿ ಬಾವಿಯಲ್ಲಿ ನೀರು ಬರುತ್ತದೋ, ಎಲ್ಲಿ ಟ್ಯಾಂಕ್‌ನಲ್ಲಿ ನೀರು ಬರುತ್ತದೋ, ಎಲ್ಲಿ ಕೆನಾರ್‌ನಲ್ಲಿ ನೀರು ಬರುತ್ತದೋ ಅವರ ಮೇರೆ ನಿರ್ದಿಷ್ಟವಾಗಿ ಕ್ಯಾಟಗಿರಿ ಆಫ್ ರ್ಯಾಂಡ್ ಮಾಡಿ ರೆವಿನ್ಯೂ ಅಸೆಸ್‌ಮೆಂಟ್ ಮಾಡಿಸಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಈ ಅನ್ಯಾಯವನ್ನು ಸರಿಪಡಿಸಲಿಕ್ಕೆ ಕಷ್ಟವಾಗುತ್ತದೆ. ಆಮೇರೆ ನೀವು ಸರಿಪಡಿಸುವುದಕ್ಕೆ ಹೊರಟರು ಸಾಧ್ಯವಾಗಲಿಕ್ಕಿಲ್ಲ. ಆದುದರಿಂದ ರಿಕಾರ್ಡ್‌ನೆರ್ಲಾ ತರಿಸಿ ತಮ್ಮ ಮುಂದಿಟ್ಟುಕೊಂಡು ಅದನ್ನು ಸರಿಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಬೋಳ ರಘುರಾಮಶೆಟ್ಟಿ.—ಮಾನ್ಯ ಸಭಾಪತಿಗಳೇ, ಮಾನ್ಯ ರೆವಿನ್ಯೂ ಮಂತ್ರಿಗಳು ಮೈಸೂರು ರ್ಯಾಂಡ್ ರೆವಿನ್ಯೂ ಆಕ್ಟ್ ಅಮೆಂಡ್‌ಮೆಂಟ್ ಬಿಲ್ ತಂದಿದ್ದಾರೆ. ಈ ಅಮೆಂಡ್‌ಮೆಂಟ್ ಬಿಲ್ ಆಗಬೇಕು ಎನ್ನುವುದು ಈ ಸಭೆಯ ಅಭಿಪ್ರಾಯ ಮಾತ್ರವಲ್ಲ ಇಡೀ ರಾಜ್ಯದ ಅಭಿಪ್ರಾಯವಾಗಿದೆ, ಇದರಲ್ಲಿ ವಿಷಯ ಏನಾಗಿದೆ ಎಂದರೆ ಈ ಬಿಲ್ ಇವೊತ್ತು ಕಾಂಪ್ರೆಹೆನ್ಸಿವ್ ಆಗಿ ಉಂಟೋ ಇಲ್ಲವೋ ಎಂದು ಮಂತ್ರಿಗಳು ವಿಶೇಷವಾಗಿ ಸಮಾಧಾನ ಮಾಡಬೇಕಾಗಿದೆ. ಮುಖ್ಯವಾಗಿ ಈ ಅಮೆಂಡ್‌ಮೆಂಟ್ ಬಿಲ್ ತರುವ ಅವಶ್ಯಕತೆ ಏನು ಎಂದರೆ 1964ನೇ ಇಸವಿಯಲ್ಲಿ ಇದ್ದಂಥ ರೀಸ್ಟರ್‌ಮೆಂಟ್ ಜೋನ್ಸ್ ಮತ್ತು ಬೇರೆ ಬೇರೆ ಕ್ಲಾಸಿಫಿಕೇಷನ್ ಆಫ್ ರ್ಯಾಂಡ್ ಮತ್ತು ರ್ಯಾಂಡ್‌ಗಳಿಗೆ ಹಾಕಿದಂಥ ದರ ಸರಿಯಲ್ಲ. ನಮ್ಮ ರಾಜ್ಯದಲ್ಲಿ ಎರ್ಲಾ ರೈತರಿಂದಲೂ ಸರ್ಕಾರಕ್ಕೆ ದೂರು ಬರುತ್ತಾ ಇದ್ದರೂ ಕೂಡ ನಮ್ಮ ಸರ್ಕಾರದವರು ಇಷ್ಟರವರೆಗೆ ಅವಕ್ಕೆ ಗಮನ ಕೊಡಲಿಲ್ಲ. ಆದರೆ ಈವೊತ್ತು ಈ ಗ್ರೂಪ್‌ನ ಕ್ಲಾಸಿಫಿಕೇಷನ್ ಸರಿಯಾಗಿಲ್ಲ ಎನ್ನುವುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಈ ರೀತಿ ಅನ್ಯಾಯವನ್ನು ಹೋಗಲಾಡಿಸುವುದಕ್ಕೆ ಈ ಬಿಲ್‌ನಲ್ಲಿ ಸಮೃದ್ಧಿಯಾದ ಕಲಂ ಇದೆಯೇ ಎನ್ನುವುದನ್ನು ಮಾನ್ಯ ಮಂತ್ರಿಗಳು ಈ ಸಭೆಗೆ ಸಮಾಧಾನಮಾಡಬೇಕಾಗಿದೆ. ಈ ರಿಸೆಟಲ್‌ಮೆಂಟ್ ಆಗಬೇಕಾದ್ದು 30 ವರ್ಷಕ್ಕೆ ಒಂದು ಬಾರಿ ಆಗಬೇಕಾಗಿದೆ. ಆದುದರಿಂದ ಈ ಬಿಲ್ಲನ್ನು ವಿಮರ್ಶೆ ಮಾಡುವಾಗ ಈ ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಈವೊತ್ತು ರಿಸೆಟಲ್‌ಮೆಂಟ್ ಸರಿಯಾಗಿಲ್ಲ. ರಿವಿಷನ್ ಸೆಟಲ್‌ಮೆಂಟ್ ಆದ ನಂತರ ಮುಂದಿನ 30 ವರ್ಷದವರೆಗೆ ಆ ಸೆಟಲ್‌ಮೆಂಟ್ ನಿಲ್ಲುತ್ತದೆ. ರೀಸೆಟಲ್‌ಮೆಂಟ್ ಮಾಡುವಾಗ ಮುಖ್ಯವಾಗಿ ಮಣ್ಣಿನ ಗುಣ, ಹವೆ ಗುಣ, ಮಳೆ, ಮಾರ್ಕೆಟಿಂಗ್ ಫೆಸಿಲಿಟಿ, ಕೂಲಿ, ಕ್ರಾಪ್ಸ್ ಉತ್ಪತ್ತಿ ಮತ್ತು ಬೆರೆ ಇವನ್ನೆರ್ಲಾ ಇಟ್ಟುಕೊಂಡು ಮಾಡಬೇಕೆಂದು ಕಾನೂನಿನಲ್ಲಿ ಹೇಳಿದೆ. ಇದರಲ್ಲಿ ಪಟೇಲ, ಶ್ಯಾನುಭೋಗರು ಸಾಗುವಳಿ ಚೀಟಿ ನೀಡಬೇಕು. ಕೃಷಿಗೂ ಕೂಡ ಸಾಗುವಳಿ ಚೀಟಿ ನೀಡಬೇಕು. ಹಿಂದಿನ 30 ವರ್ಷದ ಪರಿಸ್ಥಿತಿ ನೋಡಿಕೊಂಡು, ಸಾಗುವಳಿ ಖರ್ಚು ಇದನ್ನೆರ್ಲಾ ನೋಡಿಕೊಂಡು ರೀಸೆಟಲ್‌ಮೆಂಟ್ ಮಾಡಬೇಕಾಗಿದೆ. 1964ನೇ ಇಸವಿಯಲ್ಲಿ ಮಾಡುವಾಗ ಬೇರೆ ಬೇರೆ ರೀಸೆಟಲ್‌ಮೆಂಟ್ ಆಫೀಸರನ್ನು ನೇಮಕ ಮಾಡಿದ್ದರು. ನಮ್ಮ ಸೌತ್ ಕೆನರಾ ಜಿಲ್ಲೆಯಲ್ಲಿ ಪುತ್ತೂರು, ಉಡುಪಿ ರೀಸೆಟಲ್‌ಮೆಂಟ್ ಆಫೀಸರ್ಸ್ ಅವರು ರಿಪೋರ್ಟ್ ಕೊಡುವ ಮೊದಲು, ಸ್ಥಳಕ್ಕೆ ಹೋಗಿ ಸರಿಯಾಗಿ ತನಿಖೆ ಮಾಡಿ ಸರಾಸರಿ ಉತ್ಪತ್ತಿ ನೋಡಿ

(ಶ್ರೀ ಬೋಳ ರಘುರಾಮಶೆಟ್ಟಿ)

ಸಂಬಂಧಪಟ್ಟವರನ್ನು ವಿಚಾರಣೆ ಮಾಡಿ ರೀಸೆಟರ್‌ಮೆಂಟ್ ಮಾಡಬೇಕು ಎಂದು ಕಾನೂನಿನಲ್ಲಿ ಹೇಗೆ ಇದೆಯೋ ಆ ರೀತಿ ಮಾಡಿದ್ದಾರೆಯೇ ? ಹಾಗೆ ಮಾಡದೆ 1964ನೇ ಇಸವಿಯಲ್ಲಿ ರೀಸೆಟರ್‌ಮೆಂಟ್ ಆಫೀಸರ್ಸ್ ನಮ್ಮ ಜಿಲ್ಲೆಯ ಬಗ್ಗೆ ರಿಪೋರ್ಟ್ ಕೊಡುವಾಗ ಈ ರೀತಿ ತಪ್ಪು ಮಾಡುತ್ತೇನೆಂದು ಅವರು ಅಲ್ಲಿ ಸ್ಥಳದಲ್ಲಿ ತಿಳಿಸಲಿಲ್ಲ. ಅದಲ್ಲದೆ ಸ್ಥಳಕ್ಕೆ ಹೋಗಿ ಬೇರೆ ಬೇರೆ ಮಣ್ಣಿನ ಪರಿಸ್ಥಿತಿಯನ್ನು, ಬೆಳೆ ಕಟಾವು ಮಾಡುವಾಗ ಎಷ್ಟು ಉತ್ಪತ್ತಿ ಆಗುತ್ತದೆ ಎನ್ನುವುದನ್ನೂ ಸಹ ಕೂಲಂಕಷವಾಗಿ ನೋಡಲಿಲ್ಲ.

ಇಷ್ಟು ಮಾತ್ರವಲ್ಲದೆ ಅವರು ತೀರ್ಪೆ ಹಾಕುವಾಗ ಬೆಳೆ ಏನು, ಮಣ್ಣಿನ ಸಾರವೇನು ಎಂದು ವಿಮರ್ಶೆ ಮಾಡಲಿಲ್ಲ. ಕೇವಲ ಹಿಂದಿನ ಐದಾರು ವರ್ಷಗಳ ಸರಾಸರಿ ಬೆಲೆ, ಮಂಗಳೂರು ಪೇಟೆಯ ಬೆಲೆಯನ್ನು ನೋಡಿ ರಿಪೋರ್ಟ್ ಕೊಟ್ಟಿದ್ದರು ಮತ್ತು ಆ ರಿಪೋರ್ಟ್ ಮೇಲೆ ಸಾವಿರಗಟ್ಟಲೆ ರೈತರು ಮತ್ತು ಸಂಘ ಸಂಸ್ಥೆಗಳವರು ಆಕ್ಷೇಪ ಕೊಟ್ಟಿದ್ದರು. ಡೆಪ್ಯುಟಿ ಕಮಿಷನರು ಕೊಟ್ಟಂಥ ರಿಪೋರ್ಟ್‌ನಲ್ಲಿ, ಅವರೆ ಒಪ್ಪಿಕೊಂಡ ಹಾಗೆ, ಆಕ್ಷೇಪಗಳು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಬಂದುದರಿಂದ ರಿಪೋರ್ಟ್‌ನ್ನು ವಿಮರ್ಶೆ ಮಾಡಿ ಕೊಡಲಿಕ್ಕೆ ಸಾಧ್ಯವಾಗಲಿಲ್ಲ ಎಂದು ಒಪ್ಪಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬಾಗಾಯತು ಜಮೀನು ಮೂರನೇ ವರ್ಗದ ವೆಟ್ ಲ್ಯಾಂಡ್. ಇದು 1904ನೇ ಇಸವಿಯ ಮದ್ರಾಸ್ ಸೆಟರ್‌ಮೆಂಟ್ ಮತ್ತು 1934ನೇ ಇಸವಿಯ ರೀ ಸೆಟರ್‌ಮೆಂಟ್‌ನಲ್ಲಿ ಕೂಡ ಕಾಣುತ್ತದೆ. ಈಗ ಏನು ಮಾಡಿದ್ದಾರೆಂದರೆ ನಮ್ಮಲ್ಲಿ ಉಡುಪಿ ಮತ್ತು ಪುತ್ತೂರು ಎಂದು ಎರಡು ಜೋನ್ ಮಾಡಿರುವುದರಲ್ಲಿ ಉಡುಪಿ ಜೋನ್‌ನಲ್ಲಿ 18-92 ರೂಪಾಯಿ ಬಾಗಾಯತು ಜಮೀನಿಗೆ ಹಾಕಿದ್ದಾರೆ. ಪುತ್ತೂರು ಭಾಗದಲ್ಲಿ 12—31 ರೂಪಾಯಿ ಹಾಕಿದ್ದಾರೆ. ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಗಾರ್ಡನ್ ಲ್ಯಾಂಡ್ ಎಂದರೆ ಏನು ಎಂದು ಡಿಫೈನ್ ಮಾಡಿದ್ದಾರೆ. ಅದರಲ್ಲಿ ಡ್ರೈ ಗಾರ್ಡನ್ ಲ್ಯಾಂಡ್, ವೆಟ್‌ಗಾರ್ಡನ್ ಲ್ಯಾಂಡ್ ಎಂದು ಹೇಳಿದ್ದಾರೆ. ಇಷ್ಟು ಮಾತ್ರವಲ್ಲದೆ ಹಿಂದಿನ ಮೈಸೂರು ರಾಜ್ಯದಲ್ಲಿ ಸೇರಿದಂಥ ಪ್ರದೇಶದಲ್ಲಿ ಹಿಂದಿನ ಕಾಲದಲ್ಲಿ ಯಾವುದಾದರೂ ಬಾಗಾಯತು ಜಮೀನಿನ ಅರ್ಥ ವಿವರಣೆ ಇದ್ದರೆ ಅದೂ ಕೂಡ ಈ ಡೆಫಿನಿಷನ್ ಒಳಗೆ ಸೇರಬೇಕು ಎಂದು ಹೇಳಿದ್ದಾರೆ. ಹಾಗಾಗಿ ನಮ್ಮ ಜಿಲ್ಲೆಯಲ್ಲಿನ ಎಲ್ಲ ಬಾಗಯತು ಜಮೀನುಗಳೂ ಈ ಡೆಫಿನಿಷನ್‌ನಲ್ಲಿ ಬರುತ್ತವೆ ; ಮತ್ತು, ಅವೆಲ್ಲವೂ ಈ ಹೊತ್ತು ಬಾಗಯತು ಜಮೀನಾಗಿ ನಿಂತಿವೆ. ಹಿಂದೆ ಬಾಗಯತು ಜಮಿನಿಗೆ ಅಲ್ಲಿ ಇದ್ದಂಥ ದರ ಒಂದು ರೂಪಾಯಿನಿಂದ ಮೂರು ರೂಪಾಯಿವರೆಗೆ. ಅದನ್ನು ವೆಟ್ ಲ್ಯಾಂಡ್ ಫಸ್ಟ್ ಕ್ಲಾಸ್‌ಗಿಂತ ಉತ್ತಮವಾದುದು ಎಂದು ಅದರ ಪ್ರಕಾರ ದರವನ್ನು ಈಗ ಹಾಕಿದ್ದಾರೆ. ಇದು ಇಡೀ ಜಿಲ್ಲೆಗೆ ಅನ್ಯಾಯವಾಗಿದೆ. ನಮ್ಮ ಜಿಲ್ಲೆಯಲ್ಲಿ ಮೊದಲನೆ ಕ್ಲಾಸಿಫಿಕೇಷನ್ ಪ್ರಕಾರ ಬಾಗಾಯತು ಲ್ಯಾಂಡ್ ಆಗಬೇಕಾದರೆ ಅದರಲ್ಲಿ ಯಾವುದೋ ಒಂದು ಫಲ ಬಿಡುವಂಥ ಎರಡು ಮೂರು ಮರ ಏದ್ದರೆ ಸಾಕು. ಈ ಹೊತ್ತಿನ ರೇಟ್ ನೊಡಿದರೆ ಆ ಬಾಗಯತು ಉತ್ಪತ್ತಿ ಕೂಡ ಅಷ್ಟು ಬರಲಿಕ್ಕೆ ಸಾಧ್ಯವಿಲ್ಲ.

ಇನ್ನು ವೆಟ್ ಲ್ಯಾಂಡ್ಸ್ ವಿಷಯ ನೋಡುವುದಾದರೆ ಅದನ್ನು ನಿರ್ಣಯ ಮಾಡುವಾಗ ಮಣ್ಣಿನ ಪರಿಸ್ಥಿತಿ, ಅದರಲ್ಲಿ ಆಗುವಂಥ ಬೆಳೆ, ಆ ಸ್ಥಳಕ್ಕೆ ಇರುವ ಮಾರುಕಟ್ಟೆಯ ಸವಲತ್ತು, ಇದನ್ನೆಲ್ಲ ನೋಡಿಕೊಂಡು ಕ್ಲಾಸಿಫಿಕೇಷನ್ ಮಾಡಬೇಕು ಎಂದು ಹೇಳಿದ್ದಾರೆ. ಉಡುಪಿ ಜೋನ್‌ನಲ್ಲಿ ಕರಾವಳಿ ತಾಲ್ಲೂಕುಗಳಾದ ಮಂಗಳೂರು, ಉಡುಪಿ, ಕುಂದಾಪುರ ಇವು ಬರುತ್ತವೆ. ಪುತ್ತೂರು ಜೋನ್ ಘಾಟ್ ಮತ್ತು ಸಬ್ ಘಾಟ್ ಪ್ರದೇಶ. ಉಡುಪಿ ಜೋನ್‌ನಲ್ಲಿ 9—44 ರೂಪಾಯಿ ಹಾಕಿದ್ದಾರೆ. ಪುತ್ತೂರು ಜೋನ್‌ನಲ್ಲಿ 9—47 ರೂಪಾಯಿ ಹಾಕಿದ್ದಾರೆ. ನಿಜವಾಗಿ ಪುತ್ತೂರಿಗಿಂತ ಉಡುಪಿ ಜೋನ್‌ನಲ್ಲಿ ಹೆಚ್ಚಾಗಿರಬೇಕು. ಮಣ್ಣಿನ ಗುಣ, ಬೆಳೆ ಮತ್ತು ಇತರ ಸೌಕರ್ಯಗಳು ಉಡುಪಿ ಜೋನಿಗೆ ಹೆಚ್ಚಾಗಿದ್ದು ಅಲ್ಲಿ ಹೆಚ್ಚಾಗಿ ಹಾಕಬೇಕಾಗಿತ್ತು. ಆದರೆ ಆ ರೀತಿ ಹಾಕಿಲ್ಲ.

ವೆಟ್ ಲ್ಯಾಂಡ್ಸ್‌ನಲ್ಲಿ ಮೂರು ತರಹ ಇದೆ. ಒಂದು ಬೆಳೆ ಬರುವಂಥದು, ಎರಡು ಬೆಳೆ ಬರುವಂಥದು ಮತ್ತು ಮೂರು ಬೆಳೆ ಬರುವಂಥದು. ಅಲ್ಲಿ ಮಳೆ ನೀರಿನಿಂದ ಸಾಗುವಳಿಯಾಗುವಂಥ ವೆಟ್ ಲ್ಯಾಂಡ್ಸ್ ಜಾಸ್ತಿ. ವೆಟ್ ಲ್ಯಾಂಡ್ಸ್‌ಗೆ ಉಡುಪಿಯಲ್ಲಿ ಮೊದಲನೇ ವರ್ಗಕ್ಕೆ 9—44 ರೂಪಾಯಿ, ಎರಡನೇ ವರ್ಗಕ್ಕೆ 8—62 ರೂಪಾಯಿ ಮತ್ತು ಮೂರನೆ ವರ್ಗಕ್ಕೆ 7—48 ರೂಪಾಯಿ ಹಾಕಿದ್ದಾರೆ. ಎಂದರೆ ಒಂದು ಬೆಳೆ ಬರುವುದಕ್ಕಿಂತ ಎರಡು ಮತ್ತು ಮೂರು ಬೆಳೆ ಬರುವುದಕ್ಕೆ ಒಂದೊಂದು ರೂಪಾಯಿ ಮಾತ್ರ ಜಾಸ್ತಿ ಹಾಕಿದ್ದಾರೆ. ನಮ್ಮಲ್ಲಿ

ಒಂದು ಬೆಳೆಯಾಗುವ ಗದ್ದೆಗಳಲ್ಲಿ ಮಳೆ ಬಂದರೆ ಮಾತ್ರ ಬೆಳೆಯಾಗುತ್ತದೆ. ನಮಗೆ ಯಾವ ನೀರಾವರಿ ಅನುಕೂಲವೂ ಇಲ್ಲ. ಎರಡು ಬೆಳೆ ತೆಗೆಯುವವರಿಗೆ ನಮಗಿಂತ ಎರಡು ಪಾಲು, ಮೂರು ಬೆಳೆ ತೆಗೆಯುವವರಿಗೆ ಮೂರು ಪಾಲು ಉತ್ಪತ್ತಿ ಬರುತ್ತದೆ. ಆದರೆ ತೀರ್ವೆ ಹಾಕಿರುವುದನ್ನು ನೋಡಿದರೆ ಒಂದೊಂದು ರೂಪಾಯಿ ಮಾತ್ರ ಹೆಚ್ಚಾಗಿದೆ. ನಮ್ಮಲ್ಲಿ ಹೆಚ್ಚು ಅನುಕೂಲವಿದ್ದರೆ ನಾವು ಪ್ರತಿಭಟಿಸಿ ಹೇಳಬೇಕಾದ್ದಿಲ್ಲ ಎನ್ನುವುದನ್ನು ಎಲ್ಲರೂ ಕೂಡಲೆ ತಿಳಿದುಕೊಳ್ಳಬೇಕಾದ ವಿಷಯ. ಹಿಂದೆ ಆದಂಥ ಎರಡು ಸೆಟಲ್‌ಮೆಂಟುಗಳಲ್ಲಿ ಜಮೀನಿನ ಕ್ಲಾಸಿಫಿಕೇಷನ್ ಮಾಡುವಾಗ ನೀರಾವರಿ ಸೌಕರ್ಯವನ್ನು ಗಣನೆಗೆ ತೆಗೆದುಕೊಂಡಿದ್ದರು. ವಾಟರ್ ಸೇರಿಸಿ ಆ ಕಾಲಕ್ಕೆ ಕಂದಾಯ ಹಾಕಿದ್ದರು. ಈಗ ವಾಟರ್ ಸೆಸ್ ಪ್ರತ್ಯೇಕವಾಗಿ ನಮ್ಮ ಸರ್ಕಾರ ಹಾಕುತ್ತಿದೆ. 1934ನೇ ಇಸವಿಯಲ್ಲಿ ಕೂಡ ಸೆಕಂಡ್ ಕ್ಲಾಸ್, ಫಸ್ಟ್ ಕ್ಲಾಸ್ ಜಮೀನಿಗೆ ವಾಟರ್ ಸೆಸ್ ಬಿಟ್ಟು ಅದರ ಮೇಲೆ ಕಂದಾಯ ಹಾಕುತ್ತಿದ್ದರು. ಸರ್ಕಾರ ಈಗ ಹಾಕಿರುವ ದರಗಳು ಸರಿಯಾಗಿಲ್ಲ. ಎಲ್ಲೆಲ್ಲಿ ಸರಿಯಾಗಿ ಆಗಿಲ್ಲ ಅಂಥ ಕಡೆ ಸರಿಯಾಗಿದೆ ಅಥವಾ ಇಲ್ಲ ಎಂದು ಹೇಳಿದರೆ ಅದನ್ನು ನೋಡಬಹುದು ಎಂದು ಸರ್ಕಾರದವರು ಹೇಳುವುದು ಎಷ್ಟರ ಮಟ್ಟಿಗೆ ಸರಿ ಆಗುತ್ತದೆಯೋ ಗೊತ್ತಿಲ್ಲ. ಯಾವ ಜೋನ್‌ನಲ್ಲಿ ಕೆಟ್ಟದ್ದಾಗಿದೆ ಎಂದು ತಿಳಿದಾಗ ಯಾವ ಅಧಿಕಾರಿಗಳು ರೀ ಸೆಟಲ್‌ಮೆಂಟ್ ಮಾಡಿದರೋ ಅದೇ ಅಧಿಕಾರಿಗಳಿಗೆ ರಿವಿಷನ್ ಸೆಟಲ್‌ಮೆಂಟ್ ಕೂಡ ಮಾಡುವ ಸವಲತ್ತನ್ನು ಈ ಬಿಲ್‌ನಲ್ಲಿ ತಂದಿದ್ದಾರೆ. ಹಾಗೆ ಮಾಡುವಾಗ ಯಾವ ಜೋನ್‌ನಲ್ಲಿ ಪುನಃ ಸೆಟಲ್‌ಮೆಂಟ್ ಆಗಬೇಕು ಎನ್ನುವ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ತೀರ್ಮಾನ ಮಾಡುವಾಗ ಯಾವ ಸಂದರ್ಭದಲ್ಲಿ ರಿವಿಷನ್ ಸೆಟಲ್‌ಮೆಂಟ್ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಿಲ್ಲ. ಸರ್ಕಾರದವರೇ ನಮ್ಮೊ ಮೋಚ್ಚೋ ಮಾಡಬೇಕು ಎಂದರೆ ಯಾವ ಸಂದರ್ಭದಲ್ಲಿ ಮಾಡಬೇಕು ? ಇದರಲ್ಲಿ ರಾಜಕೀಯ ಪ್ರಭಾವ ಬೀರುವುದಕ್ಕೆ ಸಾಧ್ಯವುಂಟು.

ಡೆಪ್ಯುಟಿ ಕಮಿಷನರು ಅಥವಾ ಬೇರೆ ಅಧಿಕಾರಿಗಳಿಗೆ ಸಮಾಧಾನ ಕಂಡಲ್ಲಿ ರಿವಿಷನ್ ಮಾಡಬೇಕೆಂದು ಹೇಳಿದ್ದಾರೆ. ಆದರೆ ಯಾವ ಸಂದರ್ಭದಲ್ಲಿ ಅವರೇ ಮಾಡಬೇಕು, ಫಸ್ಟ್ ಕ್ಲಾಸ್ ವೆಟ್ ಲ್ಯಾಂಡ್ ಎಂದರೆ ಎಷ್ಟು ಬೆಳೆ ಬರಬೇಕು, ಬಾಗಾಯತು ಭೂಮಿಯಲ್ಲಿ ಎಷ್ಟು ಬೆಳೆ ಬರಬೇಕು, ಎಷ್ಟು ಬೆಳೆ ಬರುವುದಕ್ಕೆ ಎಷ್ಟು ರೇಟ್ ಹಾಕಬೇಕು, ಎಂದು ಯಾವ ಕಡೆಯೂ ಹೇಳಿಲ್ಲ. ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ ಅವರ ಇಚ್ಛೆ ಪ್ರಕಾರ ಮಾಡಬಹುದು. ಯಾವುದನ್ನು ಫಸ್ಟ್ ಕ್ಲಾಸ್ ಲ್ಯಾಂಡ್ ಮಾಡಬೇಕು, ಯಾವುದನ್ನು ಸೆಕಂಡ್ ಕ್ಲಾಸ್ ಲ್ಯಾಂಡ್ ಮಾಡಬೇಕು, ಯಾವುದನ್ನು ಗಾರ್ಡನ್ ಲ್ಯಾಂಡ್ ಮಾಡಬೇಕು ಎನ್ನುವ ತಳಹದಿ ಹಾಕದೆ ಇದ್ದರೆ ಮತ್ತು ಯಾವುದಕ್ಕೆ ಯಾವ ರೇಟ್ ಹಾಕಬೇಕು ಎನ್ನುವ ತಳಹದಿ ಹಾಕದೇ ಇದ್ದರೆ ಅಧಿಕಾರಿಗಳು ಏನು ಮಾಡಬೇಕು ? ಅವರು ಅವರ ಖುಷಿ ಬಂದ ಹಾಗೆ ಮಾಡಬೇಕಾಗುತ್ತದೆ. ಆದ್ದರಿಂದಲೇ ಈ ಬಿಲ್ಲನ್ನು ಸಾರ್ವಜನಿಕಾಭಿಪ್ರಾಯ ಸಂಗ್ರಹಣೆಗೆ ಕಳಿಸಬೇಕೆಂದು ಮಾನ್ಯ ಸದಸ್ಯರು ಸೂಚಿಸಿದ್ದುದು ಸರಿಯಾದ ಆಲೋಚನೆ. ಈ ಹೊತ್ತು ನಿರ್ಣಯ ಮಾಡುವುದು ಮುಂದಿನ 30 ವರ್ಷಗಳ ವರೆಗೆ ಇರುವ ವಿಷಯ. ಆದುದರಿಂದ ಇದರಲ್ಲಿ ಸರ್ಕಾರವಾಗಲಿ, ಅಧಿಕಾರಿಗಳಾಗಲೀ, ಅವಸರ ಮಾಡಿ ಒಂದೆರಡು ತಿಂಗಳೊಳಗೆ ತೀರ್ಮಾನಮಾಡಿ ಮುಗಿಸುವ ವಿಷಯವಲ್ಲ. ಈ ಹೊತ್ತು ಆಹಾರ ಧಾನ್ಯಗಳ ಕ್ರಯ ಅಥವಾ ಕೃಷಿಯಿಂದ ಬರುವ ಉತ್ಪತ್ತಿಯ ಕ್ರಯ ಸಾಧಾರಣ ಮಟ್ಟಕ್ಕೆ ಇದ್ದರೂ ಕೂಡ ಮುಂದಿನ 30 ವರ್ಷಗಳಲ್ಲಿ ಅದೇ ರೀತಿಯಾಗಿ ನಿಲ್ಲುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟವರ ಅಭಿಪ್ರಾಯವನ್ನು ಕೂಲಂಕಷವಾಗಿ ತಿಳಿದುಕೊಂಡು ಅದನ್ನು ನೆರೆಯಾಗಿಟ್ಟುಕೊಂಡು ಸರಿಯಾದ ತೀರ್ಮಾನಕ್ಕೆ ಬರಬೇಕು. ಯಾವ ದೃಷ್ಟಿಯಿಂದ ನೋಡಿದರೂ ಕೂಡ 1964ರಲ್ಲಿ ರೀ-ಸೆಟ್ಲ್‌ಮೆಂಟ್ ಆದಾಗ ಮಾಡಿರುವ ತಪ್ಪನ್ನು ಮುಂದೆ ಕೂಡ ಮಾಡುವ ಹಾಗೆ ಕಾಣುತ್ತದೆ. 1964ರಲ್ಲಿ 25 ಲಕ್ಷಕ್ಕಿಂತ ಹೆಚ್ಚು ಖರ್ಚಾಗಿದೆ, ಈಗ 9 ಲ ಆಗಬಹುದು. ಒಂದು ವಿಷಯ ತಿಳಿದುಕೊಳ್ಳಬೇಕು, ಜನರಿಂದ ದೂರು ಬಂದಾಗ ಈ ರೀತಿ ರಿವಿಷನ್ ಸೆಟ್ಲ್‌ಮೆಂಟ್ ಮಾಡುತ್ತಿದ್ದರೆ ನಷ್ಟವಾಗಬಹುದು. ಸರಕಾರ ಏನು ಮಾಡಿದರೂ ಸರಿಯಾಗಿರುವುದಿಲ್ಲ, ನ್ಯಾಯವಾದ ರೀತಿಯಲ್ಲಿ ಮಾಡುವುದಿಲ್ಲ ಎಂಬ ಅಭಿಪ್ರಾಯ ಬರುವ ರೀತಿಯಲ್ಲಿ ಕೆಲಸ ಮಾಡಬಾರದು, ಸರಕಾರ ಮಾಡಿರುವ ತಪ್ಪನ್ನು ಮುಂದುವರಿಸಿದರೆ ಸೇಕಡ 80 ಮಂದಿ ರೈತರಲ್ಲಿ ವಿಶ್ವಾಸ ಹುಟ್ಟುವುದಿಲ್ಲ, ಅವಿಶ್ವಾಸ ಬರುವ ಸಂದರ್ಭ ಬರಬಹುದು. ಆದುದರಿಂದ ಈ ರೀತಿ ಮಾಡಬಾರದು. ಸಾರ್ವಜನಿಕರ ಅಭಿಪ್ರಾಯಕ್ಕೆ ಈ ಬಿಲ್ಲನ್ನು ಕಳಿಸಬೇಕು. ಅನಂತರ ಯಾವ ರೀತಿ ರಿವಿಷನ್ ಸೆಟ್ಲ್‌ಮೆಂಟ್ ಮಾಡಬೇಕು ಎಂದು ನೋಡಿ ಸರಿಯಾದ ತಳಹದಿ ಹಾಕಿ ನಂತರ ಮಾಡಿದರೆ ನಿಜವಾದ ಸೆಟ್ಲ್‌ಮೆಂಟ್ ಆಫ್ ಲ್ಯಾಂಡ್ ರೆವೆನ್ಯೂ ಆಗಬಹುದು, ಇಲ್ಲದಿದ್ದರೆ ಅನ್ಯಾಯವಾಗಬಹುದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

6-30 P.M.

† ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಥೆಯ ಮುಂದಿರುವ ಭೂಕಂದಾಯದ ತಿದ್ದುಪಡಿ ವಿಧೇಯಕವನ್ನು ಸಂಪೂರ್ಣವಾಗಿ ಸ್ವಾಗತಿಸಿ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದು ಯೋಚನೆಮಾಡಿದ್ದೇನೆ. ನಮ್ಮ ಸ್ನೇಹಿತರುಗಳಾದ ವಿರೋಧ ಪಕ್ಷದವರು ಸಾರ್ವಜನಿಕರ ಅಭಿಪ್ರಾಯಕ್ಕೆ ಈ ವಿಧೇಯಕವನ್ನು ಕಳಿಸಬೇಕೆಂದು ಮೇಲಿಂದಮೇಲೆ ಹೇಳಿದರು. 1964-65ರಲ್ಲಿ ರೀ ಸೆಟ್ಲ್‌ಮೆಂಟ್ ಆದಾಗ ಸಾರ್ವಜನಿಕ ಅಭಿಪ್ರಾಯ ಎಷ್ಟುಮಟ್ಟಿಗೆ ಸರಕಾರದ ಮುಂದೆ ಬಂತು, ಎಷ್ಟು ರೈತರು ಅಹವಾಲು ಕೊಟ್ಟಿರಬಹುದು ಎಂಬುದು ಬಹುಶಃ ಎಲ್ಲರಿಗೂ ಗೊತ್ತಿರಬಹುದು, ಮಾನ್ಯ ಸದಸ್ಯರು ಇದನ್ನು ಎಷ್ಟೋಬಾರಿ ಪ್ರಸ್ತಾಪಮಾಡಿರಬಹುದು. ಅಂದಮೇಲೆ ಪುನಃ ಇದನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಕಳಿಸಬೇಕೆಂಬುದಕ್ಕೆ ಬಹುಶಃ ಯಾವ ಕಾರಣವೂ ಕಾಣುವುದಿಲ್ಲ. ಸರಕಾರದವರು ನಿಜವಾಗಿಯೂ ಕೂಡ ಬಹಳ ದೊಡ್ಡ ಮನಸ್ಸು ಮಾಡಿ ತೀರ್ಮಾನಮಾಡಿದ್ದಾರೆಂದು ರೈತರೇ ಒಪ್ಪಿದ್ದಾರೆ. ಯಾವತ್ತೇ ಆಗಲಿ, ಕಾನೂನು ಮಾಡಿದಮೇಲೆ 30 ವರ್ಷದೊಳಗೆ ಪುನಃ ಯಾವ ರೀತಿಯಲ್ಲೂ ಕೈಹಾಕುವುದಕ್ಕೆ ಅವಕಾಶವಿಲ್ಲ, ಈ ದಿವಸ ಅದನ್ನು ಕೂಡ ಎಂಥ ರೈತರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆಂದು ರೈತರು ಇದನ್ನು ಸ್ವಾಗತಿಸಿದ್ದಾರೆ. ಈ ಕಂದಾಯ ಇರಬೇಕೆ, ಬೇಡವೆ, ಎಂಬ ವಿಚಾರದಲ್ಲಿ ಅನೇಕರು ಹಿಂದೆಯೇ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇಂದು ಶೇಕಡ 99 ಜನರು ರೈತರು ಕಂದಾಯ ತೆಗೆಯಬೇಕೆಂದು ಖಂಡಿತ ಹೇಳುತ್ತಿಲ್ಲ. ಕಂದಾಯ ಕೊಡದಿದ್ದರೆ ಜಮೀನಿನ ಬಗ್ಗೆ ದಾಖಲಾತಿಯೇನು ಎಂಬ ಅನುಮಾನವಿರುವಾಗ ಏಕೆ ಹೀಗೆ ಚರ್ಚೆಮಾಡುತ್ತಿದ್ದೀರಿ ಎಂದು ರೈತರು ಕೇಳುತ್ತಿದ್ದಾರೆ. ಆದುದರಿಂದ ದೇಶದಲ್ಲಿ 85 ಪರ್ಸೆಂಟ್ ಜನರೇನು ವ್ಯವಸಾಯದ ಮೇಲಿದ್ದಾರೆ ಅವರಿಗೆ ಈ ವಿಚಾರದಲ್ಲಿ ಚರ್ಚೆಯಾಗುವುದರಲ್ಲಿ ಉತ್ಸಾಹವಿಲ್ಲ.

ಈ ತಿದ್ದುಪಡಿ ತಂದಿರುವ ವಿಷಯದಲ್ಲಿ ನಾನು ಮೊನ್ನೆ ಊರಿಗೆ ಹೋದಾಗ ರೈತರು ಪ್ರಶ್ನೆ ಮಾಡಿದರು, ಬಹಳ ವ್ಯಥೆಪಟ್ಟರು, ಕಂದಾಯ ವಸೂಲುಮಾಡಿದರೂ ಚಿಂತೆಯಿಲ್ಲ, ಈಗ ನೋಟೀಸ್ ಕೊಟ್ಟರೆ ಅಪೀಲು ಮಾಡಿದರೆ ಹತ್ತು ವರ್ಷ ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸಿಗೆ ತಿರುಗಬೇಕು, ಡಿ.ಸಿ. ಅಡ್‌ಜರ್ನ್ ಮಾಡುತ್ತಾರೆ, ಹೀಗಾಗಿ ಬಹಳ ದಿವಸ ಅಲ್ಲಿಗೆ ತಿರುಗಬೇಕು, ಈ ಗೋಳಿದೆ, ಇದು ತೀರ್ಮಾನವಾಗುವವರೆಗೆ ಕಂದಾಯ ನಿರ್ಧಾರ ಮಾಡುವುದಿಲ್ಲ, ಆ ಮೇಲೆ ಹೊರೆಯಾಗಿ ತೊಂದರೆಯಾಗುವುದು. ಇದರಿಂದ ಇನ್ನೂ ಕಿರುಕುಳವಾಗುವುದು ಎಂದು ಬಹಳ ವ್ಯಥೆ ಪಟ್ಟರು. ಹೇಗಾದರೂ ಮಾಡಿ ಒಂದೇ ಸಾರಿ ಕಂದಾಯ ನಿಗದಿ ಮಾಡಿದರೆ ಒಳ್ಳೆಯದು ಎಂದು ಹೇಳಿದರು. ಆದುದರಿಂದ ಈ ವಿಷಯದಲ್ಲಿ ಚರ್ಚೆಮಾಡಬೇಕಾದ ಅಗತ್ಯವಿದ್ದರೂ ಅಪೀಲು ಮಾಡುವಾಗ ರೈತರಿಗೆ ತೊಂದರೆಯಾಗುವುದು ನಷ್ಟವಾಗುವುದು ಎಂದು ಅನ್ನಿಸುತ್ತದೆ. ಅಪೀಲು ಮಾಡಿದರೆ ರಾಯರ ಬಳಿಗೆ ಹೋಗಬೇಕು, ಕನಿಷ್ಠವಾಗಿ ಅವರಿಗೆ ನೂರು ರೂಪಾಯಿಗೆ ಕಡಮೆ ಕೊಡುವುದಕ್ಕಾಗುವುದಿಲ್ಲ. ಹೀಗೆ ಎಷ್ಟೋ ಖರ್ಚು ಬರುತ್ತದೆ. ಆದುದರಿಂದ ನೋಟೀಸ್ ಬೇಡ, ಸುಮ್ಮನೆ ಕಂದಾಯ ಕೊಡೋಣ, ಖಚಿತವಾಗಿ ಹೇಳಿ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದ ಸರಕಾರದವ್ರು ನಾನು ವಿನಂತಿಮಾಡುವುದು ದಯಮಾಡಿ ಜಿಲ್ಲಾಧಿಕಾರಿಗಳಿಗೆ ಈಗಿರುವ ರೀತಿಯಲ್ಲಿ ಎರಡರಷ್ಟಕ್ಕಿಂತ ಕಂದಾಯ ಹೆಚ್ಚಾಗಿಲ್ಲದಿರುವ ಕಡೆಗಳಲ್ಲಿ ಎಂಟು ದಿವಸಗಳಲ್ಲಿಯೇ ತೀರ್ಮಾನ ಮಾಡುವುದು ಬಹಳ ಒಳ್ಳೆಯದು ಎಂದು ತಿಳಿಸಬೇಕು. ಏಕೆಂದರೆ ದಿನವೂ ರೈತರು ತಿರುಗುವುದಕ್ಕೆ ಅವಕಾಶ ಮಾಡಬಾರದು. ಅಪೀಲುಗಳಿಗಾಗಿ ಒಂದು ವಾರ ನಿಗದಿಮಾಡಿ, ಆ ದಿವಸ ಅಕಸ್ಮಾತ್ ಮಂತ್ರಿಗಳು ಪ್ರವಾಸ ಬಂದರೆ ಅವರನ್ನು ಭೇಟಿಮಾಡಿ ಬಂದು ಅಪೀಲುಗಳನ್ನು ಇತ್ಯರ್ಥಮಾಡಲು ಅವಕಾಶ ಇರಬೇಕು. ಅಪೀಲಿನ ದಿವಸ ರಾಯರು ಬಂದಿರುತ್ತಾರೆ, ಮಂತ್ರಿಗಳು ಅಗಾಗ್ಗೆ ಪ್ರವಾಸ ಬರುವುದು ಸ್ವಾಭಾವಿಕ, ಆಗ ಮಂತ್ರಿಗಳ ಜೊತೆಯಲ್ಲಿ ಹೋದರೆ, ಕೇನು ನಡೆಸುವುದಕ್ಕಾಗುವುದಿಲ್ಲ, ಎಷ್ಟೋ ದೂರದಿಂದ ಬಂದಿರುವವರಿಗೆ ತೊಂದರೆಯಾಗುವುದು. ಆದುದರಿಂದ ತೊಂದರೆಯಾಗುವುದಕ್ಕೆ ಅವಕಾಶ ಕೊಡಬಾರದು. ಗೊತ್ತುಮಾಡಿರುವ ದಿವಸ ತೀರ್ಮಾನಮಾಡಲು ಅವಕಾಶ ಕಲ್ಪಿಸಬೇಕು.

ಆಮೇಲೆ ಈ ದಿವಸ ದರ ನಿಗದಿಮಾಡುತ್ತೀರಿ. ಮತೆನಾಡಿನ ಕಡೆ ಶ್ರೀ ರಾಚಯ್ಯನವರಿಗೆ ತೋರಿಸಿದೆ, ಮನೆಯ ಪಕ್ಕದಲ್ಲಿ ನಾಲ್ಕು ಬಾಳೆಯ ಗಿಡ ಹಾಕುವುದುಂಟು, ಯಾರಾದರೂ ಮನೆಗೆ ಬಂದರೆ ಊಟಕ್ಕೆ ಬಾಳೆಯ ಎಲೆ ಬೇಕಾಗುವುದು ಎಂದು ಮನೆಯ ಮುಂದೆ ತೆಂಗಿನ ಗಿಡ ಮಾವಿನ ಗಿಡ ಬೆಳೆಸುವುದುಂಟು, ಇಂದು ಹಾರ್ಟಿಕಲ್ಚರಲ್ ಇರಾಖೆ ಇದಕ್ಕೆ ಪ್ರೋತ್ಸಾಹ ಕೊಡುತ್ತಿದೆ. ಹೀಗೆ ಒಂಬೆರಡು ಗಿಡಗಳಿದ್ದರೆ ಆ ಜಮೀನನ್ನು ಬಾಗಾಯ್ತು ಎಂದು ಪರಿಗಣಿಸಿ ಬಾಗಾಯ್ತು

ಕಂದಾಯ ಹಾಕಿದರೆ ಗತಿಯೇನು ? ಈ ವಿಷಯ ವಿಮರ್ಶೆ ಮಾಡುವಂತೆ ಅದರಲ್ಲೂ ಸ್ಪೆಷಲ್ಲಾಗಿ ಮಾತನಾಡಿ ಕಡೆಗೆ ಗಮನ ಕೊಡುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದರೆ ಬಹಳ ಒಳ್ಳೆಯ ದಾಗುತ್ತದೆ.

ಈಗ ಕಂದಾಯ ವಸೂಲುಮಾಡುವ ವಿಧಿಯನ್ನು ನಡಿಲಮಾಡುವುದಕ್ಕೆ ಬಡವರು ಮಿತ್ತರರು ಮೊನ್ನೆ ನನಗೆ ತಿಳಿಸಿದರು. ಇದು ನನಗೆ ಟೆಲಿಗ್ರಾಂ ಬಂದಿದೆ. ನಿಂತಿರುವ ಕಂದಾಯವನ್ನೆಲ್ಲಾ ಒಂದೇ ಸಲ ಕೊಡಬೇಕೆಂದು ಹೇಳುತ್ತಿದ್ದಾರೆ. ಇದರಿಂದಾಗುವ ತೊಂದರೆಯನ್ನು ಸ್ವಲ್ಪ ಯೋಚನೆ ಮಾಡಬೇಕು. ಹಿಂದೆ ಕೂಡ ಅನೇಕರು ಡೆಲಿಗೇಷನ್ ಬಂದು 2–3 ವರ್ಷದ ಕಂದಾಯ ಒಂದೇ ಸಲ ಕೊಡುವುದಕ್ಕಾಕುವುದಿಲ್ಲ, ಕಂತುಗಳಲ್ಲಿ ಕೊಡಲು ಅವಕಾಶ ಕೊಡಬೇಕು ಎಂದು ಕೇಳಿಕೊಂಡರು. ವಜಾಮಾಡಿ ಎಂದು ಕೇಳುವುದು ಕಡಮೆ. ಇದರ ಜೊತೆಗೆ ನೋಟೀಸು ಕೊಟ್ಟರೆ ಅಷೀಲು ಹಾಕಿ ತೀರ್ಮಾನವಾಗಲು ಸಾವಕಾಶವಾಗುವುದು, ಹಣ ಖರ್ಚು ಮಾಡ ಬೇಕಾಗುವುದು. ಆದುದರಿಂದ ತೀವ್ರವಾಗಿ ಈ ವಿಚಾರವನ್ನು ಯೋಚನೆಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ನೋಟೀಸು ಕೊಟ್ಟು ತಕ್ಷಣ ಆಕ್ಷನ್ ತೆಗೆದುಕೊಂಡರೆ ಕಷ್ಟವಾಗುವುದು ಇದನ್ನು ಯೋಚನೆಮಾಡಿ ಜಿಲ್ಲಾಧಿಕಾರಿಗಳು ತೊಂದರೆಯಾಗುವಂತೆ ಒಂದು ತೀರ್ಮಾನ ಕೊಡಬೇಕು. ಬಹುಶಃ ಈಗ ಹೊಸದಾಗಿ ನೋಟೀಸು ಕೊಡುವುದರಿಂದ ಕೋರ್ಟಿಗೆ ಹೋಗಿ ಯಾವ ರೀತಿ ಪೆಟ್ಟಿ ಮಾಡಬೇಕಾಗುವುದೋ ಏನೋ. ಈ ದೃಷ್ಟಿಯಿಂದ ಸರಿಯಾದ ವ್ಯವಸ್ಥೆ ಮಾಡಬೇಕು. ಪದೇ ಪದೇ ಸರಕಾರದ ಮುಂದೆ ಬರುವಂತೆ ಮಾಡಬಾರದು ಎಂದು ಏನಂತಿಮಾಡಿ ಕೊಳ್ಳುತ್ತೇನೆ.

ಇನ್ನು ವಾಟರ್ ಟ್ಯಾಕ್ಸ್, ಇದು ನಮ್ಮಲ್ಲಿ ಅಸಾಧ್ಯವಾಗಿದೆ. 300 ರೂಪಾಯಿ ಕಂದಾಯ ಕೊಡತಕ್ಕ ಒಬ್ಬ ರೈತ ಹಿಸ್ಸೆ ಮಾಡಿಕೊಂಡ, ಆತನಿಗೆ 1700 ರೂಪಾಯಿಗೆ ನೋಟೀಸು ಹೋಗಿದೆ. ವಾಟರ್‌ರೇಟು ಮೇನಟೆನನ್ಸ್ ಚಾರ್ಜನ್ನು ಇದೆಲ್ಲಾ ಸೇರಿಕೊಂಡು ಇದನ್ನು ನೋಡಿ ಅವನು ಬಹಳ ಗಾಬರಿಯಾಗಿದ್ದಾನೆ. ಇದನ್ನು ಹೇಗೆ ಕೊಡುವುದು, ಜಮೀನು ಮಾರಬೇಕೆ ಅಥವಾ ಏನು ಮಾಡಬೇಕು ಅಂತ ಅನ್ನುವುದು ಅವನಿಗೆ ಗೊತ್ತಾಗದಂತೆ ಆಗಿದೆ. ತಾವು ಇವತ್ತು ಪರಿಶೀಲನೆ ಮಾಡಿ ನೋಡಬೇಕು, ಮಲೆನಾಡಿನಲ್ಲಿ ಹಾಕಿರುವುದು ಸಂಪೂರ್ಣವಾಗಿ ತರೀ ಕಂದಾಯ. ಮಾನ್ಯ ರೆವಿನ್ಯೂ ಮಂತ್ರಿಗಳು ಅಲ್ಲಿ ಅಂತಹ ಪ್ರದೇಶದಲ್ಲಿ ಖುಷ್ಕಿ ಕಂದಾಯವನ್ನೇ ಕೊಡಬಹುದು, ತರೀ ಕಂದಾಯ ಕೂಡಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳಿದ್ದರು. ಅಧಿಕಾರಿಗಳು ಮಾತ್ರ ನಮಗೆ ಆ ರೀತಿ ಯಾವ ಸೂಚನೆಯೂ ಬಂದಿಲ್ಲ ಎಂದು ಹೇಳಿ ತರೀ ಕಂದಾಯ, ಅದರಮೇಲೆ ವಾಟರ್ ರೇಟು, ಇದೆಲ್ಲವನ್ನೂ ಹಾಕಿದ್ದಾರೆ. ಮಳೆ ಬಂದಾಗ ನೀರು ಹೊಂಡದಲ್ಲಿ ನಿಂತಿರುತ್ತದೆ. ಅದಕ್ಕೆ ಈಚೆಗೆ ತೂಬು ಹಾಕಿಕೊಂಡು ಅಕ್ಟೋಬರ್ ನವಂಬರ್ ಎರಡು ತಿಂಗಳು ಮಾತ್ರ ಆ ಜಮೀನಿಗೆ ನೀರನ್ನು ಉಪಯೋಗಿಸಿಕೊಳ್ಳುತ್ತಾರೆ. ಇದಕ್ಕೆ ಮೇನಟೆನನ್ಸ್ ಚಾರ್ಜನ್ನು, ವಾಟರ್‌ರೇಟು ಎಲ್ಲವನ್ನೂ ಹಾಕಿದ್ದಾರೆ. ಆದ್ದರಿಂದ ಜಾಗ್ರತೆ ಒಂದು ಸರ್ಕ್ಯುಲರ್ ಕಳುಹಿಸಿ ನಾವೆ ನೀರು ಉಪಯೋಗ ಮಾಡಲು ಸಣ್ಣ ಅಣಕಟ್ಟು ಕಟ್ಟಿದ್ದರೆ ಅದಕ್ಕೆ ಖುಷ್ಕಿ ಕಂದಾಯ ವಸೂಲು ಮಾಡ ಬೇಕೆಂದು ತಿಳಿಸಬೇಕು. ವಾಟರ್ ಸೆಸ್ ನಮಗೆ ಸಂಬಂಧವಿಲ್ಲ, ಪಿ.ಡಬ್ಲ್ಯು.ಡಿ. ಅವರು ವಸೂಲು ಮಾಡುತ್ತಾರೆ ಎಂದು ಹೇಳುತ್ತಾರೆ, ವಸೂಲು ಮಾಡುವುದಕ್ಕೆ ನೋಟೀಸ್ ಕೊಡುವವರು ರೆವಿನ್ಯೂ ಡಿಪಾರ್ಟಮೆಂಟನವರಾದ್ದರಿಂದ ಇವರಿಗೆ ಒರುತ್ತದೆಯೇ ಹೊರತು ಅವರಿಗೆ ಬರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ತಮ್ಮ ಅಧಿಕಾರಿಗಳಿಗೆ ಸೂಕ್ತವಾದ ಸೂಚನೆಗಳನ್ನು ಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ ಭದ್ರಾ ಪ್ರಾಜೆಕ್ಟ್‌ನಲ್ಲಿ ಅನೇಕರ ಜಮೀನು ಮುಳುಗಡೆಯಾಗಿ ಬಹಳ ಕಷ್ಟಪಟ್ಟಿದ್ದಾರೆ. ತಾವು ಈ ತಿದ್ದುಪಡಿಯನ್ನು ಏಪ್ರಿಲ್ ಮೊದಲನೆ ವಾರದಲ್ಲಿ ತರುತ್ತೇವೆ ಎಂದು ವಿರೋಧ ಪಕ್ಷದವರಿಗೆ ಆಶ್ವಾಸನೆ ಕೊಟ್ಟಿದ್ದೀರಿ, ಆ ಪ್ರಕಾರ ತಂದಿದ್ದೀರಿ, ಇದು ಪಾಸ್ ಆಗುತ್ತದೆ ಪಾಸ್ ಆದಮೇಲೆ ಇದರಲ್ಲಿತಕ್ಕ ತೊಂದರೆಗಳನ್ನು ನಿವಾರಣೆ ಮಾಡಲು ತಾವು ಒಂದು ಸರ್ಕ್ಯುಲರ್ ಮೂಲಕ ತಮ್ಮ ಅಧಿಕಾರಿಗಳಿಗೆ ಸರಿಯಾದ ಸೂಚನೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನಾಲ್ಕು ಮಾತುಗಳನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋರಾರ).—ಸ್ವಾಮಿ, ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟಿಗೆ ಈ ದಿನ ಮೈಸೂರು ಲ್ಯಾಂಡ್ ರೆವಿನ್ಯೂ ಸೆಕೆಂಡ್ ಅಮೆಂಡ್‌ಮೆಂಟ್ ವಸೂಲಿಯನ್ನು ಸರ್ಕಾರದವರು ಏನು ತಂದಿದ್ದಾರೆ ಅದನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಿ ಬಯಸುತ್ತೇನೆ. ಈ ವಸೂಲಿಯ ಬಗ್ಗೆ ನಿನ್ನೆ ದಿನ ಆಳುವ ಪಕ್ಷದವರ ಪರವಾಗಿ ಚರ್ಚೆಯನ್ನು ಪ್ರಾರಂಭ ಮಾಡಿದ

(ಶ್ರೀ ಪಿ. ವೆಂಕಟಗಿರಿಯಪ್ಪ)

ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಮಾತನಾಡುತ್ತಾ, ಮಂತ್ರಿಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಈ ಮಸೂದೆ ಸಮರ್ಪಕವಾಗಿದೆ, ಇದನ್ನು ಒಪ್ಪಿಕೊಳ್ಳಬೇಕೆಂಬ ವಿಷಯ ಅಷ್ಟೇ ಹೇಳಲಿಲ್ಲ, ವಿರೋಧ ಪಕ್ಷದವರ ಬಗ್ಗೆ ಏನೇನು ಹೇಳಬಾರದಾಗಿತ್ತೊ ಅದನ್ನೆಲ್ಲಾ ಹೇಳಿದ್ದಾರೆ. ಏನೋ ಒಂದು ತಪ್ಪು ಮಾಡಿ ಅದನ್ನು ಫೇಸ್ ಸೇವಿಂಗ್ ಡಿವೈಸ್ ಅಂತ ಹೇಳಿ ಅವನ್ನು ಮುಚ್ಚಿಕೊಳ್ಳುವುದಕ್ಕೆ ನಾವು ಈ ಮಸೂದೆಯನ್ನು ವಿರೋಧ ಮಾಡುತ್ತಾ ಇದ್ದೇವೆ, ಇದು ಬಹಳ ಸಮಗ್ರವಾಗಿದೆ, ಬಹಳ ಸರಿಯಾಗಿದೆ ಶ್ರೀಮಾನ್ ನಂಜೇಗೌಡರು ತಂದಂತಹ ಮಸೂದೆಗಿಂತ ಬಹಳ ಉತ್ತಮವಾಗಿದೆ, ಇದನ್ನು ವಿರೋಧ ಮಾಡುವುದಕ್ಕೆ ಯಾವ ಕಾರಣವೂ ಇಲ್ಲ, ಯಾವ ಆಧಾರವೂ ಕೂಡ ಇಲ್ಲ ಎನ್ನುವ ಧಾಟಿಯಲ್ಲಿ ಶ್ರೀಮಾನ್ ಶ್ರೀನಿವಾಸ್‌ರವರು ಮಾತನಾಡಿದರು, ಅಷ್ಟೇ ಅಲ್ಲದೆ ಇನ್ನೂ ಮುಂದೆ ಹೋಗಿ ಏನು ಎಂದರೆ ಈ ಭೂಕಂದಾಯ ಪದ್ಧತಿಯನ್ನು ಶ್ರೀಮಾನ್ ಗೋಪಾಲಗೌಡರು ಮತ್ತು ಇನ್ನೂ ಕೆಲವರು ವಿರೋಧ ಮಾಡಿದರು, ವಿರೋಧ ಮಾಡುವುದಕ್ಕೆ ಏನು ಕಾರಣವೂ ಇಲ್ಲ ಅವರಪ್ಪನಿಕ್ಕೆ ಮಾತ್ರ ಅವರು ಮಾತನಾಡುತ್ತಾ ಇದ್ದಾರೆ, ಮೈಸೂರು ರಾಜ್ಯದ ನಮ್ಮ ರೈತರು ಈ ಭೂಕಂದಾಯ ಪದ್ಧತಿ ಇರಬೇಕೆಂದು ನಮಗೆ ತಿಳಿಸಿದ್ದಾರೆ ಎಂಬ ಧಾಟಿಯಲ್ಲೂ ಕೂಡ ಹೇಳಿದರು. ಈ ದಿನ ರೈತರ ಪರವಾಗಿ ಮಾತನಾಡುವುದಕ್ಕೆ ವಿರೋಧಪಕ್ಷದವರಿಗೇ ಅಲ್ಲ ತಮಗೂ ಅಧಿಕಾರ ಇದೆ, ಆದ್ದರಿಂದ ಈ ಭೂಕಂದಾಯದ ಪದ್ಧತಿಯನ್ನು ಉಳಿಸಿಕೊಳ್ಳಬೇಕೆಂದು ರೈತರ ಅಭಿಪ್ರಾಯ ಇದೆ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀನಿವಾಸ್‌ರವರು ತಿಳಿಸಿದರು. ಈ ಭೂಕಂದಾಯವನ್ನು ತೆಗೆದುಹಾಕಿದರೆ ರೈತರುಮೇಲೆ ವ್ಯವಸಾಯದ ವರಮಾನ ತೆರಿಗೆಯನ್ನು ಹಾಕಬೇಕಾಗುತ್ತದೆ ಆ ವರಮಾನ ತೆರಿಗೆಯನ್ನು ಹಾಕಬಾರದು ಎಂಬುದು ಕೂಡ ರೈತರ ಅಭಿಪ್ರಾಯ ಎಂಬುದನ್ನು ಕೂಡ ಅವರು ತಿಳಿಸಿದರು. ಅವರು ಹಾಗೆ ಹೇಳುವುದರಲ್ಲೇನೂ ವಿಶೇಷವಿಲ್ಲ. ಕಾಂಗ್ರೆಸ್ಸಿನವರ ನಿಜಸ್ವರೂಪದಲ್ಲಿ ರೈತ ನೆಂದರೆ ಯಾರು ಎಂಬುದನ್ನು ಅವರೀಗ ತಿಳಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದವರ ಗಮನದಲ್ಲಿ ಇರತಕ್ಕ ರೈತರೆಂದರೆ ಅವರು ಕಾಫೀಪ್ಲಾಂಟರುಗಳಿರಬೇಕು ಇಲ್ಲವೇ ನೂರಾರು ಎಕರೆ ಜಮೀನ್ದಾರರಾಗಿರಬೇಕು. ಹಾಗಿದ್ದರೆ ಮಾತ್ರ ಅವರಕಣ್ಣಿಗೆ ರೈತ ಕಾಣಿಸುತ್ತಾನೆ, ಇಲ್ಲದಿದ್ದರೆ ಇಲ್ಲ. ಇನ್ನು ರಾಜ್ಯದಲ್ಲಿ ಶೇಕಡ 90 ರಷ್ಟು ಇರತಕ್ಕ ಈ 5—10 ಎಕರೆಗಳ ಸಣ್ಣ ಪುಟ್ಟ ರೈತರೇನಿದ್ದಾರೆ ಅವರು ಇವರ ಕಣ್ಣಿಗೇ ಕಾಣಿಸುವುದಿಲ್ಲ. ಈ ದಿವಸ ರಾಜ್ಯದಲ್ಲಿರತಕ್ಕ ಸುಮಾರು ನೂರಕ್ಕೆ 90 ರಷ್ಟು ಜನ ಕೇವಲ 5—10 ಎಕರೆ ಭೂಮಿಯನ್ನು ಇಟ್ಟುಕೊಂಡು ಅದರಲ್ಲಿ ಸಾಕಷ್ಟು ಬೆಳೆ ಇಲ್ಲದೆ ಅವರು ತಮ್ಮನ್ನು ಜಮೀನ್ದಾರರು ಎಂತ ಕರೆದು ಕೊಂಡರೂ ದಿನಕ್ಕೆ ಎರಡು ಹೊತ್ತು ಊಟಕ್ಕಿಲ್ಲದೆ, ಅರೆಹೊಟ್ಟೆ ಅರೆಬಟ್ಟೆ, ಹೆಂಡತಿಗೆ ಸೀರೆ ತರುವುದಕ್ಕೆ ಗತಿಯಿಲ್ಲ; ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೆ ಹಣವಿಲ್ಲ ಮತ್ತು ಮನೆಯಲ್ಲಿ ಕಾಯಿಲೆ ಬಿದ್ದವರಿಗೆ ಔಷಧಿ ಕೊಡಿಸಿ ಚಿಕಿತ್ಸೆ ನಡೆಸುವುದಕ್ಕೆ ಯತ್ನವಿಲ್ಲ, ಇಂಥ ಭೂಮಾಲೀಕರು ನಮ್ಮ ರಾಜ್ಯದಲ್ಲಿ ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದಾರೆ, ಇನ್ನು ವ್ಯವಸಾಯದ ರೈತನಿಲ್ಲಿ ಕೂಲಿ ಮಾಡಿ ಕೊಂಡಿರತಕ್ಕ ಕಾರ್ಮಿಕರ ವಿಷಯವನ್ನಂತೂ ಕೇಳುವುದಕ್ಕೆ ಸಾಧ್ಯವೇ ಇಲ್ಲ. ಇಂಥ ದೀನದರಿದ್ರರ ಅವಸ್ಥೆಯಲ್ಲಿರತಕ್ಕ ರೈತ ಎಂದಾದರೂ ಸರ್ಕಾರಕ್ಕೆ ಕಂದಾಯವನ್ನು ರದ್ದು ಮಾಡಬೇಡಿ ಎಂದು ಕೇಳಿಕೊಂಡಿರಲಾರ. ಹಾಗೆ ಕೇಳತಕ್ಕ ಸಂದರ್ಭಗಳೂ ಇಲ್ಲ. ಆದಾಗ್ಯೂ ರೈತ ಕಂದಾಯ ಕೊಡುವುದಕ್ಕೆ ಯಾವತ್ತೂ ತಯಾರಾಗಿದ್ದಾನೆ ಎಂದು ಕಾಂಗ್ರೆಸ್ಸಿನವರು ಇಲ್ಲಿ ಹೇಳುತ್ತಿರಬೇಕಾಗಿದ್ದರೆ ಆ ರೈತನು ಯಾರಿರಬೇಕು ? ಹಾಗೆ ಹೇಳಿರಬೇಕಾಗಿದ್ದರೆ ಅವರು ಭಾರಿ ಭಾರಿ ಕಾಫೀ ಪ್ಲಾಂಟರುಗಳಾಗಿರಬೇಕು ಇಲ್ಲವೇ ನೂರಾರು ಎಕರೆ ಭೂ—ಮಾಲಿಕರಾಗಿರಬೇಕು. ಅಂಥವರೇ ಈ ದಿವಸ ಆ ಕಾಂಗ್ರೆಸನ್ನು ಬೆಳೆಸುತ್ತಿರುವ ಜನ. ರಾಜ್ಯದಲ್ಲಿರತಕ್ಕ ಶ್ರೀಮಂತರೈತರ ಬಲದ ಮೇಲೆ ರಾಜ್ಯಾಡಳಿತ ನಡೆಸುತ್ತಿರುವ ಈ ಕಾಂಗ್ರೆಸ್ ಸರ್ಕಾರ ಈ ದಿವಸ ದೇಶದಲ್ಲಿರತಕ್ಕ ಲಕ್ಷಾಂತರ ಜನ ಸಣ್ಣ ಪುಟ್ಟ ರೈತರನ್ನು ತೃಣೀಕರಿಸಿ ಅವರ ಮೇಲೆ ಹೊರರಾಷ್ಟ್ರ ಕಂದಾಯದ ಹೊರೆಯನ್ನು ಹೇರುವುದಕ್ಕೆ ಹೊರಟಿರತಕ್ಕದ್ದು ಬಹಳ ಅನ್ಯಾಯ. ಕಾಂಗ್ರೆಸ್ ಪಕ್ಷದಲ್ಲಿ ಇರತಕ್ಕ ಒಂದು ವರ್ಗದ ಜನ ರಾಜ್ಯದಲ್ಲಿರತಕ್ಕ ದೊಡ್ಡ ದೊಡ್ಡ ಉದ್ದಿಮೆದಾರರುಗಳನ್ನು ಕೈಬಿಟ್ಟು ಆ ಶ್ರೀಮಂತರ ಗೋಜಿಗೇ ಹೋಗದೆ ರಾಜ್ಯದಲ್ಲಿರತಕ್ಕ ಸಣ್ಣ ಪುಟ್ಟ ಜಮೀನ್ದಾರರ ಮೇಲೆ ಆದಷ್ಟೂ ಕಂದಾಯದ ಹೊರೆಯನ್ನು ಹೇರ ಬೇಕು ಎನ್ನತಕ್ಕ ಒಂದು ವಾದವನ್ನು ಬಹಳ ಹಿಂದಿನಿಂದಲೂ ಮಾಡುತ್ತಲೇ ಬಂದಿದ್ದಾರೆ. ಆದರೆ ಅದೇನೋ ಇತ್ತೀಚೆಗೆ ಇದ್ದಕ್ಕಿದ್ದಹಾಗೆ ಇದೇ ಸಭೆಗೆ ಮಾನ್ಯ ಹಣಕಾಸಿನ ಸಚಿವರು ಭೂ ಕಂದಾಯವನ್ನು ರದ್ದುಮಾಡುತ್ತೇವೆ, ಇನ್ನು ಮುಂದಕ್ಕೆ ಈ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವುದಿಲ್ಲ, ಎಂಬ ಭರವಸೆಯನ್ನು ಕೊಟ್ಟಿದ್ದರು. ಆದರೆ ಈ ಮಾನ್ಯ ರೆವಿನ್ಯೂ ಸಚಿವರು ಹಿಂದೆ ಈ ಸರ್ಕಾರ ಯಾವತ್ತೂ ಅಂಥ ಒಂದು ಭರವಸೆಯನ್ನು ಕೊಟ್ಟೇ

ಇಲ್ಲ ಎಂದು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ ಸರ್ಕಾರದವರು ಇನ್ನೂ ಏನು ಹೇಳುತ್ತಿದ್ದಾರೆ ಎಂದರೆ ವಿರೋಧ ಪಕ್ಷಗಳವರು ಒಂದು ರಾಜಕೀಯ ನಡೆಸಲು ಹೀಗೆ ಹೇಳಿಕೆ ಇದ್ದುದನ್ನು ಹೇಳಿ ವಾದ ಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆಂದು ಹೇಳುತ್ತಿದ್ದಾರೆ. ಈ ದಿವಸ ಕಾಂಗ್ರೆಸ್ ಸರ್ಕಾರ ಹಾಗೆ ಒಂದು ವಾದವನ್ನು ಎತ್ತುತ್ತಿದ್ದರೆ ಅದಕ್ಕೆ ನನ್ನ ಉತ್ತರವಾದರೂ ಇಷ್ಟೇ: ಆ ದಿವಸ ಅವರೇನು ಹೇಳಿದ್ದಾರೆ ಎಂಬುದನ್ನು ಅವರ ಮಾತಿನಲ್ಲೇ ಹೇಳಬೇಕಾಗಿದ್ದರೆ "ನಾವು ಈಗಿರತಕ್ಕ ಕಂದಾಯ ಪದ್ಧತಿಯನ್ನು ಇದೇ ರೂಪದಲ್ಲಾ ಮುಂದುವರಿಸಿಕೊಂಡು ಹೋಗುವುದಿಲ್ಲ. ಇದನ್ನು ಸಂಪೂರ್ಣವಾಗಿ ರದ್ದು ಮಾಡುತ್ತೇವೆ, ಇಲ್ಲವೆ ಬದಲಾವಣೆ ಮಾಡುತ್ತೇವೆ" ಎಂಬುದಾಗಿ ಹೇಳಿದ್ದಾರೆ. ಈ ರೀತಿ ಅವರು ಹೇಳಿಲ್ಲ, ಅಧಿಕೃತ ವರದಿಯಲ್ಲಿ ಈ ಮಾತುಗಳನ್ನು ಸರ್ಕಾರದವರು ಹಿಂದೆ ಹೇಳಿಲ್ಲ ಅಂತ ತೋರಿಸಿದರೆ ನಾನು ಅವರ ವಾದವನ್ನು ಒಪ್ಪಿಕೊಂಡು ನನ್ನ ಮಾತುಗಳನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ದೇಶವಲ್ಲಾ ಹೊಚ್ಚೆಗಿಲ್ಲದೆ ಅರೆಹೊಚ್ಚೆಗಂದೆ ನರಳತಕ್ಕ ಜನತೆಗೆ ಭೂಕಂದಾಯವನ್ನು ರದ್ದು ಮಾಡುತ್ತೇವೆಂಬ ಆಸೆಯನ್ನು ತೋರಿಸಿ ಈ ಕಾಂಗ್ರೆಸ್ ಜನರು ಅ ಬಡಪಾಯಿಗಳಿಂದ ಓಟನ್ನು ಪಡೆದುಕೊಂಡು ಆ ಜನರಿಗೆ ಮಂಕುಬೂದಿ ಉರುಪಿ ಮೋಸಮಾಡಿ ಚುನಾವಣೆಯಲ್ಲಾ ಗೆದ್ದನಂತರ ನಾವು ಹಾಗೆ ಯಾರಿಗೂ ಕಂದಾಯವನ್ನು ರದ್ದು ಮಾಡುತ್ತೇವೆಂಬ ಮಾತನ್ನು ಕೊಟ್ಟಿರಲಿಲ್ಲ ಎಂಬ ವಾದವನ್ನು ಈ ದಿವಸ ಶ್ರೀಮಾನ್ ಕೆ. ಎಚ್. ಶ್ರೀನಿವಾಸ್ ಅವರು ಸಭೆಯ ಮುಂದೆ ಇಡುತ್ತಿರುವುದು ನ್ಯಾಯಕ್ಕೆ ದೂರವಾದ ಹೇಳಿಕೆಯಾಗಿದೆ. ಈ ಸಂದರ್ಭದಲ್ಲಿ ನಾನು ಕಾಂಗ್ರೆಸ್ ಪಕ್ಷದವರಿಗೆ ಹಾಕತಕ್ಕ ಸವಾಲಾದರೂ ಇಷ್ಟೇ: ಈ ದಿವಸ ಆ ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಮತ್ತು ಇನ್ನೂ ಕೆಲವು ನಮ್ಮ ಕಾಂಗ್ರೆಸ್ ಮಿತ್ರರು ಇತ್ತ ಕಡೆ ನಮ್ಮ ಕೆಲವು ಮಿತ್ರರು ಎಲ್ಲರೂ ಸೇರಿ ಯಾವ ಚುನಾವಣಾ ಕ್ಷೇತ್ರಕ್ಕಾದರೂ ಸರಿಯೇ ಅದು ವಿರೋಧಪಕ್ಷದವರ ಕ್ಷೇತ್ರ ಕಾಂಗ್ರೆಸ್ ಪಕ್ಷದವರ ಕ್ಷೇತ್ರ ಎನ್ನತಕ್ಕ ತಾರತಮ್ಯ ಮಾಡದೆ ಯಾರ ಕ್ಷೇತ್ರವಾದರೂ ಸರಿ ಅಲ್ಲಿಗೆ ಹೋಗೋಣ: ಅಲ್ಲಿರತಕ್ಕ ರೈತರನ್ನು ಕರೆದು ಸಭೆ ಸೇರಿಸಿ ಅವರನ್ನು ಕೇಳೋಣ ಅವರು ಕಂದಾಯ ಇನ್ನೂ ಹೆಚ್ಚುಮಾಡಿ ಅದರ ಬಗ್ಗೆ ನಮ್ಮ ತಕರಾರು ಇಲ್ಲ ಎಂದು ಹೇಳಿದರೆ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಇಲ್ಲವೇ ಆ ರೈತರು ಈ ಕಂದಾಯ ರದ್ದಾಗಬೇಕು ಇದು ಬಹಳ ಜಾಸ್ತಿ ಆಗಿದೆ ಎಂದರೆ ಈ ಕಾಂಗ್ರೆಸ್ಸಿನವರೆಲ್ಲರೂ ರಾಜೀನಾಮೆ ಕೊಡಬೇಕು: ಹಾಗೆ ಎಲ್ಲಿಯಾದರೂ ಸರಿ, ಒಂದು ಪಬ್ಲಿಕ್ ಮೀಟಿಂಗ್ ಮಾಡಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ಈ ಸರ್ಕಾರ ಸಿದ್ಧವಾಗಿದೆಯೇ ಎಂಬುದೇ ನನ್ನ ಸವಾಲ್. ಹಾಲಿ ಇರತಕ್ಕ ಕಂದಾಯ ಪದ್ಧತಿ ಒಂದು ಪಾಳೇಗಾರತನದ್ದು. ನೂರು ರೂಪಾಯಿಗಳ ಉತ್ಪನ್ನ ಇರತಕ್ಕ ಒಂದು ಭೂಮಿಗೆ 20 ರೂಪಾಯಿ ಕಂದಾಯ ಹಾಕಿದ್ದಾರೆ. ಆದ್ದರಿಂದ ಇದು ಕೂಡಲೆ ರದ್ದಾಗಬೇಕು ಅನ್ನುವುದು ನನ್ನ ವಾದ.

ಶ್ರೀ ಡಿ. ದೇವರಾಜ್ ಅರಸ್.—ತಾವು ಹೇಳುತ್ತಿರುವ ವಾದ; ಸರ್ಕಾರದವರು ಈಗ ಇರತಕ್ಕ ಭೂ ಕಂದಾಯ ಪದ್ಧತಿ ಏನಿದೆ ಅದನ್ನು ರದ್ದುಮಾಡಿ ಕೈತೊಳೆದುಕೊಂಡು ನುಮ್ಮನೆ ಇದ್ದುಬಿಡಿ ಎಂದು ಹೇಳುತ್ತಿರಾ ಅಥವಾ ಈ ಕಂದಾಯವನ್ನು ಬೇರೊಂದು ರೂಪದಲ್ಲಿ ಹಾಕಲಿ ಎಂದು ಸಲಹೆ ಮಾಡುತ್ತಿದ್ದೀರೋ? ನಿಮ್ಮ ವಾದದ ನಿಲುವು ಯಾವುದು ಎಂಬುದನ್ನು ಸ್ಪಷ್ಟಪಡಿಸಿ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇಲ್ಲಾ; ಈ ದಿವಸ ಈ ಸಭೆಯಲ್ಲಿರತಕ್ಕ ಆಡಳಿತಪಕ್ಷದಲ್ಲಿ ಹಾಗೂ ಇತ್ತ ವಿರೋಧಪಕ್ಷಗಳಲ್ಲಿರತಕ್ಕ ಸದಸ್ಯರಲ್ಲಿ, ಕೆಲವರು ಕಂದಾಯವನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದು ವಾದ ಮಾಡುತ್ತಾರೆ. ಇನ್ನು ಕೆಲವು ಸದಸ್ಯರು ಅತ್ತಕಡೆ ಮತ್ತು ಇತ್ತಕಡೆ ಇರತಕ್ಕವರು ಇದನ್ನು, ಹಾಲಿ ಇರತಕ್ಕ ರೂಪದಲ್ಲಿ ಇರುವುದು ಬೇಡ ಇದನ್ನು ಒಂದು ಹೊಸನಮೂನೆಯಲ್ಲಿ ಜಾರಿಗೆ ತರಬೇಕೆಂದು ವಾದಮಾಡತಕ್ಕವರೂ ಇದ್ದಾರೆ. ಇದನ್ನು ಬೇರೆಂದು ರೂಪದಲ್ಲಿ ಅಂದರೆ ಕೆಲವರ ಹೇಳಿಕೆ ಪ್ರಕಾರ ಅದು ವ್ಯವಸಾಯದ ತೆರಿಗೆಯ ರೂಪದಲ್ಲಿರಬಹುದು ಇಲ್ಲವೇ ಅದು ಗೇಣಿ ರೂಪದಲ್ಲಿರಬಹುದು. ಆದರೆ ನಾನು ಹೇಳುತ್ತಿರುವುದು ಈಗ ಸರ್ಕಾರದವರು ಹೇರಲು ಹೊರಟಿರತಕ್ಕ ಭಾರಿ ಕಂದಾಯದ ಹೊರೆಯನ್ನು ಹೊರತಕ್ಕ ಶಕ್ತಿ ಯಾವ ರೈತರಿಗೆ ಇದೆಯೊ ಅಂಥ ರೈತರಿಗೆ ಮಾತ್ರ ಅದನ್ನು ಹಾಕಲಿ ಎಂಬುದು ನನ್ನ ವಾದ. ನಮ್ಮಲ್ಲಿರತಕ್ಕ ದೊಡ್ಡ ದೊಡ್ಡ ಭೂಮಾಲೀಕರಿಗೂ ಭಾರಿ ಭಾರಿ ಶೆಂಗಿನ ಹಾಗೂ ಅಡಕೆಯ ತೋಟಗಳನ್ನು ಇಟ್ಟುಕೊಂಡಿರತಕ್ಕ ಭೂಮಾಲೀಕರಿಗೆ ಏಧಿಸಿ ಅದರ ಬಗ್ಗೆ ನನ್ನ ಆಕ್ಷೇಪಣೆಯಿಲ್ಲ. ಈ ದಿವಸ ನಮ್ಮ ರಾಜ್ಯದಲ್ಲಿ ನನಗೆ ಗೊತ್ತಿರುವ ಹಾಗೆ ವ್ಯವಸಾಯದ ವರಮಾನ ತೆರಿಗೆಯನ್ನು ಕೊಡತಕ್ಕಂಥ, ಅರ್ಹರಾಗಿರತಕ್ಕಂಥ ಜನ ಏನಿದ್ದಾರೆ ಅವರು ಸುಳ್ಳು ಸುಳ್ಳು ರೆಕ್ಕಗಳನ್ನಿಟ್ಟು ತೆರಿಗೆಯನ್ನು ತಪ್ಪಿಸಿಕೊಳ್ಳತಕ್ಕ ಜನರಿದ್ದಾರೆ. ಅಂಥ ಬಿಡಿಮಿ ಕಾಳಗಳ ಹತ್ತಿರ ಕಂದಾಯ ವಸೂಲ್ಮಾಡಲು ಹೋಗತಕ್ಕ ಅಧಿಕಾರಿಗಳಾದರೂ ಯಾರು? ಅವರಿಗೆ ಎಷ್ಟು ಧೈರ್ಯ ಇರಬೇಕು? ಕಳ್ಳಲೆಕ್ಕ ಇಡತಕ್ಕ ಜನರು

(ಶ್ರೀ ಪಿ. ವೆಂಕಟಗಿರಿಯಪ್ಪ)

ಯಾವಾಗಲೂ ತಾ ಶೀ ರ್ದಾ ರ್, ಅಸಿಸ್ಟೆಂಟ್ ಕಮಿಷನರ್ ಅಥವಾ ಡೆಪ್ಯೂಟಿ ಕಮಿಷನರ್ ಇಂಥವರ ಬಳಿಯಲ್ಲೇ ತಿರುಗಾಡತಕ್ಕವರಾಗಿರುತ್ತಾರೆ. ನನಗೆ ಗೊತ್ತಿರುವ ಹಾಗೆ ಈ ದಿವಸ 200 ಎಕರೆ ಕಬ್ಬಿನ ತೋಟ ಇಟ್ಟುಕೊಂಡಿರತಕ್ಕ ಒಬ್ಬ ರೈತ ಯಾವ ಆದಾಯ ತೆರಿಗೆಯನ್ನೂ ಕೊಡುತ್ತಿಲ್ಲ, ಹಾಗೆ ಸರ್ಕಾರಕ್ಕೆ ಒಂದು ಬಿಡಿಗಾಸನ್ನೂ ತೆರಿಗೆ ಕೊಡದೆ ಇರತಕ್ಕಂಥ ರೈತರು ನಮ್ಮಲ್ಲಿ ಬಹಳ ಜನ ಇದ್ದಾರೆ. 20—30 ಸಾವಿರ ತೆಂಗಿನ ತೋಟ ಇಟ್ಟುಕೊಂಡಿರತಕ್ಕ ಭೂಮಾಲೀಕರೂ ಕೂಡ ಒಂದು ಬಿಡಿಗಾಸು ಆದಾಯ ತೆರಿಗೆಯನ್ನು ಕೊಡುತ್ತಿಲ್ಲ. ಹೀಗೆ ರಾಜ್ಯದಲ್ಲಿ ಒಂದು ವರ್ಗದ ಜನ ದಿನ ದಿನಕ್ಕೂ ಬಡಕಾಯಿಸುತ್ತಾ ಇರುವ ಸಣ್ಣ ಪುಟ್ಟ ರೈತರ ಭೂಮಿಗಳನ್ನು ನುಂಗಿನೀರು ಕುಡಿಯುತ್ತಿದ್ದಾರೆ. ನೂರಾರು ರೂಪಾಯಿಗಳ ಬೆರೆ ಬಾಳಿದಿದ್ದ ಖುಷ್ಕಿ ಜಮೀನು ಕೂಡ ಈ ದಿವಸ ಈ ಶ್ರೀಮಂತರ ಭೂದಾಹ ಜಾಸ್ತಿಯಾದ್ದರಿಂದ ಎಕರೆಗೆ 4—5 ಸಾವಿರ ಬೆರೆ ಆಗಿದೆ. ವಾಸ್ತವಾಂಶಗಳು ಹೀಗಿರುವಾಗ ಮುಂದೆ ದೇಶದಲ್ಲಿ ವ್ಯವಸಾಯದ ಆದಾಯ ತೆರಿಗೆಯನ್ನು ಜಾರಿಗೆ ತಂದರೆ ನೂರಾರು ಎಕರೆಗಳಲ್ಲಿ ಕಬ್ಬನ್ನು ಬೆಳೆಯುತಕ್ಕ ಜನರೂ ೧೦ತ್ತು ಸಾವಿರಾರು ತೆಂಗಿನ ಗಿಡಗಳನ್ನು ಇಟ್ಟುಕೊಂಡಿರತಕ್ಕ ಜನರೂ ತೆರಿಗೆಯನ್ನು ತಪ್ಪಿಸಿಕೊಂಡು ರಾಜ್ಯದಲ್ಲಿ ಇರತಕ್ಕ ಸಣ್ಣ ಪುಟ್ಟ ಭೂಮಾಲೀಕರೇನಿದ್ದಾರೆ ಅವರು ಈ ಅನಾಹುತಕ್ಕೆ ತುತ್ತಾಗುತ್ತಾರೆ. ಈಗಿರತಕ್ಕ ಕಂದಾಯ ಪದ್ಧತಿಯನ್ನು ತಪ್ಪಿಸಿ ನಾಳೆ ಆದಾಯ ತೆರಿಗೆಯನ್ನು ಜಾರಿಗೆ ತಂದರೆ ಆಗತಕ್ಕ ಪರಿಣಾಮವೇ ಇದು.

ಶ್ರೀ ಬಿ. ರಾಚಯ್ಯ.—ತಾವು ಆಹಾರ ಧಾನ್ಯಗಳ ಮೇಲೂ ತೆರಿಗೆಯನ್ನು ಹಾಕಬೇಕೆಂದು ಹೇಳುತ್ತೀರಾ ?

ಶ್ರೀ ಪಿ. ವೆಂಕಟಗಿರಿಯಪ್ಪ.—ದೇಶದಲ್ಲಿ ಇನ್ನೂ ಲಕ್ಷಗಟ್ಟಲೆ ಜನರಿಗೆ ಓದುವುದಕ್ಕೆ ಮತ್ತು ಬರೆಯುವುದಕ್ಕೆ ಬರುವುದಿಲ್ಲ. ಅಂಥವರಿಗೂ ಮತ್ತು 15—20 ಎಕರೆ ಖುಷ್ಕಿ ಭೂಮಿ ಅಥವಾ 5 ಎಕರೆ ತರೀ ಭೂಮಿ ಇಟ್ಟುಕೊಂಡಿರತಕ್ಕ ಭೂಮಾಲೀಕರೆನ್ನೆಲ್ಲಾ ಈ ತೆರಿಗೆ ವರ್ಗದಿಂದ ತೆಗೆದು ಹಾಕಬೇಕು. ಅಂದರೆ ಇಪ್ಪತ್ತು ಜನರಿಗೆ ಯಾವ ಕಂದಾಯವನ್ನು ಹಾಕಬಾರದೆಂದು ಹೇಳುತ್ತೇನೆ. ಭೂಕಂದಾಯ ಸಚಿವರು ಒಂದು ಕಾಂಪ್ರಹೆನ್ಸೀವ್ ಮಸೂದೆಯನ್ನು ತರಬೇಕಾಗಿತ್ತು. ಆದರೆ ಹಾಗೆ ಮಾಡಿಲ್ಲ.

7-00 P.M.

114 (ಎ) ಸಬ್ ಸೆಕ್ಷನ್ (ಎ)ನಲ್ಲಿ ಈ ರೀತಿ ಹೇಳಿದೆ:

"114A (a) if at any time after the introduction of a settlement of land revenue under Section 122 the State Government, for reasons to be recorded in writing, is of the opinion that in any zone, the settlement of land revenue requires modification, it may, by order, direct the revision of settlement of land revenue in such zone, and the provisions of this Chapter relating to a revision settlement of land revenue shall be applicable to such revision of settlement."

ಅಂದರೆ ಸರ್ಕಾರದವರಿಗೆ ಎಲ್ಲಿ ಅವಶ್ಯಕ ಕಂಡುಬಂದರೆ ಅಲ್ಲಿ ಇದನ್ನು ಬದಲಾವಣೆ ಮಾಡಬಹುದು ಎಂದು ಇದೆ. ಇದು ಸುಮಾರು 3-4 ದಿವಸಗಳಿಂದಲೂ ಚರ್ಚೆಯಾಗಿದೆ. ಹಿಂದಿನಿಂದಲೂ ಭೂಕಂದಾಯ ರದ್ದುಮಾಡಬೇಕೆಂಬ ಮೂಲಭೂತ ಬೇಡಿಕೆ ಇದ್ದರೂ ಕಾಂಗ್ರೆಸ್ ಅಧಿಕಾರದಲ್ಲಿರುವವರಿಗೂ ನೀವು ಅದನ್ನು ರದ್ದುಮಾಡುವುದಿಲ್ಲ, ಅಗ್ರಿಕಲ್ಚರರ್ ಇನ್‌ಕಂಟ್ಯಾಕ್ಸನ್ನು ವಸೂಲು ಮಾಡುವುದಿಲ್ಲ. ಈ ರ್ಯಾಂಡ್ ರೆವಿನ್ಯೂ ಸೆಟಲ್‌ಮೆಂಟಿನಲ್ಲಿ 2 ರೂಪಾಯಿಗಳ ಇದ್ದವರಿಗೆ 8 ರೂಪಾಯಿಗಳಿಂದ 10 ರೂಪಾಯಿಗಳವರೆಗೆ ಆಗಿದೆ. ಯಾವ ಭೂಮಿ ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಏನಾದರೂ ನೋಡಿ ಮಾಡುತ್ತೀರಾ ? ಸರ್ಕಾರಕ್ಕೆ ಯಾವುದು ಸರಿಯಿಲ್ಲ ಎಂದು ತೋಚಿದರೆ ಅಲ್ಲಿ ಮಾಡುತ್ತೇವೆ ಎಂದು ಹೇಳುತ್ತೀರಿ. ಸರ್ಕಾರಕ್ಕೆ ಎಲ್ಲೆಲ್ಲಿ ಜಾಸ್ತಿಯಾಗಿದೆ ಯಾವ ಯಾವ ಜೋನುಗಳಲ್ಲಿ ಜಾಸ್ತಿಯಾಗಿದೆ ಎಂದು ಕಂಡು ಬರುತ್ತದೋ, ಅಂಥ ಕಡೆ ರೀ ಓಪನ್ ಮಾಡು

ತ್ತೇವೆಂದು ಹೇಳಿದರೆ ಆಗ ಅದು ಸರಿಹೋಗುತ್ತದೆಯೇ? ಸರ್ಕಾರವೇ ಈ ಅಧಿಕಾರವನ್ನು ತನ್ನ ಕೈಲಿ ತೆಗೆದುಕೊಂಡು ಇದರಲ್ಲಿ ರಾಜಕೀಯ ಮಾಡಿ ಬೇಕಾದ ಕಡೆಗಳಲ್ಲಿ ಸರ್ವೆ ಸೆಟರ್‌ಮೆಂಟ್ ರೀ ಓಪನ್ ಮಾಡಿ, ಬೇಡದೇ ಇರುವ ಕಡೆ ಹಾಗೆಯೇ ಇಡುವುದು ಸರಿಯಲ್ಲ. ಸರ್ಕಾರದವರು ಈಗಲೇ ಎಲ್ಲೆಲ್ಲ ಇದನ್ನು ರೀ ಓಪನ್ ಮಾಡುತ್ತಾರೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಹೇಳಿದರೆ ಆಗ ನಾವು ಇದನ್ನು ಒಪ್ಪಿಕೊಳ್ಳಬಹುದೋ ಬೇಡವೋ ಎಂಬ ಪ್ರಶ್ನೆಯನ್ನು ಯೋಚನೆ ಮಾಡ ಬಹುದು. ಎಲ್ಲೆಲ್ಲ ಸರ್ಕಾರಕ್ಕೆ ಸರಿಯೆಂದು ತೋಚಿದರೆ, ಅಲ್ಲಿ ಸರ್ವೆ ಸೆಟರ್‌ಮೆಂಟ್ ರೀ ಓಪನ್ ಮಾಡುತ್ತೇವೆಂದು ಹೇಳಿದರೆ ಅದು ಖಂಡಿತವಾಗಿ ಸಮಂಜಸವಾದ ತಿದ್ದುಪಡಿಯಾಗುವುದಿಲ್ಲ. ಈ ಒಂದು ತಿದ್ದುಪಡಿ ಸರಿಯಾಗಿರುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಷ್ಟೇ ಅಲ್ಲ. ಈ ದಿವನ ಇಡೀ ಮೈಸೂರು ರಾಜ್ಯದಲ್ಲಿ ಬಹಳ ಕಡೆ ವ್ಯತ್ಯಾಸವಾಗಿದೆ. ಒಂದೊಂದು ಜೋನಿನಲ್ಲಿ ಇರತಕ್ಕ ಅಸೆಸ್‌ಮೆಂಟ್ ತೆಗೆದುಕೊಂಡರೆ, ಅಲ್ಲಿ ಹಿಂದಿನ ಅಸೆಸ್‌ಮೆಂಟಿಗಿಂತ ಕಡಿಮೆ ಇರಬಹುದು. ಮಾರ್ಕೆಟ್ ಸೌಲಭ್ಯವನ್ನೂ ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಅಸೆಸ್‌ಮೆಂಟ್ ಮಾಡಿರುವುದರಿಂದ ಅನೇಕ ವ್ಯತ್ಯಾಸವಾಗಿದೆ. ಈಗ ನಡೆದಿರತಕ್ಕದ್ದು ಅವೈಜ್ಞಾನಿಕವಾಗಿಯಾಗಿದೆ. ಯಾವ ಒಂದು ವೈಜ್ಞಾನಿಕವಾದ ಆಧಾರವಿಲ್ಲ. ಇಡೀ ರಾಜ್ಯದಲ್ಲಿ ಸರ್ವೆ ಸೆಟರ್‌ಮೆಂಟ್ ವಿಷಯ ತುಂಬಾ ಅಸಮರ್ಪಕವಾಗಿದೆ. ಇದನ್ನು ಕೈಬಿಟ್ಟು ಇಡೀ ರಾಜ್ಯದಲ್ಲಿ ಈ ಸರ್ವೆ ಸೆಟರ್‌ಮೆಂಟ್ ಕಾರ್ಯವನ್ನು ಪುನರ್ವಿಮರ್ಶೆ ಮಾಡಬೇಕು. ಯಾವುದೇ ವಿಧದಲ್ಲಿ ಕೋರಾರ ಜಿಲ್ಲೆಯಲ್ಲಿ ಕಂದಾಯವನ್ನು ಹೆಚ್ಚು ಮಾಡಬಾರದು. ಹಿಂದೆ ಮಾನ್ಯ ಶ್ರೀ ಕೆ. ಸಿ. ರೆಡ್ಡಿಯವರು ಈ ದೇಶದ ಮುಖ್ಯಮಂತ್ರಿಗಳಾಗಿದ್ದಾಗ, ಕೋರಾರ ಜಿಲ್ಲೆಯಲ್ಲಿ ಕಂದಾಯ ಕಡಿಮೆ ಮಾಡ ಬೇಕೆಂದು ಸುಮಾರು ಹತ್ತಾರು ವರ್ಷಗಳಿಂದಲೂ ಹೋರಾಟ ಮಾಡಿದ್ದೇವೆ. ಈ ಕಾಂಗ್ರೆಸ್ ಸರ್ಕಾರ ಬಂದಮೇಲೆ 3-4 ರೂಪಾಯಿಗಳಂತೆ ಕಂದಾಯ ತರೀ ಜಮೀನಿಗೆ ಇದ್ದುದು ಈಗ 9 ರೂಪಾಯಿಗಳಿಗೇರಿದೆ. ಇದು ಖಂಡಿತವಾಗಿ ನ್ಯಾಯವಲ್ಲ. ಕೋರಾರದಲ್ಲಿ ಮೇಜರ್ ಇರ್ರಿಗೇಷನ್ ತೆಗೆದುಕೊಂಡಿಲ್ಲ. ಕೇವಲ 24 ಇಂಚು ಮಳೆಯೂ ಸಹ ಬರುವುದಿಲ್ಲ. ಆದ್ದರಿಂದ ಈ ಪ್ರದೇಶದಲ್ಲಿ ಯಾವ ರೀತಿಯಲ್ಲಿಯೂ ಜಾಸ್ತಿ ತೆರಿಗೆಯನ್ನು ಹಾಕಬಾರದು. ಕೆರೆ ಕಟ್ಟುವುದಕ್ಕೆ ಹಣ ಖರ್ಚು ಮಾಡಿದ್ದೇವೆಂದು ಹೇಳಬಹುದು. ಎಲ್ಲೆಲ್ಲ ಕೆರೆಗಳನ್ನು ಕಟ್ಟಿದ್ದಾರೋ ಅವರಿಗೆ ಜಾಸ್ತಿಮಾಡಿ, ಬಾವಿಗಳಿಗೆ ಸಾಲ ಕೊಟ್ಟಿದ್ದರೆ, ಬಾಗಾಯಿತು ಜಮೀನು ಮಾಡಿದರೆ ಅವರಿಗೆ ಜಾಸ್ತಿಮಾಡಿ. ಆದರೆ ಖುಷ್ಕಿ ಜಮೀನಿಗೆ ಏನೂ ಮಾಡಬೇಡಿ. ಅಲ್ಲಿ ಮಳೆ ಬಿದ್ದರೆ ಉಂಟು. ಇನ್ನು ನಾಲ್ಕೈದು ವರ್ಷಗಳವರೆಗೆ ಖುಷ್ಕಿ ಜಮೀನುಗಳ ಕಂದಾಯವನ್ನು ಯಾವ ಕಾರಣದಿಂದಲೂ ಹೆಚ್ಚು ಮಾಡ ಬಾರದು. ರ್ಯಾಂಡ್ ರೆವಿನ್ಯೂ ಸೆಟರ್‌ಮೆಂಟ್ ಇಡೀ ರಾಜ್ಯದಲ್ಲಿ ಖಂಡಿತವಾಗಿ ಸಮರ್ಪಕವಾಗಿಲ್ಲ. ಇದನ್ನು ರೀ ಓಪನ್ ಮಾಡಿ ಸರಿಯಾದ ರೀತಿಯಲ್ಲಿ ನ್ಯಾಯ ದೊರಕಿಸಿಕೊಡಬೇಕೆಂದು ಹೇಳಿ ನನಗೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The discussion will continue tomorrow. Now the Calling Attention notice by Sri S. R. Bommai.

Calling Attention to Matters of Public Importance

re: **Refusal to issue a fitness certificate in respect of a Breeding Bull.**

Sri M. K. BOMME GOWDA (Krishnarajapet).—I call the attention of the Minister of State for Veterinary Services, Animal Husbandry and Dairy Development to the following matter:

> "That the Veterinary Assistant Surgeon of K. R. Pet taluk has purposely rejected the issue of certificate to one Mr. Srikante Gowda and another Hore Bette Gowda for bullocks purchased and there by preventing them to obtain grant of Rs. 500 each from Taluk Board K. R. Pet, Mandya District."

†Sri G. B. SHANKAR RAO (Minister of State for Veterinary Services, Animal Husbandry and Dairy Development).—With reference to the calling attention notice under reference, I wish to place the following facts before the House.

It has been reported that one Breeding Bull was awarded by the Taluk Board, Krishnarajapet to Sri Srikante Gowda, son of Sri Bore-Gowda, Sarahalli Village, Sânthebachahalli Hobli. This party purchased locally one breeding bull and produced it before the Veterinary Assistant Surgeon, Krishnarajpet with a request to issue a certificate as regards its fitness as breeding Bull. The Veterinary Asst. Surgeon issued a certificate stating that the bull was not fit for breeding purposes. I understand that the same party subsequently approached the District Officer, Animal Husbandry Department, Mandya, on 6th March 1969 with arequest to issue a certificate of fitness of the animal. The District Officer, Animal Husbandry Department, Mandya, issued a certificate after examining the animal, stating that it was fit for breeding purpose.

As regards the other applicant referred to in the Call Attention Notice by name Sri Hori Bette Gowda, I understand that no represention has been received by the District Officer, Mandya.

In view of the divergent opinion of two officers about the fitness of the breeding bull, the matter is being examined further.

I may assure the House that the matter is being persued by Government and the final report is awaited from the Director of Animal Husbandry and Veterinary Services, Bangalore.

(ii) *re*: Animal Disease (Black Quarters) in some villages in Arkalgud Taluk

Sri H. N. NANJE GOWDA.—I call the attention of the Minister of State for Veterinary Services, Animal Husbandry and Dairy Development to the animal disease known as Black Quarter (Chappe Roga) in some hoblies of Arkalgud Taluk.

†Sri G. B. SHANKAR RAO.—With reference to the above Calling Attention Notice, I wish to place the following facts for the information of the House:

During February and March 1969, 35 Villages were affected with Black Quarter (ಚಪ್ಪೆರೋಗ) and 10 villages were affected by Haemorrhagic Septicemia (ಪೆಟ್ಟೆ ರೋಗ). In all 72 animals were affected with these two diseases and 65 deaths were reported. Prompt action was taken to cover with 6,453 vaccinations. In addition to the existing staff of the Animal Husbandry Department, a special staff was drafted to cover the rest of the villages for inoculation purposes.

As regards the attacks of the disease in Magge, Kasaba and Konanur Villages, the following statement gives fuller information about the attacks, deaths and preventive vaccinations undertaken. Sufficient doses of vaccine have been rushed to the affected area and all the ailing cases have been attended to.

Name of the Village.	No. of out breaks in villages.	Attacks.	Deaths.	Inoculations done.
Kasaba:				
B. Q.	16	21	20	1,355
H. S.	8	11	9	2,160
Magge:				
B. Q.	14	25	25	2,041
H. S.	2	5	5	445
Konanur:				
B. Q.	5	10	6	452
	45	72	65	6,453

A special staff, containing 8 Veterinary and Livestock Inspectors and 2 peons were deputed from other Taluks of this District to control the disease in villages of Arkalgud Taluk in addition to the staff of Arakalgud Taluk. The special staff and the area Veterinary staff visited 35 villages and conducted 8,554 innoculations against B. Q. (Black Quarter) up to 6th April 1969.

There are still about 10 to 15 villages infected recently which are being attended by the staff on priority basis. Further reports about the decrease in attacks and preventive measures undertaken are awaited.

I may assure the House that the disease has been brought under control and at the moment there is no cause for anxiety.

Sri H. N. NANJE GOWDA.—I wish to thank the Hon'ble Minister for taking very diligent action to control the disease. I was touring K. R. Nagar Taluk. ಮಾನ್ಯ ಮಂತ್ರಿಗಳು 3 ಹಳ್ಳಿಗಳು ಎಂದು ಹೇಳಿದರು. ಅದು 3 ಹಳ್ಳಿಗಳಲ್ಲಿ ಅಲ್ಲ, 3 ಹೋಬಳಿಗಳಲ್ಲಿ ಅಖಾಯಿತೆ ಹರಡಿದೆ. ದನಗಳಿಗೆ ಔಷಧಿ, ವ್ಯಾಕ್ಸಿನೇಷನ್ ಕೊಡುವುದಕ್ಕೆ ಆ ಪ್ರದೇಶಕ್ಕೆ 10 ಜನರ ಸ್ಟಾಫ್ ಹಾಕಿದ್ದಾರೆ. ಅಸಿಸ್ಟೆಂಟ್ ಡೈರೆಕ್ಟರ್ ಜೊತೆಯಲ್ಲಿ ನಾನೂ ಕೂಡ ಅಲ್ಲಿಗೆ ಹೋಗಿದ್ದೆ. ಪರಿಸ್ಥಿತಿಯನ್ನು ನೋಡಿದೆ. ವ್ಯಾಕ್ಸಿನೇಷನ್ ಸರಿಯಾಗಿ ಹಾಕುತ್ತಿದ್ದಾರೆ. ಈಗ ಬೇಸಿಗೆ ಕಾಲ ಆಗಿರುವುದರಿಂದ ಬೆಳಗ್ಗೆ ದನಗಳು ಹೊಂಗಡೆ ಮೇಯುವುದಕ್ಕೆ ಹೊರಟು ಹೋಗುತ್ತವೆ. ಈ ಸ್ಟಾಫಿನವರು ಔಷಧಿ ಮತ್ತು ವ್ಯಾಕ್ಸಿನೇಷನ್ ಕೊಡುವುದಕ್ಕೆ ಆ ಸ್ಥಳಕ್ಕೆ ಹೋಗುವ ವೇಳೆಗೆ 10 ಗಂಟೆಯಾಗಿರುತ್ತದೆ. ಆದ್ದರಿಂದ ಸ್ಟಾಫ್‌ನವರಿಗೆ ವೆಹಿಕಲ್ ಕನ್‌ವೇಯನ್ಸ್ ಕೊಟ್ಟು ಕಾಲಕ್ಕೆ ಸರಿಯಾಗಿ ಎಲ್ಲಾ ದನಗಳಿಗೂ, ಔಷಧಿ ಮತ್ತು ವ್ಯಾಕ್ಸಿನೇಷನ್ ಕೊಡಿಸತಕ್ಕಂಥ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು.

Sri G. B. SHANKAR RAO.—I fully agree with the suggestion of the Hon'ble Member and those suggestions will be borne in mind and action will be taken accordingly.

Prices of Hybrid Jowar etc., and Exemption of Stamp duty to Ryots taking loans from Scheduled Bank

ಶ್ರೀ ಐ. ಸೋಮಶೇಖರಪ್ಪ (ಹೊನ್ನಾಳಿ).—ಸ್ವಾಮಿ, ರೈತರು ಹೈರ್ ಪರ್ಚೇಸ್ ಸಿಸ್ಟಂ ಪ್ರಕಾರ ಟ್ರ್ಯಾಕ್ಟರುಗಳನ್ನು ಏನು ಪಡೆಯುತ್ತಿದ್ದಾರೆ ಅದಕ್ಕೆ 700-800 ರೂಪಾಯಿಗಳ ಕಮಿಷನ್ ಕೊಡುತ್ತಿದ್ದಾರೆ. ಇದನ್ನು ಎಗ್ಜಮ್ಟ್ ಮಾಡಬೇಕೆಂದು ತೀವ್ರವಾಗಿ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ.

ಹೈಬ್ರಿಡ್ ಜೋಳ, ಮುಸುಕಿನ ಜೋಳ, ಇವುಗಳನ್ನು ರೈತರು ಸಾಕಷ್ಟು ಹೆಚ್ಚು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಆದರೆ ರೇಟು ಕಡಿಮೆಯಾಗುತ್ತಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ರೈತರಿಗೆ ಸಹಾಯ ಮಾಡಲು ತೀವ್ರವಾಗಿ ಯೋಚನೆ ಮಾಡಿದ್ದಾರೆಯೇ, ಮತ್ತು ಇದರ ಬಗ್ಗೆ ನಿರ್ಧಾರವನ್ನು ಮಾಡಿದ್ದಾರೆಯೇ ಹೇಗೆ?

ಶ್ರೀ ಬಿ. ರಾಜಯ್ಯ.—ಸ್ವಾಮಿ, ಕೆಲವು ಕಡೆ ಆಹಾರಧಾನ್ಯಗಳ ಬೆಲೆ ಕಡಿಮೆಯಾಗುತ್ತಿದೆ. ಹೈಬ್ರಿಡ್ ಜೋಳ, ಮೇಜ್ ಮತ್ತು ಮೆಕ್ಸಿಕೋವೀಟಿನ ಬೆಲೆ ಇಳಿಯುತ್ತಿದೆ. ಇದರಿಂದಾಗಿ ರೈತರು ಹಚ್ಚಿನ ರೀತಿಯಲ್ಲಿ ಬೆಳೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಓಪನ್ ಮಾರ್ಕೆಟ್ಟಿನಲ್ಲಿ ಆ ಮೂರು ಧಾನ್ಯಗಳನ್ನು ಕೊಂಡುಕೊಳ್ಳಬೇಕೆಂದು ತೀರ್ಮಾನ ತೆಗೆದು ಕೊಂಡಿದ್ದಾರೆ. ಅದಕ್ಕಾಗಿ ಹೈಬ್ರಿಡ್ ಜೋಳಕ್ಕೆ ಒಂದು ಕ್ವಿಂಟಾಲಿಗೆ 50 ರೂಪಾಯಿಗಳಂತೆಯೂ ಮುಸುಕಿನ ಜೋಳಕ್ಕೆ ಕ್ವಿಂಟಾಲಿಗೆ 74 ರೂಪಾಯಿಗಳಂತೆಯೂ, ಮಾರ್ಕೆಟಿಂಗ್ ಸೊಸೈಟಿಯವರಿಂದ ಶೇಖರಣೆ ಮಾಡಿಸಬೇಕು ಎಂದು ತೀರ್ಮಾನ ಮಾಡಿದ್ದೇವೆ. ಈ ಬಗ್ಗೆ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿಗೆ ತಿಳಿಸಲಾಗಿದೆ.

ಇನ್ನೊಂದು ವಿಷಯ ಏನೆಂದರೆ ಷೆಡ್ಯೂಲ್ಡ್ ಬ್ಯಾಂಕುಗಳಿಂದ ರೈತರು ವ್ಯವಸಾಯಕ್ಕಾಗಿ ಪಡೆಯುವ ಸಾಲಕ್ಕೆ ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯ್ತಿ ನೀಡಬೇಕೆಂದು ನಿರ್ಧರಿಸಲಾಗಿದೆ. ಷೆಡ್ಯೂಲ್ ಬ್ಯಾಂಕುಗಳಿಂದ ರೈತರಿಗೆ ಸಾಲ ಕೊಡತಕ್ಕ ಸಂದರ್ಭದಲ್ಲಿ ಸ್ಟ್ಯಾಂಪ್ ಡ್ಯೂಟಿ ಎಗ್ಜಮ್ಷನ್ ಕೊಡಬೇಕು ಎಂದು 5 ಸಾವಿರ ರೂಪಾಯಿಗಳವರೆಗೂ ರೈತರು ಯಾರಾದರು ಷೆಡ್ಯೂಲ್ ಬ್ಯಾಂಕುಗಳಿಂದ ವ್ಯವಸಾಯದ ಅಭಿವೃದ್ಧಿಗಾಗಿ ತಮ್ಮ ಭೂಮಿಯನ್ನು ಆಬಾದ್ ಮಾಡುವುದಕ್ಕೆ, ಬಾವಿಯನ್ನು ತೋಡುವುದಕ್ಕೆ ಸಾಲ ತೆಗೆದುಕೊಂಡರೆ ಅಂಥವರಿಗೆ ಸ್ಟ್ಯಾಂಪ್ ಡ್ಯೂಟಿ ಎಗ್ಜಮ್ಷನ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

Mr. DEPUTY SPEAKER.—The House will now adjourn and reassemble tomorrow at 12 Noon.

The House adjourned at Twenty Minutes past Seven of the Clock, to meet again at Twelve of the Clock on Thursday, the 10th April 1969.

KSA LIBRARY, B'lore
B004860
328.32402 548 LAD,1969
JJ36

GPB—600—11-8-1969